Oil Company. On account of reasons beyond the control of Government, supplies were delayed and therefore certain minimum irregularities could not be avoided.

LEGISLATIVE BUSINESS.

Presentation of Select Committee Report.

Mr. SPEAKER (The Hon'ble Sri V. Venkatappa).—The Hon'ble Minister for Law and Labour may now present the Report of the Select Committee on the Mysore Legislative Assembly (Prevention of Disqualification) Bill, 1951.

The Hon'ble Sri K. T. BHASHYAM (Minister for Law and Labour).—Sir, I beg to present the Report of the Select Committee on the Mysore Legislative Assembly (Prevention of Disqualification) Bill, 1951. The report will be distributed among the Hon'ble Members.

Request for more time for Budget Discussion.

ಅಧ್ಯಕ್ಷರು. (ಮಾನ್ಯ ಶ್ರೀ ವಿ. ವೆಂಕಟಪ್ಪನವರು).—ಬಡ್ಜೆಟ್ಟಿನ ಮೇಲೆ ಇನ್ನೂ ಕೆಲವು ಜನ ಮಾನ್ಯ ಸದಸ್ಯರುಗಳು ಮಾತನಾಡಬೇಕೆಂದಿರುತ್ತಾರೆ. ಈ ದಿವಸ 12 ಘಂಟೆಯವರಿಗೆ ಇದರ ಮೇಲಿನ ಚರ್ಚೆಯನ್ನು ಮುಂದುವರೆಸಲು ಅವಕಾಶ ಕಲ್ಪಿಸಿಕೊಟ್ಟ ನಂತರ ಮಧ್ಯಾಹ್ನ ಮಾನ್ಯ ಮಂತ್ರಿಗಳು ಉತ್ತರ ಕೊಡಲು ಅವಕಾಶ ಕೊಡಬಹುದೆಂಬ ಬಗ್ಗೆ ಸೂಚನೆಗಳು ಬಂದಿವೆ. ಆದರ ಈ ಬಗ್ಗೆ ಸರ್ಕಾರದವರೇನು ತಿಳಿಸುತ್ತಾರೆಂಬುದು ಗೊತ್ತಾಗಲಿಲ್ಲ.

ಶ್ರೀ ಎ. ಭೀಮಪ್ಪನಾಯಕರು (ಚಿತ್ರದುರ್ಗ ಜಿಲ್ಲೆ).—ಇನ್ನು ಕೇವಲ 2-3 ಘಂಟೆಗಳ ಕಾಲಾವಕಾಶ ಮಾತ್ರವಿರುವುದರಿಂದ ಇಷ್ಟು ಜನ ಮಾನ್ಯ ಸದಸ್ಯರೂ ಮಾತನಾಡಲು ಕಾಲಾವಕಾಶವಿಲ್ಲ. ಆದುದರಿಂದ ಮಾನ್ಯ ಮಂತ್ರಿಗಳು ಕೊಡತಕ್ಕ ಉತ್ತರವನ್ನು ಈ ದಿವಸ ಸ್ವಲ್ಪ, ನಾಳೆ ದಿವಸ ಸ್ವಲ್ಪ ಕೊಡುವಂತೆ ಮಾಡಿ ಈ ಇಡೀ ದಿವಸವನ್ನೇ ಇದಕ್ಕೆ ಇಟ್ಟುಕೊಳ್ಳಲು ಅನುಕೂಲವಾಗುವುದಿಲ್ಲವೇ ?

ಅಧ್ಯಕ್ಷರು.—ಹಾಗೆ ಮಾಡುತ್ತಾ ಹೋದರೆ ಡಿಮ್ಯಾಂಡ್ಸ್‌ಗೆ ಕಾಲಾವಕಾಶವೇ ಇರುವುದಿಲ್ಲವಲ್ಲಾ ?

* ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು (ಪ್ರಧಾನ ಸಚಿವರು).—ಮಾನ್ಯ ಸದಸ್ಯರು ಬಡ್ಜೆಟ್ ಚರ್ಚೆಗೆ ಹೆಚ್ಚು ಕಾಲಾವಕಾಶಬೇಕೆಂದು ಸೂಚಿಸುತ್ತಿದ್ದಾರೆ. ರಾಜಪ್ರಮುಖರ ಭಾಷಣದ ಮೇಲೆ ಎರಡು ದಿವಸಗಳು ಸಾಮಾನ್ಯ ಚರ್ಚೆಯನ್ನು ನಡೆಸಿದೆ. ಈಗ ಬಡ್ಜೆಟ್ ಮೇಲೆ ಮೂರು ದಿವಸಗಳು ಚರ್ಚೆಯಾಗಿದೆ. ಇನ್ನೊಂದು ಅಂಶ, ಡಿಮ್ಯಾಂಡುಗಳನ್ನು ತೆಗೆದುಕೊಂಡಾಗ ಯಾವ್ಯಾವ ವಿಷಯಗಳನ್ನು ಬಹಳವಾಗಿ ಸೂಚಿಸಬೇಕೆಂದಿದ್ದಾರೋ ಅವುಗಳನ್ನು ಸೂಚಿಸಲು ಸಾಕಾದಷ್ಟು ಅವಕಾಶವಿದೆ. ಆದ್ದರಿಂದ ಸಾಧ್ಯವಾದರೆ ಈ ದಿವಸ 11 ಘಂಟೆಯೊಳಗೆ ಮಾನ್ಯ ಸದಸ್ಯರು ಅವರ ಭಾಷಣ ಮುಗಿಸಿದರೆ 11 ರಿಂದ ಒಂದು ಘಂಟೆಯವರೆಗೆ ಜವಾಬು ಕೊಡುವುದಕ್ಕೆ ಸಾಧ್ಯವಾಗುತ್ತದೆ. ಇನ್ನೂ ಹೆಚ್ಚು ಸದಸ್ಯರು ಮಾತನಾಡಬೇಕೆಂದು ಅಪೇಕ್ಷೆ ಮಾಡುವುದಾದರೆ ಪುನಃ ಸಾಯಿಂಕಾಲ ಐದು ಘಂಟೆಗೆ ಸೇರಿ ಸರ್ಕಾರದ ಪರವಾಗಿ ಉತ್ತರ ಕೊಡುವುದಕ್ಕೆ ಅವಕಾಶ ಕೊಡಬೇಕೆಂದು ಸೂಚಿಸುತ್ತೇನೆ. ಹಾಗೆ ಮಾಡಲು ಒಪ್ಪಿದರೆ 5ರಿಂದ $7\frac{1}{2}$ ಘಂಟೆಯವರೆಗೆ ಸಭೆಯನ್ನು ಮುಂದುವರಿಸಬಹುದು.

ಶ್ರೀ ಟಿ. ಸುಬ್ರಹ್ಮಣ್ಯರವರು (ತುಮಕೂರು ಜಿಲ್ಲೆ).—ನಾಲ್ಕು ಗಂಟೆಗೆ ಸೇರುವುದಕ್ಕೆ ಸಾಧ್ಯವಿಲ್ಲವೆ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಮೊದಲು ಮಧ್ಯಾಹ್ನ ಸಭೆಯಿರುತ್ತದೆಂದು ಗೊತ್ತಿರಲಿಲ್ಲ. ಆದ್ದರಿಂದ ಪೂರ್ವಭಾವಿಯಾಗಿ ಕೆಲವು ಕಾರ್ಯಕ್ರಮಗಳನ್ನು ಗೊತ್ತುಮಾಡಿಕೊಂಡಿದ್ದೇವೆ. ಬದಲಾಯಿಸಿದರ ಬಹಳ ಕಷ್ಟವಾಗುತ್ತದೆ. ಆದ್ದರಿಂದ 5 ಗಂಟೆಗೆ ಸೇರಲು ಮಾನ್ಯ ಸದಸ್ಯರೆಲ್ಲರೂ ಸಹಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—ಬಹಳ ಜನ ಮಾತನಾಡಬೇಕೆಂಬ ಅಭಿಪ್ರಾಯವಿರುವುದರಿಂದ ಈಗ ಗೊತ್ತುಮಾಡಿರುವ ಕಾಲಾವಧಿಯನ್ನು ಇನ್ನೂ ಸ್ವಲ್ಪ ಕಡಮೆ ಮಾಡುವುದಕ್ಕೆ ಸಾಧ್ಯವೆ ?

ಮಾನ್ಯ ಶ್ರೀ ವಿ. ಎಸ್. ನಾರಾಯಣರಾಯರು (ಬೆಂಗಳೂರು ಸಿಟಿ—ಜನರಲ್).—ಶ್ರೀಮನ್ಮಹಾರಾಜರವರ ಭಾಷಣದ ಮೇಲೆ ಮಾತನಾಡುವುದಕ್ಕೂ ಅನೇಕರಿಗೆ ಅವಕಾಶ ಸಿಕ್ಕಲಿಲ್ಲ. ಆದ್ದರಿಂದ ಆಗ ಅವಕಾಶ ಸಿಕ್ಕದಿರುವವರಿಗೆ ಮೊದಲು ಅವಕಾಶ ಕೊಡಬೇಕು.

ಅಧ್ಯಕ್ಷರು.—ಸಾಧ್ಯವಾದಮಟ್ಟಿಗೆ ಎಲ್ಲರಿಗೂ ಅವಕಾಶಕೊಡಲು ಪ್ರಯತ್ನಮಾಡುತ್ತೇನೆ.

General Discussion on the Budget For 1951-52.

Mr. SPEAKER (The Hon'ble Sri V. Venkatappa).—The General Discussion on the Budget may now be resumed.

ಶ್ರೀ ಡಿ. ಎಂ. ಸಿದ್ದಯ್ಯನವರು (ಮೈಸೂರು ಜಿಲ್ಲೆ).—ಮಾನ್ಯ ಅಧ್ಯಕ್ಷರೇ, ಈ ದಿನ ನನಗೆ ಮೊದಲು ಅವಕಾಶ ಕೊಟ್ಟದ್ದು ಸಂತೋಷಪಡತಕ್ಕ ವಿಚಾರ. ಹೋದ ವರ್ಷ ನನಗೆ ಅವಕಾಶ ಕೊಡಲಿಲ್ಲ. ಈ ವರ್ಷವೂ ಕೊಡುವುದಿಲ್ಲವೆಂದಿದ್ದೆ. ಆದರೆ ಅವಕಾಶ ಸಿಕ್ಕಿದೆ. ಅದಕ್ಕಾಗಿ ವಂದಿಸಬೇಕು. ಮಾನ್ಯ ಹಣಕಾಸಿನ ಸಚಿವರು 1951-52ನೆಯ ಸಾಲಿನ ಆಯವ್ಯಯ ತಃಖ್ತೆಯನ್ನು ಸಭೆಯ ಮುಂದಿಟ್ಟಿದ್ದಾರೆ. ಈ ಸಾರಿ ಆಯವ್ಯಯ ಪಟ್ಟಿಯಲ್ಲಿ 37 ಲಕ್ಷ ಚಿಲ್ಲರೆ ರೂಪಾಯಿಗಳ ಡಿಫಿಸಿಟ್ ತೋರಿಸಿ ಒಂದು ದೃಷ್ಟಿಯಿಂದ ಬಹಳ ಶ್ರಮವಹಿಸಿಕೊಂಡು ಬಹು ಜಾಣ್ಮೆಯಿಂದ ಈ ಆಯ ವ್ಯಯ ತಃಖ್ತೆಯನ್ನು ಸರಿತೂಗಿಸಿ ನಮ್ಮ ಸಭೆಯ ಮುಂದೆ ಇಟ್ಟಿದ್ದಕ್ಕಾಗಿ ಮಾನ್ಯ ಸಚಿವರನ್ನು ಅಭಿನಂದಿಸದೆ ಗತ್ಯಂತರವಿಲ್ಲ. ಮಾನ್ಯ ಸಚಿವರು ತಮ್ಮ ಆಯ ವ್ಯಯ

(ಶ್ರೀ ಡಿ. ಎಂ. ಸಿದ್ಧಯ್ಯನವರು)

ತಃಖ್ತೆಯಲ್ಲಿ ಅನೇಕ ಪ್ರಾಮುಖ್ಯವಾದ ಇಲಾಖೆಗಳಿಗೆ ಕೋಟಿಗಟ್ಟಲೆ ಹಣವನ್ನು ಒದಗಿಸಿದ್ದಾರೆ. ವಿದ್ಯಾಭ್ಯಾಸಕ್ಕೆ 3 ಚಿಲ್ಲರೆ ಕೋಟಿ ರೂಪಾಯಿಗಳನ್ನೂ, ಆಹಾರ, ರೂರಲ್ ಡೆವಲಪ್‌ಮೆಂಟ್ ಮತ್ತು ಇನ್ನೂ ಇತರ ಪ್ರಾಮುಖ್ಯವಾದ ಖರ್ಚುಗಳಿಗೆ ಹೆಚ್ಚು ಹಣವನ್ನೂ ಒದಗಿಸಿದ್ದಾರೆ. ಆದರೆ ಈ ಆಯವ್ಯಯಪಟ್ಟಿಯಲ್ಲಿ ಖರ್ಚು ಬಹಳ ಹೆಚ್ಚಿನ ಮಟ್ಟದಲ್ಲದೆ ಎಂದು ಕಂಡು ಬರುತ್ತದೆ. ನಮ್ಮ ಆಯವ್ಯಯವನ್ನು ಮನಸ್ಸಿನಲ್ಲಿಟ್ಟು ಎಷ್ಟು ಹಣವನ್ನು ಉತ್ಪತ್ತಿಮಾಡುತ್ತೇವೆಯೋ ಅದಕ್ಕೆ ಸಮನ್ವಯವಾಗುವ ರೀತಿಯಲ್ಲಿ ಖರ್ಚು ಕಡಿಮೆಮಾಡಿ ಕೊಳ್ಳಬೇಕು. ಖರ್ಚು ಬಹಳ ದುಬಾರಿಯೆಂದು ಎಷ್ಟೋ ಹೇಳಿದರೂ ಅದರಿಂದ ತಕ್ಕಷ್ಟು ಪ್ರಯೋಜನವಾಗಿಲ್ಲದ್ದರಿಂದ ಕೆಲವು ವಿಚಾರಗಳನ್ನು ತಿಳಿಸಬೇಕಾಗಿದೆ. ನಾವು ಯಾವ ಉದ್ದೇಶಕ್ಕಾಗಿ ಈ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸಿದೆವೋ ಮತ್ತು ಜವಾಬ್ದಾರಿ ಸರ್ಕಾರವನ್ನು ಪಡೆಯುವಾಗ ಪ್ರಜೆಗಳಿಗೆ ಏನು ಆಶೋತ್ತರ ಕೊಟ್ಟೆವೋ ಅದನ್ನು ಗಮನದಲ್ಲಿಟ್ಟುಕೊಂಡು, ಆಡಳಿತ ನಿರ್ವಹಣೆಯಲ್ಲಿ ಖರ್ಚು ಕಡಿಮೆ ಮಾಡುವುದು ಬಹಳ ಮುಖ್ಯವಾದ ವಿಚಾರ. ಈ ಆಯವ್ಯಯ ಪಟ್ಟಿಯ ಅಂಕಿ ಅಂಶಗಳನ್ನು ಒಂದೆರಡುಸಲ ಫೈನಾನ್ಷಿಯಲ್ ಮೆಮೋರ್‍ಯಾಂಡಂ ಮತ್ತು ಹಣಕಾಸಿನ ಸಚಿವರ ಬಡ್ಜೆಟ್ ಭಾಷಣ ಮುಂತಾದುವುಗಳಲ್ಲಿ ನೋಡಿದರೂ ಸಾಮಾನ್ಯವಾಗಿ ಅರ್ಥಮಾಡಿಕೊಳ್ಳುವುದು ಬಹಳ ಕಠಿಣವಾಗಿದೆ. ಈ ಒಂದು ದೊಡ್ಡ ಆಯವ್ಯಯ ಪಟ್ಟಿಯನ್ನು ನಾನಾದರೂ ಕೂಡ ಸರ್ವೇ ಸಾಧಾರಣವಾದ ಮನುಷ್ಯನ ದೃಷ್ಟಿಯಿಂದ ನೋಡುವುದಕ್ಕೆ ಪ್ರಯತ್ನ ಪಡುತ್ತೇನೆ. ನಮ್ಮ ದೇಶದಲ್ಲಿರುವ 75 ಲಕ್ಷ ಜನರಲ್ಲಿ ಎಷ್ಟು ಜನರನ್ನು ವಿದ್ಯಾವಂತರನ್ನಾಗಿಮಾಡಿ, ಜನರ ಕಷ್ಟ ಸುಖಗಳನ್ನು ಪರಿಶೀಲಿಸಿ, ಅವರಿಗೆ ಕೊಟ್ಟ ಆಶೋತ್ತರಗಳನ್ನು ನೆರವೇರಿಸಲು ಈ ಆಯವ್ಯಯ ಪಟ್ಟಿಯು ಎಷ್ಟು ಪರಿಣಾಮಕಾರಿಯಾಗಿದೆ ಎಂಬುದನ್ನು ಮನಸ್ಸಿನಲ್ಲಿಟ್ಟು ಆ ದೃಷ್ಟಿಯಿಂದ ಇದನ್ನು ವಿಮರ್ಶೆಮಾಡಲು ಪ್ರಯತ್ನಮಾಡುತ್ತೇನೆ.

ಸ್ವಾಮಿ, ಜವಾಬ್ದಾರಿ ಸರ್ಕಾರ ಬಂದಮೇಲೆ ಇದು ನಾಲ್ಕನೆಯ ವರ್ಷದ ಬಡ್ಜೆಟ್ ಭಾಷಣ ಎಂದು ಆಗಲೇ ಅರ್ಥ ಸಚಿವರು ಅಪ್ಪಣೆ ಕೊಟ್ಟಿದ್ದಾರೆ. ಜನರಿಗೆ ನಿಜವಾಗಿಯೂ ನಮ್ಮ ಸರ್ಕಾರ ಬಂದಮೇಲೆ ನಮ್ಮ ಕಷ್ಟ ಕಡಮೆಯಾಗಿ ಜೀವನದಲ್ಲಿ ಶಾಂತಿ, ಸುಖ, ಸಮಾಧಾನ ಉಂಟಾಗುತ್ತದೆ ಎಂಬ ನಿರೀಕ್ಷೆಯಿತ್ತು, ಮುಖ್ಯವಾಗಿ ಜನರಿಗೆ ಹೊಟ್ಟೆಗೆ ಸಾಕಾದಷ್ಟು ಅನ್ನ, ಮೈಗೆ ಬಟ್ಟೆ ಮತ್ತು ಮನಸ್ಸಿಗೆ ಶಾಂತಿ ಅತ್ಯಾವಶ್ಯಕವಾಗಿದೆ ಎಂಬುದನ್ನು ಮನಸ್ಸಿನಲ್ಲಿಟ್ಟಿರಬೇಕು. ಈ ದೃಷ್ಟಿಯಿಂದ ಏನೂ ಪ್ರಯತ್ನ ನಡೆದು ಫಲಕಾರಿಯಾಗಿಲ್ಲ ಎಂದು ಸಂಕಟದಿಂದ ಹೇಳಬೇಕಾಗಿದೆ. ಇಷ್ಟೇ ಅಲ್ಲ. ಹಳ್ಳಿಗಾಡಿನಲ್ಲಿರುವ ಜನರಿಗೆ ಅವರು ಕಷ್ಟಪಟ್ಟು ಹೊಟ್ಟೆ ಬಟ್ಟೆಕಟ್ಟಿ ಜನಸಾಮಾನ್ಯರಿಗಾಗಿ ಧಾನ್ಯವನ್ನು ಬೆಳೆದರೂಕೂಡ ತೊಂದರೆ ತಪ್ಪಿಲ್ಲ. ಒಂದಲ್ಲ ಒಂದು ತೊಂದರೆ ಹತೋಟಿಯ ದೆಸೆಯಿಂದ ಜನರಿಗೆ ಒದಗಿ ಕಷ್ಟವನ್ನು ಸಹಿಸುವುದು ನಿಜವಾಗಿಯೂ ಅಸಾಧ್ಯವಾಗಿದೆ. ಈ ಹತೋಟಿಯು ಯಾವ ಕಾರಣಕ್ಕಾಗಿ ಜಾರಿಗೆ ಬಂತೊ, ಯಾವ ಕಾಲದಲ್ಲಿ ಜಾರಿಗೆ ಬಂತೊ, ಅದು ವಿಷಕ್ರಿಮಿಯಂತೆ ಹರಡುತ್ತಿದೆ. 1951-52ಕ್ಕೆ ದೇಶವು ಸ್ವಯಂ ಪರಿಪೂರ್ಣವಾಗುತ್ತದೆಯೆಂಬ ಭರವಸೆಯನ್ನು ಕೊಟ್ಟಿದ್ದರೂ ಈ ದಿವಸದವರೆಗೂ ಅದು ಸಾಧ್ಯವಾಗಿಲ್ಲ ಮತ್ತು ಸಾಧ್ಯವಾಗುವ ಪರಿಸ್ಥಿತಿಯೂ ಕಾಣುವುದಿಲ್ಲ. ಈಗ ಹೆಚ್ಚು ಆಹಾರ ಬೆಳೆಯುವ ಯೋಜನೆ ಜಾರಿಗೆ ಬಂದಮೇಲೆ ದವಸಧಾನ್ಯ ಹೆಚ್ಚಾಗಿ ಬೆಳೆಯುವುದು ಹೋಗಿ ಹೆಚ್ಚು ಭೂಮಿ ಸಾಗುವಳಿಯಾಗುವುದಕ್ಕೆ ಬದಲಾಗಿ ಅನೇಕರು ಈ ಹತೋಟಿಯನ್ನು ಬೇರೆ ವಿಧದಲ್ಲಿ ಉಪಯೋಗಿಸಿಕೊಂಡು ಅವರ ನೆರೆಹೊರೆಯವರ ಕಷ್ಟವನ್ನು ಲೆಕ್ಕಿಸದೆ ಅನೇಕ ಅನ್ಯಾಯಗಳನ್ನೂ, ಅನರ್ಥ ಕಾರ್ಯಗಳನ್ನೂ ಮಾಡಿ ಹಣ ಸಂಪಾದಿಸುವುದಕ್ಕೆ ಪ್ರಾರಂಭಿಸಿದ್ದಾರೆ. ಮೂರು ಬಗೆಯ ಜನರು ಮುಖ್ಯವಾಗಿ, ಆಂಟಿ ಸೋಷಿಯಲ್ ಎಂದು ಹೇಳುವ ಹಾಗೆ, ಅನೇಕ ಅನ್ಯಾಯದ ಕೆಲಸಗಳನ್ನು ಮಾಡುತ್ತಿದ್ದಾರೆ. ಇದರಿಂದ ಸರ್ಕಾರದ ಪ್ರಯತ್ನ ವಿಫಲವಾಗಿ ದೇಶದಲ್ಲಿ ಧಾನ್ಯ ಕಡಿಮೆಯಾಗಿ, ಪ್ರಜೆಗಳಿಗೆ ಸುಖಶಾಂತಿಗಳು ಲಭಿಸದೆ, ಈ ದಿವಸ ದೇಶದಲ್ಲಿ ಕಾಳಸಂತೆ ಹೆಚ್ಚಿ, ಹತೋಟಿ ಆಜ್ಞೆಗಳ ದೆಸೆಯಿಂದ ಹೆಚ್ಚು ಅನುಕೂಲವಾಗುವುದು ತಪ್ಪಿ ಹೋಗಿದೆ. ನಮ್ಮ ಸರ್ಕಾರ ಬಂದ ಮೇಲೆ ಈಚೆಗೆ ಹೋಟಲುಗಳು ಜಾಸ್ತಿಯಾಗಿ ಅಲ್ಲಿ ಎಷ್ಟು ಜನ ಬಂದರೂ ಅನ್ನ ಹಾಕುತ್ತಿದ್ದಾರೆ. ಪ್ರತಿಯೊಂದು ಪಟ್ಟಣದಲ್ಲೂ ವರ್ಷ-ವರ್ಷ ಹೋಟಲುಗಳು ಹೆಚ್ಚುತ್ತಿವೆ. ಇಂಥ ಆಹಾರ ದುಸ್ಥಿತಿಯಲ್ಲಿ ಇಷ್ಟು ಹೋಟಲುಗಳು ಹೆಚ್ಚಲು ಏಕೆ ಸಹಾಯಮಾಡಬೇಕು? ದಿನೇ ದಿನೇ ಆಹಾರಕ್ಕೆ ಅಭಾವ ಹೆಚ್ಚುತ್ತಿರುವಾಗ ಅವರಿಗೆ ಧಾನ್ಯ ಎಲ್ಲಿಂದ ಬರುತ್ತಿದೆ! ಹೆಚ್ಚು ಹಣ ಸಂಪಾದನೆಗೆ ಅವಕಾಶ ಸಿಕ್ಕಿ ಜನರು ತಮ್ಮ ಕರ್ತವ್ಯವನ್ನು ಮರೆತು ಪಕ್ಕದ ಮನೆಯವರು ಅನ್ನವಿಲ್ಲದೆ ಸಾಯುತ್ತಿದ್ದರೂ ಕಾಳಸಂತೆ ಮಾಡುತ್ತಿದ್ದಾರೆ. ಇದಕ್ಕೆ ಹತೋಟಿಯೇ ಮುಖ್ಯ ಕಾರಣ ಎಂದು ಸ್ಪಷ್ಟವಾಗಿ ಅಭಿಪ್ರಾಯಪಡುತ್ತೇನೆ.

ನಿಜವಾಗಿಯೂ ನಮ್ಮ ಜನಗಳಿಗೆ ಆಹಾರ ದೊರೆತು, ಜನರು ಏನಿಲ್ಲ ಎಂದರೂ ಹೊಟ್ಟೆತುಂಬ ಆಹಾರ ತಿಂದು ಬದುಕಿರಬೇಕಾದರೆ ಮೊದಲು ಹತೋಟಿ ಹೋಗಬೇಕು. ಇದನ್ನು ತೆಗೆಯುವುದಕ್ಕೆ ತಾವುಗಳು ಈ ರೀತಿ ಅಭಿಪ್ರಾಯಪಡಬಹುದು: ಇದು ನಮ್ಮ ಪ್ರಯತ್ನವಲ್ಲ, ಇಂಡಿಯಾ ಸರ್ಕಾರದವರು ಹತೋಟಿ ಹಾಕಿದ್ದಾರೆ, ದೇಶದಲ್ಲಿ ಒಂದುಕಡೆ ಹತೋಟಿ ಇದ್ದು ಇನ್ನೊಂದು ಕಡೆ ತೆಗೆಯುವುದು ಹೇಗೆ ಎಂಬುದಾಗಿ ಉತ್ತರ ಕೊಡಬಹುದು. ಮದರಾಸು ಸರ್ಕಾರದವರು ಒಂದು ಪ್ರಯತ್ನಮಾಡಿದ್ದಾರೆ; ಆದರೆ ಅದು ಅಷ್ಟು ಪರಿಪೂರ್ಣವಾಗಿಲ್ಲವೆಂದು ಅನ್ನಿಸುತ್ತದೆ. ನಮ್ಮ ದೇಶದಲ್ಲಿ ಹತೋಟಿಯನ್ನು ಸಂಪೂರ್ಣವಾಗಿ ತೊಡೆದುಹಾಕಿದ ಹೊರತು ಹಳ್ಳಿಗಾಡಿನ ಜನಗಳಿಗೆ ಅದರಲ್ಲೂ ಶೇಕಡ 80 ಭಾಗದ ಜನರಿಗೆ ನಿಜವಾಗಿಯೂ ದೇಶದಲ್ಲಿ ಸುಖವುಂಟಾಗುವುದಿಲ್ಲ. ಮತ್ತು ಇವತ್ತು ಸರ್ಕಾರದಮೇಲೆ ಬಂದಿರತಕ್ಕ ಟೀಕೆಗಳಲ್ಲಿ ಶೇಕಡ 70—80 ಭಾಗದಷ್ಟು ಟೀಕೆಗಳು ಆಹಾರದ ಅಭಾವದಿಂದ ಉಂಟಾಗಿದೆಯೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಈ ಒಂದು ಆಹಾರದ ಪ್ರಶ್ನೆ ಮುಗಿದಮೇಲೆ ಬಟ್ಟೆಯ ಪ್ರಶ್ನೆ ಬರುತ್ತದೆ. ಅದೂ ಸಹ ಅಷ್ಟೇ ಮುಖ್ಯವಾದುದು. ಜನಗಳಿಗೆ ಬೇಕಾಗಿರುವುದಾದರೂ ಎಷ್ಟು? ಒಬ್ಬ ಸಾಮಾನ್ಯ ಮನುಷ್ಯನಿಗೆ ಹೆಚ್ಚಿನ ಸಂಖ್ಯೆಯಲ್ಲಿ ಬಟ್ಟೆ ಇಟ್ಟುಕೊಳ್ಳುವುದಕ್ಕೆ ಅನುಕೂಲವೂ ಇಲ್ಲ, ಮತ್ತು ಅವನು ಆ ಕೆಲಸ ಮಾಡುವುದೂ ಇಲ್ಲ. ಒಂದು ವರ್ಷಕ್ಕೆ ಏನಿದ್ದರೂ ಒಂದು ಜೊತೆ ಪಂಚೆ ಇದ್ದರೆ ಸಾಕು, ನ್ಯಾಯವಾಗಿ ಕಾಲ ಕಳೆಯುತ್ತಾರೆ. ಇದು ಹಳ್ಳಿಯವರ ಸಂಪ್ರದಾಯ. ಮೈ ಮುಚ್ಚಿಕೊಂಡಿರುವುದಕ್ಕೆ ಸಾಕಾದಷ್ಟು ಬಟ್ಟೆ ಬೇಕು. ಆದರೆ ದೇಶದಲ್ಲಿ ಅಷ್ಟೂ ಸಹ ದೊರೆಯುತ್ತಾ

ಇಲ್ಲ. ಇದನ್ನು ಅನೇಕ ಸಂದರ್ಭಗಳಲ್ಲಿ ಮಾನ್ಯ ಸದಸ್ಯರೆಲ್ಲರೂ ಸರ್ಕಾರದವರ ಗಮನಕ್ಕೆ ತಂದಿದ್ದಾರೆ. ಅವೆಲ್ಲವನ್ನೂ ಸರ್ಕಾರದವರು ಮನಸ್ಸಿನಲ್ಲಿಟ್ಟುಕೊಂಡು ಹೆಚ್ಚು ಬಟ್ಟೆ ಒದಗಿಸತಕ್ಕ ಏರ್ಪಾಡನ್ನು ಮಾಡಬೇಕು. ಆದರೆ ಈಗಿನ ಪರಿಸ್ಥಿತಿಯಲ್ಲಿ ಅದು ಅಸಮರ್ಪಕವಾಗಿದೆಯೆಂದು ಹೇಳದೇ ಗತ್ಯಂತರವಿಲ್ಲ.

ವಿದ್ಯಾಭ್ಯಾಸದ ಇಲಾಖೆಗೆ ಮೂರು ಕೋಟಿ ರೂಪಾಯಿಗಳಮೇಲೆ ಕೊಟ್ಟಿದ್ದೀರಿ. ಕಾಲೇಜುಗಳನ್ನು ಜಾಸ್ತಿ ಮಾಡಿದಿರಿ. ವಿಶ್ವವಿದ್ಯಾನಿಲಯದಿಂದ ಸಾವಿರಾರು ಜನ ವಿದ್ಯಾರ್ಥಿಗಳು ಯಥೇಷ್ಟವಾಗಿ ಹೊರಗೆ ಬರುತ್ತಾ ಇದ್ದಾರೆ. ಹೀಗಿರುವಾಗ ಒಂದು ಪ್ರಶ್ನೆಯನ್ನು ಹಾಕಲೇಬೇಕಾಗಿದೆ. ಸ್ವಾತಂತ್ರ್ಯ ಬಂದು ಹಿಂದೂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆಯಾದಮೇಲೂ ಸಹ ಇಂಗ್ಲೀಷ್‌ನವರು ಏನು ಒಂದು ಪದ್ಧತಿಯನ್ನು ನಮ್ಮ ದೇಶದಲ್ಲಿ ಹಾಕಿಕೊಂಡಿದ್ದರೋ ಅದನ್ನೇ ಅಕ್ಷರಶಃ ಅನುಸರಿಸಿಕೊಂಡು ಬಂದಿರತಕ್ಕದ್ದು ನಮ್ಮ ದೇಶಕ್ಕೆ ಕ್ಷೇಮವೇ? ಇದೇ ರೀತಿ ನಾವು ಮುಂದುವರಿದರೆ, 4—5—10 ಸಾವಿರ ಪದವೀಧರರನ್ನು ಆ ಕಾರ್ಖಾನೆಯಲ್ಲಿ ಉತ್ಪತ್ತಿಮಾಡಿದರೆ ಮುಂದೆ ಅವರು ಯಾವ ಮಾರ್ಗವನ್ನು ಅವಲಂಬಿಸಬೇಕು? ಈ ಜಾಡ್ಯ ಬರೀ ಹುಡುಗರಿಗೆ ಮಾತ್ರವಲ್ಲ. ಈಗಂತೂ ಸಾವಿರಾರು ಜನ ಹೆಣ್ಣುಮಕ್ಕಳು ಕಾಲೇಜುಗಳಿಗೆ ಬರುತ್ತಾ ಇದ್ದಾರೆ. ಅವರ ಗತಿ ಏನು? ಹಿಂದೂಸ್ಥಾನದ ಸಂಸ್ಕೃತಿ, ನಾಗರೀಕತೆಗೆ ತಕ್ಕಂತೆ. ಈ ವಿದ್ಯಾಭ್ಯಾಸದಿಂದ ಅವರು ಆದರ್ಶ ಮಹಿಳೆಯರಾಗಲು, ಉತ್ತಮ ಮಾತೆಯರಾಗಲು ಸಹಕಾರಿಯಾಗಿದೆಯೇ? ಅವರನ್ನು ಗಂಡಸರ ಜೊತೆಗೆ ಕೆಲಸ ಕಾರ್ಯಗಳಿಗೆ ಅಥವಾ ಆಫೀಸುಗಳಲ್ಲಿ ಕೆಲಸಕ್ಕೆ ಹೈಪೋಟಿಮಾಡತಕ್ಕ ಸ್ಥಿತಿಗೆ ತಂದು ಇಳಿಸಿಕೊಂಡಿದ್ದೇವೆ. ಅವರಿಗೆ ಪೋಲೀಸ್ ಇಲಾಖೆಯಲ್ಲಾಗಲಿ, ಎಕ್ಸಿಕ್ಯುಟೀವ್ ಕೆಲಸದಲ್ಲಾಗಲೀ, ಪಬ್ಲಿಕ್‌ವರ್ಕ್ಸ್ ಇಲಾಖೆಯಲ್ಲಾಗಲೀ ಕೆಲಸಮಾಡತಕ್ಕ ಸಾಮರ್ಥ್ಯ ಇದೆಯೇ? ಅವರಿಗೆ ಸಹಾಯಕವಾಗುವ ಕಾರ್ಯಕ್ಷೇತ್ರವನ್ನು ನಿರ್ಮಾಣ ಮಾಡಿರತಕ್ಕದ್ದು ಒಂದು ವಿಚಿತ್ರವಾದ ರೀತಿಯಲ್ಲಿರುವುದರಿಂದ ಅವರಿಗೆ ಈ ವಿದ್ಯಾಭ್ಯಾಸಕ್ರಮದಿಂದ ಏನೂ ಪ್ರಯೋಜನವಿಲ್ಲ. ಈ ವಿದ್ಯಾಭ್ಯಾಸ ಕ್ರಮವನ್ನು ಬುಡಮೇಲುಮಾಡಿ, ಇದನ್ನು ಸಂಪೂರ್ಣವಾಗಿ ಬದಲಾಯಿಸಿ ಹೆಣ್ಣುಮಕ್ಕಳು ನಿಜವಾದ ಆದರ್ಶ ಮಹಿಳೆಯರಾಗಲು ಮತ್ತು ಯಾವ ಒಂದು ಅಂತಸ್ತನ್ನು ಕಾಪಾಡಿಕೊಂಡು ಬಂದಿದ್ದಾರೋ ಆ ಅಂತಸ್ತನ್ನು ಉಳಿಸಿಕೊಂಡು ಹೋಗಲು ತಕ್ಕ ರೀತಿಯಲ್ಲಿ ಅವರಿಗೆ ಡೊಮೆಸ್ಟಿಕ್ ಸೈನ್ಸ್ ಅಥವಾ ಇನ್ನಾವುದಾದರೂ ಒಂದು ರೀತಿಯಲ್ಲಿ ವಿದ್ಯಾಭ್ಯಾಸ ಕೊಡಬೇಕು. ಆ ರೀತಿ ಮಾಡಲು ಈಗಿರತಕ್ಕ ವಿದ್ಯಾಭ್ಯಾಸದ ಕ್ರಮವನ್ನು ತಕ್ಷಣ ಬದಲಾಯಿಸಬೇಕು. ಇದುವರೆಗೂ ಜಗನ್‌ಮೋಹನ ಬಂಗಲೆಯಲ್ಲಿ ಕಾನ್ವೊಕೇಷನ್ ನಡೆಯುತ್ತಾ ಇತ್ತು. ಈ ಸಾರಿ ಕ್ರಾಫರ್ಡ್‌ಹಾಲ್‌ನಲ್ಲಿ ನಡೆಸಿದಿರಿ. ಆಗ 1,800 ಜನ ಡಿಗ್ರಿ ತೆಗೆದುಕೊಂಡಿದ್ದಾರೆ. ಅವರ ಗತಿ ಏನು? ಬರೀ ಬಾಯಲ್ಲಿ "go back to the villages ಎಂದು ಹೇಳುತ್ತೀರೇ ವಿನಾ ಕಾರ್ಯತಃ ಅದು ಆಗುತ್ತಾ ಇಲ್ಲ. ಪಟ್ಟಣದಲ್ಲಿ ಸಿನಿಮಾ, ನಾಟಕ, ರಸ್ತೆಗಳು ಇತ್ಯಾದಿ ಬಾಬುಗಳಿಗೆ ಈ ಸರ್ಕಾರದ ಹಣವನ್ನು ಪಟ್ಟಣಗಳ ಶೃಂಗಾರಕ್ಕಾಗಿ ಖರ್ಚುಮಾಡಿಕೊಂಡು ಬಂದು ಪಟ್ಟಣಗಳು ಇಷ್ಟೊಂದು ಆಕರ್ಷಣೀಯವಾಗಿರುವಾಗ ಪಟ್ಟಣ ಬಿಟ್ಟು ಹಳ್ಳಿಗಳಿಗೆ ಹೋಗುವುದಕ್ಕೆ ಯಾರೂ ಮನಸ್ಸುಮಾಡುವುದಿಲ್ಲ. ನಾವು ಮಾಡತಕ್ಕ ಭಾಷಣಗಳೆಲ್ಲಾ ಸಂಪೂರ್ಣವಾಗಿ ವಿಫಲವಾಗುತ್ತಿವೆ. ಆದ್ದರಿಂದ ನಾನು ಸರ್ಕಾರದವರಿಗೆ ಸೂಚಿಸುವುದೇನೆಂದರೆ ಪದವೀಧರನಾಗತಕ್ಕ ಪ್ರತಿಯೊಬ್ಬನಿಗೂ, ಡಿಗ್ರಿ ಕೊಡುವುದಕ್ಕೆ ಮೊದಲು 2 ವರ್ಷ ಹಳ್ಳಿಗೆ ಹೋಗಿ, ವ್ಯವಸಾಯಮಾಡಿ ಹಳ್ಳಿ ಜನರ ಸೇವೆ ಮಾಡಬೇಕು, ಆ ರೀತಿ ಮಾಡದೆ ಇದ್ದರೆ ಡಿಗ್ರಿ ಕೊಡಕೂಡದು ಎಂಬ ನಿಯಮ ತಂದ ಹೊರತು ನಮ್ಮ ದೇಶದಲ್ಲಿ ಶಾಂತಿ, ಸಮಾಧಾನ ನೆಲಸುವುದಿಲ್ಲವೆಂದು ಹೇಳಬೇಕಾಗಿದೆ. ವಿದ್ಯಾವಂತರಾದ ತರುಣರನ್ನು ಹಾಗೇ ಬಿಟ್ಟುಬಿಡುವುದು ದೇಶಕ್ಕೆ ಅಪಾಯ. ಅವರು ಏನಾದರೂ ಯೋಚನೆಮಾಡಿ ಜೀವನ ಮಾಡುವುದಕ್ಕೆ ಪ್ರಯತ್ನಪಟ್ಟು ಏನೂ ಕೆಲಸಕಾರ್ಯ ಸಿಕ್ಕದಿದ್ದರೆ ಕಮ್ಯೂನಿಸ್ಟ್ ಪಾರ್ಟಿಗೋ ಅಥವಾ ಸೋಷಿಯಲಿಸ್ಟ್ ಪಾರ್ಟಿಗೋ ಸೇರಿಕೊಂಡು, ಸ್ಲೋಗನ್‌ಗಳನ್ನು ಹೇಳುತ್ತಾ ಸರ್ಕಾರವನ್ನೇ ಬುಡಮೇಲು ಮಾಡುವ ಕೆಲಸಕ್ಕೆ ಪ್ರಯತ್ನ ಮಾಡುವುದು ಸ್ವಭಾವ. ಆದ್ದರಿಂದ ಮುಂದೆ ಬರತಕ್ಕ ಅಪಾಯವನ್ನು ತಪ್ಪಿಸುವುದಕ್ಕಾಗಿ ಈಗಲೇ ಕಾರ್ಯಕ್ರಮ ಕೈಕೊಂಡು ಈ ಒಂದು ವಿಶ್ವವಿದ್ಯಾನಿಲಯದ ಶಿಕ್ಷಣವನ್ನು ಸಂಪೂರ್ಣವಾಗಿ ಬದಲಾಯಿಸತಕ್ಕ ಕೆಲಸ ಮಾಡದಿದ್ದರೆ ಗತ್ಯಂತರವಿಲ್ಲವೆಂದು ಹೇಳಬೇಕಾಗಿದೆ.

ಆಮೇಲೆ ಈ ಆಯವ್ಯಯದಪಟ್ಟಿಯಲ್ಲಿ ರೂರಲ್ ಡೆವಲಪ್‌ಮೆಂಟ್ ಕೆಲಸಗಳಿಗಾಗಿ 50 ಲಕ್ಷ ರೂಪಾಯಿ ಮಂಜೂರು ಮಾಡಿದ್ದೀರಿ. ಗ್ರಾಮಾಭಿವೃದ್ಧಿಯ ಕೆಲಸಗಳಿಗಾಗಿ ಉಪಯೋಗಿಸತಕ್ಕ ಹಣ ಎಂಬುದಾಗಿ ಹೆಸರಿಗೆ ಮಾತ್ರ ಇಟ್ಟಿದ್ದೀರೇ ವಿನಾ ಗ್ರಾಮದ ಜನರ ಪ್ರಗತಿಗಾಗಲೀ, ಅಭಿವೃದ್ಧಿಗಾಗಲೀ, ಆರ್ಥಿಕ ಮಟ್ಟವನ್ನು ಸರಿಪಡಿಸುವುದಕ್ಕಾಗಲೀ, ಅವರ ಒಂದು ಆಹಾರ ಸಮಸ್ಯೆ ಏನಿದೆಯೋ ಅದನ್ನು ಬಗೆಹರಿಸುವುದಕ್ಕಾಗಲೀ ಅಥವಾ ಅವರ ದಿನಚರಿಯ ಕೆಲಸಕಾರ್ಯಗಳಿಗಾಗಲೀ ಸಂಪೂರ್ಣವಾಗಿ ಖರ್ಚಾಗುತ್ತಾ ಇಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. ಸುಮ್ಮನೆ ಇದರ ಹೆಸರಿನಲ್ಲಿ ಕೆಲಸಮಾಡತಕ್ಕ ಮಧ್ಯಸ್ಥಗಾರ ವರ್ಗದವರಿಗೆ ಈ ಹಣವೆಲ್ಲಾ ವಿನಿಯೋಗವಾಗುತ್ತಿದೆ. ಕೇವಲ ರೈತರ ಹೆಸರಿನಲ್ಲಿ, ಹಳ್ಳಿಗಳ ಉದ್ಧಾರದ ಹೆಸರಿನಲ್ಲಿ ಹಣ ಪೋಲಾಗತಕ್ಕದ್ದು ಶೋಚನೀಯವಾದ ವಿಚಾರ. ತಾವು ನಿಜವಾಗಿಯೂ ಗ್ರಾಮಾಭಿವೃದ್ಧಿ ಕೆಲಸ ನಡೆಸಬೇಕಾದ ಪಕ್ಷದಲ್ಲಿ, ನಿಮ್ಮ ದೇಶದ ಜನರು ಮುಂದೆ ಬರಬೇಕೆಂದು ಆಶೆ ಇದ್ದರೆ ಆ ಹಣವನ್ನೆಲ್ಲಾ ರೈತರ ಏಳಿಗೆಗೆ ಖರ್ಚುಮಾಡಲು ಸರಿಯಾದ ಏರ್ಪಾಡು ಇಟ್ಟುಕೊಳ್ಳಬೇಕಾದ್ದು ಅತ್ಯಾವಶ್ಯಕ.

ಇನ್ನೊಂದು ವಿಚಾರ. ತಾವು ಅಧಿಕಾರಸ್ಥಾನವನ್ನು ವಹಿಸಿಕೊಂಡ ಮೇಲೆ ಆಡಳಿತದಲ್ಲಿ ಬಹಳ ಸಡಿಲ ಮತ್ತು ಅನೀತಿಯುಂಟಾಗಿದೆಯೆಂದು ಹೇಳದೇ ವಿಧಿಯಿಲ್ಲ. ಹಿಂದೆ Anticorruption Director ನ್ನು ನೇಮಿಸಿಕೊಳ್ಳುವುದಕ್ಕೆ ಮುಂಚೆ ದೇಶದಲ್ಲಿ ಯಾವ ರೀತಿ ಲಂಚ ರುಷುವತ್ತು ತಾಂಡವವಾಡುತ್ತಿತ್ತೋ ಅದು ಈ ಡೈರೆಕ್ಟರ್‌ರವರನ್ನು ನೇಮಿಸಿದ ಮೇಲೆ ಏಕೆ ಮತ್ತೂ ಜಾಸ್ತಿ ಆಯಿತೋ ಭಗವಂತನಿಗೇ ಗೊತ್ತು. ಈ ರೀತಿ ದೇಶದಲ್ಲಿ ಒಂದು ಅನೀತಿ, ಅಧಿಕಾರಿಗಳಲ್ಲಿ ಜಿಗುಪ್ಸೆ, ತಾತ್ಸಾರ ಮನೋಭಾವವುಂಟಾಗಿ ತಾಂಡವವಾಡುತ್ತಿದೆಯೆಂದು ಖಚಿತವಾಗಿ ಅಭಿಪ್ರಾಯಪಡುತ್ತೇವೆ. ತಾವುಗಳು ಸದುದ್ದೇಶದಿಂದ ದೇಶಕ್ಕೆ ಉಪಕಾರ ಮಾಡಬೇಕೆಂದು ಹೊರಟಿರಿ. ಆದರೆ ತಮ್ಮಗಳ ಹತ್ತಿರ ಅಥವಾ ತಮ್ಮಗಳ ಸುತ್ತಮುತ್ತಲೂ ಯಾವ ಜನ ಸೇರಿದ್ದಾರೋ ಅವರೆಲ್ಲರೂ ಸ್ವಾರ್ಥಸಾಧಕರು, ತಮ್ಮ ಅಧಿಕಾರವನ್ನು ಉಪಯೋಗಿಸಿಕೊಳ್ಳತಕ್ಕವರು. ಒಂದಲ್ಲ ಒಂದು ವಿಧ

(ಶ್ರೀ ಡಿ. ಯಂ. ಸಿದ್ದಯ್ಯನವರು).

ದಿಂದ ತಮ್ಮನ್ನು ಹಂಗಿಗೆ ಒಳಪಡಿಸಿಕೊಂಡು, ಎಕ್ಸ್‌ಪ್ಲಾಯಿಟ್ ಮಾಡುತ್ತಾ ತಮ್ಮ ಸ್ವಾರ್ಥವನ್ನು ಸಾಧಿಸಿಕೊಂಡರು. ತಮ್ಮಲ್ಲಿದ್ದ ಅಧಿಕಾರವನ್ನು ದುರುಪಯೋಗಪಡಿಸಿಕೊಂಡರು. ದೇಶದ ಇನ್ನೂ ಒಂದು ದೌರ್ಭಾಗ್ಯವೇನೆಂದರೆ ನೀವುಗಳಾದರೂ ಕೂಡ ದಕ್ಷತೆಯಿಂದ, ನಿರ್ವಂಚನೆಯಿಂದ ಯಾವುದನ್ನೂ ಮನಸ್ಸಿನಲ್ಲಿಟ್ಟುಕೊಳ್ಳದೆ ದೇಶದ ಹಿತದೃಷ್ಟಿಯನ್ನು ಮನಸ್ಸಿನಲ್ಲಿಟ್ಟುಕೊಂಡು, ಮುಂದೆ ಚುನಾಯಿತರಾಗಿ ಬಂದರೆ ಬರಲಿ ಬಿಟ್ಟರೆ ಬಿಡಲಿ ನಾವು ಮಾಡಬೇಕಾದ ಕರ್ತವ್ಯವನ್ನು ಪರಿಪೂರ್ಣವಾಗಿ ಪಾಲಿಸಬೇಕೆಂಬ ದೃಷ್ಟಿಯಿಂದ ಕೆಲಸಮಾಡಿದ್ದರೆ, ದೇಶದಲ್ಲಿ ಈಗ ಏನು ಒಂದು ಅನಾಹುತವಾಗಿದೆ, ಅಧಿಕಾರಿಗಳಲ್ಲಿ ಆಲಸ್ಯವುಂಟಾಗಿದೆ, ಲಂಚರುಷುವತ್ತು ತಾಂಡವವಾಡುತ್ತಿದೆ ಅದನ್ನೆಲ್ಲಾ ತಗ್ಗಿಸಿ ನಿಜವಾಗಿಯೂ ದೇಶಕ್ಕೆ ಮಹೋಪಕಾರವನ್ನು ಮಾಡಲು ಅವಕಾಶವಿತ್ತು. ಆದರೆ ತಾವು ಹಂಗಿಗೆ, ದಾಕ್ಷಿಣ್ಯಗಳಿಗೆ ಒಳಗಾಗಿ ಈ ರೀತಿ ತಮ್ಮನ್ನು ಎಕ್ಸ್‌ಪ್ಲಾಯಿಟ್ ಮಾಡುವುದಕ್ಕೆ ಬಂದ ಜನರಿಗೆ ಅವಕಾಶ ಕೊಟ್ಟಿದ್ದರಿಂದ ದೇಶದಲ್ಲಿ ಇವತ್ತು ಲಂಚಕೋರತನ ತಾಂಡವವಾಡುತ್ತಿದೆ. ಬ್ಲಾಕ್‌ಮಾರ್ಕೆಟ್ಟು ಜಾಸ್ತಿಯಾಗಿದೆ ಮತ್ತು ಅನೇಕ ವಿಧದಲ್ಲಿ ಸರ್ಕಾರದ ಒಂದು ಅನುಕೂಲವೇನಿದೆಯೋ ಅದನ್ನೆಲ್ಲಾ ದುರುಪಯೋಗಪಡಿಸಿಕೊಂಡು ಲಕ್ಷೋಪಲಕ್ಷ ಜನಗಳಿಗೆ ನಿಜವಾಗಿ ಸಲ್ಲಬೇಕಾದ ಅನುಕೂಲವನ್ನು ಕೆಲವು ಜನಗಳು ಮಾತ್ರ ಉಪಯೋಗಿಸಿಕೊಂಡು ಬಂದಿದ್ದಾರೆ. ಸ್ವಾಮಿ ಪ್ರಜಾಪ್ರಭುತ್ವತತ್ವದ ವಿಚಾರವಾಗಿ ಮಾತನಾಡುತ್ತಾ ಒಬ್ಬ ತತ್ವ ಜ್ಞಾನಿ ಇದು ಬಹಳ ಜನಗಳ ಹೆಸರಿನಲ್ಲಿ ಕೆಲವು ಜನರು ಪ್ರಯೋಜನ ಪಡೆಯತಕ್ಕ ತತ್ವ ಎಂದು ಹೇಳಿದ್ದಾನೆ. ಅದು ಈಗ ನಮ್ಮ ಈ ಒಂದು ಸರ್ಕಾರದಲ್ಲಿ ಜಾರಿಗೆ ಬಂದಿದೆ ಎಂದು ಹೇಳದೇ ಗತ್ಯಂತರವಿಲ್ಲ. ನನ್ನ ಭಾಷಣವನ್ನು ಮುಗಿಸುವುದಕ್ಕೆ ಮುಂಚೆ ಒಂದು ಮಾತು ಹೇಳಬೇಕಾಗಿದೆ. ಹೋದವರ್ಷ ರಾಷ್ಟ್ರೀಯ ಸೇವಾದಳಕ್ಕೆ ಗ್ರಾಂಟು ಕೊಟ್ಟಿದ್ದೀರಿ. ಈ ವರ್ಷ ಕೊಡಲಿಲ್ಲ. ಆದರೆ ಸ್ಕೌಟ್ ಸೇವಾದಳಕ್ಕೆ ಕೊಟ್ಟಿದ್ದೀರಿ. ರಾಷ್ಟ್ರೀಯ ಸೇವಾದಳಕ್ಕೆ ಏಕೆ ಹಣ ಕೊಡಲಿಲ್ಲ ! ಅದು ಮಾಡಿದಂತಹ ದೋಷವಾದರೂ ಏನು? ರಾಷ್ಟ್ರದ ಸೇವೆ ಮಾಡತಕ್ಕ ಈ ಸಂಸ್ಥೆಗೆ ಹಣ ಕೊಡದೇ ಇರುವುದು ಬಹಳ ಶೋಚನೀಯವಾದ ವಿಚಾರ. ಆ ವಿಚಾರವಾಗಿ ಅನೇಕ ಸದಸ್ಯರು ಆಗಲೇ ಮಾತನಾಡಿದ್ದಾರೆ. ಈಗಲೂ ಸಹ ಸದಸ್ಯರ ಅಭಿಪ್ರಾಯವನ್ನು ಮನಸ್ಸಿನಲ್ಲಿಟ್ಟುಕೊಂಡು ಈ ಸೇವಾದಳಕ್ಕೆ ಹಣ ಒದಗಿಸಿಕೊಡುತ್ತೀರೆಂದು ನಂಬಿದ್ದೇನೆ.

ಇನ್ನು, ನನ್ನ ಭಾಷಣವನ್ನು ಮುಗಿಸುವುದಕ್ಕೆ ಮುಂಚೆ ಪೋಲೀಸ್ ಇಲಾಖೆಯ ಕೆಲಸಕಾರ್ಯಗಳು ಬಹಳಮಟ್ಟಿಗೆ ಯಶಸ್ವಿಯಾಗಿ ನಡೆಯದೆ ಅದರ ದಕ್ಷತೆ ಬಹಳ ಕೀಳುಮಟ್ಟಿಗೆ ಇಳಿದಿದೆಯೆಂದು ಹೇಳಬೇಕಾಗಿದೆ. ಮಾನ್ಯ ಸಚಿವರಿಗೆ ಈ ಸಂಬಂಧದಲ್ಲಿ ನಾನು ಒಂದು ಸಲಹೆ ಕೊಡಲಿಚ್ಛಿಸುತ್ತೇನೆ. ಅವರು ಅನೇಕ ಪೋರ್ಟ್‌ಫೋಲಿಯೋಗಳನ್ನಿಟ್ಟುಕೊಂಡಿದ್ದಾರೆ. ಅವರು ಯಾವುದಾದರೂ 2–3 ಪೋರ್ಟ್‌ಫೋಲಿಯೋಗಳನ್ನು ಮಾತ್ರ ಇಟ್ಟುಕೊಳ್ಳಲಿ. ಕೆಲಸಮಾಡಬೇಕೆಂಬ ಉತ್ಸಾಹದಲ್ಲೇನೂ ತಮಗೆ ಕಡಿಮೆಯಿಲ್ಲ. ಆದರೂ ಇಷ್ಟೊಂದು ಹೆಚ್ಚಿಗೆ ಕೆಲಸಗಳನ್ನು ಇಟ್ಟುಕೊಂಡರೆ ಎಲ್ಲಕ್ಕೂ ಸಾಕಾದಷ್ಟು ನಿಗಾ ಕೊಡುವುದಕ್ಕಾಗುವುದಿಲ್ಲ. ಆಹಾರ, ವ್ಯವಸಾಯ, ಪಬ್ಲಿಕ್ ವರ್ಕ್ಸ್‌ಗಳನ್ನು ಮಾತ್ರ ತಾವಿಟ್ಟುಕೊಂಡು ಅದರಲ್ಲೇ ತಮ್ಮ ಸೇವೆ ಮಾಡಿದರೆ ಎಷ್ಟೋ ಚೆನ್ನಾಗಿರುತ್ತದೆ. ಅದರ ಜೊತೆಗೆ ಪೋಲೀಸ್ ಮುಂತಾದ ಇಲಾಖೆಗಳೂ ಸೇರಿತೆಂದರೆ ಕೆಲಸ ಮಾಡುವುದಕ್ಕೆ ವಿರಾಮ ಸಿಕ್ಕುವುದಿಲ್ಲ. ಆದ್ದರಿಂದ ಪೋಲೀಸ್ ಇಲಾಖೆಯನ್ನು ಬೇರೆಯವರಿಗೆ ವರ್ಗಾಯಿಸಿ ಅದರಿಂದ ದೇಶಕ್ಕೆ ಉಪಕಾರ ಮಾಡಬೇಕೆಂದು ಆಶಿಸುತ್ತೇನೆ.

ಒಟ್ಟಿನಲ್ಲಿ ನಿಮ್ಮಿಂದ ದೇಶ ಏನನ್ನು ನಿರೀಕ್ಷಣೆ ಮಾಡಿತ್ತೋ ಅದು ಆಗಿಲ್ಲ. ಅನೇಕ ದುಷ್ಟ ಶಕ್ತಿಗಳು ಎದ್ದು ನಿಂತು ನಿಮ್ಮನ್ನು ದುರುಪಯೋಗಮಾಡಿಕೊಳ್ಳುವುದಕ್ಕೆ ಪ್ರಯತ್ನಮಾಡುತ್ತಿವೆ !! ಆದರೂ, ಈಗಲೂ ಆದಷ್ಟು ಪ್ರಯತ್ನಮಾಡಿ ಅವರಿವರ ಹಂಗಿಗೊಳಗಾಗದೆ ತಮ್ಮ ಆತ್ಮವನ್ನು ಮಾತ್ರ ಕೇಳಿಕೊಂಡು ದೇಶದ ಪ್ರಗತಿ ಸಾಧನೆಗೆ ದುಡಿಯುವುದಾದರೆ ನಿಜವಾಗಿಯೂ ದೇಶಕ್ಕೆ ಒಳ್ಳೆಯದಾಗುತ್ತದೆ. ದೇಶದಲ್ಲಿ ನ್ಯಾಯ ಮತ್ತು ಧರ್ಮ ನೆಲಸುವಂತಾಗಬೇಕು. ಎಷ್ಟೋ ಸ್ಕೀಮುಗಳನ್ನು ಹಾಕಿದ್ದೀರಿ ! ಆದರೂ ದೇಶ ಎಷ್ಟುಮಟ್ಟಿಗೆ ಮುಂದಕ್ಕೆ ಬರಬೇಕೋ ಅಷ್ಟು ಬರುತ್ತಿದೆಯೇ ? ಬರೀ ಯೋಜನೆಗಳನ್ನು ತಯಾರು ಮಾಡುವುದರಿಂದ ಪ್ರಯೋಜನವಿಲ್ಲ. ಅವುಗಳನ್ನು ಕಾರ್ಯಗತಮಾಡಬೇಕು. ಹಾಗೆ ಮಾಡುವುದಕ್ಕೆ ತಮ್ಮಿಂದ ಸಾಧ್ಯವಿಲ್ಲವೆಂದು ತಾವು ಭಾವಿಸುವುದಾದರೆ ಈ ಒಂದು ಆಡಳಿತ ಜವಾಬ್ದಾರಿಯನ್ನು ಬಿಟ್ಟುಬಿಡುವುದು ಲೇಸೆಂದು ನಾನು ಹೇಳುತ್ತೇನೆ.

ಶ್ರೀ ವಿ. ಎಸ್. ನಾರಾಯಣರಾಯರು (ಬೆಂಗಳೂರು ಸಿಟಿ ಮುನಿಸಿಪಾಲಿಟಿ).--ಮಾನ್ಯ ಅಧ್ಯಕ್ಷರೇ, ಈಗಿನ ಭಾರತದ ಪರಿಸ್ಥಿತಿಯಲ್ಲಿ ಹಾಗೂ ಅಂತರಾಷ್ಟ್ರೀಯ ಪರಿಸ್ಥಿತಿಯಲ್ಲಿ ನಮ್ಮ ಅರ್ಥ ಸಚಿವರು ನಮ್ಮ ಮುಂದಿಟ್ಟಿರುವ ಹಣಕಾಸಿನ ಬಡ್ಜೆಟ್ ಅಂದಾಜುಗಳು ಬಹಳಮಟ್ಟಿಗೆ ಸಮರ್ಪಕವಾಗಿದೆಯೆಂದು ನಾನು ಹೇಳಬೇಕಾಗಿದೆ. ಇದಕ್ಕಿಂತಲೂ ಆಶಾದಾಯಕವಾದ ಬಡ್ಜೆಟ್ಟನ್ನು ಈ ಕಾಲದಲ್ಲಿ ಸಿದ್ಧಮಾಡಿಕೊಡುವುದು ಸ್ವಲ್ಪ ಕಷ್ಟವೇ ಸರಿ. ಈ ಬಡ್ಜೆಟ್ಟನ್ನು ಇನ್ನೂ ಸ್ವಲ್ಪ ಮುಂಚಿತವಾಗಿಯೇ ಸದಸ್ಯರಿಗೆ ಒದಗಿಸಿ ಕೊಟ್ಟಿದ್ದರೆ ನಮ್ಮ ಅಭಿಪ್ರಾಯಗಳನ್ನು ಸೂಚಿಸುವುದಕ್ಕೆ ಎಷ್ಟೋ ಅನುಕೂಲವಾಗುತ್ತಿತ್ತು. ಬಡ್ಜೆಟ್ ಭಾಷಣವನ್ನು ಬೇಕಾದರೆ ಅರ್ಥ ಸಚಿವರು ತಾವು ಭಾಷಣಮಾಡುವ ದಿನವೇ ಕೊಡಬಹುದು. ಆದರೆ ಈ ಬಡ್ಜೆಟ್ ಪ್ರತಿಗಳನ್ನು ಒಂದು ವಾರ ಮುಂಚಿತವಾಗಿಯಾದರೂ ಕೊಟ್ಟರೆ ನಮ್ಮ ಸಲಹೆಗಳನ್ನು ಹೇಳಲು ಸಹಾಯವಾಗುತ್ತದೆಂದು ಹೇಳಲಿಚ್ಛಿಸುತ್ತೇನೆ.

ಈ ಬಡ್ಜೆಟ್ ಅಂದಾಜುಗಳನ್ನು ನೋಡುವುದಾದರೆ, ವಿದ್ಯಾಭ್ಯಾಸ, ವಿದ್ಯುಚ್ಛಕ್ತಿ, ವೈದ್ಯಶಾಖೆ, ಆಹಾರ ಹೆಚ್ಚಿಸುವ ಯೋಜನೆ, ಗ್ರಾಮಾಭಿವೃದ್ಧಿ ಇತ್ಯಾದಿ ದೇಶೋನ್ನತಿಯ ಕಾರ್ಯಗಳಿಗೆ ಬೇಕಾದಷ್ಟು ಹಣವನ್ನು ತೆಗೆದಿಟ್ಟಿದ್ದೀರಿ. ಅದಕ್ಕಾಗಿ ಸರ್ಕಾರದವರು ಅಭಿನಂದನಾರ್ಹರು. ವಿದ್ಯಾಭ್ಯಾಸದ ಇಲಾಖೆಗೆ 348·54 ಲಕ್ಷ ರೂಪಾಯಿಗಳಷ್ಟು ಒದಗಿಸಿ ದೇಶದ ಒಟ್ಟು ಆದಾಯದಲ್ಲಿ 24·84% ನಷ್ಟನ್ನು ಒದಗಿಸಿದ್ದಾರೆ ! ಇದರಿಂದ ದಾವಣಗೆರೆಯಲ್ಲಿ ಇಂಜಿನಿಯರಿಂಗ್ ಕಾಲೇಜು, ಬೆಂಗಳೂರಿನಲ್ಲಿ ಮೆಡಿಕಲ್ ಕಾಲೇಜು, ಹೋಮ್ ಸೈನ್ಸ್ ಕಾಲೇಜು—ಇವುಗಳನ್ನು ಪ್ರಾರಂಭಿಸಬೇಕೆಂದು ಹೇಳಿದ್ದಾರೆ. ಇವನ್ನು ಆದಷ್ಟು ಬೇಗ ಕಾರ್ಯಗತ ಮಾಡಬೇಕೆಂದು ನನ್ನ ಪ್ರಾರ್ಥನೆ. ವಿದ್ಯಾಭ್ಯಾಸಕ್ಕೆ ಇಷ್ಟೊಂದು ಹಣ ಖರ್ಚು ಮಾಡುತ್ತಿದ್ದರೂ ಒಂದು ವಿಷಯವನ್ನು ಮುಖ್ಯವಾಗಿ ತಮ್ಮ ಗಮನಕ್ಕೆ ತರಬೇಕಾಗಿದೆ. ಈ ಇಲಾಖೆಯ ಮುಖಾಂತರ ಕೇವಲ

ಶಾಲಾ ಕಾಲೇಜುಗಳ ವಿದ್ಯಾಭ್ಯಾಸದ ಕಡೆಗೆ ಗಮನ ಕೊಡುವುದರ ಜೊತೆಗೆ ಸಾರ್ವಜನಿಕರ ವಿದ್ಯಾಭ್ಯಾಸದ ಕಡೆಗೂ ಹೆಚ್ಚಿಗೆ ಪ್ರೋತ್ಸಾಹ ನೀಡಬೇಕೆಂದು ಹೇಳುತ್ತೇನೆ. ಸಾರ್ವಜನಿಕ ಪುಸ್ತಕ ಭಂಡಾರ, ಭಾಷಾಭಿವೃದ್ಧಿ ಮುಂತಾದುವುಗಳಿಗೆ ಇನ್ನೂ ಹೆಚ್ಚಿನ ಹಣ ಒದಗಿಸಬೇಕಾದ್ದು ಬಹಳ ಅವಶ್ಯಕ. ಹೀಗಿರುವಲ್ಲಿ ಬೆಂಗಳೂರಿನಲ್ಲಿರುವ ಪಬ್ಲಿಕ್ ಲೈಬ್ರರಿಗೆ ಹಿಂದೆ ಒಂದು ಕಾಲದಲ್ಲಿ 13½ ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದುದನ್ನು ತಪ್ಪಿಸಿ ಈಗ ಕೇವಲ 7 ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದಾರೆ. ಎಲ್ಲರಿಗೂ ತಿಳಿದಿರುವಂತೆ ಮೈಸೂರು ದೇಶದಲ್ಲೇ ಇದಕ್ಕಿಂತ ಹೆಚ್ಚಿನ ಸಾರ್ವಜನಿಕ ಲೈಬ್ರರಿ ಎಲ್ಲೂ ಇಲ್ಲ. ಮೈಸೂರಿನಲ್ಲಿ ವಿಶ್ವವಿದ್ಯಾಲಯದ ಲೈಬ್ರರಿಯೊಂದಕ್ಕೆ 54,000 ರೂಪಾಯಿಗಳನ್ನು ಕೊಟ್ಟಿದ್ದೀರಿ. ಬೆಂಗಳೂರಿನಲ್ಲಿ ಬೇರೆ ವಿಶ್ವವಿದ್ಯಾನಿಲಯದ ಲೈಬ್ರರಿಗೆ 25 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದೀರಿ. ಅಂಥಾದ್ದರಲ್ಲಿ ಸಾರ್ವಜನಿಕ ಪುಸ್ತಕ ಬಂಡಾರಕ್ಕೆ ಕೇವಲ 7 ಸಾವಿರ ರೂಪಾಯಿಗಳನ್ನು ಕೊಟ್ಟಿರುವುದು ತೀರಾ ಶೋಚನೀಯ. ಕೊನೆಯ ಪಕ್ಷ 12—13 ಸಾವಿರ ರೂಪಾಯಿಗಳಿಗಾದರೂ ಹೆಚ್ಚಿಸಬೇಕೆಂದು ನಾನು ಸೂಚಿಸುತ್ತೇನೆ. ಹಾಗೆಯೇ ಭಾಷಾಭಿವೃದ್ಧಿಯ ಕಡೆಗೆ ತಾವು ಇನ್ನೂ ಹೆಚ್ಚಿನ ಗಮನ ಕೊಡಬೇಕಾಗಿದೆ. ಮದರಾಸಿನಲ್ಲಿ ಭಾಷಾಭಿವೃದ್ಧಿಗೇ ಬೇರೊಂದು ಯೋಜನೆ ಇಟ್ಟಿದ್ದಾರೆ. ತಮಿಳು, ತೆಲುಗು, ಕನ್ನಡ ಎಂದು ಪ್ರತಿಯೊಂದು ಭಾಷೆಗೂ ಪ್ರತಿವರ್ಷವೂ ಮೂರು ಮೂರು ಬಹುಮಾನಗಳನ್ನಿಟ್ಟು ಆ ಭಾಷೆಗಳಲ್ಲಿ ಉತ್ತಮ ಗ್ರಂಥಗಳನ್ನು ಬರೆದಿರುವವರಿಗೆ ಕೊಡಬೇಕೆಂದು ಮಾಡಿದ್ದಾರೆ. ಈ ರೀತಿ ನಮ್ಮ ಸರ್ಕಾರದವರೂ ಪ್ರೋತ್ಸಾಹ ನೀಡಬೇಕೆಂದು ಹೇಳುತ್ತೇನೆ. ಅದೇ ರೀತಿಯಲ್ಲಿ ದೇಶದಲ್ಲಿರುವ ಕವಿಶ್ರೇಷ್ಠರಿಗೆ ಪ್ರಶಸ್ತಿ ಗೌರವಗಳನ್ನು ಕೊಡುವ ಏರ್ಪಾಡನ್ನು ಅಲ್ಲಿ ಮಾಡಿದ್ದಾರೆ. ನಮ್ಮಲ್ಲೂ ಆ ಪದ್ಧತಿಯನ್ನು ಅನುಸರಿಸುವುದು ಒಳ್ಳೆಯದು. ಅಂತೆಯೇ ವಿಶ್ವಕೋಶ ಭಾಷಾಭಿವೃದ್ಧಿಯಾಗಬೇಕಾದರೆ, ಜ್ಞಾನಾಭಿವೃದ್ಧಿಯಾಗಬೇಕಾದರೆ ಅವಶ್ಯಕವಾಗಿ ಬೇಕು. ದೇಶದಲ್ಲಿನ ಎಲ್ಲಾ ಕಾರ್ಯಕಲಾಪಗಳನ್ನೂ ಕನ್ನಡದಲ್ಲಿಯೇ ಆಗುವಂತೆ ಮಾಡಬೇಕು. ಈ ದೃಷ್ಟಿಯಿಂದ ವಿಶ್ವಕೋಶ, encyclopedia ತಯಾರಿಸಬೇಕಾದ್ದು ಬಹಳ ಅವಶ್ಯಕ. ಮದ್ರಾಸ್ ಸರ್ಕಾರದವರು ಇದಕ್ಕಾಗಿ 2½ ಲಕ್ಷ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದಾರೆ. ಅದೇ ರೀತಿ ನಮ್ಮ ಸರ್ಕಾರದವರೂ ಹಣ ಕೊಟ್ಟು ಪ್ರೋತ್ಸಾಹ ಮಾಡಬೇಕೆಂದು ಸೂಚಿಸುತ್ತೇನೆ. ನಮ್ಮಲ್ಲಿ ಈಗೊಂದು ಅರ್ಥಕೋಶ (Dictionary) ಇದೆ. ಇದನ್ನು ತಯಾರುಮಾಡಿ ಆಗಲೇ 7-8 ವರ್ಷವಾಯಿತು. ಆಗಲೇ ಹಳೆಯದೂ ಆಯಿತು; ಪ್ರತಿಗಳೂ ಕೂಡ ಸಿಕ್ಕುತ್ತಿಲ್ಲ. ಆದ್ದರಿಂದ ಅದನ್ನು ಪುನಃ ಮುದ್ರಣ ಮಾಡಿಸಿ ಹೊಸ ರೀತಿಯಲ್ಲಿ ತರಬೇಕೆಂದು ಹೇಳುತ್ತೇನೆ.

ವಿದ್ಯಾಭ್ಯಾಸದ ವಿಚಾರದಲ್ಲಿ ಹೀಗೆ ನಾಲ್ಕಾರು ಮಾತುಗಳನ್ನು ಹೇಳಿದ ಮೇಲೆ, ಕೈಗಾರಿಕೆಗಳ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಅರ್ಥ ಸಚಿವರು ತಮ್ಮ ಭಾಷಣದಲ್ಲಿ ನಮ್ಮ ಸಂಸ್ಥಾನದ ಕೈಗಾರಿಕೆಗಳಿಗೆ ಸೆಂಟ್ರಲ್ ಇಂಡಸ್ಟ್ರಿಯಲ್ ಫೈನಾನ್ಸಿಯಲ್ ಕಾರ್ಪೊರೇಷನ್‌ನಿಂದ ಹಣ ಕೊಡುತ್ತೇವೆಂದು ಹೇಳಿದ್ದಾರೆಂದು ತಿಳಿಸಿದ್ದಾರೆ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಆ ಕಾರ್ಪೊರೇಷನ್ನಿನ ಅನುಕೂಲತೆಯನ್ನು ನಮ್ಮ ಸಂಸ್ಥಾನಕ್ಕೂ ಅನ್ವಯಿಸುತ್ತೇವೆಂದು ಹೇಳಿದ್ದಾರೆ ಎಂದು ನಾನು ಹೇಳಿದೆ.

ಶ್ರೀ ವಿ. ಎಸ್. ನಾರಾಯಣರಾಯರು.—ಅಂತೂ ಮೈಸೂರಿಗೆ ಅದರ ಸೌಲಭ್ಯವನ್ನು ಅನ್ವಯಿಸುವಂತೆ ಮಾಡಿದ್ದಾರೆ ಅದಲ್ಲದೆ State Aid to Industries ಬಿಲ್ಲನ್ನು ನಾವೂ ಕೂಡ ಜಾರಿ ಮಾಡಿದ್ದೇವೆ. ಇವೆರಡರಿಂದ ನಮ್ಮ ದೇಶದ ಕೈಗಾರಿಕೆಗಳಿಗೆ ಬಹಳ ಸಹಾಯವಾದೀತೆಂದು ಭಾವಿಸುತ್ತೇನೆ. ಇದರಿಂದ ಕೈಗಾರಿಕೆಗಳಿಗೆ ಹೆಚ್ಚಿನ ಪ್ರೋತ್ಸಾಹ ದೊರೆಯುತ್ತದೆಂದು ನಾನು ಭಾವಿಸುತ್ತೇನೆ. ಈ ಸಂಬಂಧದಲ್ಲಿ ಕಸ್ತೂರಿಭಾಯ್ ಲಾಲ್‌ಭಾಯ್‌ರವರು ನಮ್ಮ ದೇಶಕ್ಕೆ ಬಂದಿದ್ದರು, ಇಲ್ಲಿನ ಅನೇಕ ಕೈಗಾರಿಕೆಗಳನ್ನು ಪರಿಶೀಲಿಸಿದರೆಂದು ಮಾನ್ಯ ಸಚಿವರು ತಿಳಿದ್ದಾರೆ. ಆದರೆ ಅವರು ಏನು ವರದಿ ಮಾಡಿದ್ದಾರೆ, ಏನು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆಂಬುದನ್ನು ಹೇಳಲಿಲ್ಲ. ಪ್ರಶ್ನೋತ್ತರಗಳ ಸಂಬಂಧದಲ್ಲಿ ಈ ವಿಚಾರ ಬಂದಾಗ ಅದನ್ನೂ ಗೋಪ್ಯವಾದ ವಿಚಾರವೆಂದು ಹೇಳಿ ಮುಂದೆ ತಿಳಿಸುತ್ತೇವೆಂದು ಹೇಳಿದರು. ಅಂತೂ ಅದರ ಮೇಲೆ ತೀರ್ಮಾನಗಳನ್ನು ತೆಗೆದುಕೊಳ್ಳುವುದಕ್ಕೆ ಮುಂಚೆ ಅದನ್ನು ಈ ಸಭೆಯ ಅವಗಾಹನೆಗೂ ಒಮ್ಮೆ ತರುತ್ತಾರೆಂದು ನಂಬಿದ್ದೇನೆ. ಪೋರ್ಸಲೀನ್ ಕಾರ್ಖಾನೆಯ ವಿಚಾರದಲ್ಲಿ ಒಂದು ಮಾತು ಹೇಳಬೇಕಾಗಿದೆ. ಈ ಕಾರ್ಖಾನೆಯಲ್ಲಿ ಎಲೆಕ್ಟ್ರೋ ಪೋರ್‌ಸಲೀನ್ ಭಾಗ ಒಂದು, ಬರಿಯ ಸೆರಾಮಿಕ್ಸ್, ಎಂದರೆ ಮಣ್ಣಿನ ಪಾತ್ರೆಗಳನ್ನು ತಯಾರು ಮಾಡುವುದು ಭಾಗ ಒಂದು, ಹೀಗೆ ಎರಡು ಭಾಗಗಳಿವೆ. ಈ ಸೆರಾಮಿಕ್ಸ್ ಭಾಗದಿಂದ 75 ಸಾವಿರ ರೂಪಾಯಿ ನಷ್ಟವಾಗಿದೆಯೆಂದು ತೋರಿಸಲಾಗಿದೆ. ಸೆರಾಮಿಕ್ಸ್ ಭಾಗವನ್ನು ಲಾಭದಾಯಕವಾಗಿ ನಡೆಸಲು ಸಾಧ್ಯವಿಲ್ಲವೆಂದು ಅನೇಕ ಕೈಗಾರಿಕಾ ಪ್ರವೀಣರು ಅಭಿಪ್ರಾಯಪಟ್ಟಿದ್ದಾರೆ. ಶ್ರೀಮಾನ್ ಕಸ್ತೂರಿಭಾಯ್ ಲಾಲ್‌ಭಾಯ್ ಅವರು ಕೂಡ ಹೀಗೆಯೇ ಅಭಿಪ್ರಾಯ ಕೊಟ್ಟಿದ್ದಾರೆಂದು ನನಗೆ ತಿಳಿದುಬಂದಿದೆ. ಕೈಗಾರಿಕೆ ಇಲಾಖೆಯ ಡೈರೆಕ್ಟರು ಕೂಡ ಇದೇ ಅಭಿಪ್ರಾಯ ಸೂಚಿಸಿದ್ದಾರೆಂದು ತಿಳಿದುಬಂದಿದೆ. ಹೀಗಿದ್ದರೂ ಕೂಡ ಸರ್ಕಾರದವರು ಈ ಸೆರಾಮಿಕ್ಸ್ ಭಾಗವನ್ನು ಬಡಾವಣೆ ಮಾಡಬೇಕೆಂದಿದ್ದಾರೆ. ಅದೇಕೋ ಗೊತ್ತಿಲ್ಲ. ಇದನ್ನು ನಿಲ್ಲಿಸಿ ಸಂಪೂರ್ಣವಾಗಿ ಎಲೆಕ್ಟ್ರೋ ಪೋರ್‌ಸಲೀನ್ ತಯಾರಿಕೆಗೇ ಹೆಚ್ಚು ಗಮನಕೊಡಬೇಕೆಂದು ಸೂಚಿಸುತ್ತೇನೆ.

The Hon'ble Sri H. C. DASAPPA.—A very retrograde proposal?

ಶ್ರೀ ವಿ. ಎಸ್. ನಾರಾಯಣರಾಯರು.—ಈ ಕಾರ್ಖಾನೆಯಲ್ಲಿ ನಷ್ಟವಾಗುತ್ತಿರುವುದಕ್ಕೆ ಇನ್ನೊಂದು ಕಾರಣ top-heavy administration ಎಂದು ಕಾಣುತ್ತದೆ. ಇದುವರೆಗೆ ಅಲ್ಲಿ ಒಬ್ಬರೇ ಮ್ಯಾನೇಜರ್ ಇದ್ದರು. ಅವರೇ ಎಲ್ಲಾ ಭಾಗಗಳ ಆಡಳಿತವನ್ನೂ ನೋಡಿಕೊಳ್ಳುತ್ತಿದ್ದರು. ಈಗ ಒಬ್ಬರು ಎಕ್ಸ್‌ಪರ್ಟ್ ಮತ್ತು ಒಬ್ಬರು ಕಮರ್ಷಿಯಲ್ ಮ್ಯಾನೇಜರನ್ನು ನೇಮಕ ಮಾಡಿದ್ದಾರೆ. ನನಗೆ ತಿಳಿದ ಮಟ್ಟಿಗೆ ಅಲ್ಲಿ ಒಬ್ಬರಿಗೆ ಮಾತ್ರ ಕೆಲಸವಿದೆ. ನಾನು ವ್ಯಕ್ತಿಶಃ ಹೇಳುತ್ತಿಲ್ಲ. ಈ ವಿಚಾರದಲ್ಲಿ ಇನ್ನೂ ಕೆಲವು ಅಂಶಗಳನ್ನು ಖೋತಾ ಸೂಚನೆ ಚರ್ಚೆಗೆ ಬಂದಾಗ ಹೇಳುತ್ತೇನೆ. ಅಂತೂ ಸೆರಾಮಿಕ್ಸ್ ಭಾಗವನ್ನು ಮುಚ್ಚಬಹುದು. ನನಗೆ ತಿಳಿದ ಮಟ್ಟಿಗೆ ಸೆರಾಮಿಕ್ಸ್‌ಗೆ ಬೇಕಾದ ಒಳ್ಳೆಯ ಮಣ್ಣು ಇಲ್ಲಿ ಯಾವ ಪ್ರಾಂತದಲ್ಲೂ ಸಿಕ್ಕುವುದಿಲ್ಲ. ಅಮೇರಿಕ, ಇಂಗ್ಲೆಂಡ್, ಜಪಾನ್—ಈ ದೇಶಗಳಲ್ಲಿ

(ಶ್ರೀ ವಿ. ಯಸ್. ನಾರಾಯಣರಾಯರು).

ವಿನಾ ಮಿಕ್ಕ ದೇಶಗಳಲ್ಲಿ ಈ ಸೆರಾಮಿಕ್ಸ್ ಕೈಗಾರಿಕೆಗೆ ಬೇಕಾದ ಮಣ್ಣು ಸಿಗುತ್ತಿಲ್ಲ ಮತ್ತು ಲಾಭದಾಯಕವಾಗಿ ನಡೆಯುತ್ತಿಲ್ಲವೆಂದು ನನಗೆ ಗೊತ್ತಾಗಿದೆ. ಈಗ ಎಗ್ಜಿಬಿಷನ್‌ಗೆ ಬಂಗಾಳದಿಂದ ಸೆರಾಮಿಕ್ಸ್ ತಟ್ಟೆ ಬಟ್ಟಲುಗಳು ಬಂದಿವೆ. ಒಂದು ರೂಪಾಯಿಗೆ ಮೂರು ಸೆಟ್ಟುಗಳನ್ನು ಕೊಡುತ್ತಾರೆ. ಅದೇ ನಮ್ಮ ಕಾರ್ಖಾನೆಯಲ್ಲಿ ತಯಾರಾಗಿರುವುದನ್ನು ಕೊಳ್ಳುವುದಕ್ಕೆ ಹೋದರೆ ರೂಪಾಯಿಗೆ ಒಂದು ಸೆಟ್ಟು ಕೂಡ ಸಿಕ್ಕುವುದಿಲ್ಲ. ಬಂಗಾಳದಿಂದ ಬಂದಿರುವುದೂ ಅಷ್ಟು ಚೆನ್ನಾಗಿಲ್ಲ. ನಮ್ಮ ದೇಶದಲ್ಲಿ ಇದಕ್ಕೆ ತಕ್ಕ ಮಣ್ಣು ಸಿಕ್ಕುವುದಿಲ್ಲವೆಂದು ಸೆರಾಮಿಕ್ಸ್ ಪ್ರವೀಣರು ಅಭಿಪ್ರಾಯ ಪಟ್ಟಿರುವುದರಿಂದ ಈ ಶಾಖೆಯನ್ನು ಮುಚ್ಚುವುದೇ ಒಳ್ಳೆಯದು.

ವೆಸ್ಟಿಂಗ್ ಹೌಸ್ ಸ್ಕೀಮು' ಬಂದಿದೆ ಎಂದು ಅರ್ಥ ಸಚಿವರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಇದು ಏನೆಂಬುದು ನನಗೆ ಗೊತ್ತಾಗಿಲ್ಲ. ನನಗೆ ತಿಳಿದಿರುವ ಹಾಗೆ ಎಲೆಕ್ಟ್ರಿಕ್ ಫ್ಯಾಕ್ಟರಿ, ಲ್ಯಾಂಪ್‌ವರ್ಕ್ಸ್ ಮತ್ತು ಪೋರ್ಸಿಲೀನ್ ಫ್ಯಾಕ್ಟರಿ ಈ ಮೂರನ್ನೂ ಸೇರಿಸಿ ಒಂದೆ ಆಡಳಿತಕ್ಕೆ ತರಬೇಕೆಂಬ ಅಭಿಪ್ರಾಯ ಸರ್ಕಾರದವರಿಗಿರುವಂತೆ ಕಾಣುತ್ತದೆ. ದೊಡ್ಡ ದೊಡ್ಡ ಯೋಜನೆಗಳನ್ನು ಮಾಡುವುದೆಂದರೆ ಸರ್ಕಾರದವರಿಗೆ ಆಶೆಯೆಂದು ಕಾಣುತ್ತದೆ. ಇಂತಹ ಯೋಜನೆಗಳಿಗೆ ಬಹು ಬೇಗ ಮನ ಸೋಲುತ್ತಾರೆ. ಹೀಗೆ ಮಾಡಿದರೆ ಆಡಳಿತ ಕೆಟ್ಟುಹೋಗುತ್ತದೆ. ಆದಕಾರಣ ಈಗಿರುವಂತೆಯೇ ಇಟ್ಟು ಇವುಗಳನ್ನು ಯಾವ ರೀತಿ ಸಮರ್ಪಕವಾಗಿ ನಡೆಯುವಂತೆ ಮಾಡಬೇಕೆಂಬುದನ್ನು ಸರ್ಕಾರದವರು ಯೋಚನೆ ಮಾಡಬೇಕೆಂದು ಪ್ರಾರ್ಥಿಸುತ್ತೇನೆ. ಎಲೆಕ್ಟ್ರಿಕ್ ಫ್ಯಾಕ್ಟರಿ ಮತ್ತು ಪೋರ್‌ಸಿಲೀನ್ ಫ್ಯಾಕ್ಟರಿಗಳಿಂದ ನಷ್ಟವಾಗುತ್ತದೆ; ಲ್ಯಾಂಪ್ ವರ್ಕ್ಸ್‌ನಿಂದ ಲಾಭ ಬರುತ್ತಿದೆ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—Lamp Works is a joint-stock company which cannot come into this at all. ಇದು ಹೇಗೆ ಸಾಧ್ಯವೆಂಬುದನ್ನು ಯೋಚಿಸಬೇಕು. ಊಹೆಗೂ ಮಿತಿ ಇರಬೇಕು.

ಶ್ರೀ ವಿ. ಎಸ್. ನಾರಾಯಣರಾಯರು.—ಆದರೂ ಕೂಡ ಈ ಫ್ಯಾಕ್ಟರಿಯ ಮೇಲೆ ಸರ್ಕಾರದವರು ಹತೋಟಿಯನ್ನಿಟ್ಟುಕೊಂಡಿದ್ದಾರೆ. ಇದಕ್ಕೆ ಸರ್ಕಾರಿ ಅಧಿಕಾರಿಗಳು ಸೆಕ್ರೆಟರಿಯಾಗಿದ್ದಾರೆ. ಚೀಫ್ ಎಲೆಕ್ಟ್ರಿಕಲ್ ಇಂಜಿನಿಯರವರಿಗೆ ಇದರ ಮೇಲೆ ಹತೋಟಿ ಇದೆ. ಇದನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳುವ ಯೋಚನೆಯಿದೆಯೆಂದು ನನಗೆ ಗೊತ್ತಾಗಿದೆ.

ನಾನು ಇನ್ನೂ ಅನೇಕ ವಿಚಾರಗಳನ್ನು ಹೇಳಬೇಕೆಂದಿದ್ದೆ. ಆದರೆ ಕಾಲವಿಲ್ಲದೇಯಿರುವುದರಿಂದ ಕೆಲವನ್ನು ಸಂಕ್ಷೇಪವಾಗಿ ಹೇಳುತ್ತೇನೆ. ರೋಡ್ ಟ್ರಾನ್ಸ್‌ಪೋರ್ಟ್ ನೋಡಿದ ಮೇಲೆ ಇಂತಹ ನ್ಯಾಷನಲೈಸೇಷನ್ ಬೇಡವೆಂದು ಜನರು ಹೇಳುವಂತಾಗಿದೆ. ರಾಷ್ಟ್ರೀಕರಣ ತತ್ವವೇನೋ ಒಳ್ಳೆಯದೇ; ಸರಿಯಾಗಿದೆ. ಆದರೆ ಇಲ್ಲಿ ಮ್ಯಾನೇಜ್‌ಮೆಂಟ್ ಸರಿಯಾಗಿಲ್ಲದೇ ಇರುವುದರಿಂದ ಹೀಗಾಗಿದೆ. ರಾಷ್ಟ್ರೀಕರಣವೆಂದರೆ ರೋಡ್ ಟ್ರಾನ್ಸ್‌ಪೋರ್ಟ್ ಕಡೆ ಜನ ಕೈ ತೋರಿಸುತ್ತಾರೆ. ಆದಕಾರಣ ಇದನ್ನು ಮೊದಲು ಸರಿಪಡಿಸಬೇಕು. ಬೊಂಬಾಯಿ ಮತ್ತು ಉತ್ತರ ಪ್ರದೇಶದಲ್ಲಿ ಇದು ಲಾಭದಾಯಕವಾಗಿ ನಡೆಯುತ್ತಿದೆ. ಉತ್ತರ ಪ್ರದೇಶದಲ್ಲಿ ನಾಲ್ಕು ಸಾವಿರ ಮೈಲಿ ರೋಡ್‌ಟ್ರಾನ್ಸ್‌ಪೋರ್ಟ್ ಇದೆ? ಇದರಲ್ಲಿ 44 ಲಕ್ಷ ರೂಪಾಯಿ ಲಾಭ ಬಂದಿದೆಯೆಂದು ಅವರ ಬಡ್ಜೆಟ್ಟಿನಲ್ಲಿ ತೋರಿಸಿದ್ದಾರೆ. ನಮ್ಮ ದೇಶದಲ್ಲಿ ಏಕೆ ಹೀಗೆ ನಷ್ಟದಿಂದ ನಡೆಯಬೇಕೆಂಬದನ್ನು ಯೋಚಿಸಬೇಕು.

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—9 ಸಾವಿರ ಎಂದು ಅಂಕಿ ತಪ್ಪಾಗಿ ಮುದ್ರಣವಾಗಿದೆ. ಮೊನ್ನೆಯೇ ಇದನ್ನು ತಿಳಿಸಬೇಕಾಗಿತ್ತು. 48 ಸಾವಿರ ಎಂದಿರುವುದು 68 ಸಾವಿರ ಎಂದಿರಬೇಕಾಗಿತ್ತು, ಲಾಭ 29 ಸಾವಿರ ರೂಪಾಯಿ ಬರುತ್ತದೆ; 9 ಸಾವಿರ ಅಲ್ಲ.

ಶ್ರೀ ವಿ. ಎಸ್. ನಾರಾಯಣರಾಯರು.—ಖಾಸಗೀ ಜನರು ನನಗೆ ಬೇಕು ತನಗೆ ಬೇಕೆಂದು ಬಸ್ ಲೈಸೆನ್ಸ್ ಕೇಳುತ್ತಾರೆ. ಒಬ್ಬೊಬ್ಬ ವ್ಯಕ್ತಿಗಳು ನಡೆಸಿ ಬೇಕಾದಷ್ಟು ಲಾಭ ಸಂಪಾದನೆ ಮಾಡುತ್ತಿದ್ದಾರೆ. ಹೀಗಿರುವಾಗ ಸರ್ಕಾರಕ್ಕೇ ನಷ್ಟವಾಗಬೇಕಾದರೆ ಕಾರಣವೇನು? ಸರಿಯಾಗಿ ಇದರ ಆಡಳಿತ ನಡೆಸದೇ ಇರುವುದೇ ಕಾರಣ. ಇದನ್ನು ಸರಿಪಡಿಸಿ ರಾಷ್ಟ್ರೀಕರಣವನ್ನು ಮುಂದುವರಿಸುತ್ತೇವೆ ಖಾಸಗಿಯವರಿಗೆ ಇದನ್ನು ಕೊಡುವುದಿಲ್ಲವೆಂಬ ಭರವಸೆಯನ್ನು ಸರ್ಕಾರದವರು ಕೊಡಬೇಕು.

ಸಕ್ಕರೆ ಕಾರ್ಖಾನೆಗೆ ಬಹಳ ಲಾಭ ತೋರಿಸುತ್ತಿದ್ದಾರೆ. ಷೇರುದಾರರಿಗೆ ಶೇಕಡ 20ರಷ್ಟು ಡಿವಿಡೆಂಡ್ ಕೊಡುತ್ತಿದ್ದಾರೆ. ಲಾಭ ಬರುವುದಕ್ಕೆ ಅನೇಕ ಕಾರಣಗಳಿವೆಯೆಂಬುದನ್ನು ತಿಳಿಯಬೇಕು.

The Hon'ble Sri H. C. DASAPPA.—Sugar Factory is again a joint-stock company.

ಶ್ರೀ ವಿ. ಎಸ್. ನಾರಾಯಣರಾಯರು.—ಅಲ್ಲಿಯ ಚೇರ್ಮನ್ ಸರ್ಕಾರದಿಂದಲೇ ನೇಮಕವಾಗಿದ್ದಾರೆ. ಅಲ್ಲದೆ ಅದರಲ್ಲಿ ಶೇಕಡ 60ರಷ್ಟು ಷೇರುಗಳು ಸರ್ಕಾರದ ಷೇರುಗಳು. 17 ವರ್ಷಗಳಿಂದ ಸಾರ್ವಜನಿಕರು ಇದಕ್ಕೆ ರಕ್ಷಣೆ ಕೊಡುತ್ತಿದ್ದಾರೆ. ಸಕ್ಕರೆ ಬೆಲೆಯನ್ನು ಬೇಕಾದಷ್ಟು ಹೆಚ್ಚಿಸುತ್ತಾ ಬಂದಿದ್ದಾರೆ. ಕಡಿಮೆ ಮಾಡಿಲ್ಲ. ಈ ರಕ್ಷಣೆಯನ್ನು ತಪ್ಪಿಸಿದರೆ ಎಷ್ಟು ಮಟ್ಟಿಗೆ ಲಾಭದಾಯಕವಾಗಿ ಕೆಲಸ ಮಾಡುತ್ತದೆಯೆಂಬುದು ಸಂದೇಹಾಸ್ಪದವಾದ ವಿಷಯ. ಬಂದ ಲಾಭವನ್ನೆಲ್ಲಾ ಷೇರುದಾರರಿಗೆ ಹಂಚುವುದಕ್ಕೆ ಬದಲಾಗಿ ಈ ಕೈಗಾರಿಕೆಯನ್ನು ಬೆಳೆಸಿ ಮುಂದುವರಿಸಲು ಉಪಯೋಗ ಮಾಡಬೇಕು. ಪರದೇಶದಿಂದ ಬರುವ ಸಕ್ಕರೆಗೆ ಅವಕಾಶ ಕೊಟ್ಟರೆ ನಮಗೆ ಬಹಳ ಸುಲಭವಾಗಿ ಸಕ್ಕರೆ ದೊರೆಯಬಹುದು. ಆದರೆ ನಮ್ಮ ದೇಶದಲ್ಲಿರುವ ಈ ಕೈಗಾರಿಕೆಗೆ ತೊಂದರೆಯಾಗುತ್ತದೆ. ಆದುದರಿಂದ ರಕ್ಷಣೆಯೇನೋ ಇರಬೇಕು............

ಶ್ರೀ ಎಸ್. ರಂಗರಾಯರು.—ಬಡ್ಜೆಟ್ಟಿನಲ್ಲಿಲ್ಲದೇ ಇರುವ ವಿಚಾರವನ್ನು ಪ್ರಸ್ತಾಪಿಸುತ್ತಿದ್ದಾರೆ. ಸಕ್ಕರೆ ಕಾರ್ಖಾನೆಯ ವಿಷಯವೇ ಬಡ್ಜೆಟ್ಟಿನಲ್ಲಿಲ್ಲ.

ಶ್ರೀ ವಿ. ಎಸ್. ನಾರಾಯಣರಾಯರು.—ಸಂಸ್ಥಾನದ ಕೈಗಾರಿಕೆಗಳ ವಿಚಾರದಲ್ಲಿ ಸಲಹೆ ಕೊಡುತ್ತಿದ್ದೇನೆ.

ಕಬ್ಬಿನ ರಸವನ್ನು ತೆಗೆದುಕೊಂಡು ಉಳಿಯುವ Bagasse 'ಪರ್'ಪನ್ನು ಈಗ ಆ ಕಾರ್ಖಾನೆಯಲ್ಲಿ ಸುಟ್ಟುಬಿಡುತ್ತಿದ್ದಾರೆ. ಹೀಗೆ ಮಾಡುವ ಬದಲು ಇದನ್ನು ಬೇರೆ ಯಾವುದಕ್ಕಾದರೂ ಉಪಯೋಗ ಮಾಡಬೇಕೆಂದು ನನ್ನ ಸೂಚನೆ. ಇದರಿಂದ ಕಾಗದವನ್ನು ತಯಾರಿಸಬಹುದು. ಇನ್ನೂ ಅನೇಕ ವಿಷಯಗಳನ್ನು ಗುರುತು ಹಾಕಿಕೊಂಡಿದ್ದೆ, ಆದರೆ ಅದೆಲ್ಲವನ್ನೂ ಹೇಳಲು ಕಾಲವಿಲ್ಲ.

ಇನ್ನು ಬೆಂಗಳೂರು, ಮೈಸೂರು ನಗರಗಳ ವಿಷಯದಲ್ಲಿ ಒಂದು ಮಾತು. ನಗರಗಳು ಬೆಳೆಯುತ್ತಿವೆ, ಇಲ್ಲಿ ಅನುಕೂಲಗಳು ಹೆಚ್ಚುತ್ತಿವೆ, ಹಳ್ಳಿಗಳಿಂದ ಇಲ್ಲಿಗೆ ಬರುತ್ತಿದ್ದಾರೆಂದು ಅನೇಕರು ಆಕ್ಷೇಪಣೆ ಮಾಡುತ್ತಿದ್ದಾರೆ. ನಗರಗಳು ಬೆಳೆಯಬೇಕೆಂಬ ಆಶೆ ನಮಗೇನೂ ಇಲ್ಲ. ಬೆಳೆದಷ್ಟೂ ಜೀವನದ ವೆಚ್ಚ ಹೆಚ್ಚುತ್ತದೆ. ಆದರೆ ಒಂದು ವಿಚಾರ ಹೇಳಬೇಕು. ಅದೇನೆಂದರೆ, ಬೆಂಗಳೂರಿನಲ್ಲಿರುವವರೆಲ್ಲರೂ ಹೊಟ್ಟೆ ತುಂಬ ಊಟ ಮಾಡಿಕೊಂಡು ಸುಖವಾಗಿದ್ದಾರೆಂದು ಕೆಲವರು ಹೇಳುತ್ತಾರೆ; ಇದು ಖಂಡಿತವಾಗಿ ತಪ್ಪು ಅಭಿಪ್ರಾಯವೆಂದು ನಾನು ಹೇಳುತ್ತೇನೆ. ಅನೇಕರಿಗೆ ಬೆಂಗಳೂರಿನಲ್ಲಿರುವವರಿಗೆ ಅರ್ಧ ಹೊಟ್ಟೆಗೂ ಊಟವಿಲ್ಲ. ಇಲ್ಲಿ ಧನಿಕರೂ ಇದ್ದಾರೆ, ಬಡವರೂ ಇದ್ದಾರೆಂಬುದನ್ನು ಮರೆಯಬಾರದು. ಬಹಳ ಜನರು ವಿದ್ಯಾಭ್ಯಾಸಕ್ಕೆ ಅಥವಾ ಬೇರೆ ಕೆಲಸಗಳಿಗೆ ಇಲ್ಲಿಗೆ ಬರುತ್ತಿದ್ದಾರೆಯೇ ವಿನಾ ಇಲ್ಲಿ ಹೊಟ್ಟೆ ತುಂಬ ಸಿಕ್ಕುತ್ತದೆಂದು ಬರುತ್ತಾರೆಂದು ಹೇಳುವುದು ಸರಿಯಲ್ಲ. ನಮಗೆ ಇಲ್ಲಿ ಕೊಡುತ್ತಿರುವ 9 ಔನ್ಸ್‌ನಲ್ಲಿ 5·5 ಔನ್ಸ್ ಮಾತ್ರ ಅಕ್ಕಿಯನ್ನು ಕೊಡುತ್ತಾರೆ. ಹೀಗೆ ಕೊಡುವ ಅಕ್ಕಿ ಹೇಗಿರುತ್ತದೆಂಬುದಕ್ಕೆ ಒಂದು ಸ್ಯಾಂಪಲ್ ಕೂಡ ತಂದು ಮಂತ್ರಿಗಳಿಗೆ ತೋರಿಸಿದ್ದೇನೆ. ಇದನ್ನು ಸರಿಪಡಿಸಿ ಉಪಯೋಗಿಸುವ ಹೊತ್ತಿಗೆ ಇದರಲ್ಲಿರುವ ಕಸಕಡ್ಡಿ ಎಲ್ಲ ಹೋದ ಮೇಲೆ ನಾಲ್ಕು ಔನ್ಸಿಗೆ ಇಳಿಯುತ್ತದೆ. ಈ ಅಕ್ಕಿಯನ್ನೂ ಉಪಯೋಗಿಸುವುದೇ ಕಷ್ಟ. ಅದೇ ಮದರಾಸಿನಲ್ಲಿ ರೇಷನ್ 9 ಔನ್ಸಿಗೆ ಇಳಿಸಿದಾಗ ಕೂಡ 7 ಔನ್ಸ್ ಅಕ್ಕಿಯನ್ನು ಕೊಡುತ್ತಿದ್ದರು. ಮೊನ್ನೆ 8 ಔನ್ಸ್ ಅಕ್ಕಿ ಕೊಡುವುದಾಗಿ ಅಲ್ಲಿನ ಆಹಾರ ಮಂತ್ರಿಗಳು ಹೇಳಿದ್ದಾರೆ. ಪಾಕಿಸ್ತಾನದೊಡನೆ ಒಪ್ಪಂದವಾದ ತಕ್ಷಣವೇ ತಮಗೆ ಅಕ್ಕಿ ಅಗತ್ಯವೆಂದು ಹೇಳಿಕೊಂಡು ಹೆಚ್ಚು ಅಕ್ಕಿಯನ್ನು ತರಿಸಿಕೊಂಡಿದ್ದಾರೆ. ಇದೇ ವಿಚಾರದಲ್ಲಿ ನಮ್ಮ ಪಕ್ಕದ ಪ್ರಾಂತ್ಯದವರಾದ ಮದ್ರಾಸ್ ಸರ್ಕಾರದವರು ಪ್ರಯತ್ನ ಮಾಡಿ 15 ದಿವಸಗಳಲ್ಲೇ ಪಾಕೀಸ್ತಾನದಿಂದ 2 ಲಕ್ಷ ಟನ್‌ಗಳಷ್ಟು ತರಿಸಿಕೊಂಡಿದ್ದಾರೆ. ನಮ್ಮ ಸರ್ಕಾರದವರೂ ಕೂಡ ಅದೇ ರೀತಿ ಪ್ರಯತ್ನ ಮಾಡಿ ಈ ಆಹಾರ ಸಮಸ್ಯೆಯನ್ನು ಬೇಗ ಉತ್ತಮಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ತುಟ್ಟಿಭತ್ಯದ ವಿಚಾರವಾಗಿ ಎರಡು ಮಾತುಗಳನ್ನು ಹೇಳತಕ್ಕದ್ದು ಅತ್ಯಾವಶ್ಯಕವಾಗಿದೆ. ಈಗ ಪ್ರತಿಯೊಂದು ವಸ್ತುಗಳ ಬೆಲೆಯೂ ವಿಪರೀತವಾಗಿ ಏರಿರುತ್ತಲ್ಲದೆ ಇನ್ನೂ ಏರುವುದರಲ್ಲೇ ಇದೆ. ಈಗ ಒಬ್ಬೊಬ್ಬರು ಜೀವನೋಪಾಯ ನಡೆಸಬೇಕಾಗಿದ್ದರೆ ಎಷ್ಟು ಖರ್ಚಾಗುತ್ತಿದೆಯೆಂಬುದರ ಬಗ್ಗೆ ಎಂದರೆ Cost of living Index, ನನ್ನಲ್ಲಿ ಸಾಕಾದಷ್ಟು ಅಂಕಿ ಅಂಶಗಳನ್ನು ಸಂಗ್ರಹಮಾಡಿಕೊಂಡು ಬಂದಿದ್ದೇನೆ. ಆದರೆ ಅವುಗಳನ್ನೆಲ್ಲಾ ವಿಮರ್ಶೆ ಮಾಡುತ್ತ ಮಾತನಾಡಲು ನನಗೆ ಸಾಕಷ್ಟು ಕಾಲಾವಕಾಶವಿಲ್ಲ. ಆದರೆ ಒಂದಂಶವನ್ನು ಒತ್ತಿ ಹೇಳಬೇಕಾಗಿರುವುದೇನೆಂದರೆ ಜೀವನೋಪಾಯದ ಬಗ್ಗೆ ಹೆಚ್ಚಿನ ಖರ್ಚುವೆಚ್ಚಗಳು ಬರುವಂಥ ಬೆಂಗಳೂರು ನಗರ, ದಾವಣಗೆರೆ ಸಿಟಿ ಮತ್ತು ಕೋಲಾರ ಚಿನ್ನದಗಣಿ, ಮೈಸೂರು ಇತ್ಯಾದಿ ದೊಡ್ಡ ಪಟ್ಟಣಗಳಲ್ಲಿರುವಂಥ ನಾನ್‌ಗೆಜೆಟೆಡ್ ನೌಕರರಿಗಾದರೂ ತಾವು ಈ ತುಟ್ಟಿ ಭತ್ಯವನ್ನು ಹೆಚ್ಚು ಕೊಡಲಾಗುವುದಿಲ್ಲವೆಂದು ಭಾವಿಸಿದ್ದರೆ, ಒಂದು ಸಿಟಿ ಅಲೋಯೆನ್ಸ್ ಎಂದಾದರೂ ಖಂಡಿತ ಕೊಟ್ಟೇ ತೀರಬೇಕೆಂದು ತಿಳಿಸಿ ನಾನು ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

*ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು (ಚಿಕ್ಕಮಗಳೂರು ಜಿಲ್ಲೆ).—ಮಾನ್ಯ ಅಧ್ಯಕ್ಷರೇ ಈಗ ಸಭೆಯ ಮುಂದೆ ಮಂಡಿಸಿರತಕ್ಕ ಆಯವ್ಯಯ ಪಟ್ಟಿಯಲ್ಲಿ ನಮ್ಮ ಸರ್ಕಾರದ ಆಯವ್ಯಯದಲ್ಲಿ 37½ ಲಕ್ಷ ರೂಪಾಯಿ ಡಿಫಿಸಿಟ್ ಆಗುವಂತೆ ಅಂದರೆ ಆದಾಯಕ್ಕಿಂತ ಖರ್ಚು ಹೆಚ್ಚಾಗಿರುವಂತೆ ತೋರಿಸಿದ್ದಾರೆ. ಆದರೆ ಈ ಆಯವ್ಯಯ ಪಟ್ಟಿಯನ್ನು ಕೂಲಂಕಷವಾಗಿ ನೋಡಿದರೆ ದೇಶದಲ್ಲಿರತಕ್ಕ ಅನ್ನ ಬಟ್ಟೆಗಳ ವ್ಯವಸ್ಥೆಯ ಬಗ್ಗೆಯೂ ಮತ್ತು ತಲೆಗೆ ಸ್ವಲ್ಪ ಬುದ್ಧಿ ಅಂದರೆ ವಿದ್ಯಾಭ್ಯಾಸ, ನನ್ನ ಅಭಿಪ್ರಾಯದಲ್ಲಿ ವಿದ್ಯಾಭ್ಯಾಸವೆಂದರೆ ವಿಶ್ವವಿದ್ಯಾನಿಲಯದ ತನಕ ಅಲ್ಲ. ಸಾಮಾನ್ಯ ವಿದ್ಯಾಭ್ಯಾಸಕ್ಕಾಗಿ, ಏನೇನು ಬೇಕೋ ಅವುಗಳನ್ನು ಪೂರ್ತಿಯಾಗಿ ಒದಗಿಸಲು ಇಷ್ಟು ಹೆಚ್ಚು ಖರ್ಚಾಗಬಹುದೆಂದು ತೋರಿಸಿದ್ದಾರೆ. ವಿದ್ಯಾಭ್ಯಾಸದ ಬಗ್ಗೆ 308·96 ಲಕ್ಷದಷ್ಟು ಹಣವನ್ನು ಒದಗಿಸಿದ್ದಾರೆ. ಈ ಬಗ್ಗೆ ಯೂನಿವರ್ಸಿಟಿ ವಿದ್ಯಾಭ್ಯಾಸಕ್ಕಾಗಿ 25 ಲಕ್ಷ ರೂಪಾಯಿಗಳನ್ನೂ, ಮಾಧ್ಯಮಿಕ ಶಾಲಾ ಬಗ್ಗೆ 40·87 ಲಕ್ಷ ರೂಪಾಯಿಗಳನ್ನೂ ಮತ್ತು ಪ್ರಾಥಮಿಕ ಶಾಲೆಗಳಿಗಾಗಿ 74·31 ಲಕ್ಷ ರೂಪಾಯಿಗಳನ್ನೂ ಒದಗಿಸಿದ್ದಾರೆ. ಆದರೆ ಈ ಬಗ್ಗೆ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಿಗೆ ಇನ್ನೂ ಹೆಚ್ಚಿನ ಹಣವನ್ನೊದಗಿಸಬೇಕೆಂದು ಸೂಚಿಸುತ್ತೇನೆ. ನನ್ನ ಅಭಿಪ್ರಾಯದಲ್ಲಿ ಈ ಯೂನಿವರ್ಸಿಟಿ ವಿದ್ಯಾಭ್ಯಾಸದ ನಡೆವಳಿಕೆಗಳನ್ನು ನೋಡಿದರೆ ಸಾಕಪ್ಪಾ ಈ ವಿದ್ಯಾಭ್ಯಾಸದ ಸುಖ ಎಂದೆನಿಸುತ್ತದೆ. ಹಳೆಯ ಸ್ಕೂಲುಗಳ ವಿದ್ಯಾಭ್ಯಾಸವೇ ಸಾವಿರ ಪಾಲಿಗೂ ಮೇಲಾಗಿದ್ದು ಅಲ್ಲಿರುವ ಹುಡುಗರು ಎಷ್ಟೋ ಭಯಭಕ್ತಿಯುಳ್ಳವರಾಗಿದ್ದಾರೆ. ಆದರೆ ಇಂಥಾ ಭಯಭಕ್ತಿ ಇದ್ದಂಥ ಹುಡುಗರು ಕಾಲೇಜುಗಳಿಗೆ ಸೇರಿ ವ್ಯಾಸಂಗ ಮಾಡಿ ಬಂದನಂತರ, ಈ ದಿವಸ ಅವರ ಮುಖ್ಯ ಕಸುಬು ಬರೀ ನಾಡು ಬಾಂಬುಗಳನ್ನು ತಯಾರಿಸಿ ಎಸೆಯುತ್ತಿರತಕ್ಕದ್ದೇ ಆಗಿ ಹೋಗಿದೆ. ಹೀಗೆ ಈ ಯೂನಿವರ್ಸಿಟಿ ವಿದ್ಯಾಭ್ಯಾಸದ Quantitative Expansion ಆಗಿ ಹೋಗಿ quality ಯಲ್ಲಿ ಪೂರಾ ಕಮ್ಮಿಯಾಗಿರುತ್ತೆ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅಂಥಾದ್ದನ್ನೆಲ್ಲಾ ಸರಿಪಡಿಸಲಾಗಿದೆ.

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು.—ಹೀಗೆ ಬರೀ ಒಂದು Quantitative Expansion ಗಿಂತ qualitative Expansion ಮಾಡಿದರೆ ಅದರಿಂದ ಉತ್ತಮವಾದ ಫಲ ಬಂದು ದೇಶಾಭಿವೃದ್ಧಿಯಾಗಲು ಸಹಾಯಕವಾಗುತ್ತದೆ. ಹೋದ ಸಾಲಿನಲ್ಲಿ ಈ ಪ್ರಾಥಮಿಕ ಮತ್ತೂ ಮಾಧ್ಯಮಿಕ ಶಾಲಾ ಕಟ್ಟಡಗಳಿಗಾಗಿ ಸರ್ಕಾರದವರು ಎಷ್ಟು ಹಣವನ್ನೊದಗಿಸಿದ್ದಾರೋ ಅದಕ್ಕಿಂತ ಜಾಸ್ತಿಯಾಗಿ ಈ ಸಾಲಿಗೆ ಒದಗಿಸಿದ್ದರೆ-ಅಂದರೆ 12 ಲಕ್ಷ 96 ಸಾವಿರ ರೂಪಾಯಿಗಳನ್ನು ಒದಗಿಸಿದ್ದಾರೆ. ಆದರೆ ಕೆಲವು ಸ್ಥಳೀಯ ಸಂಸ್ಥೆಗಳ ಆಡಳಿತಕ್ಕೊಳಪಟ್ಟಿರತಕ್ಕ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳ ಕೆಲಸ ಮುಂದುವರಿಸಬೇಕೆಂದರೆ ಜಿಲ್ಲಾಧಿಕಾರಿಗಳೂ ಮತ್ತು ಪಿ. ಡಬ್ಲ್ಯು. ಇಲಾಖೆಯವರೂ ಅಂದರೆ ಈ ಎರಡು ಇಲಾಖೆಗಳೂ ಸಹಕರಿಸದೆ ಕಟ್ಟಡಗಳ ಕೆಲಸವು ಸಂಪೂರ್ಣವಾಗಿ 1-4-50 ರಿಂದ ನಿಂತುಹೋಗಿದೆ. ಕೇವಲ 1½ ಅಥವಾ 2 ಸಾವಿರ ರೂಪಾಯಿಗಳ ಕೆಲಸಕ್ಕೂ ಸಹ ಹಣವನ್ನು ಮಂಜೂರು ಮಾಡಲು ಹಿಂದು ಮುಂದು ಮಾಡುತ್ತಿದ್ದಾರೆ. ಹೀಗೆ ಇವರು ಹಣವನ್ನು ಸಕಾಲದಲ್ಲಿ ಮಂಜೂರು ಮಾಡುತ್ತಿಲ್ಲವೆಂದು ಪಿ. ಡಬ್ಲ್ಯು. ಡಿ. ನವರು ಕಲಸವನ್ನೇ ಕೈಗೊಳ್ಳಲು ಇಷ್ಟವಿಲ್ಲದೆ ಬಹಳ

(ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು)

ನಿಧಾನ ಮಾಡಿಬಿಟ್ಟಿದ್ದಾರೆ. ಹೀಗೆ ಇವರುಗಳ ತಿಕ್ಕಾಟದಲ್ಲಿ ಕೆಲಸ ನಡೆಸಿದವರಿಗೆ ಸಕಾಲಕ್ಕೆ ಸರಿಯಾಗಿ ಹಣ ಪಾವತಿಯಾಗದೆ ತೊಂದರೆಯುಂಟಾಗಿರತಕ್ಕ ಸಂದರ್ಭಗಳು ಅನೇಕವಾಗಿವೆ. ಹೀಗೆಲ್ಲಾ ತೊಂದರೆಗಳು ಉಂಟಾಗಿರುವುದರಿಂದ ನಾನೇ ಅನೇಕರಿಗೆ ಕೆಲಸವನ್ನು ಖಂಡಿತ ಮುಂದುವರಿಸಬೇಡಿ ಎಂದು ತಿಳಿಸಿರುತ್ತೇನೆ. ಹೀಗಾಗಿ ಹೋದ ವರ್ಷವೇ ಆಗಬೇಕಾಗಿದ್ದಂಥ ಕಟ್ಟಡಗಳು ಇನ್ನೂ ಆಗದೆ ವಿದ್ಯಾಭ್ಯಾಸಕ್ಕೆ ತುಂಬಾ ತೊಂದರೆಯಾಗಿರುತ್ತೆ. ಆದುದರಿಂದ ಹೀಗೆ ಬರಿ ಹಣವನ್ನೊದಗಿಸುವುದೊಂದೇ ಪ್ರಾಧಾನ್ಯವಲ್ಲ. ಅದೇ ರೀತಿ ಇದರ ಸುವ್ಯವಸ್ಥತೆ ಬಗ್ಗೆ ಅಂದರೆ ಅದನ್ನು ವಿನಿಯೋಗ ಮಾಡತಕ್ಕದ್ದರ ಬಗ್ಗೆ ಒಂದು ಸರಿಯಾದ ದಾರಿ ಹಾಕಿದರೆ ಅದರಿಂದ ಕಟ್ಟಡಗಳ ಕೆಲಸ ಸರಾಗವಾಗಿ ನಡೆಯಲು ಅನುಕೂಲವಾಗುತ್ತದೆ. ಅದರಂತೆ ಸರ್ಕಾರದವರು ಮಾಡುತ್ತಾರೆಂದು ನಂಬಿದ್ದೇನೆ.

ಇನ್ನು ರೂರಲ್ ಡೆವಲಪ್‌ಮೆಂಟ್ ಕೆಲಸ ಕಾರ್ಯಗಳ ನಿರ್ವಹಣೆಯನ್ನು ಕೂಡ 1950ನೇ ಇಸವಿ ಏಪ್ರಿಲ್ 1ನೆಯ ತಾರೀಖಿನಿಂದ ಪಿ. ಡಬ್ಲ್ಯು. ಇಲಾಖೆಗೆ ವಹಿಸಿರುತ್ತಾರೆ. ಈ ಬಗ್ಗೆ ಹಿಂದೆ ಕೆಲಸ ನಡೆಸಿದ್ದರ ಬಗ್ಗೆ ಅನೇಕ ತಾಲ್ಲೂಕುಗಳಲ್ಲಿ ಹಣ ಪಾವತಿಯಾಗದೆ ಕೆಲಸ ನಿಂತು ಹೋಗಿದೆ. ಹೀಗೆ ಈ ಬಾಬಿನಲ್ಲೂ ತೊಂದರೆಯುಂಟಾಗಿ ಕೇವಲ ಒಂದು ಪಾರ್ಕು ಅಥವಾ ಸರ್ಕಲ್‌ಗಳ ಕೆಲಸ ಸಹ ಸರಿಯಾಗಿ ನಡೆದಿರುವುದಿಲ್ಲ. ಆದರೆ ಹೀಗೆ ಪಾರ್ಕು ಅಥವಾ ಸರ್ಕಲ್‌ಗಳ ಕೆಲಸ ನಡೆಸುವುದಕ್ಕೆ ಬದಲಾಗಿ ಈಗ ಪ್ರಾಮುಖ್ಯವಾಗಿ ಬೇಕಾಗಿರುವ ಕುಡಿಯುವ ನೀರಿನ ಬಾವಿಗಳನ್ನು ಮಾಡಿಸತಕ್ಕದ್ದು ಅಗತ್ಯವೆಂದು ಹೇಳುತ್ತೇನೆ. ಈ ಬಗ್ಗೆ ಈಗಾಗಲೇ ನಾನು ತಿಳಿಸಿರತಕ್ಕ ಅನೇಕ ದ್ವಿಗುಣ ಸ್ವಭಾವದ ತೊಂದರೆಗಳಿಂದ ಹರಿಜನರಿಗೆ ಕುಡಿಯುವ ನೀರಿನ ಬಾವಿಗಳನ್ನು ತೋಡಿಸಲಿಕ್ಕೆ ಒಂದು ಕಾಸನ್ನೂ ಸಹ ಖರ್ಚು ಮಾಡುವ ಅವಕಾಶವಿಲ್ಲದಂತಾಗಿದೆ. ಆದರೆ ನಾನು, ಮೊದಲು ಯಾರ್ಯಾರು ಎಷ್ಟೆಷ್ಟು ಕೆಲಸಗಳನ್ನು ಮಾಡಿದ್ದಾರೋ ಅವರಿಗೆ ಮೊದಲು ಅಷ್ಟಷ್ಟು ಹಣವನ್ನು ಕೊಟ್ಟುಬಿಡಬೇಕೆಂದು ಹೇಳುತ್ತೇನೆ. ಆದರೆ ಎಷ್ಟು ಹಣ ಪಾವತಿಯಾಗಿದೆ. ಇನ್ನು ಎಷ್ಟು ಪಾವತಿಯಾಗಬೇಕಾಗಿದೆ ಎಂಬುದನ್ನು ಹೇಳತಕ್ಕವರೆ ಇಲ್ಲದಂತಾಗಿದೆ. ಹೀಗೆ ತಾವು ಅವರಿಂದ ಕೆಲಸ ಮಾಡಿಸಿಕೊಂಡು ಕೊಡತಕ್ಕ ಹಣಕ್ಕೆ ಸತಾಯಿಸುತ್ತಿರುವುದನ್ನು ನೋಡಿಕೊಂಡು ಸುಮ್ಮನಿರುವುದನ್ನು ನಾನು ಖಂಡಿತ ಸಹಿಸಲಾರೆ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅಂಥಾ ನಿದರ್ಶನಗಳಿದ್ದರೆ ತಾವು ನನ್ನ ಗಮನಕ್ಕೆ ತೆಗೆದುಕೊಂಡು ಬನ್ನಿ. ಅದನ್ನು ನಾನು ಕೂಡಲೇ ಸರಿಪಡಿಸುತ್ತೇನೆ.

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು.—ಏನೇ ಆಗಲೀ ತಾವು ಈ ಬಾಬಿಗೆ ಹೆಚ್ಚಾಗಿ ಹಣವನ್ನು ಕೊಡದೆ ಹೋದರೂ ಚಿಂತೆಯಿಲ್ಲ, ಇರುವುದನ್ನಾದರೂ ಸರಿಯಾಗಿ ವಿನಿಯೋಗಿಸುವಂತೆ ಒಂದು ವ್ಯವಸ್ಥೆ ಮಾಡಿದರೆ ಆಗಲೂ ಸಹ ಇದರಲ್ಲೇ ಎಷ್ಟೋ ಕೆಲಸಗಳು ಚೆನ್ನಾಗಿ ಮುಂದುವರೆಯಬಹುದು.

ಇನ್ನು ಈ ಹೆಚ್ಚು ಆಹಾರವನ್ನು ಬೆಳೆಯಬೇಕೆಂಬುದರ ಬಗ್ಗೆ ಒಂದು ಮಾತನ್ನು ಹೇಳಬೇಕಾಗಿದೆ. ಮೊನ್ನೆ ತಾನೆ ಕೆಲವು ಕಾಫೀ ಪ್ಲಾಂಟರುಗಳು ಲಕ್ಕವಳ್ಳಿ, ತರೀಕೆರೆ, ಕೊಪ್ಪ ಇತ್ಯಾದಿ ಪ್ರಾಂತ್ಯಗಳಿಂದ ಮಾನ್ಯ ಆಹಾರ ಸಚಿವರ ಬಳಿಗೆ ಬಂದು ತಮ್ಮ ತೋಟಗಳಲ್ಲಿ ಕೆಲಸ ಕಾರ್ಯ ಮಾಡತಕ್ಕ ಕೂಲಿಗಾರರಿಗೆ ಆಹಾರ ಧಾನ್ಯಗಳನ್ನು ಒದಗಿಸಿಕೊಡಬೇಕೆಂದು ಮನವಿ ಮಾಡಿಕೊಂಡರೆಂಬ ಸಂಗತಿ ನನಗೆ ತಿಳಿದುಬಂದಿರುತ್ತೆ. ಆದರೆ ಮೊನ್ನೆ ತಾನೆ ಒಬ್ಬ ದೊಡ್ಡ ಮನುಷ್ಯರು ಮದ್ರಾಸಿನಿಂದ ಬಂದು ಇಲ್ಲಿ ಒಂದು ಕಾಫಿ ಎಸ್ಟೇಟನ್ನು 10 ಲಕ್ಷ ರೂಪಾಯಿಗಳಿಗೆ ಕೊಂಡಿರುತ್ತಾರೆ. ಹಾಗೆ 10 ಲಕ್ಷ ರೂಪಾಯಿಗಳನ್ನು ಹಾಕಿ ಆಸ್ತಿಯನ್ನು ಕೊಂಡುಕೊಳ್ಳತಕ್ಕವರಿಗೆ, ಅವರ ಕೆಲಸ ಕಾರ್ಯದಲ್ಲಿ ನಿರತರಾಗಿರುವವರಿಗೆ ಅಂದರೆ ಸುಮಾರು 1,000 ಆಳುಕಾಳುಗಳಿಗೆ ನೀವೇಕೆ ಆಹಾರ ಸಾಮಗ್ರಿಗಳನ್ನು ಕೊಡಬೇಕು? ಅಲ್ಲಲ್ಲೇ ಕೆರೆಗಳು ಇದ್ದೇ ಇರುತ್ತವೆ. ಅವರಿಗೆ ಬೇಕಾದರೆ ಅಲ್ಪ ಸ್ವಲ್ಪ ಜಮೀನುಗಳನ್ನು ಕೊಟ್ಟುಬಿಡಿ, ಅವರು ಅಲ್ಪ ವ್ಯವಸಾಯ ಮಾಡಿ ಬೆಳೆದು ಕೊಳ್ಳಲಿ. ಕೊಪ್ಪ ತಾಲ್ಲೂಕಿನಲ್ಲಿ ಅಮಲ್ದಾರರು ಎಷ್ಟು ಭತ್ತವನ್ನು ಆ ತಾಲ್ಲೂಕಿನಲ್ಲಿ ವಸೂಲು ಮಾಡುತ್ತಾರೋ ಅಷ್ಟನ್ನು ಆ ಕಾಫೀ ಪ್ಲಾಂಟರುಗಳಿಗೇ ಸರಿಹೋಗುತ್ತದೆಂದು ತಿಳಿಸಿದರು. ಹೀಗೆ ನಾವು ಅವರುಗಳಿಗೆ ತೋರಿಸುತ್ತಿರುವ ಉತ್ತೇಜನವನ್ನು ಸ್ವಲ್ಪ ಕಮ್ಮಿ ಮಾಡಬೇಕು. ಈ ಶ್ರೀಮಂತರುಗಳೆಲ್ಲಾ ಕೇವಲ ಲಾಭದಾಯಕವಾದ ಬೆಳೆಗಳ ಮೇಲೆ ಯಾವಾಗಲೂ ಹಣವನ್ನು ಹಾಕುತ್ತಾರೇ ವಿನಾ ಈ ಆಹಾರ ಸಾಮಗ್ರಿಗಳ ಬಗ್ಗೆ ಅಷ್ಟು ಹೆಚ್ಚಿನ ಲಾಭ ಬಾರದೆ ಇರುವುದರಿಂದ ಈ ಬಾಬಿಗೆ ಅವರು ಉತ್ತೇಜನ ತೆಗೆದುಕೊಳ್ಳುತ್ತಿಲ್ಲ. ನಿಮಗೆ ಅಲ್ಪ ಸ್ವಲ್ಪ ಆದಾಯ ತೆರಿಗೆ ರೂಪದಲ್ಲಿವರಮಾನ ಬಂದಾಗ್ಯೂ ಅದು ಅವರಿಗೆ ನೀವು ಕೊಡುತ್ತಿರುವ ಆಹಾರ ಧಾನ್ಯಗಳ ಬೆಲೆಗೆ ಸರಿಸಮಾನವಾಗುವುದಿಲ್ಲ. ಹೀಗೆ ಹೆಚ್ಚು ಹೆಚ್ಚು ಶ್ರೀಮಂತರಿಗೆ ತಾವಿನ್ನೂ ಹೆಚ್ಚು ಹೆಚ್ಚು ತೆರಿಗೆಯನ್ನು ವಿಧಿಸಬೇಕಾಗಿದೆ. ದೇಶಕ್ಕೆ ಒದಗಬಹುದಾದ ಆಹಾರ ಸಾಮಗ್ರಿಗಳ ಪೈಕಿ ಬಹುಶಃ ಇಂದು 20–25 ಸಾವಿರ ಪಲ್ಲ ದವಸ ಇವರ ಕೂಲಿಗಾರರಿಗೇ ಸೇರುತ್ತದೆ. ಹೀಗೆ ತಾವು ಇವರಿಗೆ ಖಂಡಿತ ಈ ಆಹಾರ ಬಾಬಿನಲ್ಲಿ ಉತ್ತೇಜನ ತೋರಿಸಬಾರದು.

ಕೆರೆಗಳನ್ನು ಅಬಾದು ಮಾಡಿ ಕಾಂಟ್ರಿಬ್ಯೂಷನ್ ಪಡೆಯಬಹುದು. ಅಚ್ಚುಕಟ್ಟುದಾರರು ಅದನ್ನು ಕೂಡುತ್ತಾರೆ. ಬೊಂಬಾಯಿನಲ್ಲಿ ಒಂದು ಮಸೂದೆಯನ್ನು ಇದರಂತೆ ಮಾಡಿದ್ದಾರೆ. ಕೊನೆಯ ಪಕ್ಷ ಇದನ್ನು 1/5 ಭಾಗವಿದ್ದರೆ ¼ ಭಾಗಕ್ಕೆ ಹೆಚ್ಚಿಸಬಹುದು. ಹೆಚ್ಚಾಗಿ ಕೊಡಲು ರೈತರು ತಯಾರಾಗಿದ್ದಾರೆ. ಕೆರೆ ಕಾಂಗಾರಿಯು ಸರಿಯಾಗಿ ಆಗದಿದ್ದರೆ ಉತ್ಪತ್ತಿ ಎಲ್ಲಿಂದ ಬರುತ್ತದೆ? ಚೆನ್ನಾಗಿ ರಿಪೇರಿ ಮಾಡಿದರೆ ಸರಿಯಾದ ಉತ್ಪತ್ತಿಯೂ ಬರುತ್ತದೆ, ರೈತರಿಗೂ ಸಂತೋಷವಾಗುತ್ತದೆ. ಜನರು ಕಾಂಟ್ರಿಬ್ಯೂಷನ್ ಕೊಡುವುದಿಲ್ಲವೆ? ಕೆರೆ ಅಬಾದಾದರೆ ಈ ದಿನ 50 ರೂಪಾಯಿ ಬೆಲೆ ಬಾಳುವ ಜಮೀನು 500 ರೂಪಾಯಿಗಳಿಗೇರುತ್ತದೆ. ಇದರಿಂದ ಜಮೀನ್ದಾರನಿಗೂ ಅನುಕೂಲ, ಸರ್ಕಾರಕ್ಕೆ ಕಾಂಟ್ರಿಬ್ಯೂಷನ್ ಬರುವುದರಿಂದ ಅದಕ್ಕೂ ಅನುಕೂಲ. ಅದ್ದರಿಂದ ಹಣವಿಲ್ಲವೆಂದು ಕಾಂಗಾರಿ ನಿಲ್ಲಿಸಬಾರದು. ರೈತರ ಮೇಲೆ ಹೆಚ್ಚು ಭಾರ ಹಾಕುವುದು ತಪ್ಪಲ್ಲ. ಅರ್ಧ ಉತ್ಪತ್ತಿಯಾದರೂ ಅವರಿಗೆ ಬರುತ್ತದೆ ಎಂಬುದು ನನ್ನ ಸ್ವಂತ ಅನುಭವದ ಮಾತು.

ಇನ್ನೊಂದು ವಿಚಾರ. ಮಲೆನಾಡಿನಲ್ಲಿ ಕೊಪ್ಪ ತಾಲ್ಲೂಕಿನ ಕೆಲವು ಭಾಗದಲ್ಲಿ ಡಿ.ಡಿ.ಟಿ. ಪ್ರಯೋಗ ಮಾಡುತ್ತಿದ್ದಾರೆ. ಎಷ್ಟೋ ಇದರಿಂದ ಅನುಕೂಲವಾ

ಗಿದೆ. ಮಲೆನಾಡಿನಲ್ಲಿ ಕೆಲವು ಕಡೆ ಒಬ್ಬನು ನಾಲ್ಕೈದು ಹೆಂಗಸರನ್ನು ಮದುವೆ ಮಾಡಿಕೊಳ್ಳಬೇಕಾಗಿದೆ. ಅಲ್ಲಿ ಹೆಂಗಸರು ಹೆರಿಗೆಯಾದ ಕೂಡಲೆ ಮರಣ ಹೊಂದುತ್ತಾರೆ. ಆದ್ದರಿಂದ ಡಿ.ಡಿ.ಟಿ. ಪ್ರಯೋಗದಿಂದ ಆರೋಗ್ಯವು ಹೆಚ್ಚುತ್ತದೆ. ಹೆಚ್ಚು ಜಮೀನನ್ನು ಸಾಗು ಮಾಡಬಹುದು. ಮೈದಾನದಿಂದ ಅಲ್ಲಿಗೆ ಕೆಲವು ಕೂಲಿಗಾರರು ಹೋದರೂ ಕೂಡ ಅವರೆಲ್ಲಾ ಕೈಗಾರಿಕೆಗಳಲ್ಲಿ ಮಾತ್ರ ನಿರತರಾಗುತ್ತಿದ್ದಾರೆ. ಹೀಗಾಗಿ ವ್ಯವಸಾಯಕ್ಕೆ ಕೂಲಿಗಳು ಸಿಕ್ಕುತ್ತಿಲ್ಲ. ಆದ್ದರಿಂದ ಮಲೆನಾಡಿನ ಜನರ ಆರೋಗ್ಯವನ್ನು ಮೊದಲು ಕಾಪಾಡಬೇಕು. ಅವರು ಎಲ್ಲರಿಗೂ ಆಹಾರ ಧಾನ್ಯವನ್ನು ಬೆಳೆಯುತ್ತಾರೆ. ಶಿವಮೊಗ್ಗ, ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಗಳಲ್ಲಿ ಈಗ ಖರ್ಚು ಮಾಡುವ 20 ಲಕ್ಷ ರೂಪಾಯಿಗಳನ್ನು ಇನ್ನೂ ಸ್ವಲ್ಪ ಹೆಚ್ಚಿಸಿ ಡಿ.ಡಿ.ಟಿ. ಪ್ರಯೋಗವನ್ನು ಹೆಚ್ಚಿಸಿದರೆ ಬಹಳ ಒಳ್ಳೆಯದು. ಇದರಿಂದ ಬಹಳ ಲಾಭದಾಯಕವಾಗಿ ಅನುಕೂಲವಾಗುತ್ತದೆ. ಆಹಾರ ಧಾನ್ಯವನ್ನೂ ಹೆಚ್ಚಿಸಬಹುದು.

ಐ. ವಿ. ಸಿ. ಹಣವನ್ನು ಮಲೆನಾಡು ಜಿಲ್ಲೆಗಳಿಗೆ ಹೆಚ್ಚಿಸಬೇಕು. ಏಕೆಂದರೆ ಒಂದು ಸೇತುವೆ ಹಾಕುವುದರಿಂದ ಕೆಲವು ಕಡೆ 500 ಎಕರೆಗಳವರೆಗೂ ಜಮೀನು ಸಾಗು ಮಾಡಬಹುದು.

ಇದೂ ಅಲ್ಲದೆ ಮಲೆನಾಡಿನಲ್ಲಿ ನೀರಿನ ಸೌಕರ್ಯ ಹೆಚ್ಚಾಗಿದೆ ಎಂಬುದು ತಪ್ಪಭಿಪ್ರಾಯ. ಅಲ್ಲಿರುವ ಕೆರೆಗಳ ಪೈಕಿ ಸೇಕಡ 75 ಕೆರೆಗಳು ಸರಿಯಾದ ರಿಪೇರಿಯಿಲ್ಲದೆ ಹಾಗೆಯೇ ನಿಂತಿವೆ. ಕೆಲವು ಕೆರೆಗಳು ಒಡೆದು ಹೋಗಿವೆ. ಆದ್ದರಿಂದ ಸಾಗುಮಾಡುವುದಕ್ಕೆ ಅವಕಾಶವಿಲ್ಲ. ರಾಗಿ, ಬತ್ತ ಯಾವುದೂ ಬೆಳೆಯುತ್ತಿಲ್ಲ. ಆದ್ದರಿಂದ ಜಾಗ್ರತೆಯಾಗಿ ಕೆರೆ ಕಾಂಗಾರಿ ಮಾಡಿದರೆ ಹೆಚ್ಚುಬೆಳೆಯಾಗಲು ಅನುಕೂಲವಿದೆ.

'ಸೀಟಿಂಗ್ ಟ್ಯಾಕ್ಸ್, ಮೋಟಾರು ವಾಹನ ಮತ್ತು ಸಿನಿಮಾಗಳಿಗೆ ಹಾಕಿರುವ ತೆರಿಗೆ' ಮುಂತಾದುವನ್ನು ಕೆಲವರು ವಿರೋಧಿಸಿದರು. ನಾನು ಅದನ್ನು ವಿರೋಧಿಸುವುದಿಲ್ಲ. ಬಡತನದಿಂದ ಇವು ಹಾಕಿದರೆ ತೊಂದರೆಯೆಂದು ಹೇಳಬಾರದು. ಹೆಡ್‌ಟ್ಯಾಕ್ಸ್, ಮೋಟಾರು ತೆರಿಗೆ ವಗೈರೆ ಹಾಕಿದರೆ ರೂಪಾಯಿಗೆ 2½ ಆಣೆಗಳ ತೆರಿಗೆ ಕೊಡುವುದೇನೂ ಹೆಚ್ಚಿಲ್ಲ. ಆದರಿಂದ ಬರುವ ಲಾಭ ಅಷ್ಟಿಷ್ಟಲ್ಲ. ಮಲೇರಿಯ ಬಂದರೆ ಡಾಕ್ಟರಿಗೆ ಕೊಡುತ್ತಿದ್ದ 25 ರೂಪಾಯಿಗಳನ್ನು ಈ ತೆರಿಗೆ ಹಾಕಿ ಸರ್ಕಾರದವರು ತಪ್ಪಿಸಿದ್ದಾರೆ.

ಈಗ ಫ್ರೂಟ್ ಪ್ರಿಸರ್ವೇಷನ್ ಸೆಂಟರ್ ಎಂದು ಮಾಡಿರುವುದು ಲಾಭದಾಯಕವಾಗಿದೆ. ಮಲೆನಾಡಿನಲ್ಲಿ ಅದನ್ನು ಏರ್ಪಾಡು ಮಾಡುವುದು ಒಳ್ಳೆಯದು. ಇತರ ಕಡೆಗಳಲ್ಲೂ ಅದನ್ನು ಮಾಡಿದರೆ ಹೆಚ್ಚು ಅನುಕೂಲ. ಆದ್ದರಿಂದ ಹಾಗೆ ಮಾಡುತ್ತಾರೆಂದು ನಂಬಿದ್ದೇನೆ.

ಶ್ರೀ ಎ. ಜಿ. ರಾಮಚಂದ್ರರಾಯರು (ಹಾಸನ ಜಿಲ್ಲೆ).—ಸ್ವಾಮಿ, ನಮ್ಮ ಮುಂದೆ ಈಗ ಇಟ್ಟಿರುವ ಆಯವ್ಯಯ ಪಟ್ಟಿಯನ್ನು ಈ ವರ್ಷದ ದೃಷ್ಟಿಯಿಂದ ನೋಡಿದರೆ ಸರಿಯಾಗಿ ವಿಮರ್ಶೆ ಮಾಡಿದಂತಾಗುವುದಿಲ್ಲ. ಈಗ್ಗೆ ನಾಲ್ಕು ವರ್ಷಗಳಿಂದ ಜವಾಬ್ದಾರಿ ಸರ್ಕಾರವಿದೆ. ಆದರೂ ಕೂಡ ಜನರಲ್ಲಿ ಅಸಮಾಧಾನ ಮತ್ತು ಅತೃಪ್ತಿ ಏಕೆ ನೆಲಸಿದೆ, ಅದನ್ನು ಹೇಗೆ ನಿವಾರಣೆ ಮಾಡಬೇಕು ಎಂಬುದಕ್ಕೆ ಯೋಚನೆಮಾಡಿ ಈ ವರ್ಷವಾದರೂ ಮುಂದುವರಿಯುವುದು ಸೂಕ್ತ. ಮೂರು ವರ್ಷಗಳಿಂದ ಸುಮಾರು 40–45 ಕೋಟಿ ರೂಪಾಯಿಗಳ ವರಮಾನ ಮತ್ತು ಸುಮಾರು 20 ಕೋಟಿ ರೂಪಾಯಿಗಳ ರಿಸರ್ವ್ ಸೇರಿ ಒಟ್ಟು 60 ಕೋಟಿ ರೂಪಾಯಿಗಳಷ್ಟು ಖರ್ಚಾಗಿದೆ. ಯಾವ ರೀತಿ ವೆಚ್ಚಮಾಡಿದ್ದಾರೆ, ಯಾವ ತತ್ವದ ಆಧಾರದ ಮೇಲೆ ವೆಚ್ಚ ಮಾಡಿದ್ದಾರೆ, ಮುಖ್ಯವಾದ ತತ್ವ ಪರಿಪಾಲನೆಯಾಗುತ್ತಿದೆಯೇ ಎಂದು ನೋಡಿದರೆ ಆ ರೀತಿ ಆಗದಿರುವುದರಿಂದ ಜನರಲ್ಲಿ ಅತೃಪ್ತಿ, ಅಸಮಾಧಾನ ಇದೆಯೆಂದು ವ್ಯಕ್ತವಾಗುವುದು. ಯಾವ ತತ್ವವನ್ನು ಅನುಸರಿಸಬೇಕಾಗಿತ್ತೋ ಅದಕ್ಕೆ ಪುರಸ್ಕಾರ ಸಿಕ್ಕಿಲ್ಲವೆಂದು ಅನೇಕರು ಹೇಳಿದ್ದಾರೆ. ಅದು ಸರ್ಕಾರದವರು ಅನುಸರಿಸಿರುವ ಕೆಲವು ನೀತಿಗಳಿಂದ ವ್ಯಕ್ತವಾಗುತ್ತದೆ. ಮೊದಲನೆಯದಾಗಿ ಗಾಂಧಿ ತತ್ವದ ನಿರಾಕರಣೆಯಾಗಿದೆ ಎಂದು ಶ್ರೀ ಟಿ. ಸುಬ್ರಹ್ಮಣ್ಯರವರು ಮತ್ತು ಇತರ ಕೆಲವು ಸದಸ್ಯರು ಹೇಳಿದ್ದಾರೆ. ಆ ತತ್ವ ನಿರಾಕರಣೆ ಹೇಗೆಂದರೆ ಖಾದಿಗೆ ಹೆಚ್ಚು ಪ್ರೋತ್ಸಾಹವಿಲ್ಲದೆ ಅದು ಮುಂದುವರೆಯುವುದಕ್ಕೆ ಅವಕಾಶವಿಲ್ಲದಿರುವುದು-ಪಾನನಿರೋಧವನ್ನು ನಿಲ್ಲಿಸಿರುವುದು ಮತ್ತು ಸೇವಾದಳಕ್ಕೆ ಸಹಾಯ ಮಾಡಲು ಅವಕಾಶವಿಲ್ಲದಿರುವುದು—ಈ ಮೂರು ಮುಖ್ಯವಾಗಿ ಕಾಣುತ್ತಿವೆ. ಸೇವಾದಳದ ವಿಚಾರದಲ್ಲಿ ಸರ್ಕಾರದವರು ಎಷ್ಟು ಸಹಾಯ ಮಾಡಿದ್ದಾರೋ ಅದಕ್ಕಿಂತ ಹೆಚ್ಚಾಗಿ ಸೇವಾದಳದವರು ಸೇವೆಸಲ್ಲಿಸಿದ್ದಾರೆ. ಅದಕ್ಕೆ ಉತ್ತೇಜನ ಕೊಡಬೇಕು, ಅದನ್ನು ಇಡೀ ಪ್ರಾಂತದಲ್ಲಿ ಅನುಕರಣ ಮಾಡಬೇಕು ಎಂದು ಅನೇಕ ಭಾಷಣಗಳನ್ನು ಮಾಡಿದ್ದಾರೆ. ಇಷ್ಟೇ ಅಲ್ಲ, ಅಖಿಲ ಭಾರತ ಪ್ಲಾನಿಂಗ್ ಕಮಿಷನ್‌ನವರೂ ಕೂಡ ಈ ಸೇವಾದಳ ಅನುಸರಿಸುವ ತತ್ವ ಬಹಳ ಚೆನ್ನಾಗಿದೆ, ಅದು ಹಿಂದೂಸ್ಥಾನದಲ್ಲಿ ಇದೇ ರೀತಿ ಮುಂದುವರಿದರೆ ಜನರು ಮೇಲ್ಮಟ್ಟಕ್ಕೆ ಬರಬಹುದು ಎಂದು ಅವರ ವರದಿಯಲ್ಲಿ ಹೇಳಿದ್ದಾರೆಂದು ಗೊತ್ತಾಗಿದೆ. ಹೀಗಿರುವಾಗ ಸೇವಾದಳದ ಹೆಸರೇ ಇಲ್ಲದಿರುವುದು ಗಾಂಧಿ ತತ್ವದ ನಿರಾಕರಣೆ. ಇದು ಆಗಬಾರದು, ಸರಿಪಡಿಸುವುದು ಅಗತ್ಯ ಎಂಬುದನ್ನು ಜೋತಾ ಸೂಚನೆ ಬಂದಾಗ ಹೇಳುತ್ತೇನೆ.

ಎರಡನೆಯದು, ನಮ್ಮ ರಾಜ್ಯಾಂಗವನ್ನು ನಮ್ಮ ಸಂಸ್ಥಾನದ ಪ್ರಜಾಸರ್ಕಾರವು ಕಾರ್ಯಗತ ಮಾಡಿಕೊಳ್ಳುವುದರಲ್ಲಿ ಸರಿಯಾದ ಮಾರ್ಗವನ್ನನುಸರಿಸದೆ ನಿರಾಕರಣೆ ಮಾಡಿರುವುದು ಬಹಳ ವಿಷಾದಕರ. ಪ್ರಜಾಸತ್ತಾತ್ಮಕ ಸರ್ಕಾರದಲ್ಲಿ ಜ್ಯುಡಿಷಿಯರಿ, ಎಗ್ಜಿಕ್ಯುಟಿವ್ ಮತ್ತು ಲೆಜಿಸ್ಲೇಚರ್—ಇವುಗಳು ಸ್ವತಂತ್ರವಾಗಿ ಅಧಿಕಾರ ಚಲಾಯಿಸಬೇಕು. ಜ್ಯುಡಿಷಿಯರಿ ಮತ್ತು ಎಗ್ಜಿಕ್ಯುಟಿವ್‌ಗೆ ಸಂಬಂಧವಿರಕೂಡದು. ಹಾಗೆ ಮಾಡಿಲ್ಲದಿರುವುದು ಬಹಳ ಅನ್ಯಾಯ. ಲೆಜಿಸ್ಲೇಚರ್‌ಸಹ ಸ್ವಾವಲಂಬಿಯಾಗಿರಬೇಕು ; ಒಂದಕ್ಕೊಂದಕ್ಕೆ ಸೇರಿ ತೊಂದರೆಯಾಗಬಾರದು ಎಂಬ ತತ್ವವನ್ನು ಎಲ್ಲಾ ರಾಜಕೀಯ ತಜ್ಞರೂ ಪ್ರತಿಪಾದಿಸಿರುತ್ತಾರೆ. ಆದರೆ ನಮ್ಮಲ್ಲಿ ಈ ದಿವಸ ಭಾಷಣ ಮಾಡಬೇಕಾದರೆ 15 ನಿಮಿಷ ಅವಕಾಶಕೊಡಿ, 5 ನಿಮಿಷ ಕೊಡಿ ಎಂದು ಕೇಳುವ ಕಾಲ ಬಂದಿದೆ. ಬೇಜವಾಬ್ದಾರಿಯಾಗಿರುವಾಗ ಲೆಜಿಸ್ಲೇಚರ್ ನಡೆಯುವ ಹಾಗೆ ಈ ದಿವಸ ನಡೆಯುತ್ತಿರುವುದರಿಂದ ತಲೆ ತಗ್ಗಿಸಬೇಕಾಗಿದೆ. ಮದ್ರಾಸು ಮತ್ತು ದೇಹಲಿಯಲ್ಲಿ 2½ ತಿಂಗಳಿಂದ ಅವಿಚ್ಛಿನ್ನವಾಗಿ ಬಜೆಟ್ ಚರ್ಚೆಯಾಗುತ್ತಿದೆ. ಇಲ್ಲಿಯೂ ಹಾಗಾದರೆ ನಾವು ಯಾವ ವಿಧದಲ್ಲಿ ಬೇಕಾದರೂ ನಮ್ಮ ಕೆಲಸವನ್ನು ರೂಪಿಸಿಕೊಂಡು ಸೂಕ್ತ ಸಲಹೆಗಳನ್ನು ಮಾಡಬಹುದು. ಈಗ ಇರುವ ರೀತಿಯಲ್ಲಿ ನಮ್ಮ ಜವಾಬ್ದಾರಿ ನಿರ್ವಹಿಸುವುದು ಬಹಳ ಕಷ್ಟವಾಗಿದೆ. ಸಾಕಷ್ಟು ಅವಕಾಶವಿಲ್ಲ. ಆದ್ದರಿಂದ ಈಗಲಾದರೂ ಸರ್ಕಾರದ

(ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು)

ವರು ಯೋಚನೆಮಾಡಿ ತಕ್ಕ ವ್ಯವಸ್ಥೆ ಮಾಡಬೇಕು. ರೂಲ್ಸ್ ಸಮಿತಿಯವರು ಎಲ್ಲವನ್ನೂ ಯೋಚನೆ ಮಾಡಿ ಕಾನೂನು ಹೊಸದಾಗಿ ಮಾಡಬೇಕೆಂದು ಎಲ್ಲ ಸದಸ್ಯರೂ ಒಮ್ಮತವಾಗಿ ಒಪ್ಪಿಗೆ ಕೊಟ್ಟರು. ಆದರೆ ಕಾನೂನು ಇಲ್ಲಿಯವರೆಗೆ ಆ ರೀತಿ ಬಾರದೆ ನಮಗೆ ಅನಾನುಕೂಲವಾಗಿದೆ. ಭಾಷಣ ಮಾಡುವುದಕ್ಕೆ ಅವಕಾಶವೇ ತಪ್ಪಿಹೋಗಿದೆ. ಲೆಜಿಸ್ಲೇಚರ್ ಸೆಕ್ರೆಟೇರಿಯಟ್ ಸ್ವತಂತ್ರವಾಗಿರಬೇಕು. ಈಗ ಇರುವ ರೀತಿಯಲ್ಲಿ ಮಂತ್ರಿಗಳ ಕೈವಾಡವಿರುವುದಕ್ಕೆ ಅವಕಾಶವಿದೆ. ಇದು ತಪ್ಪು; The Executive must not have its influence felt even in shadow form on the Legislature. ರಾಜ್ಯಾಂಗದ ಪ್ರಕಾರ ಲೆಜಿಸ್ಲೇಚರನ್ನು ಎಗ್ಸಿಕ್ಯೂಟಿವ್ ಹತೋಟಿಯಲ್ಲಿಟ್ಟುಕೊಳ್ಳುವುದರಿಂದ ಅನೇಕ ಹಕ್ಕು ಬಾಧ್ಯತೆಗಳಿಗೆ ಧಕ್ಕೆ ಬರುತ್ತದೆ. ಇದಕ್ಕೆ ಅವಕಾಶವಿಲ್ಲದಿರುವಂತೆ ಜಾಗ್ರತೆ ಈ ಅಧಿವೇಶನವು ಮುಗಿಯುವುದಕ್ಕೆ ಮೊದಲೇ ರೂಲ್ಸ್ ಸಮಿತಿಯವರು ರಚಿಸಿರುವ ಕಾನೂನನ್ನು ಜಾರಿಗೆ ತರಬೇಕು. ಅಂಥ ಕಾನೂನನ್ನು ಈ ಸಭೆಯ ಮುಂದಿಟ್ಟು ಈ ಸಭೆಯ ಹಕ್ಕು ಬಾಧ್ಯತೆಗಳನ್ನು ಕಾಪಾಡಬೇಕಾದ್ದು ಬಹಳ ಅಗತ್ಯ.

ಈ ಎರಡು ನಿರಾಕರಣೆಯ ಜೊತೆಗೆ ನಮ್ಮ ದೇಶದಲ್ಲಿ ಹುಟ್ಟಿರತಕ್ಕಂಥ ಸಮಸ್ಯೆಗಳನ್ನು ದಕ್ಷತೆಯಿಂದಾಗಲೀ ದೂರದೃಷ್ಟಿಯಿಂದಾಗಲೀ ಪರಿಗಣಿಸದೇ ಇರತಕ್ಕದ್ದು ಬಹಳ ಮುಖ್ಯವಾದುದಾಗಿದೆ. ಮೊದಲನೆಯದಾಗಿ ಜನಸಂಖ್ಯೆಯ ವಿಷಯ ತೆಗೆದುಕೊಳ್ಳೋಣ. ಜನಸಂಖ್ಯೆ ಈಗಾಗಲೇ 70 ಲಕ್ಷದಿಂದ 93 ಲಕ್ಷದವರೆಗೂ ಏರಿದೆ ಎಂಬುದು ವ್ಯಕ್ತಪಟ್ಟಿದೆ. ಅದರಲ್ಲಿ ಸ್ವಲ್ಪ ಉತ್ಪ್ರೇಕ್ಷೆ ಇರಬಹುದು. ಈಗಿರತಕ್ಕ ಆಹಾರ ಹತೋಟಿಯ ಕಾರಣದಿಂದ 4-6 ಲಕ್ಷ ಜನಗಣತಿಯಲ್ಲಿ ಹೆಚ್ಚಾಗಿರಬಹುದು. ಏನೇ ಆಗಲೀ ಕೊನೇಪಕ್ಷ 10 ಲಕ್ಷ ಪ್ರಜಾಸಂಖ್ಯೆಯಾದರೂ ಹೆಚ್ಚಿದೆ ಎಂದ ಮೇಲೆ ಒಂದು ವರ್ಷಕ್ಕೆ ಒಂದು ಲಕ್ಷದಂತೆ ಹೆಚ್ಚಿದಂತಾಯಿತು. ಆ ಒಂದು ಲಕ್ಷ ಜನರಿಗೆ ಸಾಕಾದಷ್ಟು ಆಹಾರ ಬೆಳೆಯುತ್ತಾ ಇದ್ದೇವೆಯೇ? ಆ ಒಂದು ಲಕ್ಷ ಜನರಿಗೆ ಸಾಕಾದಷ್ಟು ವಿದ್ಯಾಭ್ಯಾಸ ಕೊಡಲು ಅವಕಾಶವಿದೆಯೋ ಎಂದು ನೋಡಿದರೆ ಆಯವ್ಯಯ ಪಟ್ಟಿಯಲ್ಲಿ ಅಭಾವ ಕಾಣುತ್ತಾ ಇದೆ. 1940 ರಲ್ಲಿ 1 ಲಕ್ಷ ಪ್ರಜಾಸಂಖ್ಯೆ ಜಾಸ್ತಿಯಾಗಿದ್ದರೆ, ಅಷ್ಟು ಜನ ಆಗ ಹುಟ್ಟಿದ್ದರೆ ಈಗ ಅವರಿಗೆ 10 ವರ್ಷ ಆಯಿತು. 10 ವರ್ಷದ ಆ ಒಂದು ಲಕ್ಷ ಹುಡುಗರಿಗೆ ವಿದ್ಯಾಭ್ಯಾಸ ಮಾಡಲು ಈಗ ಸಾಕಾದಷ್ಟು ಪ್ರೈಮರಿ ಸ್ಕೂಲುಗಳನ್ನು ಹೆಚ್ಚಿಸಲಾಗಿದೆಯೇ ಎಂದರೆ ಇಲ್ಲ. ಈ ರೀತಿ ಜನಸಂಖ್ಯೆ ಏರುತ್ತಿರುವುದರ ಪರಿಣಾಮವೇನು; ಇದರಿಂದ ಉಂಟಾಗತಕ್ಕ ನಾನಾ ಅಭಾವಗಳನ್ನು ತಪ್ಪಿಸುವುದು ಹೇಗೆ ಎಂಬುದರ ಕಡೆಗೆ ನಮ್ಮ ಸರ್ಕಾರದವರು ದೃಷ್ಟಿ ಕೊಡದೇ ಇರುವುದು ಶೋಚನೀಯ. ಈ ಸಂದರ್ಭದಲ್ಲಿ ಒಂದು ಮಾತು ಹೇಳಿ ಮುಂದುವರಿಯುತ್ತೇನೆ. ಇರತಕ್ಕ 15 ನಿಮಿಷದಲ್ಲಿ ನಾನು ಎಲ್ಲಾ ಇಲಾಖೆಗಳಿಗೂ ಪ್ರವೇಶಿಸುವುದಿಲ್ಲ. ಖೋತಾ ನಿರ್ಣಯ ಬಂದಾಗ ಅವುಗಳ ಮೇಲೆ ಮಾತನಾಡುತ್ತೇನೆ. ಈಗ ತತ್ವವನ್ನು ಮಾತ್ರ ಪ್ರತಿಪಾದಿಸುತ್ತೇನೆ. ಪಬ್ಲಿಕ್ ಸರ್ವಿಸ್ ಕಮಿಷನ್ ವಿಷಯ ಆಗಲೇ ಅನೇಕ ಜನರು ಹೇಳಿದ್ದಾರೆ. ನಾನು ಹೆಚ್ಚಾಗಿ ಹೇಳುವುದಿಲ್ಲ. ಬಹಳ ನಿರ್ದಾಕ್ಷಿಣ್ಯದಿಂದ ಮತ್ತು ದಕ್ಷತೆಯಿಂದ ಕೂಡಿರತಕ್ಕ ಈ ಪಬ್ಲಿಕ್ ಸರ್ವಿಸ್ ಕಮಿಷನ್ನು ಈಗಲೇ ನೇಮಕ ಮಾಡತಕ್ಕದ್ದು ಬಹಳ ಅಗತ್ಯ. ಇದರ ಮೇಲೆ ಬಂದಿರತಕ್ಕ ಟೀಕೆಗಳ ವಿಷಯದಲ್ಲಿ ಸರ್ಕಾರದವರ ಗಮನ ಕೊಡಬೇಕೆಂದು ಹೇಳುತ್ತೇನೆ.

ಇನ್ನು financial gap ವಿಚಾರ. 375 ಲಕ್ಷ ರೂಪಾಯಿಗಳನ್ನು 10 ವರ್ಷದಲ್ಲಿ ಯಾವ ರೀತಿ ಸರಿಹೊಂದಿಸಬಹುದು ಎಂಬುದನ್ನು ಇವತ್ತು ವಿಚಾರ ಮಾಡಬೇಕಾಗಿದೆ. ಪಾನ ನಿರೋಧ ಷುರು ಆಗಿದೆ. ಇನ್ನು ಪೂರ್ತಿ ಇದನ್ನು ಮುಂದುವರಿಸಿದರೆ ಸರ್ಕಾರದ ಆದಾಯ ಎಷ್ಟು ಖೋತಾ ಆಗುತ್ತೆಂಬುದನ್ನು ನಿರ್ಣಯಿಸಬೇಕು. ಜನಸಂಖ್ಯೆ ಬೇರೆ ಹೆಚ್ಚಿದೆ. ಈ ವಿಷಯದಲ್ಲಿ ಮಾಡಬೇಕಾಗಿರುವ ಖರ್ಚು ಎಷ್ಟೆಂಬುದನ್ನು ನೋಡಿಕೊಂಡರೆ ಆಯವ್ಯಯ ಪಟ್ಟಿಯಲ್ಲಿರುವ 38 ಲಕ್ಷ ರೂಪಾಯಿಖೋತಾ ಅಷ್ಟೇ ಅಲ್ಲ ಇನ್ನೂ ಬಹಳ ಹೆಚ್ಚಾಗುತ್ತದೆ. ಆ ಖೋತಾವನ್ನು ಯಾವ ರೀತಿ ಸರಿಪಡಿಸಬೇಕೆಂಬ ವಿಚಾರದಲ್ಲಿ ಗಮನ ಕೊಡಬೇಕಾದ್ದು ಬಹಳ ಅಗತ್ಯವಾಗಿದೆ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಏನು ಗಮನ ಕೊಡಬೇಕು?

ಶ್ರೀ ಎ. ಜಿ. ರಾಮಚಂದ್ರರಾಯರು.—ಯಾವರೀತಿ ಖೋತಾ ಸರಿಪಡಿಸಬಹುದು ಎಂಬುದನ್ನು ಯೋಚನೆ ಮಾಡಿ ಸಭೆಯ ಮುಂದೆ ಇಡಬೇಕು.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಆ ರೀತಿ ಯಾರೂ ಮಾಡುವುದಿಲ್ಲ. ಆಯಾಯಾ ವರ್ಷದ ಹಿಂದಿನ ಬಡ್ಜೆಟ್ ತೆಗೆದುಕೊಂಡು ಮಾಡುತ್ತಾರೆಯೇ ಹೊರತು ಮುಂದಿನ 10 ವರ್ಷದ ಬಡ್ಜೆಟ್‌ನ್ನು ಯಾರೂ ತಯಾರಿಸುವುದಿಲ್ಲ.

ಶ್ರೀ ಎ. ಜಿ. ರಾಮಚಂದ್ರರಾಯರು.—10 ವರ್ಷದಲ್ಲಿ ಆಗತಕ್ಕದ್ದನ್ನು ದೃಷ್ಟಿಯಲ್ಲಿಟ್ಟುಕೊಂಡು ಇವತ್ತು ಸಲಹೆ ಕೊಡಬೇಕೆಂದು ನನ್ನ ಅಭಿಪ್ರಾಯ. ಇನ್ನೊಂದು ದೊಡ್ಡ ಸಮಸ್ಯೆಯನ್ನು ಸರ್ಕಾರದವರು ಸೃಷ್ಟಿಸಿಕೊಂಡಿದ್ದಾರೆಂದು ಹೇಳಬಹುದು. ಮೈಸೂರು ಸೈನ್ಯವನ್ನು ಹಿಂದೂಸ್ಥಾನಕ್ಕೆ ಸರ್ಕಾರಕ್ಕೆ ವಹಿಸಿದರು. ಸೈನಿಕರ ಸರ್ವೀಸ್ ಟೆನ್ಯೂರ್ ಗ್ಯಾರಂಟಿಯಾಗಿರುತ್ತದೆ, ಅವರ ಹಕ್ಕುಬಾಧ್ಯತೆಗಳನ್ನು ಕಾಪಾಡುತ್ತೇವೆ, ಅವರನ್ನು ಕೈಬಿಡುವುದಿಲ್ಲ ಎಂಬುದಾಗಿ ಶ್ರೀಮನ್ಮಹಾರಾಜರವರೂ ಮತ್ತು ಮಾನ್ಯ ಮುಖ್ಯಮಂತ್ರಿಗಳೂ ಸಹ ವಾಗ್ದಾನ ಮಾಡಿದ್ದರು. ಇವತ್ತು 2,000 ಜನ ಕೆಲಸದಿಂದ ವಜಾ ಆಗಿ ಹಿಂತಿರುಗಿ ಬಂದಿದ್ದಾರೆ. 1,500 ಜನರನ್ನು ಮಾತ್ರ ಸೇರಿಸಿಕೊಂಡಿದ್ದಾರೆ. ಅವರಿಗೆ ಟೆನ್ಯೂರ್ ಹೋಯಿತು. ಪರಿಹಾರವೂ ಸಿಕ್ಕಲಿಲ್ಲ, ತಾವು ರಿ-ಹೆಬಿಲಿಟೇಟ್ ಮಾಡಿಲ್ಲ. ಈ ಸಮಸ್ಯೆಯನ್ನು ದಕ್ಷತೆಯಿಂದ ನೋಡಿಕೊಳ್ಳಬೇಕೆಂದು ಕೋರುತ್ತೇನೆ. ಈ ವಿಷಯದಲ್ಲಿ ಸರ್ಕಾರದವರೂ ರಾಜೀನಾಮೆ ಕೊಟ್ಟರೆ ನಾವೂ ರಾಜೀನಾಮೆ ಕೊಡುತ್ತೇವೆ ಎಂದು ಹೇಳುತ್ತೇನೆ. ಇದು ಒಂದು ಹೊಸ ಸಮಸ್ಯೆ ಆಗಬಾರದು. ಅನೇಕ ಆಫೀಸರುಗಳ ಮನೋಭಾವ ಈಗ ಬಹಳವಾಗಿ ಕೆಟ್ಟಿದೆ. ಅವರ ತಯಾರಾಗಿರತಕ್ಕದ್ದು ವಿನಾಶಕಾರಕ ಮಾರ್ಗಗಳಲ್ಲಿ. ಆ ವಿನಾಶಕಾರಕ ಮಾರ್ಗಗಳನ್ನು ಅವರು ಉಪಯೋಗಿಸಬಹುದು ಎಂದು ಹೇಳಿದರೆ ಉತ್ಪ್ರೇಕ್ಷೆಯೆಂದು ತಿಳಿಯಬಾರದು. ಈ ವಿಷಯದಲ್ಲಿ ಒಂದು ಅಂಶ ಮಾತ್ರ ಹೇಳುತ್ತೇನೆ. ಅದೇನೆಂದರೆ ಇಂಗ್ಲೀಷ್ ಸರ್ಕಾರದಲ್ಲಿ ಮತ್ತು ಹಿಂದೂಸ್ಥಾನದಲ್ಲಿರತಕ್ಕ ಹೈದರಾಬಾದು ಸರ್ಕಾರದಲ್ಲಿ ಆಯಾಯಾ ಸೈನ್ಯಗಳಿಗೆ ಯಾವ ಯಾವ ರಿಯಾಯಿತಿಗಳನ್ನು ಕೊಟ್ಟಿದ್ದರೋ ಕೊನೇಪಕ್ಷ ಅಷ್ಟಾದರೂ ರಿಯಾಯಿತಿಗಳನ್ನು ಕೊಡದಿದ್ದರೆ ಈ ಸರ್ಕಾರ ಅದರ ಕರ್ತವ್ಯವನ್ನು ನೆರ

ವೇರಿಸಿದೆ ಎಂದು ಖಂಡಿತ ಹೇಳುವುದಕ್ಕಾಗುವುದಿಲ್ಲ. ಆದ್ದರಿಂದ ಈ ವಿಷಯದಲ್ಲಿ ನಾನು ಇಲ್ಲಿ ಮಾತನಾಡುತ್ತಿರುವುದರ ಜೊತೆಗೆ ಮಾನ್ಯ ಗೃಹ ಸಚಿವರಿಗೂ ಮತ್ತು ಹಿಂದೂಸ್ಥಾನ ಸರ್ಕಾರದ ಮುಖ್ಯ ಮಂತ್ರಿಗಳಿಗೂ ಅಂಕಿ ಅಂಶ ಹಾಕಿ ಅರ್ಜಿ ಕೊಟ್ಟಿದ್ದೇನೆ. ಎರಡು ತಿಂಗಳು ಆಯಿತು ಇನ್ನೂ ಜವಾಬು ಬಂದಿಲ್ಲ. ಇನ್ನಾದರೂ ಕೂಡ ಸರ್ಕಾರದವರು ಅವರಿಗೆ ತಕ್ಕ ರಿಯಾಯಿತಿಗಳನ್ನು ಕೊಟ್ಟು ಅವರು ದುಷ್ಟಕಾರ್ಯಗಳಿಗೆ ಪ್ರವೇಶಿಸದಂತೆ ತಡೆಯಲು ಯೋಚನೆಮಾಡುತ್ತಾರೆಂದು ನಾನು ನಂಬಿದ್ದೇನೆ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು. - ಪತ್ರಿಕೆಗಳಲ್ಲಿ ಬಂದಿರತಕ್ಕ ಹೇಳಿಕೆಯನ್ನು ಮಾನ್ಯ ಸದಸ್ಯರು ಓದಿದ್ದಾರೋ ಇಲ್ಲವೋ ಗೊತ್ತಿಲ್ಲ. ಇವತ್ತಿನ ಬೆಳಿಗ್ಗೆ ಪತ್ರಿಕೆಗಳಲ್ಲಿ ನೋಡಿದರೆ ಇದೇ ವಿಚಾರ ವಿ. ಪಿ. ಮೇನನ್‌ರವರು ಪರ್ಯಾಲೋಚನೆಯಲ್ಲಿದೆ ಎಂದು ವ್ಯಕ್ತ ಪಡಿಸಿರುವುದು ಗೊತ್ತಾಗುತ್ತದೆ.

ಶ್ರೀ ಎ. ಜಿ. ರಾಮಚಂದ್ರರಾಯರು.—ಬೆಳಿಗ್ಗೆ ಪತ್ರಿಕೆಯಲ್ಲಿ ಓದಿದ್ದೇನೆ. ಆದರೆ ಬೆಳಿಗ್ಗೆ ಕೆಲವು ಜನ ಆಫೀಸರುಗಳನ್ನು ಭೇಟಿಮಾಡಿದ್ದಾಗ ಅವರು ಇದರ ಬಗ್ಗೆ ತಿಳಿದುಕೊಂಡಿರುವುದು ಏನೆಂದರೆ......

ಶ್ರೀ ಎಚ್. ಸಿ. ದಾಸಪ್ಪನವರು —ಬೆಳಿಗ್ಗೆ ಪತ್ರಿಕೆಯಲ್ಲಿ ಬಂದಿರುವ ವಿಚಾರ ಆ ಸಮಯದಲ್ಲಿ ತಿಳಿಸಿದ್ದರೆ ಚೆನ್ನಾಗಿತ್ತು.

ಶ್ರೀ ಎ. ಜಿ. ರಾಮಚಂದ್ರರಾಯರು.—ಈಗ ನಾನು ಒಂದು ಸಲಹೆಕೊಡುತ್ತೇನೆ. ಈಗ ತಾವು ಒಂದು ಸಮಿತಿ ಏರ್ಪಾಡುಮಾಡಿರುವುದರಲ್ಲಿ ಈ ಸಭೆಯ ಪರವಾಗಿ ಒಬ್ಬಿಬ್ಬರನ್ನು ಅಲ್ಲಿಗೆ ಸೇರಿಸಿಕೊಂಡರೆ ಉತ್ತಮ.

ಆಮೇಲೆ ನಮಗೆ ಬೇಕಾಗಿರುವುದು ಮೊದಲನೆಯದಾಗಿ ಆಹಾರ, ಎರಡನೆಯದಾಗಿ ವಿದ್ಯಾಭ್ಯಾಸ ಎಂಬುದನ್ನು ಅನೇಕರು ಹೇಳಿದ್ದಾರೆ. ಆ ವಿಷಯದಲ್ಲಿ ನಾನು ಈಗ ಹೆಚ್ಚಾಗಿ ಹೇಳುವುದಿಲ್ಲ. ವಿದ್ಯಾಭ್ಯಾಸದ ವಿಷಯದಲ್ಲಿ ಪ್ರಾಥಮಿಕ ಶಿಕ್ಷಣ ಹೇಗಿರಬೇಕು, ವಯಸ್ಕರ ಶಿಕ್ಷಣ ಹೇಗಿರಬೇಕೆಂಬ ಬಗ್ಗೆ ವಿಚಾರಮಾಡಲು ತಕ್ಕ ಏರ್ಪಾಡು ಮಾಡಬೇಕು. ಇದುವರೆಗೂ ಅದಕ್ಕಾಗಿ ಒಂದು ಸಮಿತಿ ಏರ್ಪಾಡಾಗಿಲ್ಲ. ಹಿಂದೆ ಜವಾಬ್ದಾರಿ ಇಲ್ಲದ ಸರ್ಕಾರ ಇದ್ದ ಕಾಲದಲ್ಲಿ ಶಿಕ್ಷಣ ಯಾವ ರೀತಿ ನಡೆದುಕೊಂಡು ಬರುತ್ತಾ ಇತ್ತೋ ಈಗಲೂ ಅದೇ ರೀತಿ ನಡೆದುಕೊಂಡು ಬರುತ್ತಾ ಇದ್ದು ಈಗ ಅನೇಕ ಸಮಸ್ಯೆಗಳು ಉದ್ಭವಿಸುತ್ತಾ ಇವೆ. ನಮ್ಮ ದೇಶದ ಇಂಡಿಯನ್ ಸಿಟಿಜನ್‌ಷಿಪ್‌ಗೆ ಅನುಸಾರವಾಗಿರುವಂತಹ ಕ್ರಮವನ್ನು ಅನುಸರಿಸದೇ ಈಗಿರುವ ರೀತಿಯಲ್ಲೇ ಅನಿರ್ದಿಷ್ಟವಾಗಿ ಮುಂದುವರಿದರೆ ಬಹಳ ದುಷ್ಪರಿಣಾಮಗಳು ಉಂಟಾಗುತ್ತವೆ ; ಇದಕ್ಕೆ ಗಮನಕೊಡಬೇಕೆಂದು ಹೇಳುತ್ತೇನೆ.

ಇನ್ನು ಆಹಾರ ಹತೋಟಿ ವಿಚಾರ. ಹತೋಟಿ ಇರಬಾರದು ; ಇದು ಇರುವವರೆಗೂ ಲಂಚ ರುಷುವತ್ತು ತಪ್ಪುವುದಿಲ್ಲ ; ಅದು ಇರುವುದು ಜನಗಳಿಗೆ ಒಳ್ಳೆಯದಲ್ಲ, ಇದರಿಂದ ಜನಗಳಿಗೆ ಸಮಾಧಾನವಿಲ್ಲ. ಕಡೆಯದಾಗಿ ಯಾವಯಾವ ತತ್ವಗಳಿಗೆ ನಿರಾಕರಣೆಯಾಗಿದೆಯೋ, ಅವುಗಳಿಗೆ ಆ ರೀತಿ ಆಗದಹಾಗೆ ಮಾಡಿ, ಒಪ್ಪಿರುವ ತತ್ವಗಳಿಗೆ ಪುರಸ್ಕಾರ ಕೊಟ್ಟು, ಇರತಕ್ಕ ಅನಾನುಕೂಲಗಳನ್ನು ದೇಶದ ಏಳಿಗೆಗಾಗಿ ಉಪಯೋಗಿಸಬೇಕೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಬಿ. ಚೆನ್ನಬೈರೇಗೌಡರು (ಬೆಂಗಳೂರು ಜಿಲ್ಲೆ).—ಬಡ್ಜೆಟ್ ಅಧಿವೇಶನದಲ್ಲಿ ಆಯವ್ಯಯ ಪಟ್ಟಿಯನ್ನು ವಿಮರ್ಶೆಮಾಡುವುದಕ್ಕಾಗಿ ಮಂಡಿಸುವುದು ಒಂದು ಪದ್ಧತಿ. ಈಗ ಇರತಕ್ಕ ಆಯವ್ಯಯಗಳು ಎಷ್ಟು ಎಂಬುದು ಈ ಪಟ್ಟಿಯಲ್ಲಿ ನಮೂದಿಸಲ್ಪಟ್ಟಿದೆ. ಈ ಸಭೆಗೆ ಬಂದಿರತಕ್ಕ ದೇಶದ ಪ್ರತಿನಿಧಿಗಳು ಇದನ್ನು ವಿಮರ್ಶೆಮಾಡುವುದರಿಂದ ಸರ್ಕಾರದ ಮೇಲೆ ಒಂದು ಪರಿಣಾಮವಾಗುತ್ತದೆ ಎಂದು ಭಾವಿಸಿದ್ದೇನೆ. ಏಕೆಂದರೆ ಈಗ ಸರ್ಕಾರವನ್ನು ನಡೆಸುತ್ತಾ ಇರುವವರು ಜನಾಭಿಪ್ರಾಯಕ್ಕೆ ಮನ್ನಣೆಕೊಡಬೇಕು ಮತ್ತು ಪ್ರತಿನಿಧಿಗಳು ಕೊಡುವ ಸಲಹೆಗಳನ್ನು ಅಂಗೀಕಾರ ಮಾಡಬೇಕು. ಹಿಂದಿನ ಸರ್ಕಾರದ ಮೇಲೆ ಯಾವ ಆರೋಪಣೆಗಳನ್ನು ಮಾಡುತ್ತಿದ್ದರೋ ಆ ಆರೋಪಣೆಗಳಿಗೆ ಈಗಿನ ಸರ್ಕಾರದವರು ಅವಕಾಶಕೊಡುವುದಿಲ್ಲವೆಂದು ಭಾವಿಸಿದ್ದೇನೆ: ಆದರೂ ಸಹ ಈಗ ಮೂರು ವರ್ಷಗಳ ಆಡಳಿತದಲ್ಲಿ ನೀವು ಜನಾಭಿಪ್ರಾಯಕ್ಕೆ ತೀರಾ ವಿರೋಧವಾಗಿ ಹೋಗಿದ್ದೀರಿ ; ಏಕೆಂದರೆ ಪ್ರತಿ ವರ್ಷವೂ ನಾವು ಮಾಡುತ್ತಾ ಇರುವ ಟೀಕೆಗಳಿಂದ ಈ ಆಯವ್ಯಯ ಪಟ್ಟಿಯಲ್ಲಿ ಯಾವ ಮಾರ್ಪಾಡೂ ಸಹ ಆಗಿಲ್ಲ. ಯಥಾವತ್ತಾಗಿ ಹಿಂದಿನಂತೆಯೇ ನಡೆಯುತ್ತಾ ಇದೆ. ನಾವು ವರ್ಷೇವರ್ಷೇ ಟೀಕೆಮಾಡುತ್ತಲೇ ಇರುವುದು, ನೀವು ಮನಸ್ವಿಯಾಗಿ ಬಡ್ಜೆಟ್ ತಯಾರುಮಾಡುತ್ತಲೇ ಇರುವುದು. ಹೀಗಾದರೆ ನಮ್ಮ ಟೀಕೆಗಳಿಂದ ಆಗುವ ಪ್ರಯೋಜನವಾದರೂ ಏನು ?

ಅವರ ಪ್ರತಿನಿಧಿಗಳ ಮಾತುಗಳಿಗೂ ಕೂಡ ಮನ್ನಣೆ ಕೊಡುತ್ತಿಲ್ಲ ! ಹಿಂದಿನ ಸರ್ಕಾರದವರು ಯಾವ ಒಂದು ಬ್ಯೂರೋಕ್ರಾಟಿಕ್ ಮನೋಭಾವನೆಯುಳ್ಳವರಾಗಿದ್ದಾರೆಂದು ನೀವು ಹೇಳುತ್ತಿದ್ದಿರೋ ನೀವೂ ಅದೇ ಮನೋಭಾವನೆಯನ್ನು ಇನ್ನೂ ತೀವ್ರವಾಗಿ ಆಚರಣೆಯಲ್ಲಿ ತರುವುದಕ್ಕೆ ಪ್ರಯತ್ನಪಟ್ಟಿದ್ದೀರೆಂಬುದಕ್ಕೆ ಒಂದೆರಡು ಉದಾಹರಣೆಗಳನ್ನು ಮಾತ್ರ ಕೊಡುತ್ತೇನೆ. ಆಹಾರದ ಹಂಚಿಕೆ ನೋಡಿ. ಇದರ ವಿಚಾರವಾಗಿ ಈ ಸಭೆಯ ಅನೇಕ ಸದಸ್ಯರು ಟೀಕೆಮಾಡಿ ಕಂಟ್ರೋಲ್ ವಜಾ ಮಾಡಿದಹೊರತು ಸಾಧ್ಯವಿಲ್ಲ, ನಮ್ಮ ನೈತಿಕಮಟ್ಟ ಹೆಚ್ಚುವುದಿಲ್ಲ, ಜನತೆ ಅನೀತಿಗಿಳಿಯುತ್ತಿದೆ, ದೇಶದಲ್ಲಿ ನೀತಿಪತನವಾಗುತ್ತಿದೆ, ದೇಶದಲ್ಲಿ ಅನಾಹುತಕ್ಕೆ ಅವಕಾಶವಾಗುತ್ತಿದೆಯೆಂದು ಮಾನ್ಯ ಸದಸ್ಯರನೇಕರು ತಮ್ಮ ಗಮನಕ್ಕೆ ತಂದಿದ್ದಾರೆ. ಅಷ್ಟಾದರೂ ತಾವು ಅವರುಗಳ ಮಾತನ್ನು ಗಣನೆಗೆ ತೆಗೆದುಕೊಂಡಿಲ್ಲ.

ಇನ್ನೊಂದು ವಿಷಯ. ಆಹಾರದ ಹಂಚಿಕೆಗಾಗಿ ಮೊದಲಿನಿಂದ ಕೊನೆಯುವರೆಗೂ ಲೆಕ್ಕ ಹಾಕಿದರೆ ಸುಮಾರು 14½ ಕೋಟಿ ರೂಪಾಯಿಗಳಷ್ಟು ಖರ್ಚು ಮಾಡಿದ್ದೀರಿ. ಇದಿಷ್ಟೂ ಯಾರಿಗಾಗಿ? ಸಿಟಿಗಳಲ್ಲಿರುವ ಕೇವಲ 13½ ಲಕ್ಷ ಜನಗಳಿಗಾಗಿ !!

ಶ್ರೀ ಟಿ. ಮರಿಯಪ್ಪನವರು.—14½ ಕೋಟಿಯಲ್ಲ. ಸಿಬ್ಬಂದಿ ಖರ್ಚು, ಸಬ್ಸಿಡಿ ಎಲ್ಲಾ ಒಟ್ಟು ಸೇರಿ 8½ಕೋಟಿ ಮಾತ್ರ !

ಶ್ರೀ ಬಿ. ಚನ್ನಬೈರೇಗೌಡರು.—8½ ಕೋಟಿಯೇ ಆಗಲಿ. ಪಟ್ಟಣ ಸಿಟಿಗಳಲ್ಲಿನ ಕೇವಲ 13 ಲಕ್ಷ ಜನರಿಗಾಗಿ ಇದಿಷ್ಟೂ ಖರ್ಚುಮಾಡಿದ್ದೀರೇ ಹೊರತು ಗ್ರಾಮಾಂತರಗಳವರಿಗೆ ಏನಾದರೂ ಕೊಟ್ಟಿದ್ದೀರಾ ? ನೆಪಮಾತ್ರಕ್ಕೆ ಅವರಿಗೆ ರೇಷನ್ ಕಾರ್ಡುಗಳನ್ನು ಕೊಟ್ಟು ಕೇವಲ ಒಂದಾಣೆ, ಎರಡಾಣೆ ಭಾಗದಷ್ಟು ಮಾತ್ರ ದವಸಗಳನ್ನು ಕೊಟ್ಟು ಹಳ್ಳಿಗಾಡಿನವರನ್ನು ಕಳುಹಿಸುತ್ತಿರುವುದನ್ನು ನಾವೆಲ್ಲಾ ನೋಡಿದ್ದೇವೆ. ಗ್ರಾಮಾಂತರಗಳಲ್ಲಿ ಡಿಪೋಗಳನ್ನು ಮಾಡಿರುವುದೂ ಕೇವಲ ಅಲ್ಲಿನ ಸರ್ಕಾರಿ ಅಧಿಕಾರಿಗಳಿಗೂ ನೌಕರರುಗಳಿಗೂ ಮತ್ತು ಕೆಲವು ದೊಡ್ಡ ದೊಡ್ಡವರಿಗೇ ಎಂದು

(ಶ್ರೀ ಬಿ. ಚೆನ್ನಬೈರೇಗೌಡರು).

ಕಾಣುತ್ತಿದೆ. ಬಡವರಿಗೇನೂ ಸಿಕ್ಕುತ್ತಿಲ್ಲ. ಅದೇ ಧಾನ್ಯದ ವಸೂಲಿ ಕಡೆ ನೋಡಿ: ಒಬ್ಬ ರೈತನಿಗೆ ಒಂದು ವರ್ಷಕ್ಕೆ 150 ಸೇರು ಆಹಾರವೆಂದು ನಿಗದಿ ಮಾಡಿಬಿಟ್ಟಿದ್ದೀರಿ. ಹೀಗೆ 150 ಸೇರುಗಳೆಂದು ಏನು ಹೇಳುತ್ತಿದ್ದಾರೋ, ಅದು ದಿವಸಕ್ಕೆ ನಾಲ್ಕಾರು ಸಾರಿ ಹೋಟೆಲ್ ತಿಂಡಿ ತಿಂದು ಊಟಮಾಡುವವರಿಗೂ ಸಾಕಾಗುತ್ತಿಲ್ಲವೆಂದು ನಾನು ಖಂಡಿತ ಹೇಳಬಲ್ಲೆ. ಈ ರೀತಿ ಮಾಡುತ್ತಿರುವುದರಿಂದಲೇ ಈಗ ಲಂಚಕೋರತನಕ್ಕೆ ಅವಕಾಶವಾಗಿದೆ. ದೇಶದಲ್ಲಿ ಏನು ನಡೆವಳಿಕೆ ಈ ದಿನ ನಡೆಯುತ್ತಿದೆಯೆಂಬದನ್ನು ನಾನು ಹೇಳಬೇಕಾಗಿಲ್ಲ. ಒಬ್ಬನ ಹತ್ತಿರ ಹತ್ತು ಎಕರೆಯಿರಲಿ, 100 ಎಕರೆಯಿರಲಿ, ಏನೇ ಬೆಳೆದಿರಲಿ ಲೆಕ್ಕಾಚಾರದ ಪ್ರಕಾರ ಸರ್ಪ್ಲಸ್‌ಕೊಟ್ಟುಬಿಡಬೇಕೆಂದು ಹೇಳಿ ತೆಗೆದುಕೊಂಡು ಹೋಗುತ್ತಾರೆ. ಹಿಂದೆ ಇದ್ದ ಪದ್ಧತಿಯ ಪ್ರಕಾರ ತಲೆಗೆ 540 ಸೇರು ದವಸಬಿಡಬೇಕೆಂದಿತ್ತು. ಅಂಥಾದ್ದು ಈಗ 150 ಸೇರಿಗೆ ಬಂದಿದೆ. ಇಂಥ ಸಂದರ್ಭದಲ್ಲಿ ಅವರಲ್ಲಿಗೆ ಒಬ್ಬೊಬ್ಬ ಅಧಿಕಾರಿಗೂ 50-60 ರೂಪಾಯಿಗಳ ಲಂಚ ಕೊಡಬೇಕಾಗಿಬರುತ್ತದೆಂದು ಹೇಳಬೇಕಾಗಿಲ್ಲ. ಆದ್ದರಿಂದ ಇದುವರೆಗೆ ಮಾತನಾಡಿದ ಸದಸ್ಯರೆಲ್ಲರೂ ಹೇಳಿದಂತೆ ಹತೋಟಿಯನ್ನೇಕೆ ತೆಗೆಯಕೂಡದು? ಇಷ್ಟೊಂದು ಟೀಕೆಗಳನ್ನು ಮಾಡುತ್ತಿದ್ದರೂ ನೀವು ನಿಮ್ಮ ಮನಸ್ಸೋಚ್ಛೆ ನಡೆಸುತ್ತಿರುವುದನ್ನು ನೋಡಿದರೆ ಇದನ್ನು ಪ್ರಜಾಪ್ರಭುತ್ವವೆಂದು ಹೇಳಬಹುದೇ! ಪ್ರಜಾಪ್ರಭುತ್ವವೆನ್ನುವುದಕ್ಕೆ ಬದಲಾಗಿ 'ಪ್ರಜಾಪೀಡಕ' ಸರ್ಕಾರವೆಂದು ಹೇಳಬೇಕು.

ಆ ಮೇಲೆ, ಆಹಾರ ಹೆಚ್ಚಿಗೆ ಬೆಳೆಯಿರಿ, ಎಂದು ಹೇಳುತ್ತಾ ಹಣವನ್ನು ವ್ಯಯಮಾಡುತ್ತಿದ್ದೀರಿ: ಇಷ್ಟಾದರೂ ಏನಾದರೂ ಹೆಚ್ಚಿಗೆ ಬೆಳೆದಿದೆಯೇ? ಹೆಚ್ಚು ಆಹಾರ ಬೆಳೆಯಲಿಕ್ಕೆ ಜನಗಳ ಸಹಕಾರ ನೀಡಬೇಕು, ಜನಗಳು ಸಹಕರಿಸಬೇಕು ಎಂದು ಹೇಳುತ್ತಿದ್ದೀರಿ. ಅಂದರೇನು, ಈಗ ಜನರು ಸಹಕರಿಸುತ್ತಿಲ್ಲವೇ ಏನು? ಹಾಗೆ ಜನತೆಯ ಸಹಕಾರವಿಲ್ಲದಮೇಲೆ, ಜನತೆಯ ಬೆಂಬಲವಿಲ್ಲದಮೇಲೆ ಇಂಥಾ ಸರ್ಕಾರ ಏಕೆ ಮಾಡುತ್ತಿದ್ದೀರಿ? ಇನ್ನು ಈ ಸರ್ಕಾರ ನಡೆಸುವುದಕ್ಕಾಗುವುದಿಲ್ಲವೆಂದು ರಾಜಿನಾಮೆ ಕೊಟ್ಟುಬಿಡಿ ...

ಡಬ್ಲ್ಯು. ಹೆಚ್. ಹನುಮಂತಪ್ಪನವರು.—ಆಡಳಿತ ಕೊಟ್ಟುಬಿಡಿ, ಎಂದರೆ, ನೀವು ಆಡಳಿತ ವಹಿಸಿಕೊಂಡು ಎಲ್ಲವನ್ನೂ ಮಾಡಕೊಡುತ್ತೇವೆಂದು ಭರವಸೆಕೊಟ್ಟರೆ ಬಿಟ್ಟುಕೊಡುತ್ತೇವೆ!!

ಶ್ರೀ ಬಿ. ಚೆನ್ನಬೈರೇಗೌಡರು.—ಹಿಂದೆ ಇದ್ದ ಬ್ಯೂರೋಕ್ರಾಟಿಕ್ ಸರ್ಕಾರವನ್ನು ನೀವು ಇದೇ ರೀತಿ Challenge ಮಾಡುತ್ತಿರಲಿಲ್ಲವೇ? ನೀವು ಬಂದು ಇಲ್ಲಿಗೆ 4 ವರ್ಷವಾಯಿತು. ಏನು ಮಾಡಿದ್ದೀರಿ? ದೇಶಕ್ಕೆ ಇನ್ನಷ್ಟು ತೊಂದರೆಗಳನ್ನೂ ಕಷ್ಟಗಳನ್ನೂ ತಂದಿದ್ದೀರೇ ಹೊರತು ಇನ್ನೇನೂ ಇಲ್ಲ. 8½ ಕೋಟಿ ರೂಪಾಯಿಗಳನ್ನು ಖರ್ಚುಮಾಡಿ..................

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈ ವರ್ಷ 8½ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿಲ್ಲ. 1943 ರಿಂದ ಹತೋಟಿ ಆಜ್ಞೆಗಳು ಶುರು ಆದ ಲಾಗಾಯತಿನಿಂದ ಇಷ್ಟಾಗಿದೆ.

ಶ್ರೀ ಬಿ. ಚೆನ್ನಬೈರೇಗೌಡರು.—1943ರಿಂದ ಶುರುವಾಯಿತೆಂದು ಹೇಳಿದರೂ, ಹಿಂದೆ ಅವರು ಮಾಡಿದ್ದನ್ನೇ ನೀವೂ ಮಾಡಬೇಕೆಂದು ಅವರೇನಾದರೂ ಶಾಸನ ಬರೆದಿಟ್ಟು ಹೋಗಿದ್ದಾರೆಯೇ? ಆ ನೀತಿ ಸರಿಯಲ್ಲವೆಂದು ಶಾಸನ ಸಭೆಗಳಲ್ಲಿ ಹೇಳಿದ್ದರೂ ಅದನ್ನೇ ಅನುಸರಿಸುತ್ತಿರುವುದು ಯಾವ ನ್ಯಾಯ, ಯಾವ ನೀತಿ?

ಇನ್ನೊಂದು ವಿಷಯವೇನೆಂದರೆ, ಮೊನ್ನೆ ಶ್ರೀ ಚೆನ್ನಬಸಪ್ಪನವರು ಮಾತನಾಡುತ್ತಾ ಅವರು ಮೈಸೂರಿನಿಂದ ಬರುವಾಗ 75 ಜನರನ್ನು ತುಂಬಿಕೊಂಡು ಬರುತ್ತಿದ್ದ ಬಸ್ಸನ್ನು ಹಿಡಿದು ಪೋಲೀಸಿಗೆ ಕೊಟ್ಟರೆಂದು ಹೇಳಿದರು. ಇದನ್ನು ಕೇಳಿದರೆ ಪೋಲೀಸಿನವರು ಯಾರಾದರೂ ಇದ್ದಾರೆಯೇ ಎನಿಸುತ್ತದೆ. ಮೆಯಿನ್ ರೋಡಿನಲ್ಲಿ, ಎಷ್ಟೋ ಪೋಲೀಸ್ ಸ್ಟೇಷನ್‌ಗಳ ಮುಂದೆ ಹಾದುಹೋಗುವ ರಸ್ತೆಯಲ್ಲಿ ಹೀಗೆ ಜನರನ್ನು ಭರ್ತಿ ಮಾಡಿಕೊಂಡು ಹೋಗಬೇಕೆಂದರೆ ಆತನಿಗೆಷ್ಟು ಧೈರ್ಯ!! ಪೋಲೀಸಿನವರನ್ನು ಕಂಡರೆ ಎಷ್ಟು ಭಯ!!

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದು ಪೋಲೀಸಿನವರ ವಿಷಯವನ್ನು ಹೇಳುವುದಿಲ್ಲ; ಆ ಮನುಷ್ಯನ ಗುಣವನ್ನು ತೋರಿಸುತ್ತದೆ! ಪೋಲಿಸ್‌ನವರು ಇದ್ದುದರಿಂದಲೇ ಆತನ ಮೇಲೆ ಕೇಸು ಹಾಕಿದ್ದು.

ಶ್ರೀ ಬಿ. ಚೆನ್ನಬೈರೇಗೌಡರು.—ಅದು ಪೋಲೀಸಿನವರು ಆಡಳಿತ ನಡೆಸುತ್ತಿರತಕ್ಕ ತರಹವನ್ನು ತೋರಿಸುತ್ತದೆ. ಆ ಡ್ರೈವರುಗಳಿಗೆ ಅಷ್ಟು ಧೈರ್ಯ ಬರಬೇಕಾದರೆ ಸರ್ಕಾರದವರ ದಕ್ಷತೆ ಎಷ್ಟಿದೆ ಎಂಬುದನ್ನು ನೀವೇ ನೋಡಿ. ಇದಕ್ಕೇ ದಕ್ಷತೆಯಿಲ್ಲದ ಸರ್ಕಾರ ಎಂದು ಹೇಳುವುದು. 1946ನೆಯ ಇಸವಿಯಲ್ಲಿ ಬಡ್ಜೆಟ್ ಭಾಷಣ ಮಾಡುತ್ತಾ ನಮ್ಮ ಈಗಿನ ಮುಖ್ಯ ಮಂತ್ರಿಗಳು ಆಗಿನ ಸರ್ಕಾರವನ್ನು ಯಾವರೀತಿ ಟೀಕೆ ಮಾಡಿದ್ದರೆಂಬುದನ್ನು ಮಾನ್ಯ ಸದಸ್ಯರ ಗಮನಕ್ಕೆ ಸ್ವಲ್ಪ ತರುತ್ತೇನೆ. "ದೇಶದಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಮನೆಗಳ ಅಭಾವ ಬಹಳ ಜಾಸ್ತಿಯಾಗಿದೆ. ಇಷ್ಟಾದರೂ ಈ ಬಾಬಿಗಾಗಿ ಸರ್ಕಾರದವರು ಏನೂ ಒದಗಿಸಿಲ್ಲ" ವೆಂದು ಹೇಳಿದ್ದಾರೆ. ಆಗಿನ ಸರ್ಕಾರದವರು 10 ಲಕ್ಷ ರೂಪಾಯಿಗಳನ್ನು ಒದಗಿಸಿದ್ದರು. ಅದನ್ನು ಟೀಕೆ ಮಾಡುತ್ತಾ ಇಂಡಸ್ಟ್ರಿಯಲ್ ಸಬರ್ಬ್ ಕಟ್ಟಿಸುವುದಕ್ಕೆ ಹಣ ಒದಗಿಸಿದ್ದಾರೆಂದು ಇವರು ಟೀಕೆ ಮಾಡಿದ್ದರು. ಅಂದು ಹಾಗೆ ಹೇಳಿದರು. ಈಗ ಅವರ ಪಾರ್ಟಿಯವರೇ ಮಂತ್ರಿಗಳಾಗಿ ಬಂದು ನಾಲ್ಕು ವರ್ಷಗಳಾದರೂ ಯಾವ ಗ್ರಾಮದಲ್ಲಿ ಎಷ್ಟು ಮನೆಗಳನ್ನು ಕಟ್ಟಿಸುವುದಕ್ಕೆ ಏರ್ಪಾಡು ಮಾಡಿದ್ದಾರೆಂಬುದನ್ನು ಹೇಳಲಿ. ಅದಕ್ಕೆ ಹಣವನ್ನಾದರೂ ಕೊಟ್ಟಿದ್ದಾರೆಯೇ? ಆ ದಿವಸ ಹಾಗೆ ಭಾಷಣಮಾಡಿ ಜನರ ಮನಸ್ಸನ್ನು ಆಕರ್ಷಿಸಿ ಅಧಿಕಾರ ಲಾಲಸೆಯಿಂದ ಕಾಂಗ್ರೆಸ್ಸಿಗರು ಅಧಿಕಾರ ವಹಿಸಿಕೊಂಡಿದ್ದಾರೇ ಹೊರತು ಇನ್ನೇನು ಮಾಡಿದ್ದಾರೆ?

*ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಹರಿಜನರಿಗೆ ಮನೆಗಳನ್ನು ಕಟ್ಟಿಸುವುದಕ್ಕೆ ಹಳ್ಳಿಗಾಡುಗಳಲ್ಲಿ ಎರಡಲ್ಲ, ಮೂರಲ್ಲ 5 ಲಕ್ಷವಿರುವುದನ್ನು ಈ ಸರ್ಕಾರದವರು ಕ್ರಮೇಣ ಜಾಸ್ತಿಮಾಡಿ ಇಂದು 19 ಲಕ್ಷ ರೂಪಾಯಿಗಳವರೆಗೂ ಕೊಡುತ್ತಿದ್ದಾರೆಂಬುದನ್ನು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ. ಇದು ಗ್ರಾಮಾಂತರ ಪ್ರದೇಶಗಳಲ್ಲಿ ಮನೆ ಕಟ್ಟಿಸುವುದಕ್ಕೆ ಸಂಬಂಧಪಟ್ಟದ್ದು. ಬೇರೆಯವರಿಗೂ ಸಹಾಯ ಮಾಡಬೇಕೆಂಬುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಅದನ್ನೂ ಸರ್ಕಾರದವರು ಯೋಚನೆಮಾಡಿ ಸಾಧಕಬಾಧಕಗಳನ್ನೆಲ್ಲಾ ನೋಡಿಕೊಂಡು ಮುಂದುವರಿಯುತ್ತಾರೆ. ಆದ್ದರಿಂದ ಏನೂ ಸಹಾಯ ಮಾಡಿಲ್ಲವೆಂಬುದು ವಾಸ್ತವಾಂಶಗಳಿಗೆ ತೀವ್ರ ವಿರೋಧವಾಗಿದೆ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಎಷ್ಟು ಕೊಟ್ಟಿದೆಯೆಂಬುದನ್ನು ತಾವೇ ನೋಡಿ.

ಶ್ರೀ ಬಿ. ಚೆನ್ನಬೈರೇಗೌಡರು.—ಅವರು ಹತ್ತುಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದರು. ಅದಲ್ಲದೆ ಹರಿಜನರಿಗೆ ಅವತ್ತೂಕೂಡ ಒದಗಿಸುತ್ತಿದ್ದರು. 1942ನೆಯ ಇಸವಿಯಿಂದಲೂ ಅದು ಬರುತ್ತಿದೆ. ಆದರೀಗ ಗ್ರಾಮಾಂತರಗಳವರಿಗೆ, ಅಲ್ಲಿನ ಎಲ್ಲಾ ಬಡಜನರಿಗೂ ಅನುಕೂಲವಾಗುವಂತೆ ಏನು ಕೊಟ್ಟಿದ್ದೀರಿ? ಏನೂ ಇಲ್ಲ! ಇದು ನಿಮ್ಮ ಕರ್ತವ್ಯ ಲೋಪವಾಗಿದೆಯೆಂದು ನಾನು ಹೇಳಬೇಕಾಗಿದೆ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ದಯವಿಟ್ಟು 38ನೆಯ ಪುಟನೋಡಿ. ಆ ಕಾಲದಲ್ಲಿ ಎಷ್ಟಿತ್ತು, ಈಗ ಎಷ್ಟಿದೆಯೆಂಬುದು ಗೊತ್ತಾಗುತ್ತದೆ. ಈಗ ಎಷ್ಟು ಮನೆಗಳಾಗಿವೆಯೆಂಬುದನ್ನು ನೋಡಿ.

ಶ್ರೀ ಬಿ. ಚೆನ್ನಬೈರೇಗೌಡರು.—ವಿದ್ಯಾಭ್ಯಾಸದ ವಿಚಾರದಲ್ಲಿಯೂ ಸಹ ಆಗಿನ ವಿದ್ಯಾಭ್ಯಾಸದ ವ್ಯವಸ್ಥೆ ಯಾವ ರೀತಿಯಲ್ಲಿಯೂ ಮುಂದುವರಿದಿಲ್ಲವೆಂದು ಹೇಳಬೇಕಾಗಿದೆ. ಹಿಂದೆ ತಾವು ಭಾಷಣ ಮಾಡುತ್ತಿರುವಾಗ ದೇಶದ 75 ಲಕ್ಷ ಪ್ರಜೆಗಳಿಗೂ ವಿದ್ಯಾಭ್ಯಾಸಕ್ಕೆ ಅವಕಾಶ ಮಾಡಬೇಕೆಂದು ಹೇಳುತ್ತಿದ್ದರು. ಹಾಗೆ ಹೇಳುತ್ತಿದ್ದವರು ಈಚೆಗೆ 1947ನೆಯ ಇಸವಿಯಿಂದ ಎಷ್ಟು ಸ್ಕೂಲುಗಳನ್ನು ಹೆಚ್ಚಿಗೆ ಕೊಟ್ಟಿದ್ದೀರಿ? 1/10ನೆಯ ಭಾಗದಷ್ಟು ಕೂಡ ಹೆಚ್ಚಿಗೆ ಮಾಡಿಲ್ಲ. ಅದರಲ್ಲೂ ಗ್ರಾಮಾಂತರ ಪ್ರದೇಶಗಳಲ್ಲಿ ವಾಸಮಾಡುತ್ತಿರುವ 50 ಲಕ್ಷ ಪ್ರಜೆಗಳ ವಿದ್ಯಾಭ್ಯಾಸಕ್ಕೆಷ್ಟು ಅನುಕೂಲತೆಗಳನ್ನು ಕಲ್ಪಿಸಿಕೊಟ್ಟಿದ್ದೀರಿ? ಜೊತೆಗೆ, ಹಿಂದೆ ಬಲಾತ್ಕಾರ ಪ್ರಾಥಮಿಕ ಶಿಕ್ಷಣದ ಯೋಜನೆ ಜಾರಿಯಲ್ಲಿತ್ತು, ಅದನ್ನೂ ಈಗ ಕೈಬಿಟ್ಟಿದ್ದೀರಿ.

ಇನ್ನೊಂದು ಮುಖ್ಯ ವಿಷಯವನ್ನು ಸಭೆಯವರ ಗಮನಕ್ಕೆ ತರುತ್ತೇನೆ. ಹಿಂದೆ ಶ್ರೀ ಅಪ್ಪಾಜಿಗೌಡರು, ಶ್ರೀ ಶ್ರೀನಿವಾಸರವರು ಮಂತ್ರಿಮಂಡಳದಲ್ಲಿದ್ದಾಗ, ಶ್ರೀ ಶ್ರೀನಿವಾಸರವರು ಮಂತ್ರಿಮಂಡಳವನ್ನು ಬಿಟ್ಟು ಹೋದಾಗ ಅವರು ಸಭೆಗೆ ಬಂದು ತಮ್ಮ ಹೇಳಿಕೆಯನ್ನು ಕೊಡಲಿಲ್ಲವೆಂದು ಇದೇ ಮಾನ್ಯ ಮಂತ್ರಿಗಳು ಬಹಳವಾಗಿ ಟೀಕಿಸಿದ್ದರು. ಅಂಥಾದ್ದರಲ್ಲಿ ಇದೇ ಮಂತ್ರಿಮಂಡಳದಿಂದ ಶ್ರೀ ಟಿ. ಸಿದ್ದಲಿಂಗಯ್ಯನವರು ಹೊರಗೆ ಹೋಗಿ ಐದಾರು ತಿಂಗಳಾದರೂ ಅದರ ವಿಚಾರದಲ್ಲಿ ಒಂದು ಹೇಳಿಕೆಯನ್ನೂ ಕೊಟ್ಟಿಲ್ಲ. ಅವರ ಪರವಾಗಿ ಒಂದು ಹೇಳಿಕೆಯನ್ನು ಕೊಟ್ಟು ವಿಷಯವೇನೆಂಬುದನ್ನು ಈ ಸಭೆಯ ಪ್ರತಿನಿಧಿಗಳಿಗಾದರೂ ತಿಳಿಸದೆ ಹೋದರೆ ಅದೆಂಥಾ ಸರ್ಕಾರದ ನೀತಿ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಯಾರನ್ನು ಕೇಳುತ್ತೀರಿ?

ಶ್ರೀ ಬಿ. ಚೆನ್ನಬೈರೇಗೌಡರು.—ಯಾರೇ ಆಗಲಿ, ಸರ್ಕಾರ ಒಂದು ಹೇಳಿಕೆಯನ್ನು ಕೊಡಬೇಕಾಗಿತ್ತು. ಇಂಥಾ ಕಾರಣದಿಂದ—ಅಂದರೆ ಅವರು ಅನರ್ಹರೆಂದು ಹೋದರೇ, ಅಥವಾ ಈ ಸರ್ಕಾರದಲ್ಲಿ ಕೆಲಸ ಮಾಡಲು ಸಾಧ್ಯವಿಲ್ಲವೆಂದು ಹೋದರೇ—ಎಂದು ಯಾವುದನ್ನೂ ತಿಳಿಸಬೇಕಾಗಿತ್ತು.

ಆಮೇಲೆ, ಪೋಲೀಸ್ ಇಲಾಖೆಯ ಲಂಚದ ವಿಚಾರ ಹೇಳುತ್ತೇನೆ. ಲಂಚ ಎನ್ನುವುದು ಪೋಲೀಸ್ ಇಲಾಖೆಯಲ್ಲೇ ಪೋಲೀಸ್ ಸ್ಟೇಷನ್ನಿನಲ್ಲಿಯೇ ಇರುವಂತೆ ಕಾಣುತ್ತದೆ. ಯಾವ ಚೌಕದಲ್ಲಿ ನೋಡಲಿ, ಯಾವ ಕಾರಿನವರನ್ನು ಕಂಡರೂ ಆತನು ಸಲಾಮ್ ಹೊಡೆಯುತ್ತಿರುತ್ತಾನೆ. ಇದೆಲ್ಲಾ ಏನಾದರೂ ಕೊಡಲಿ ಎಂತ. ತಮ್ಮ ಕೆಲಸ ತಾವು ಸುಮ್ಮನೆ ನೋಡಿಕೊಳ್ಳುವುದಕ್ಕೆ ಬದಲು ಹೀಗೇಕೆ ಮಾಡಬೇಕು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸುಮ್ಮನೆ ಈರೀತಿ vague ಆಗಿ ಹೇಳಿದರೆ ಏನೂ ಪ್ರಯೋಜನವಿಲ್ಲ. ಯಾರು, ಯಾರಿಗೆ ಸಲಾಮ್ ಮಾಡಿದರು, ಕಾರಿನಲ್ಲಿ ಯಾರಿದ್ದವರು ಎಂಬುದನ್ನು ಹೇಳಲಿ, ತಮಗೇನಾದರೂ ಹೊಡೆದರೇ ಹೇಳಲಿ, ಅದು ಬಿಟ್ಟು ಸುಮ್ಮನೆ ಅನಿರ್ದಿಷ್ಟವಾಗಿ ಹೇಳಿದರೆ ಏನು ಪ್ರಯೋಜನ?

ಶ್ರೀ ಬಿ. ಚೆನ್ನಬೈರೇಗೌಡರು.—ಪ್ರತಿಯೊಂದು ಸರ್ಕಲ್ಲಿನಲ್ಲಿಯೂ ಹೀಗೆ ಪೋಲೀಸಿನವನು ಸಲಾಮ್ ಹೊಡೆಯುತ್ತಿರುವುದು ಎಲ್ಲರಿಗೂ ಗೊತ್ತಿದೆ.

ಬೆಂಗಳೂರು ಕಂಟೋನ್ಮೆಂಟ್ ಪ್ರದೇಶದಲ್ಲಿ ನಿಧಾನವಾಗಿ ಓಡಾಡುವ ಕಾರುಗಳು ಬೆಂಗಳೂರು ಸಿಟಿ ಪ್ರದೇಶದಲ್ಲಿ ಎಷ್ಟು ವೇಗವಾಗಿ ಬೇಕಾದರೂ ಹೋಗುತ್ತವೆ. ಇದಕ್ಕೆ ಕಾರಣ ಅಲ್ಲಿ ಬಿಗಿಇದೆ, ಪೋಲೀಸರ ಭಯವಿದೆ. ಅದೇ ಕಂಟೋನ್ಮೆಂಟ್ ಬೌಂಡರಿ ಬಿಟ್ಟು ನಮ್ಮ ಸಿಟಿ ಬೌಂಡರಿಯೊಳಕ್ಕೆ ಬಂದರೆ ಮೋಟಾರು ನಡೆಸುವವರಿಗೆ ಒಂದು ವಿಧವಾದ ಅಲಕ್ಷ್ಯ ಬರುತ್ತದೆ. ಶ್ರೀ ಡಿ. ಎಂ. ಸಿದ್ಧಯ್ಯನವರು ನಮ್ಮ ಆಹಾರ ಮಂತ್ರಿಗಳಿಗೆ ಪೋರ್ಟ್‌ಫೋಲಿಯೋ ಬಹಳ ಜಾಸ್ತಿ, ಇದರಿಂದ ಅವರಿಗೆ ಕೆಲಸ ಹೆಚ್ಚು ಎಂದು ಹೇಳಿದರು. ಅವರು ಪೋಲೀಸು, ಮಿಲಿಟರಿ ಬಿಟ್ಟು ಬರೀ ಆಹಾರ ಒಂದನ್ನು ಇಟ್ಟುಕೊಂಡರೆ ಒಳ್ಳೆಯದೆಂದು ಕಾಣುತ್ತದೆ.

ಇನ್ನು ರೋಡ್ ಟ್ರಾನ್ಸ್‌ಪೋರ್ಟ್ ರಾಷ್ಟ್ರೀಕರಣದ ಮಾತು. ನೆನ್ನೆಯದಿನ ನಾನೂ ಶ್ರೀ ಲಿಂಗಾರೆಡ್ಡಿಯವರೂ ಕೋಲಾರಕ್ಕೆ ಹೋಗುವ ಬಸ್ಸಿನಲ್ಲಿ ಹೋಗಬೇಕೆಂದು ಹೊರಟೆವು. ಮೂರು ಗಂಟೆಗೆ ಹೊರಡಬೇಕಾಗಿದ್ದ ಬಸ್ಸನ್ನು ಆರೂ ಮುಕ್ಕಾಲು ಘಂಟೆಗೆ ತಂದು ಕೇವಲ 16 ಮೈಲಿ ದೂರವಿರುವ ಹೊಸಕೋಟೆಗೆ ಎಂಟೂವರೆ ಘಂಟೆಗೆ ತೆಗೆದುಕೊಂಡು ಹೋಗಿಬಿಟ್ಟರು. ಅದು ಕೆ. ಜಿ. ಎಫ್.ಗೆ ಹೋಗಬೇಕಾಗಿದ್ದ ಬಸ್ಸು. ಅಲ್ಲಿಗೆ ಎಷ್ಟುಹೊತ್ತಿಗೆ ಹೋಗಿರಬಹುದೆಂಬುದನ್ನು ಮಾನ್ಯ ಸದಸ್ಯರೇ ಊಹೆ ಮಾಡಬಹುದು. ಅನೇಕ ಬಸ್ಸುಗಳು ಹೋಗುತ್ತಾ ದಾರಿಯಲ್ಲಿ ನಿಂತುಹೋಗಿರುತ್ತವೆ. ಮೈಲಿಮೈಲಿಗೂ ಒಂದೊಂದು ಬಸ್ಸು ಸಾಲಾಗಿ ನಿಂತಿರುತ್ತವೆ. ಇದನ್ನು ನೋಡಿ ಸಾರ್ವಜನಿಕರು ಸರ್ಕಾರಿ ಬಸ್ಸುಗಳಲ್ಲಿ ಹತ್ತುವುದೇ ಇಲ್ಲ; ಖಾಸಗಿ ಬಸ್ಸುಗಳಿಗೇ ಹೋಗುತ್ತಾರೆ.

ಇನ್ನು ವಿಶ್ವವಿದ್ಯಾನಿಲಯದಲ್ಲಿ ಫೀಜನ್ನು ಹೆಚ್ಚು ಮಾಡಬೇಕೆಂದು ಅರ್ಥಸಚಿವರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಈಗ ಅಲ್ಲಿ ವಿದ್ಯಾರ್ಥಿಗಳಿಗೆ ಕೊಡುತ್ತಿರುವ ಫ್ರೀಷಿಪ್, ವೇತನಗಳು ಮುಂತಾದ ರಿಯಾಯಿತಿಗಳು ಸಾಮಾನ್ಯವಾಗಿ ಬಡವರಾದವರ್‍ಯಾರಿಗೆ ದೊರೆಯಬೇಕೋ ಅವರಿಗೆ ದೊರೆಯುತ್ತಿಲ್ಲ. ಆದಕಾರಣ ಈ ರಿಯಾಯಿತಿಗಳನ್ನು ಕಡಿಮೆ ಮಾಡಿ, ಆದರೆ ಫೀಜನ್ನು ಮಾತ್ರ ಹೆಚ್ಚು ಮಾಡಬೇಡಿ. ಫ್ರೀಷಿಪ್‌ಗಳು, ವೇತನಗಳು ಇವುಗಳನ್ನು ಬೇಕಾದರೆ ಕಡಿಮೆ ಮಾಡಿ.

ಪೋರ್‌ಸೆಲೀನ್ ಫ್ಯಾಕ್ಟರಿ ಸುಮಾರು 20 ವರ್ಷಗಳ ಹಿಂದೆ ಪ್ರಾರಂಭವಾಯಿತು. ಅಲ್ಲಿ ತಯಾರಾಗುವ ಸಾಮಾನುಗಳು ಆಗ ಹೇಗಿತ್ತೋ ಈಗಲೂ ಹಾಗೆಯೇ ಇವೆ. ಆ ಸಾಮಾನುಗಳನ್ನು ಪಟ್ಟಣಗಳಲ್ಲಿ ಉಪಯೋಗಿಸುವುದಿಲ್ಲ, ಹಳ್ಳಿಗಳಲ್ಲಿ ಉಪಯೋಗಿಸಬಹುದೋ ಏನೋ, ಅನೇಕ ಕೈಗಾರಿಕೆಗಳನ್ನು ಪ್ರಾರಂಭ ಮಾಡುತ್ತೇವೆ, ಅಭಿವೃದ್ಧಿ ಮಾಡುತ್ತೇವೆ ಎಂದು ಹೇಳುತ್ತಾರೆ. ಹೀಗಿರುವಾಗ ಶಿವಮೊಗ್ಗದ ಮ್ಯಾಚ್ ಫ್ಯಾಕ್ಟರಿ ನಿಂತು ಹೋಗುತ್ತದೆಂದು ಪತ್ರಿಕೆಗಳಲ್ಲಿ ವರದಿ ಬಂದಿದೆ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಯಾರು ಹಾಗೆ ಹೇಳಿದ್ದು? ಅದು ನಿಲ್ಲುವುದಿಲ್ಲ, ನಡೆಯುತ್ತದೆ.

ಶ್ರೀ ಬಿ. ಚೆನ್ನಬೈರೇಗೌಡರು.—ಬಜೆಟ್ಟಿನಲ್ಲಿ ಈಗಿನ ಸರ್ಕಾರದಲ್ಲಿ ಬಹಳ inefficiency ಇದೆ. ಇದನ್ನು ಉತ್ತಮಪಡಿಸಬೇಕು.

Sri S. RANGA RAO (Chitaldrug District–General).—Sir, immediately after the presentation of the Budget by the Hon'ble Finance Minister, I must confess that my first impression was a feeling of great dissatisfaction. But after carefully going through the Budget of the previous years, especially of those years prior to the establishment of Responsible Government, I have now a feeling that this budget is quite satisfactory and I cannot but congratulate the Hon'ble Finance Minister on his achivement. I will substantiate my statement with facts and figures. The classification of the budget is more clear and is also helpful to us in comparing the budgets of other States which have also followed similar classifications. While adjusting to the new system of accounts, I must congratulate the Finance Department for having so efficiently done it and presented the Budget in a most satisfactory manner (hear, hear).

ಅಧ್ಯಕ್ಷರೇ, ಬಡ್ಜೆಟ್ಟಿನಲ್ಲಿರುವ ಅಂಕಿ ಅಂಶಗಳ ವಿಷಯವನ್ನು ತೆಗೆದುಕೊಂಡು ಮಾತನಾಡುವುದಕ್ಕೆ ಮುಂಚೆ ಒಂದು ವಿಚಾರವನ್ನು ಹೇಳಬೇಕಾಗಿದೆ. ಈ ಬಡ್ಜೆಟ್ಟನ್ನು ಸಭೆಯ ಮುಂದಿಡುವುದು ತಡವಾಗಿರುವುದರಿಂದ ಅನೇಕರಿಗೆ ಇದನ್ನು ಸರಿಯಾಗಿ ನೋಡಿ ಎಲ್ಲ ಅಂಶಗಳನ್ನೂ ಗ್ರಹಿಸಲು ಸಾಕಷ್ಟು ಕಾಲಾವಕಾಶವಿಲ್ಲವಾಗಿದೆ. ಡಿಮ್ಯಾಂಡ್‌ಗಳನ್ನು ಓಟಿಗೆ ಹಾಕುವ ಕಾಲಕ್ಕೆ ಖೋತಾ ಸೂಚನೆಗಳನ್ನು ಕಳುಹಿಸಲು ಕೂಡ ಕಾಲಾವಕಾಶವಿಲ್ಲವಾಗಿದೆ. ಮಾನ್ಯ ಸದಸ್ಯರೊಬ್ಬರು ಹೇಳಿದ ಹಾಗೆ ಒಂದು ತಿಂಗಳಿಗೆ ಮುಂಚೆ ಬಡ್ಜೆಟ್ಟನ್ನು ಸಭೆಯ ಮುಂದೆ ಮಂಡಿಸಬೇಕು ಬಾಕಿ ಪ್ರಾಂತಗಳಲ್ಲಿ ಬಡ್ಜೆಟ್ ಅಧಿವೇಶನ ಮಾರ್ಚಿ ತಿಂಗಳಿಗೆ ಮುಂಚೆಯೇ ಪ್ರಾರಂಭವಾಗಿತ್ತು. ಹಾಗೆಯೇ ಇಲ್ಲಿಯೂ ಆಗಿದ್ದರೆ ನಮಗೆ ಸಾಕಾದಷ್ಟು ಅವಕಾಶವಿರುತ್ತಿತ್ತು; ಹೀಗೆ ಪಂಜಾಬ್ ಮೆಯಿಲನಂತೆ (like Punjab Mail) ಓಡಬೇಕಾಗಿರಲಿಲ್ಲ. ಇದನ್ನು ನೋಡಿ ಒಂದು ವಿಚಾರ ಜ್ಞಾಪಕಕ್ಕೆ ಬರುತ್ತದೆ. ರೈಲ್ವೆ ಸ್ಟೇಷನ್ ಗಳಲ್ಲಿರುವ ಹೋಟೆಲುಗಳಲ್ಲಿ ಊಟಕ್ಕೆ ಹೋದರೆ ಬಿಸಿಬಿಸಿಯಾದ ಊಟವನ್ನು ಬಡಿಸಿ ತಿನ್ನುವುದಕ್ಕೆ ಅವಕಾಶವಿರುವುದಿಲ್ಲ, ರೈಲು ಹೊರಟುಬಿಡುತ್ತದೆ. ಹೀಗಿದೆ, ಈಗ ಮಾಡುತ್ತಿರುವುದು. ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಮುಂದಾದರೂ ಸಾಕಾದಷ್ಟು ಕಾಲಾವಕಾಶವನ್ನು ಕಲ್ಪಿಸಿಕೊಡಬೇಕು ಎಂದು.

***The Hon'ble Sri K. CHENGALARAYA REDDY** (Leader of the House).—I want to say that so far as general discussion of the Budget is concerned, I do not know whether in other States more time is allowed. But it is true that so far as Demands are concerned more days are allotted. Even in Madras, and other States also, the time allotted for the general discussion of the Budget is about the same as we are giving. ಸಾಮಾನ್ಯ ಚರ್ಚೆಗೆ ಬೇರೆ ಎಲ್ಲಿಯೂ ಹೆಚ್ಚು ಕಾಲಾವಕಾಶಕೊಡುವ ರೂಢಿ ಇಲ್ಲ, ಹಾಗೆಯೇ ಇಲ್ಲಿಯೂ ಇಲ್ಲ.

Sri S. RANGA RAO.—Janab Imam spoke of grants in aid by the Central Government and wanted us to stand on our own legs. He forgets that his Government was giving a subsidy of Rs. 19,36,500 to the British Government. Before the dawn of freedom the previous Government was incurring a huge expenditure in connection with war. As seen in the revised estimates in 1946-47 the expenditure was Rs. 3,51,00,500. They were also spending a huge sum of money for army and defence. In 1946-47 they have spent Rs. 30,19,000 for Army and Defence. In addition to this they were giving a sum of Rs. 28,25,000 to the Palace. The total expenditure on these heads for the year 1946-47 was Rs. 4,28,85,500. Now with the dawn of freedom, the situation has changed. Most of the above-stated items of expenditure are met by the Central Government and special subvention grants are also given. We must really be pleased that situation has changed and money has begun to flow from the Centre instead of going out when the British Government was ruling the country.

Even in the system of accounts in the Sandal Oil Factory where they were taking sandalwood from the Forest Department, no money was being given to the Department in return. They were simply saying that they get Rs. 60 lakhs or Rs. 70 lakhs profit. But all the time the cost of sandalwood was not taken into consideration. If that had been taken into consideration the profit would have come down to Rs. 6 or 7 lakhs. But this year a sum of Rs. 62,83,000 has been given to the Forest Department towards the costs of sandalwood taken from the Forests. That shows that the correct system of accounting has

commenced and that the Government have been placing true facts before us.

Sri G. A. ACHARYA (Bangalore District—General).—Thank the Public Accounts Committee for that.

Sri S. RANGA RAO.—In 1946-47 Government have spent Rs. 3,52,00,000 for nation-building departments and as the Hon'ble Finance Minister said in his speech, Rs. 9,25,00,000 have been provided in the current budget. Capital expenditure in 1946-47 was Rs. 1,60,00,000 only and proposed capital expenditure in 1951-52 is Rs. 7,63,00,000. So there is very good improvement in the Budget provisions for both nation building departments and capital expenditure for the several industrial concerns.

Regarding shortage of food supply, many Hon'ble Members of the Opposition have made much of the fact that we are meeting certain expenditure on account of food losses. In 1946-47 alone a loss of Rs. 1,70,00,000 was adjusted to Revenue account on account of supplies alone as can be seen on page 171 of the General Budget Estimates of 1947–48. So the question of losing on food supply commenced even before 1946-47. As a matter of fact in 1951-52 we are meeting a deficit of only Rs. 16 lakhs when compared to Rs. 1,70,00,000 in 1946-47. In spite of the fact that the difficulties have increased and we have to supply more of food, the deficit is only Rs. 16 lakhs from the Revenue account. As is stated in the Hon'ble Finance Minister's Budget speech, Lakkuvalli, Tunga and Nugu Projects are under completion and also if sufficient electric power is given to Vedavathi Valley Basin, I am sure that in the course of the next few years it will be possible for us to tide over the food crisis and we may not have to meet any loss for the supply of food.

For giving relief to victims of fire accident, a new item of expenditure has been shown in the Budget. Rs. 1 lakh has been provided for it.

* * *

ಮೊದಲು ಮನೆಗಳು ಸುಟ್ಟುಹೋದಾಗ ಆ ಬಗ್ಗೆ ಸ್ವಲ್ಪ ಸ್ವಲ್ಪ ಗ್ರ್ಯಾಂಟನ್ನು ಸರ್ಕಾರದವರು ಕೊಡುತ್ತಿದ್ದರು. ಆದರೆ ಈಗ other miscellaneous loans ಎಂದು ಹೇಳಿ ಇದಕ್ಕೋಸ್ಕರವಾಗಿ ಒಂದು ಲಕ್ಷರೂಪಾಯಿಗಳನ್ನೇ ಮುಡುಪಾಗಿಟ್ಟಿದ್ದಾರೆ. ಆದರೆ ಇದೂ ಕೂಡ ಸಾಲದು; ಇದನ್ನೇ ಇನ್ನೂ ಹೆಚ್ಚಿಸ ಬೇಕೆಂದು ಹೇಳುತ್ತೇನೆ.

I now come to the very next important point. Many Members of the Opposition and a few Members of the Treasury Bench have stated that the financial condition of our State is not sound. I strongly disagree with them and by quoting facts and figures I will prove that our State is financially as strong as ever. In 1946–47 if we take the assets and liabilities into consideration, cash and investments were Rs. 61'85 crores. Now they are Rs. 62·27 crores. There is therefore an increase of Rs. 42 lakhs.

ಅಸೆಟ್ಸ್ ಅಂಡ್ ಲಯಬಿಲಿಟೀಸ್ (assets and liabilities) ವಿಚಾರವಾಗಿ ಮಾತನಾಡುತ್ತಾ ಕೆಲವು ಸದಸ್ಯರು 1946–47ರಲ್ಲಿ ಇದ್ದಂಥ 33·52 ಕೋಟಿ ರೂಪಾಯಿಗಳ cash and investments 1–4–50 ರಲ್ಲಿ 18·59 ಕೋಟಿ ರೂಪಾಯಿಗಳಾಗಿರುತ್ತದೆಂದು ಬಹಳ ದೊಡ್ಡ ಟೀಕೆ ಮಾಡಿದ್ದಾರೆ. ಆದರೆ ಹಾಗೆ ಖರ್ಚು ಮಾಡಿರತಕ್ಕ 18.59 ಕೋಟಿ ರೂಪಾಯಿಗಳು ಎಲ್ಲಿಯೂ ನಮ್ಮ ಕೈಬಿಟ್ಟು ಹೋಗಿಲ್ಲ, ಖರ್ಚಾಗಿರಬಹುದು. ಆದರೆ ಆ ಹಣವೆಲ್ಲ ಬೇರೆ ರೂಪದಲ್ಲಿರುತ್ತದೆ. ಹಿಂದೆ 1946-47ರಲ್ಲಿ loans and advances ಬಗ್ಗೆ 2·37 ಕೋಟಿ ರೂಪಾಯಿಗಳನ್ನು ಹಾಕಿದ್ದ ಕಡೆ, ಇಂದು 4·98 ಕೋಟಿ ರೂಪಾಯಿಗಳನ್ನು ಹಾಕಿದ್ದಾರೆ, Capital 25'92 ಕೋಟಿ ಇದ್ದದ್ದು ಈಗ 38·59 ಕೋಟಿಗೆ ಏರಿದೆ. ಹೀಗೆ ಆ ಹಣವು ಸಾಲದ ಮತ್ತು ಕೈಗಾರಿಕೆ ಕ್ಷೇತ್ರಗಳ ಮೇಲೆ ಮತ್ತು ದೊಡ್ಡ ದೊಡ್ಡ ನೀರಾವರಿ ಯೋಜನೆಗಳ ಮೇಲೆ ಹಾಕಲಾಗಿದೆ. ಇಷ್ಟು ಅಲ್ಲದೆ public debt 2 ಲಕ್ಷ ರೂಪಾಯಿಗಳನ್ನು ತೀರಿಸಲಾಗಿರುತ್ತೆ, ಡಿಪಾಜಿಟ್‌ಗಳನ್ನು 2·67 ಕೋಟಿ ರೂಪಾಯಿಗಳಿಗೆ ಹೆಚ್ಚಿಸಿಕೊಂಡು ಹೋಗಿದ್ದಾರೆ. ಅದಲ್ಲದೆ ನಮ್ಮಲ್ಲಿ ಸ್ಥಾಪಿಸಿರತಕ್ಕ ಕಲವು ದೊಡ್ಡ ದೊಡ್ಡ ಯೋಜನೆಗಳ ಬಗ್ಗೆ 13 ಕೋಟಿ ರೂಪಾಯಿಗಳಷ್ಟು ಖರ್ಚು ಮಾಡಿದ್ದಾರೆ. ಹೀಗೆ ನಮ್ಮಲ್ಲಿದ್ದ ಹಣ ಎಲ್ಲಿಯೂ ಹೋಗಿಲ್ಲ. ಈ ರೂಪದಲ್ಲಲ್ಲದೆ, ಬೇರೊಂದು ರೂಪದಲ್ಲಿರುತ್ತದೆ. ಅಷ್ಟೇ ಹೊರತು ಎಲ್ಲಿಯೂ ವ್ಯಯವಾಗಿ ಹೋಗಿಲ್ಲ.

ಇನ್ನು ಫುಡ್ ಸಬ್‌ಸಿಡಿ ವಿಚಾರವಾಗಿ ಮಾತನಾಡುತ್ತ ಹಿಂದೆ ಇದನ್ನು ರೆವೆನ್ಯೂಬಾಬಿನಿಂದ ಖರ್ಚು ಮಾಡಲಿಲ್ಲವೆಂದು ವಿರೋಧ ಪಕ್ಷದವರು ತಿಳಿಸಿದ್ದಾರೆ. ಆದರೆ 1946–47 ರಲ್ಲೇ ಇದಕ್ಕಾಗಿ ಒಂದು ಕೋಟಿ 70ಲಕ್ಷ ರೂಪಾಯಿಗಳನ್ನೂ 1947–48ರಲ್ಲಿ ಒಂದು ಕೋಟಿ 50ಲಕ್ಷ ರೂಪಾಯಿಗಳನ್ನೂ ಖರ್ಚು ಮಾಡಿರುವುದಾಗಿಯೂ, ಹೀಗೆ 1946-47 ರಿಂದ 1947–48ರ ವರೆಗೆ ಸುಮಾರು 3ಕೋಟಿ ರೂಪಾಯಿಗಳ ಮೇಲ್ಪಟ್ಟು ಖರ್ಚನ್ನು ಬಡ್ಜೆಟ್ಟಿನಲ್ಲೇ ತೋರಿಸಿದ್ದಾರೆ. ಹೀಗೆ ಆಹಾರದ ಬಾಬಿಗಾಗಿ ಹಿಂದಿನಿಂದಲೂ ಹೇಗೆ ಖರ್ಚು ಮಾಡುತ್ತ ಬಂಧಿದ್ದರೋ ಈಗಲೂ ಅದೇ ರೀತಿ ಖರ್ಚು ಮಾಡಿದ್ದಾರೆ. ಆದರೆ ಹಿಂದಿನ ವರ್ಷಗಳ ಖರ್ಚಿಗಿಂತ ಈಗ ಆ ಬಗ್ಗೆ ಖರ್ಚನ್ನು ಬಹಳ ಕಮ್ಮಿ ಮಾಡಿದ್ದಾರೆ.

(SRI S. RANGA RAO)

ಇನ್ನು ನೇಷನ್ ಬಿಲ್ಡಿಂಗ್ ಡಿಪಾರ್ಟ್‌ಮೆಂಟ್‌ಗಳ ಬಗ್ಗೆ ತಾವು ಹೆಚ್ಚು ಸಾಲವನ್ನೇನೂ ಮಾಡಿದಂತಾಗಿಲ್ಲ. ಆದರೂ ಆ ಬಗ್ಗೆ ಹೆಚ್ಚು ಹಣವನ್ನು ಒದಗಿಸಿದ್ದೀರಿ. ಅದಲ್ಲದೆ ಸುಮಾರು ಈ ಬಗ್ಗೆ 2ಲಕ್ಷ ರೂಪಾಯಿಗಳಷ್ಟು public debt ಕಮ್ಮಿ ಆಗಿರುತ್ತದೆ.

ಹೀಗೆ ತಾವು ಈಗ ಕೈಗೊಂಡಿರತಕ್ಕ ದೊಡ್ಡ ದೊಡ್ಡ ಯೋಜನೆಗಳ ಪೈಕಿ ಸ್ವಲ್ಪ ಸಾವಧಾನದಿಂದ ಮುಂದಕ್ಕೆ ಹೆಜ್ಜೆಯಿಡುವುದು ಒಳ್ಳೆಯದೆಂದು ಸೂಚಿಸುತ್ತೇನೆ. The public loan liabilities of the State are Rs.16·19 crores. This is slightly less than what it was in 1946-47. There is also another important feature to be noted. After allocating a portion to the Centre as a result of federal financial integration and taking the Sinking Fund of Rs.4,13,00,000 into consideration, the public debt will be about Rs. 6 to 7 crores. This is much less than one year's revenue income. Judged from every standard the financial position of the State is intrinsically as sound as ever.

ಇನ್ನು ಕೈಗಾರಿಕಾ ಯೋಜನೆಗಳ ಬಗ್ಗೆ ಚರ್ಚಿಸುವುದಾದರೆ ಕೆಲವು ಚೆನ್ನಾಗಿ ಕೆಲಸ ನಡೆಸುತ್ತಿವೆ. ಆದರೆ ಇನ್ನು ಕೆಲವು ಕೈಗಾರಿಕೆಗಳು ಅಷ್ಟು ಚೆನ್ನಾಗಿ ಪ್ರತಿಫಲ ಕೊಡುತ್ತಿಲ್ಲ. ಹೀಗೆ ಕೆಲವು ಕೈಗಾರಿಕೆಗಳಲ್ಲಿ ಪ್ರತಿ ವರ್ಷವೂ ಡಿಫಿಸಿಟ್ ಬಡ್ಜೆಟ್ ತೋರಿಸುತ್ತಿರುವುದರಿಂದ ಈಗಾಗಲೇ ಶ್ರೀ ಎಚ್. ಬಿ. ಗುಂಡಪ್ಪಗೌಡರು ತಿಳಿಸಿರುವಂತೆ ಫರ್ಟಿಲೈಜರ್ಸ್ ಕೈಗಾರಿಕೆ ಬಗ್ಗೆ ನಿಧಾನ ನೀತಿ ಅನುಸರಿಸಿಕೊಂಡು ಹೋಗುವುದು ಉಚಿತವಾಗಿ ಕಾಣುತ್ತದೆ. ಆದರೆ ಕೈಗಾರಿಕೆಗಳಲ್ಲಿ ಯಾವ್ಯಾವುವು ಮುಖ್ಯವಾಗಿವೆಯೋ ಮತ್ತು ಹೆಚ್ಚು ಪ್ರತಿಫಲವನ್ನು ಕೊಡುತ್ತಿವೆಯೋ ಅಂಥವುಗಳ ಬಗ್ಗೆ ಉತ್ತೇಜನ ಕೊಡಬಹುದು. ಅವುಗಳಿಗೆ ಹೆಚ್ಚು ಹೆಚ್ಚು ಹಣವನ್ನು ಸಹ ಒದಗಿಸಬಹುದು. ಹೀಗೆ ತಾವು ಆಲೋಚಿಸಿ ಕೆಲಸಮಾಡುತ್ತಾ ಹೋದರೆ ತಮಗೀಗ ಡಿಫಿಸಿಟ್ ಬಡ್ಜೆಟ್ಟಾಗಿರುವುದು ಸಧ್ಯದಲ್ಲೇ ಸರ್ಪ್ಲಸ್ ಬಡ್ಜೆಟ್ ಆಗಬಹುದು. ಆ ರೀತಿ ಸರ್ಪ್ಲಸ್ ಬಡ್ಜೆಟ್ ಆಗುವುದರಲ್ಲಿ ಸಂದೇಹವೇ ಇಲ್ಲವೆಂದು ನಾನು ನಂಬಿದ್ದೇನೆ.

ಷೇರ್ ಇನ್‌ವೆಸ್ಟ್‌ಮೆಂಟಿನ ಬಗ್ಗೆ 1946-47ರಲ್ಲಿ 55 ಲಕ್ಷ ರೂಪಾಯಿಗಳು ಇದ್ದವು; ಈಗ 1950-51ಕ್ಕೆ ಅದು 133ಲಕ್ಷ ಆಗಿದೆ. ಅಂದರೆ ಸುಮಾರು 78ಲಕ್ಷ ರೂಪಾಯಿಗಳನ್ನು ಈ ಬಾಬಿನಲ್ಲಿ ಜಾಸ್ತಿ ಮಾಡಿದಂತಾಗಿದೆ.

ಇನ್ನು ಕೇಂದ್ರದವರಿಂದ ನಮಗೆ ಐದು ವರ್ಷಗಳ ಬಗ್ಗೆ ಬರುವ ಇನ್ನು 345ಲಕ್ಷ ರೂಪಾಯಿಗಳು 10ನೆಯ ವರ್ಷದಲ್ಲಿ ಸಂಪೂರ್ಣವಾಗಿ ನಿಂತು ಹೋಗಿ ನಮಗೆ ಹಣಕಾಸಿನ ಬಗ್ಗೆ ಬಹಳ ಬಿಕ್ಕಟ್ಟು ಉಂಟಾಗಬಹುದೆಂದು ಕೆಲವರು ತಿಳಿಸಿದ್ದಾರೆ. ಆದರೆ ಈ ತಹಲ್‌ವರೆಗೆ ಆಗಲೇ ನಮ್ಮ ಸರ್ಕಾರದವರು ಸ್ಥಾಪಿಸಿರುವಂಥ ಕ್ಯಾಪಿಟಲ್ ವರ್ಕ್ಸ್‌ಗಳೂ ಮತ್ತು ನೇಷನ್ ಬಿಲ್ಡಿಂಗ್ ಕಾರ್ಯಗಳು ಇತ್ಯಾದಿ ಯೋಜನೆಗಳೆಲ್ಲಾ ಅಷ್ಟರ ವೇಳೆಗೆ ಚೆನ್ನಾಗಿ ಬಡಾಯಿಸಿಕೊಂಡು, ಹಾಗೆ ನಮಗೆ ಕೇಂದ್ರದವರ ಸಹಾಯ ನಿಲ್ಲುವ ವೇಳೆಗೆ, ಇವುಗಳಿಂದ ಹೆಚ್ಚಿನ ಪ್ರತಿಫಲ ಬರುವುದರಿಂದ ನಮಗೆ ಆಗ್ಯೆ ಯಾವ ತೊಂದರೆಗಳೂ ಉಂಟಾಗಲಾರವೆಂದು ನಾನು ನಂಬಿದ್ದೇನೆ.

ನಾನಾದಲೇ ತಿಳಿಸಿರುವ ಪ್ರಕಾರ ಕೈಗಾರಿಕಾ ಯೋಜನೆಗಳ ಬಗ್ಗೆ ಈಗ ಹಾಲಿ ನಮ್ಮಲ್ಲಿರತಕ್ಕ ಸಾಬೂನು ಕಾರ್ಖಾನೆ, ಸೆಂಟ್ರಲ್ ಇಂಡಸ್ಟ್ರಿಯಲ್ ವರ್ಕ್ಸ್‌ಷಾಪ್, ಗಂಧದ ಎಣ್ಣೆ ಫ್ಯಾಕ್ಟರಿ ವಿನಾ ಮತ್ತ್ಯಾವ ಕೈಗಾರಿಕೆಗಳೂ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಅವುಗಳೆಲ್ಲಾ ಸರಿಯಾಗಿ ಕೆಲಸ ಮಾಡುವಂತೆ ಮಾಡಬೇಕು. ಈ ಬಾಬಿನಲ್ಲಿ ಈಗ ಸರ್ಕಾರಕ್ಕೆ ಹೆಚ್ಚಿನ ಲುಕ್ಸಾನಾಗುತ್ತಿದೆ. ಇದೇ ರೀತಿ ಇನ್‌ಷೂರೆನ್ಸಿನ ಇಲಾಖೆಯನ್ನೂ ಕೂಡ ಪುನರ್‌ವ್ಯವಸ್ಥೆ ಮಾಡಬೇಕಾಗಿದೆ. ವಾಣೀವಿಲಾಸ ವಾಟರ್ ವರ್ಕ್ಸ್‌ನಿಂದ ಲುಕ್ಸಾನು ಆಗುತ್ತಿರುವುದರಿಂದ service at cost ಮಾಡಬೇಕಾಗಿದೆ. ನಾನು ಹೇಳಿದ್ದನ್ನೇ ನನ್ನ ಮಾನ್ಯ ಸ್ನೇಹಿತರಾದ ಶ್ರೀ ಎಚ್. ಎಂ. ಚನ್ನಬಸಪ್ಪನವರೂ ಸಹ ಅನುಮೋದಿಸುತ್ತಾರೆಂದು ನಾನು ನಂಬಿದ್ದೇನೆ. ಜೂಜಾಡುವುದನ್ನು ಬಹಿಷ್ಕರಿಸಬೇಕು. ಆದ್ದರಿಂದ ಬೆಟ್ಟಿಂಗ್ ಟ್ಯಾಕ್ಸ್ ಎಂಬುದು ಖಂಡಿತ ಹೋಗಲೇ ಬೇಕೆಂದು ಅಭಿಪ್ರಾಯ ಪಡುತ್ತೇನೆ.

ಸೇಲ್ಸ್ ಟ್ಯಾಕ್ಸ್ ವಿಚಾರದಲ್ಲಿ ತಾವು ಕೆಲವು ರಿಯಾಯಿತಿಗಳನ್ನು ತೋರಿಸುತ್ತಿದ್ದೀರಿ. The existing exemption under the Sales Tax Act for Filature silk, Foreign silk and sale of electrical energy must go.

ಇನ್ನು ಇಂಗ್ಲೆಂಡಿನಲ್ಲಿರತಕ್ಕ ನಮ್ಮ ಟ್ರೇಡ್ ಕಮಿಷನರಿಗೆ ಅಥವಾ ಏಜೆಂಟರಿಗೆ ವರ್ಷಂಪ್ರತಿ 84 ಸಾವಿರ ರೂಪಾಯಿಗಳು ಖರ್ಚಾಗುತ್ತಿವೆ. ಆದುದರಿಂದ ಆ ಹುದ್ದೆಯನ್ನು ವಜಾ ಮಾಡಬೇಕೆಂದು ಸೂಚಿಸುತ್ತೇನೆ. ಸದರಿ ಹುದ್ದೆಯಿಂದ ಹೆಚ್ಚಿನ ಪ್ರತಿಫಲವೇನೂ ಕಂಡು ಬರುತ್ತಿಲ್ಲವಾದ್ದರಿಂದ ಈ ಹುದ್ದೆಯನ್ನೇ ತಾವು ಕೂಡಲೆ ರದ್ದುಪಡಿಸಬೇಕೆಂದು ಸೂಚಿಸುತ್ತೇನೆ.

ಇನ್ನು ರೋಡ್ ಟ್ರಾನ್ಸ್‌ಪೋರ್ಟ್ ವಿಚಾರ. In 1950-51, the profit expected was Rs. 2·72 lakhs. The revised figure is Rs. 9,000 and now the Hon'ble Minister says that it is Rs 29,000, and probably even this would disappear when the actual amount is known. In the Budget of 1951–52, it is proposed to increase the working expenses by Rs. 2·2 lakhs and there is still an expectation of profit of Rs. 1·61 lakhs, the only hope being increase in the gross receipt by Rs. 3.72 lakhs though the gross receipts in 1950-51 has fallen by Rs. 5.27 lakhs. So I am afraid, the Government Road Transport has got to be thoroughly overhauled.

ಮೌಂಟ್ ಕಾರ್ಮೆಲ್ ಕಾಲೇಜಿಗೆ 2½ಲಕ್ಷ ರೂಪಾಯಿಗಳನ್ನು ಕಟ್ಟಡಕ್ಕಾಗಿ ಕೊಟ್ಟಿದ್ದಾರೆ. ಇದರ ಬದಲು ಕಂಟೋನ್ಮೆಂಟಿನಲ್ಲಿ ಎರಡು ಹೈಸ್ಕೂಲುಗಳನ್ನು ಪ್ರಾರಂಭ ಮಾಡಬೇಕಾಗಿತ್ತು. ಆ ಬಗ್ಗೆ ಸರಿಯಾದ ನಿಗಾ ಕೊಟ್ಟಿರುವುದಿಲ್ಲ. ಕೂಡಲೆ ತಕ್ಕ ನಿಗಾ ಕೊಡಬೇಕು.

ಭಿಕ್ಷುಕರ ಪರಿಹಾರ ನಿಧಿಗಾಗಿ 2ಲಕ್ಷ ರೂಪಾಯಿಗಳನ್ನೊದಗಿಸಿದ್ದಾರೆ. 117 ಜನರಿಗೆ ಇದರಿಂದ ಪರಿಹಾರ ಸಿಕ್ಕುತ್ತದೆ. ಇದರಿಂದ ಪ್ರತಿಯೊಬ್ಬ ಭಿಕ್ಷುಕನಿಗೂ

ವರ್ಷಕ್ಕೆ 1709 ರೂಪಾಯಿ 8 ಅಣೆ ಖರ್ಚು ಮಾಡಿದ ಹಾಗಾಯಿತು. ತಿಂಗಳಿಗೆ ಇದರಂತೆ 142ರೂ. 8ಅಣೆ ಬೀಳುತ್ತದೆ. ಎಂಟು ಜನರಿರುವ ಸಂಸಾರದವರಿಗೆಲ್ಲಾ ಪರಿಹಾರ ಸಿಕ್ಕರೆ ಮಾನ್ಯ ಮಂತ್ರಿಗಳ ಸಂಬಳಕ್ಕಿಂತ ಹೆಚ್ಚಾಗಿ ಭಿಕ್ಷ ಮಾಡುವವರಿಗೆ ಅನುಕೂಲವಾಯಿತು! ಈ ರೀತಿ ಖರ್ಚು ಮಾಡುವುದು ಸರಿಯಲ್ಲ. ಇದರ ಜೊತೆಗೆ ಕಾರ್ಪೊರೇಷನ್ ನಿಂದ ಮೂರು ಸಾವಿರ ರೂಪಾಯಿಗಳ ಗ್ರ್ಯಾಂಟು ಬೇರೆ ಇದೆ. ಇದರ ಆಡಳಿತ ಸರಿಯಾಗಿರುವುದಿಲ್ಲ. ಲಕ್ಷಾಂತರ ಜನ ಭಿಕ್ಷುಕರಿರುವಾಗ ಈ ರೀತಿ ಎಲ್ಲರಿಗೂ ಕೊಡಲು ಸಾಧ್ಯವಿಲ್ಲ. ಆದ್ದರಿಂದ ಭಿಕ್ಷುಕರ ಕೇಂದ್ರವನ್ನು ಮುಚ್ಚಬಹುದು.

ಕೊನೆಯದಾಗಿ ಒಂದು ವ್ಯಸನವನ್ನು ಸೂಚಿಸಬೇಕಾಗಿದೆ. ಇದು ಗಾಂಧಿ ತತ್ವದ ಮೇಲೆ ತಯಾರಾಗಿರುವ ಬಡ್ಜೆಟ್ಟಲ್ಲ. ಖಾದಿ ಪ್ರೋತ್ಸಾಹಕ್ಕೆ ಹಣ ಕೊಡಬೇಕೆಂದು ಹೇಳಿದರೂ ಅದನ್ನು ಕೊಟ್ಟಿಲ್ಲ. ಪಾನನಿರೋಧ ಜಾರಿಗೆ ತರಬೇಕೆಂದು ಹೇಳಿದರೂ ಹಾಸನ ಜಿಲ್ಲೆಯಲ್ಲಿ ಇನ್ನೂ ಜಾರಿಗೆ ತಂದಿರುವುದಿಲ್ಲ. ಸೇವಾದಳಕ್ಕೆ ಏನಾದರೂ ಉತ್ತೇಜನ ಕೊಟ್ಟಿದ್ದಾರೆಯೆ ಎಂದು ನೋಡಿದರೆ ಬಡ್ಜೆಟ್ಟಿನಲ್ಲಿ ಅದಕ್ಕೆ ಹಣವನ್ನೇ ಒದಗಿಸಿಲ್ಲ. ಹಿಂದೀಪ್ರಚಾರಕ್ಕೆ ಹೆಚ್ಚು ಏರ್ಪಾಡಾಗಬೇಕು, 15ವರ್ಷಗಳಲ್ಲಿ ಇಂಗ್ಲೀಷ್ ಭಾಷೆ ಹೋಗುತ್ತದೆ ಎಂದು ಹೇಳುವಾಗ ಹಿಂದೀ ಭಾಷೆಗೆ ಸಾಕಷ್ಟು ಪ್ರೋತ್ಸಾಹ ಕೊಡಬೇಕು. ಆದ್ದರಿಂದ ಇದು ಗಾಂಧಿ ತತ್ವವನ್ನನುಸರಿಸಿ ಮಾಡಿರುವ ಬಡ್ಜೆಟ್ ಅಲ್ಲ. ಈ ಬಾಬುಗಳಿಗೆಲ್ಲಾ ತಕ್ಕಷ್ಟು ಹಣ ಒದಗಿಸಬೇಕಾಗಿತ್ತು ಎಂದು ಅಭಿಪ್ರಾಯಪಡುತ್ತೇನೆ.

ಶ್ರೀ ಕೆ. ವಿ. ಶಂಕರಗೌಡರು (ಮಂಡ್ಯ ಜಿಲ್ಲೆ).—ಮಾನ್ಯ ಅರ್ಥ ಸಚಿವರು ನಮ್ಮ ಮುಂದೆ ಮಂಡಿಸಿರುವ ಆಯವ್ಯಯ ಪಟ್ಟಿಯಲ್ಲಿ ಬಹಳ ನೈಪುಣ್ಯತೆಯನ್ನು ಪ್ರದರ್ಶಿಸಿದ್ದಾರೆಂದು ಅನೇಕ ಮಂದಿ ಮಾನ್ಯ ಸದಸ್ಯರು ಈಗಾಗಲೇ ಅಭಿಪ್ರಾಯಪಟ್ಟಿದ್ದಾರೆ. ನಾನು ಇದಕ್ಕೆ ವಿರೋಧಾಭಿಪ್ರಾಯವನ್ನು ಹೊಂದಿರುವವನೇನೂ ಅಲ್ಲ. ಈ ಪಟ್ಟಿಯನ್ನು ತಯಾರಿಸುವಾಗ ಅವರು ಎಷ್ಟು ನೈಪುಣ್ಯತೆಯನ್ನು ಪ್ರದರ್ಶಿಸಿರುವರೋ ಅಷ್ಟೇ ಅಥವಾ ಅದಕ್ಕಿಂತಲೂ ಹೆಚ್ಚಾದ ನೈಪುಣ್ಯತೆಯನ್ನು ಅವರ ಭಾಷಣದಲ್ಲಿ ಪ್ರದರ್ಶಿಸಿದ್ದಾರೆಂದು ಅಭಿಪ್ರಾಯ ಪಡುತ್ತೇನೆ. ಅದಕ್ಕೆ ಅವರು ಅಭಿನಂದನಾರ್ಹರು.

ಅಧ್ಯಕ್ಷರೇ, ಈ ಆಯವ್ಯಯಪಟ್ಟಿಯ ವಿಚಾರದಲ್ಲಿ ಮಾತನಾಡುವುದಕ್ಕೆ ಪೂರ್ವಭಾವಿಯಾಗಿ ಮಾನ್ಯ ಅರ್ಥ ಸಚಿವರಲ್ಲಿ ನನ್ನದೊಂದು ಅರಿಕೆ. ನಾನು ವಿದ್ಯಾರ್ಥಿಯಾಗಿದ್ದಾಗ ಅರ್ಥ ಶಾಸ್ತ್ರವನ್ನು ಅಷ್ಟಾಗಿ ಅಭ್ಯಾಸಮಾಡಿದವನಲ್ಲ. ಆಮೇಲೆ ಅರ್ಥ ಶಾಸ್ತ್ರದ ಮೂಲ ತತ್ವಗಳನ್ನಾದರೂ ತಿಳಿದುಕೊಳ್ಳಬೇಕೆಂದು ಒಂದೆರಡು ಗ್ರಂಥಗಳನ್ನು ನೋಡಿದ್ದೇನೆ. ಅದರಿಂದ ಅಲ್ಪ ಸ್ವಲ್ಪ ತಿಳಿವಳಿಕೆಯನ್ನು ಹೊಂದಿದ್ದೇನೆ. ಸಾಮಾನ್ಯ ಮನುಷ್ಯನಿಗಿರಬಹುದಾದ ನೈಜ ಬುದ್ಧಿಯನ್ನು ಉಪಯೋಗಿಸಿ ಈ ಆಯವ್ಯಯ ಪಟ್ಟಿಯನ್ನು ವಿಮರ್ಶೆ ಮಾಡಿದ್ದರಲ್ಲಿ ನನ್ನ ಮನಸ್ಸಿನಲ್ಲಿ ಕೆಲವು ಅಭಿಪ್ರಾಯಗಳು ಮೂಡಿವೆ. ಆ ಅಭಿಪ್ರಾಯಗಳು ಎಷ್ಟು ಮಾನ್ಯವಾದವುಗಳು ಎಂಬುದನ್ನು ನಾನು ಹೇಳುವ ಹಾಗಿಲ್ಲ; ಬಹುಶಃ ಮಾನ್ಯವಾಗಿಯೇ ಇರಬೇಕೆಂದು ನಾನು ನಂಬುತ್ತೇನೆ. ಒಂದು ವೇಳೆ ತಪ್ಪಿದ್ದರೆ ಮಾನ್ಯ ಅರ್ಥ ಸಚಿವರು ಕ್ಷಮಿಸುತ್ತಾರೆಂದು ನಂಬಿದ್ದೇನೆ.

ಮುಖ್ಯವಾಗಿ ಒಂದು ದೇಶದ ಆಯವ್ಯಯ ಪಟ್ಟಿಯನ್ನು ವಿಮರ್ಶೆ ಮಾಡುವಾಗ ಗಮನಿಸಬೇಕಾದ ಮುಖ್ಯ ಅಂಶಗಳು ಮೂರು—ದೇಶದ ಪ್ರಜೆಗಳ ಮೇಲೆ ವಿಧಾಯಕಮಾಡಬೇಕೆಂದು ಸೂಚಿತವಾಗಿರುವ ತೆರಿಗೆಗಳು ಯಾವುವು ಎಂಬುದು ಮೊದಲನೆಯ ವಿಷಯ, ಇದು ಬಹಳ ಮುಖ್ಯವಾದುದು. ಎರಡನೆಯದು, ದೇಶದಲ್ಲಿರುವ ಅನೇಕ ಇಲಾಖೆಗಳಿಗೆ ಮತ್ತು ಬಾಬುಗಳಿಗೆ ಎಷ್ಟೆಷ್ಟು ಹಣವನ್ನು ಒದಗಿಸಬೇಕೆಂದು ಕೇಳಿದೆ ಎಂಬುದು. ಇದು ಮೊದಲನೆಯದರಷ್ಟು ಪ್ರಾಮುಖ್ಯವಲ್ಲದಿದ್ದರೂ ಸದಾ ಸರ್ಕಾರದವರ ಗಮನದಲ್ಲಿರಬೇಕಾದ ಮುಖ್ಯವಾದ ವಿಷಯ. ಮೂರನೆಯದು, ಈ ಮೊಬಲಗನ್ನು ಖರ್ಚು ಮಾಡುವುದರಿಂದ ದೇಶದಲ್ಲಿರತಕ್ಕ ಪ್ರಜೆಗಳ ಆವಶ್ಯಕತೆ ಎಷ್ಟರ ಮಟ್ಟಿಗೆ ಪೂರೈಕೆಯಾಗುತ್ತದೆ ಎಂಬುದು. ಈ ಮೂರು ವಿಷಯಗಳ ವಿಚಾರವನ್ನು ಹೇಳುತ್ತಾ ಹೆಚ್ಚು ವಿವರಗಳಿಗೆ ಕೈಹಚ್ಚಲು ಇಷ್ಟಪಡುವುದಿಲ್ಲ. ಮುಖ್ಯವಾಗಿ ಈ ಮೂರು ವಿಷಯಗಳಲ್ಲಿ ಯಾವ ತತ್ವವನ್ನು ಅನುಸರಿಸಬೇಕು, ಯಾವ ನೀತಿಯನ್ನು ಪಾಲಿಸಬೇಕು ಎಂಬ ಬಗ್ಗೆ ಒಂದೆರಡು ಮಾತುಗಳನ್ನು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಅಧ್ಯಕ್ಷರೇ ನಾಗರೀಕತೆಯು ಮುಂದುವರಿಯದಿದ್ದಾಗ ತೆರಿಗೆ ಹಾಕಬೇಕಾದರೆ ಸರ್ಕಾರದ ಖರ್ಚಿಗೆ ಹಣವನ್ನು ಒದಗಿಸುವುದನ್ನೇ ಮುಖ್ಯ ಗುರಿಯಾಗಿಟ್ಟುಕೊಂಡು ತೆರಿಗೆ ವಿಧಿಸುತ್ತಿದ್ದರು. ಈಚೆಗೆ ನಾಗರೀಕತೆಯು ಬೆಳೆದ ಹಾಗೆ ತೆರಿಗೆಯನ್ನು ವಿಧಿಸುವಾಗ ಅನುಸರಿಸುವ ತತ್ವವು ಮೂಲಭೂತವಾದ ಬದಲಾವಣೆಯನ್ನು ಹೊಂದುತ್ತಾ ಬಂದಿದೆ. ಈ ತತ್ವ ಬೆಳವಣಿಗೆಯಿಂದ ಸರ್ಕಾರದ ಖರ್ಚಿಗೆ ಹುಟ್ಟುವಳಿ ಮಾಡುವುದಕ್ಕೇ ಅಲ್ಲದೆ ದೇಶದ ಪ್ರಜೆಗಳು ದುಡಿದು ಉತ್ಪತ್ತಿ ಮಾಡುವ ಸಂಪತ್ತನ್ನು ಸರಿಯಾದ ರೀತಿಯಲ್ಲಿ ಹಂಚುವುದಕ್ಕೆ ಕೂಡ ತೆರಿಗೆ ಹಾಕುವುದು ಮುಖ್ಯಸಾಧನ ಎಂಬ ತತ್ವವನ್ನು ಎಲ್ಲಾ ಪ್ರಗತಿ ಹೊಂದಿರುವ ರಾಷ್ಟ್ರಗಳೂ ಒಪ್ಪಿ ಅನುಷ್ಠಾನಕ್ಕೆ ತಂದಿವೆ. ಅಂದ ಮೇಲೆ ತೆರಿಗೆ ಹಾಕುವುದರಲ್ಲಿ ಕೇವಲ ಸರ್ಕಾರದ ಖರ್ಚಿಗೆ ಹಣ ಒದಗಿಸುವುದೇ ಮುಖ್ಯಗುರಿಯಾಗಿರಬಾರದು. ದೇಶದ ಸಂಪತ್ತನ್ನು ಸಂಬಂಧಪಟ್ಟ ದೇಶದ ಎಲ್ಲಾ ಪ್ರಜೆಗಳಲ್ಲಿಯೂ ಸರಿಯಾಗಿ ಹಂಚಲು ಪ್ರಗತಿಪರ ತೆರಿಗೆಗಳನ್ನು ವಿಧಿಸಬೇಕು. ಹಾಗೆ ತೆರಿಗೆ ವಿಧಿಸುವಾಗ ಆಯಾ ಮನುಷ್ಯನ ಆರ್ಥಿಕ ಶಕ್ತ್ಯಾನುಸಾರವಾಗಿ ತೆರಿಗೆ ಹಾಕಬೇಕೆಂಬ ತತ್ವವನ್ನೂ ಪ್ರಜಾಸತ್ತಾತ್ಮಕ ಪದ್ಧತಿಯನ್ನನುಸರಿಸಿರುವ ಎಲ್ಲಾ ದೇಶಗಳೂ ಇಂದು ಅನುಸರಿಸಿಕೊಂಡು ಬರುತ್ತಿವೆ. ಈ ದೃಷ್ಟಿಯಿಂದ ನಮ್ಮ ಮಾನ್ಯ ಆರ್ಥಿಕ ಸಚಿವರು ಮಂಡಿಸಿರುವ ಈ ಆಯವ್ಯಯ ಪಟ್ಟಿಯನ್ನು ವಿಮರ್ಶಿಸಿದರೆ—ಕೇವಲವಿಹಂಗಮ ದೃಷ್ಟಿಯಿಂದಲೇ ನೋಡಿದರೆ ಸಾಕು, ತತ್ವಕ್ಕೆ ಅಷ್ಟಾಗಿ ಮನ್ನಣೆ ದೊರೆತಿಲ್ಲ ಎಂದು ಹೇಳಲು ತುಂಬಾ ವಿಷಾದವಾಗುತ್ತದೆ. ಏಕೆಂದರೆ, ಬಡ್ಜೆಟ್ಟನ್ನು ನೋಡಿದರೆ ಅಹರ್ನಿಶೆ ದುಡಿಯುವ ಸಾಮಾನ್ಯ ಜನರು ನಮ್ಮ ದೇಶದಲ್ಲಿ ಶೇಕಡಾ 80 ಜನರ ಮೇಲೆ ಇದ್ದಾರೆ. ಅವರ ಮೇಲೆ ಎಷ್ಟು ತೆರಿಗೆ ಭಾರಹೊರಿಸಬಹುದೋ ಅದಕ್ಕಿಂತ ಹೆಚ್ಚು ಭಾರ ಹೊರಿಸಿದೆ, ಧನಿಕರ ಮತ್ತು ಶ್ರೀಮಂತರ ಮೇಲೆ ಅವರು ಹೊರಬಹುದಾದ ಭಾರಕ್ಕಿಂತ ಬಹಳ ಕಡಿಮೆ ಹೊರೆ ಹೊರಿಸಲ್ಪಟ್ಟಿದೆ ಎಂದು ಧಾರಾಳವಾಗಿ ಗೊತ್ತಾಗುತ್ತದೆ. ಅಲ್ಲದೆ ಹೀಗೆ ತೆರಿಗೆಯಿಂದ ವಸೂಲಾದ ಹಣದ ಬಹುಭಾಗ ಅಹರ್ನಿಶೆ ಕಷ್ಟಪಟ್ಟು ದುಡಿಯುವ ಸಾಮಾನ್ಯರಿಗೆ ವಿನಿಯೋಗವಾಗುವುದಕ್ಕಿಂತ ಹೆಚ್ಚಾಗಿ ಧನಿಕರಿಗೇ ವ್ಯಯವಾಗುತ್ತಿದೆ. ಏಕೆಂದರೆ ಈಗ ದೇಶದಲ್ಲಿ ಜನರಿಗೆ ಒದಗಬಹುದಾದ ಆಧುನಿಕ ರೀತಿಯ ವಿದ್ಯಾಭ್ಯಾಸ ಸೌಲಭ್ಯಗಳು, ಆಧುನಿಕ ರೀತಿಯ ವೈದ್ಯಕೀಯ ಸಹಾಯ ಇವೇ ಮೊದಲಾದ ಅನುಕೂಲಗಳು ಶ್ರೀಮಂತರಿಗೆ, ಮುಂದುವರೆದಿರುವವ

(ಶ್ರೀ ಕೆ. ವಿ. ಶಂಕರಗೌಡರು).

ರಿಗೆ ಎಷ್ಟರ ಮಟ್ಟಿಗೆ ದೊರಕಬಹುದೋ ಅಷ್ಟು ಮಟ್ಟಿಗೆ ಸಾಧಾರಣ ಪ್ರಜೆಗಳಿಗೆ ದೊರಕುತ್ತಿಲ್ಲ. ಹೀಗೆ ಬಡವರ ಮೇಲೆ, ಒಂದೊಂದು ದಿವಸಕ್ಕೆ ಎಷ್ಟು ಬೇಕೋ ಅಷ್ಟೇ ಸಂಪಾದನೆ ಮಾಡಿ ಜೀವಿಸುವವರ ಮೇಲೆ ಅಗಾಧ ತೆರಿಗೆಯ ಹೊರೆ ಬಿದ್ದಿರುವಾಗ ಶ್ರೀಮಂತರ ಮೇಲೆ ಕೇವಲ ಕಡಿಮೆ ಭಾರ ಬಿದ್ದಿದೆ ಎಂದು ಈ ಆಯವ್ಯಯ ಪಟ್ಟಿಯಿಂದ ವ್ಯಕ್ತವಾಗುತ್ತದೆ. ಈ ರೀತಿಯಾದ ಪಕ್ಷಪಾತದ ಪರಿಣಾಮವೇನಾಗುತ್ತದೆ ಎಂಬುದನ್ನು ಹೆಚ್ಚಾಗಿ ತಿಳಿದಿರುವ ಮಾನ್ಯ ಅರ್ಥ ಸಚಿವರಿಗೆ ಹೇಳಬೇಕಾಗಿಲ್ಲ. ಕಾಲ ಧರ್ಮವನ್ನನುಸರಿಸಿ ನಡೆಯಬೇಕಾದ್ದು ಸರ್ಕಾರದ ಧರ್ಮ ಮತ್ತು ಕರ್ತವ್ಯ. ದೇಶದಲ್ಲಿರುವ ಸಂಪತ್ತು ಕೆಲವು ಕಡೆ ಕೇಂದ್ರೀಕೃತವಾಗಿದ್ದ ಮಾತ್ರಕ್ಕೆ ಯಾರಾದರೂ ಧನಿಕರು, ತಾವು ಅದು ದುಡಿದು ಸಂಪಾದನೆ ಮಾಡಿದ್ದೆಂದು ತಿಳಿದು ಕೊಂಡಿದ್ದರೆ ಅದು ತಿಳಿಗೇಡಿತನವೆಂದು ಹೇಳದೇ ವಿಧಿ ಇಲ್ಲ. ದೇಶದ ಸಂಪತ್ತು ಎಲ್ಲಾ ಪ್ರಜೆಗಳೂ ಸೇರಿ ದುಡಿದುದರ ಫಲವಾಗಿ ಉತ್ಪತ್ತಿಯಾದದ್ದು. ಅದು ಕೆಲವರಲ್ಲಿ ಅವರ ಚಾಕಚಕ್ಯತೆಯಿಂದಲೋ ಅಥವಾ ಅದೃಷ್ಟಬಲದಿಂದಲೋ ಅಥವಾ ಆಕಸ್ಮಾತ್ತಾಗಿಯೋ ಕೇಂದ್ರೀಕೃತವಾಗುವುದುಂಟು. ಸೇರಿರುವ ಹಣವನ್ನು ಸರ್ಕಾರಕ್ಕೆ ಬರಮಾಡಿಕೊಳ್ಳಲು ತಕ್ಕ ಕಾರ್ಯಕ್ರಮವನ್ನು ಕೈಗೊಂಡು ಆ ಮೂಲಕ ಎಲ್ಲಾ ಪ್ರಜೆಗಳ ಏಳಿಗೆಗೂ ವಿನಿಯೋಗಿಸುವ ಪ್ರಗತಿಪರ ವ್ಯವಸ್ಥೆ ಮಾಡಬೇಕಾದ್ದು ಸರ್ಕಾರ್ತದ ಮುಖ್ಯ ಕರ್ತವ್ಯ.

ಹಾಗೆ ಮಾಡದೇ ಬಿಟ್ಟರೆ ಏನು ಪರಿಣಾಮವಾಗುತ್ತದೆ ಎಂಬುದನ್ನು ಮಾನ್ಯ ಅರ್ಥ ಸಚಿವರಿಗೆ ಹೇಳಬೇಕಾದ್ದಿಲ್ಲ, ದೇಶದ ಪ್ರತಿಯೊಬ್ಬ ಪ್ರಜೆ ಸುಖ ಸಂತೋಷದಿಂದ ಇರಬೇಕೆಂದು ಆಶಿಸುತ್ತಾನೆ. ಅಲ್ಲದೆ ಕಾಲ ಧರ್ಮ ಹೇಗಿದೆ ಎಂಬುದು ಸರ್ಕಾರದ ಗಮನದಲ್ಲಿದೆ. ಈ ಪ್ರಜಾಸತ್ತಾತ್ಮಕ ರಾಜ್ಯಾಡಳಿತದಲ್ಲಿ ಪ್ರತಿಯೊಬ್ಬರಿಗೂ ಆರ್ಥಿಕ ಸ್ವಾತಂತ್ರ್ಯ ಮತ್ತು ಆರ್ಥಿಕ ಸಮಾನತೆ ಇರಬೇಕು ಎಂದು ಹೇಳುತ್ತೇವೆ ಮತ್ತು ಆ ತತ್ವವನ್ನು ಒಪ್ಪಿಕೊಂಡಿದ್ದೇವೆ. ಆ ರೀತಿ ಆಗದಿದ್ದ ಪಕ್ಷದಲ್ಲಿ ಸಮಾಜದಲ್ಲಿ ಜನರ ಆರ್ಥಿಕ ಸ್ಥಿತಿಗಳಿಗನುಸಾರವಾಗಿ ಪಂಗಡಗಳು ಹುಟ್ಟುತ್ತವೆ. ಅದರಿಂದಾಗಬಹುದಾದ ಪರಿಣಾಮವೇನು ಎಂಬುದನ್ನು ಊಹಿಸುವುದು ಕಷ್ಟವಲ್ಲ. ಸಮಾಜದಲ್ಲಿ ಸುಭದ್ರತೆಯಿಲ್ಲದಿದ್ದರೆ ಜನ ಜೀವನದ ಪರಿಸ್ಥಿತಿ ಏನಾಗಬಹುದು? ದೇಶದ ಕಲ್ಯಾಣ ಶಾಂತಿ ಇವುಗಳ ಗತಿ ಏನಾಗಬಹುದು! ಈ ಎಲ್ಲಾ ವಿಷಯಗಳನ್ನೂ ದೀರ್ಘವಾಗಿ ಯೋಚಿಸಿ, ದೇಶದ ಹಿತ ದೃಷ್ಟಿಯಿಂದ ತೆರಿಗೆ ಹಾಕುವುದರಲ್ಲಿ ಪ್ರಗತಿಪರ ನಿಯಮಗಳನ್ನನುಸರಿಸಬೇಕೆಂದು ವಿನಯಪೂರ್ವಕವಾಗಿ ಸರ್ಕಾರದವರಿಗೆ ಬಿನ್ನೈಸಿಕೊಳ್ಳಲಿಚ್ಛಿಸುತ್ತೇನೆ. ಈ ಆಯವ್ಯಯ ಪಟ್ಟಿಯನ್ನು ನೋಡಿದರೆ ಬಡವರಿಗೂ ಬಲ್ಲಿದರಿಗೂ ಇರುವ ತೀವ್ರ ಅಸಮಾನತೆಯನ್ನು ತೋರಿಸುವುದಕ್ಕೆ, ಸರ್ಕಾರದ ಪಕ್ಷಪಾತ ನೀತಿಯನ್ನು ತೋರಿಸುವುದಕ್ಕೆ ಒಂದೇ ಒಂದು ನಿದರ್ಶನಸಾಕು. ಅಂದರೆ ಸರ್ಕಾರದವರ ಗುರಿ ಆ ರೀತಿಯಾದ ಪಕ್ಷ ಪಾತ ತೋರಿಸುವುದಲ್ಲದೇ ಇರಬಹುದು. ಅನೂಚಾನವಾದ ಪದ್ಧತಿಯನ್ನೇ ಅನುಸರಿಸಿ ಈ ಆಯವ್ಯಯ ಪಟ್ಟಿಯನ್ನು ತಯಾರು ಮಾಡಿರುವುದರಿಂದ ಆ ನ್ಯೂನತೆಯನ್ನು ಹೋಗಲಾಡಿಸದೇ ಇರಬಹುದು. ಸಂಬಳಸಾರಿಗೆಯ ಹಂಚಿಕೆಯ ವಿಚಾರದಲ್ಲಿ ಈ ಬಡ್ಜೆಟ್ ಸ್ಥೂಲವಾಗಿ ನೋಡಿದರೆ ಸರ್ಕಾರ ಕೊಡುತ್ತಿರುವ ಸಂಬಳ ಒಂದು ಕಡೆ 2,900 ರಿಂದ ಪಾರಂಭವಾಗಿ ಮತ್ತೊಂದು ಕಡೆ 15 ರೂಪಾಯಿಗೆ ನಿಲ್ಲುತ್ತದೆಯೆಂಬುದು ಗೊತ್ತಾಗುತ್ತದೆ. ಬೆಂಗಳೂರಿನಲ್ಲಿರತಕ್ಕ ಒಬ್ಬ ಸರ್ಕಾರಿ ನೌಕರನಿಗೆ 15 ರೂಪಾಯಿ ಸಂಬಳ, 18 ರೂಪಾಯಿ ತುಟ್ಟಿಭತ್ಯ, ಒಟ್ಟು 33 ರೂಪಾಯಿ ಕೊಟ್ಟು ಸ್ವಚ್ಛಂದ ಜೀವನ, ನಿರ್ಮಲ ಜೀವನ ನಡೆಸಬೇಕೆಂದು ವೇದಾಂತ ಹೇಳಿದರೆ ಎಷ್ಟರ ಮಟ್ಟಿಗೆ ಸಾಧ್ಯ ಎಂಬುದು ಮಾನವೀಯತೆಯ ದೃಷ್ಟಿಯಿಂದ ವಿವೇಚನೆ ಮಾಡತಕ್ಕ ಪ್ರಶ್ನೆ. ಇದಕ್ಕೆ ಅರ್ಥ ಸಚಿವರು ಏನು ಉತ್ತರ ಕೊಡುತ್ತಾರೆ ಎಂಬುದು ಗೊತ್ತೇ ಇದೆ. 50 ರೂಪಾಯಿ ಕನಿಷ್ಠ ಸಂಬಳ ಮಾಡಬೇಕೆಂದರೆ ಖರ್ಚೆಷ್ಟಾಗುತ್ತದೆ ಮತ್ತು ಹೆಚ್ಚು ಸಂಬಳ ಬರುವವರಿಗೆ ಕಡಿಮೆ ಮಾಡಿದರೆ ಎಷ್ಟು ಉಳಿತಾಯವಾಗುತ್ತದೆ ಎಂದು ಕೇಳಬಹುದು. ನಾನಾದರೂ ತತ್ವದೃಷ್ಟಿಯಿಂದ ಹೇಳುತ್ತೇನೆ. ಆರ್ಥಿಕ ಸ್ಥಿತಿ ಬಹಳ ಹೀನ ಸ್ಥಿತಿಯಲ್ಲಿರತಕ್ಕ ನಮ್ಮ ದೇಶದಲ್ಲಿ ಒಂದು ತತ್ವವನ್ನು ಅನುಸರಿಸಿ ಅದರಿಂದ ಜನಗಳಿಗೆ ಆರ್ಥಿಕ ಸಮಾನತೆಯ ವಿಷಯವಾಗಿ ನಂಬಿಕೆ ಬರುವಂತೆ ಮಾಡಬೇಕು. ಹೆಚ್ಚು ಸಂಬಳ ಇರುವವರಿಗೆ ಕಡಿಮೆ ಸಂಬಳ ಮಾಡಿದರೆ ಹೆಚ್ಚು ಉಳಿತಾಯವಾಗದೇ ಇರಬಹುದು. ಆದರೆ ತತ್ವಕ್ಕೆ ಬೆಲೆಕೊಟ್ಟಹಾಗಾಗುತ್ತದೆ. ಕೆಳಗಿರುವವರನ್ನು ಆರ್ಥಿಕವಾಗಿ ಉತ್ತಮಪಡಿಸಿದರೆ ಅವರಿಗೂ ಒಂದು ಸಂತೋಷವಾಗಿ ಶ್ರದ್ಧೆಯಿಂದ ದುಡಿಯುತ್ತಾರೆ. ಇದರಲ್ಲಿ ಉಳಿಯುತಕ್ಕ ದುಡ್ಡು ಪ್ರಾಮುಖ್ಯವಲ್ಲ. ತತ್ವಕ್ಕೆ ಪ್ರಾಮುಖ್ಯತೆ ಬರುತ್ತದೆ. ಆ ದೃಷ್ಟಿಯಿಂದ ನಮ್ಮ ದೇಶದ ಆರ್ಥಿಕ ಸ್ಥಿತಿಗನುಸಾರವಾಗಿ ಸಾಧಾರಣ ಸುಖ ಜೀವನ ನಡೆಸುವುದಕ್ಕೆ ಏನು ಸಂಬಳವಿರಬೇಕು ಎಂಬುದನ್ನು ಪರ್ಯಾಲೋಚಿಸಿ ಇಷ್ಟೇ ಕೊಡಬೇಕು, ಹೆಚ್ಚಾಗಿ ಕೊಟ್ಟರೆ ನಿಜವಾಗಿಯೂ ಸರ್ಕಾರದವರು ದಾಕ್ಷಿಣ್ಯ ಮತ್ತು ಪಕ್ಷಪಾತ ದೃಷ್ಟಿಯಿಂದ ಮಾಡುತ್ತಾರೆಯೇ ಹೊರತು ತತ್ವದೃಷ್ಟಿಯಿಂದ ಮಾಡುತ್ತಾರೆಂದೂ ಹೇಳುವುದಕ್ಕಾಗುವುದಿಲ್ಲ. ಆದ್ದರಿಂದ ಪರಮಾವಧಿ ಸಂಬಳ ಇಷ್ಟಿರಬೇಕೆಂಬುದನ್ನು ತೀರ್ಮಾನ ಮಾಡಿ ಆದರಂತೆ ನಡೆಯಬೇಕು. ತೀರ ಕಡಿಮೆ ಸಂಬಳವಿರುವವರಿಗೆ ಶೀಘ್ರವಾಗಿ ಹೆಚ್ಚು ಸಂಬಳ ಕೊಡುವಂತೆ ಏರ್ಪಡಿಸುವುದು ಸರ್ಕಾರದವರ ಮುಖ್ಯ ಕರ್ತವ್ಯವೆಂದು ಅಭಿಪ್ರಾಯಪಡುತ್ತೇನೆ. ಇದಕ್ಕೆ ದುಡ್ಡು ಎಲ್ಲಿಂದ ಬರುತ್ತದೆ ಎಂದು ಕೇಳುವುದಾದರೆ ನಾನು ಮೊದಲೇ ಹೇಳಿದಂತೆ ಪ್ರಗತಿಪರವಾದ ತೆರಿಗೆ ಹಾಕಿದ್ದ ಪಕ್ಷದಲ್ಲಿ ಅದು ಸಾಧ್ಯವಾಗುತ್ತಿತ್ತು. ಅಲ್ಲದೆ ಸಂಪೂರ್ಣಪಾನ ನಿರೋಧ ಮಾಡಿದರೆ ಅದರಿಂದ ಬರುವ ಉತ್ಪತ್ತಿ ಹೋಗುತ್ತದೆಂದು ಹೆದರಿ ಅದನ್ನು ಜಾರಿಗೆ ತರದೆ ಇರುವುದರ ಪರಿಣಾಮವಾಗಿ ಇಂದು ಸಾವಿರಾರು ಸಂಸಾರಗಳಲ್ಲಿ ಸ್ತ್ರೀಯರು ಮಕ್ಕಳು ಕಣ್ಣೀರಿನಲ್ಲಿ ಕೈ ತೊಳೆಯುತ್ತಿರುವ ಭೀಕರ ದೃಶ್ಯವನ್ನು ಅಲ್ಲಲ್ಲಿ ನೋಡಬಹುದಾಗಿದೆ. ಪಾನ ನಿರೋಧವನ್ನು ಪೂರ್ಣವಾಗಿ ಜಾರಿಗೆ ತಂದಿದ್ದರೆ ಇದನ್ನು ನೋಡಬೇಕಾದ ದೌರ್ಭಾಗ್ಯವಿರುತ್ತಿರಲಿಲ್ಲ. ದೇಶದಲ್ಲಿ ಸರಿಯಾದ ಆರ್ಥಿಕ ವ್ಯವಸ್ಥೆ ಶೀಘ್ರವಾಗಿ ಆಗದಿದ್ದರೆ ಕಾಲಾನುಕಾಲಕ್ಕೆ ಜನರು ಶಾಂತಿಯಿಂದ, ಸುಖದಿಂದ, ನೆಮ್ಮದಿಯಿಂದ ಇರುವುದಕ್ಕೆ ಅವಕಾಶವಾಗುವುದಿಲ್ಲ. ಆದ್ದರಿಂದ ಅರ್ಥ ಸಚಿವರು ಮುಖ್ಯವಾಗಿ ಈ ತತ್ವಗಳಿಗೆ ಮಾನ್ಯತೆ ಕೊಟ್ಟು ಆ ತತ್ವಗಳಿಗನುಸಾರವಾಗಿ ರಾಷ್ಟ್ರನಿರ್ಮಾಣ ಕಾರ್ಯಗಳಲ್ಲಿ ಸರಿಯಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತಾರೆಂದು ನಂಬಿದ್ದೇನೆ.

ಇನ್ನು ಸರ್ಕಾರದ ನಾನಾ ಇಲಾಖೆಗಳ ಮತ್ತು ಬಾಬುಗಳ ವೆಚ್ಚದ ವಿಷಯ. ಈ ವಿಷಯದಲ್ಲಿ ಮಾತನಾಡುವಾಗ ಹೆಚ್ಚಿಗೆ ವಿವರಗಳಿಗೆ ನಾನು ಕೈ ಹಚ್ಚುವುದಿಲ್ಲ. ಏಕೆಂದರೆ ಬೇಡಿಕೆಗಳನ್ನು ಮಂಡಿಸುವಾಗ

ಧೈರ್ಯ ಬಂದರೆ, ಅವಕಾಶ ಸಿಕ್ಕಿದರೆ, ಅವುಗಳಮೇಲೆ ಮಾತನಾಡುತ್ತೇನೆ. ಈಗ ತತ್ವದ ವಿಚಾರವಾಗಿ ಎರಡು ಮಾತುಗಳನ್ನು ಹೇಳುತ್ತೇನೆ. ಸಂಸಾರದ ವೆಚ್ಚದ ಬಾಬನ್ನು ತೆಗೆದುಕೊಂಡರೆ, ಆದಕ್ಕೆ ಬರತಕ್ಕ ಆದಾಯ ಎಷ್ಟೆಂಬುದು ಗೊತ್ತಿರುತ್ತದೆ. ಅದಕ್ಕೆ ತಕ್ಕಂತೆ ಮನುಷ್ಯನು ತನ್ನ ಖರ್ಚನ್ನು ಅಳವಡಿಸಿಕೊಳ್ಳುತ್ತಾನೆ. ಆದರೆ ಸರ್ಕಾರದಲ್ಲಿ ಹಾಗಲ್ಲ. ಖರ್ಚು ಮೊದಲೇ ನಿರ್ಧರವಾಗಿ ಗೊತ್ತಾಗಿರುತ್ತದೆ. ಅದಕ್ಕೆ ಬೇಕಾಗುವಷ್ಟು ಹಣವನ್ನು ಸರ್ಕಾರಿ ತೆರಿಗೆಗಳ ಮೂಲಕ ಒದಗಿಸಬೇಕಾಗುತ್ತದೆ. ಈ ದೃಷ್ಟಿಯಿಂದ ಇದು ಬಹಳ ಮುಖ್ಯವಾದದ್ದು. ಅಂದ ಮೇಲೆ ಖರ್ಚನ್ನು ಎಷ್ಟು ಮಟ್ಟಿಗೆ ಹತೋಟಿಯಲ್ಲಿಟ್ಟುಕೊಂಡಿರಬಹುದೋ ಅಷ್ಟು ಮಟ್ಟಿಗೆ ಇಟ್ಟುಕೊಳ್ಳಬೇಕಾದ್ದು ಸರ್ಕಾರದ ಮುಖ್ಯ ಕರ್ತವ್ಯ. ಇಲ್ಲದಿದ್ದರೆ ಪ್ರಜೆಗಳಿಗೆ ತೆರಿಗೆ ಕೊಡಲು ಶಕ್ತಿ ಇಲ್ಲದಿದ್ದರೂ ಸರ್ಕಾರವು ತೆರಿಗೆಗಳನ್ನು ವಿಧಾಯಕ ಮಾಡಬೇಕಾಗುತ್ತದೆ. ಇದರಿಂದ ಪ್ರಜೆಗಳಿಗೆ ಕಿರುಕುಳ ಉಂಟಾಗುತ್ತದೆ. ಇದನ್ನು ಬಹಳ ಎಚ್ಚರಿಕೆಯಿಂದ ಪರಿಶೀಲಿಸಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ನನಗೆ ತಿಳಿದಿದ್ದನ್ನು ಹೇಳುವುದಾದರೆ—ನಾನೇನೂ ಆಡಳಿತದಲ್ಲಿ ಪರಿಶ್ರಮ ಹೊಂದಿದವನಲ್ಲ ಆದರೂ—ಕೆಲವು ಬಾಬುಗಳಿಗೆ ವಿಶೇಷವಾಗಿ ಹಣ ಖರ್ಚಾಗುತ್ತಾ ಇರಬಹುದೆಂಬ ಒಂದು ಶಂಕೆ ಇದೆ. ಈ ಬಗ್ಗೆ ಶ್ರೀ ರಾಘವೇಂದ್ರರಾಯರವರು ಒಂದು ವರದಿಯನ್ನು ಕೊಟ್ಟಿದ್ದಾರೆ; ಮತ್ತೆ ಇನ್ನೂ ಏನೇನು ಸೂಕ್ತ ಸಾಧನಗಳಿವೆ ಎಂಬುದನ್ನೆಲ್ಲಾ ಪರಿಶೀಲಿಸಿ ಆದಷ್ಟು ಖರ್ಚು ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಕೋರುತ್ತೇನೆ.

ಇನ್ನು ಇಷ್ಟೊಂದು ಹಣ ಖರ್ಚುಮಾಡಿ ಸರ್ಕಾರ ಸಾಧಿಸಬೇಕಾಗಿರುವ ಅವಶ್ಯಕತೆಗಳ ಪೂರೈಕೆ ಎಷ್ಟರ ಮಟ್ಟಿಗೆ ಆಗಿದೆ ಎಂಬುದು ನಿಜವಾಗಿ ಹೇಳುವುದಾದರೆ ಬೇಕಾದಷ್ಟು ಖರ್ಚು ಆಗುತ್ತಿದೆ. ಆದರೆ ಆ ಅವಶ್ಯಕತೆಗಳನ್ನು ಎಷ್ಟರಮಟ್ಟಿಗೆ ಪೂರೈಸಬೇಕೆಂದು ಸರ್ಕಾರದ ಮನಸ್ಸಿದೆಯೋ ಅಷ್ಟು ಮಟ್ಟಿನ ಫಲ ಪ್ರಜೆಗಳಿಗೆ ಲಭಿಸಿಲ್ಲವೆಂದು ಮಾತ್ರ ಹೇಳಬಲ್ಲೆ. ಇದಕ್ಕೆ ಸರ್ಕಾರದ ಮಂತ್ರಿಗಳೇ ಕಾರಣ ಎಂದು ಹೇಳುವಷ್ಟು ಧೈರ್ಯ ನನಗಿಲ್ಲ. ಏಕೆಂದರೆ ಸರ್ಕಾರ ಸದುದ್ದೇಶದಿಂದ ಎಷ್ಟೋ ಬಾಬುಗಳಿಗೆ ಯಥೇಚ್ಛವಾಗಿ \ ಹಣ ಒದಗಿಸುತ್ತಿದ್ದರೂ ಅದೆಲ್ಲಾ ಸದ್ವಿನಿಯೋಗವಾಗುವುದು. ಸರ್ಕಾರಿ ನೌಕರರ ಮತ್ತು ಪ್ರಜೆಗಳ ನೈತಿಕ ಮಟ್ಟವನ್ನನುಸರಿಸುವ ವಿಷಯ ಅಧಿಕಾರಿಗಳದಲ್ಲ, ಖಾಸಗಿಯವರದಲ್ಲ ಮತ್ತು ಪ್ರಜೆಗಳದಲ್ಲ, ಎಲ್ಲಾ ಅಧಿಕಾರಿಗಳ ಮತ್ತು ಎಲ್ಲಾ ಪ್ರಜೆಗಳಮೇಲೆ ಬದ್ಧಿರತಕ್ಕದ್ದು ಎಂದು ಹೇಳುವುದಕ್ಕಾಗುವುದಿಲ್ಲ. ಅಧಿಕಾರಿಗಳಲ್ಲಿ ಕೆಲವು ಮಂದಿ, ಮತ್ತೆ ಪ್ರಜೆಗಳಲ್ಲಿ ಕೆಲವು ಮಂದಿ ನೀತಿಯನ್ನು ಬಿಟ್ಟಿದ್ದಾರೆ. ಇಂದು ನೀತಿ ಎನ್ನುವುದಕ್ಕೆ ಬೆಲೆ ಇಲ್ಲದೆ ಬರೀ ಬಾಹ್ಯಾಡಂಬರದ ಮಾತಾಗಿ ಪರಿಣಮಿಸಿದೆ. ಇದರ ದೆಸೆಯಿಂದ ಸರ್ಕಾರಕ್ಕೆ ವಿಶೇಷವಾಗಿ ಹಣ ಖರ್ಚಾದರೂ ಅದು ಸದ್ವಿನಿಯೋಗವಾಗಿ ಪ್ರಜೆಗಳಿಗೆ ಎಷ್ಟು ಅನುಕೂಲತೆಗಳನ್ನು ಕಲ್ಪಿಸಬಹುದೋ ಅಷ್ಟು ಅನುಕೂಲತೆಗಳು ಆಗುತ್ತಾ ಇಲ್ಲ. ಇದಕ್ಕೆ ಮಾನ್ಯ ಮಂತ್ರಿಗಳೇ ಸಂಪೂರ್ಣ ಜವಾಬ್ದಾರರಲ್ಲವೆಂದು ಹೇಳಿದರೆ ಮಂತ್ರಿಗಳು ನಮ್ಮದೆಲ್ಲಾ ಸರಿ ಎಂದು ಸುಮ್ಮನಿರಬೇಕೆಂದಲ್ಲ. ಇದರಲ್ಲಿ ಮಂತ್ರಿಗಳ ಜವಾಬ್ದಾರಿ ಬಹಳ ಇದೆ. ಅವರು ಈ ಜವಾಬ್ದಾರಿಯನ್ನು ಹೊರುವುದರಲ್ಲಿ ಇನ್ನೂ ಹೆಚ್ಚಿನ ಧೈರ್ಯ ಮತ್ತು ಶ್ರದ್ಧೆ ವಹಿಸಬೇಕು. ದಯಾ, ದಾಕ್ಷಿಣ್ಯ ಇವುಗಳನ್ನೆಲ್ಲಾ ಸ್ವಲ್ಪ ಬದಿಗಿಡಬೇಕಾಗುತ್ತದೆ. ಸ್ವಂತ ಮಗನಾಗಲೀ, ತಮ್ಮನಾಗಲೀ ಅಥವಾ ಯಾವ ವಿಧವಾದ ಹತ್ತಿರದ ಸಂಬಂಧಿಯೇ ಆಗಲೀ, ತಪ್ಪು ಮಾಡಿದವನನ್ನು ನ್ಯಾಯಸಮ್ಮತ ರೀತಿಯಲ್ಲಿ ಕಾಣಬೇಕು. ಏಕೆಂದರೆ, ವ್ಯಕ್ತಿ ಮುಖ್ಯವಲ್ಲ, ದೇಶ ಮುಖ್ಯ. ಆದುದರಿಂದ ನಾವು ದೇಶೋದ್ಧಾರಕ್ಕಾಗಿ ಕೆಲಸ ಮಾಡತಕ್ಕವರು, ವ್ಯಕ್ತಿಗಳು ಮುಖ್ಯವಲ್ಲ ಎಂಬ ಸತ್ಯಪಥವನ್ನು ಹಿಡಿದು ಕೆಲಸ ಮಾಡಿದರೆ ಈಗ ಏನು ಅವ್ಯವಸ್ಥೆ ಇದೆಯೋ ಅದನ್ನು ಬಹುಮಟ್ಟಿಗೆ ತಡೆಯುವುದಕ್ಕಾಗುತ್ತದೆ. ಒಂದೇ ಮಾತಿನಲ್ಲಿ ಹೇಳುವುದಾದರೆ ಮಂತ್ರಿಗಳು ನಿರ್ಭಯದಿಂದ ಕೆಲಸ ಮಾಡುವ ಸಂಕಲ್ಪವನ್ನು ಮಾಡಿದ್ದೇ ಆದರೆ ಈಗ ಕಾಣುತ್ತಿರುವ ಅನೀತಿಯನ್ನು ಬಹುಮಟ್ಟಿಗೆ ತಡೆಗಟ್ಟಬಹುದೆಂದು ಧೈರ್ಯವಾಗಿ ಹೇಳುತ್ತೇನೆ. ಇಷ್ಟು ವಿಷಯಗಳನ್ನು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

Janab MAHMOOD SHARIFF (Mysore *cum* Mandya *cum* Hassan—Muslim).—Mr. Speaker, Sir, at last the Budget figures which were so anxiously awaited have been made available to us for scrutiny. Although these Budget figures were kept a close secret till the last moment, some of us expected that this year's Budget would be a deficit one. With some of the revenue-yielding departments having passed to the Centre it was expected that the gap between the revenue and the expenditure would be a wide one necessitating the imposition of taxation on several articles. But then, as the Memorandum bearing on the Budget discloses, things have been rather carefully managed and the deficit amount stands only at Rs. 37 lakhs which, regard being had to various demands on the public exchequer, is not much.

The Hon'ble Finance Minister has made a rapid survey of the developments in the several departments and of the programme and the policy which they want to pursue in the coming year. In spite of the progress maintained by the members of the Government and their keenness to see that they would shoulder the responsibilities in a better manner, there are no two opinions that so far as the common man is concerned, he is thoroughly dissatisfied. The chief grouse entertained by him is shortage of food and clothing and his anxiety to keep the hungry wolf away from his door. So much has been said about it and so much is perhaps going to be said that it is unnecessary for me to labour the point but I cannot refrain from

(JANAB MAHMOOD SHARIFF)

sounding a note of warning that they will have to employ more vision and follow a determined and forceful policy. Already we have been hearing so much about some untoward incidents in the border area which should be nipped in the bud.

So far as the shortage of food is concerned I have considered the whole aspect of the question rather seriously and I feel that as Mysore State is abounding in natural resources we should therefore face such a situation. It is known by all that large stocks have gone underground. This will have to be brought to the surface. The Government of the day should see that by all means this has to be done and no consideration as to whether a person belongs to this party or that party, or whether he is going to help them in the coming elections, and such other considerations should prevail at all. The only consideration that should prevail is the conception of the sacredness attached to the high office of the Ministry. If these considerations are not going to be applied and if the stocks that have gone underground are not brought to the surface, I think, the situation due to food shortage about which we are so anxious would deteriorate.

The gap which is just now referred to between the revenue and the expenditure is proposed to be made up by imposition of tax. Taxation, Sir, has got a very bad odour about it. The common man feels that he is already overburdened and that no additional burden can be borne by him. In spite of it, I welcome and commend to my brother legislator, the imposition of the tax for the health services. When I was in office and I was called upon to supervise the activities of Medical and Public Health Department, I had very stoutly fought for the imposition of this tax. I did so because the affairs of this most important department should be managed better. I regard the Health Department as a most important department, because I regard health as the greatest national asset. Without a happy physical outfit, it is not possible for one to enjoy whatever improvements are made in other fields of activities. Whatever improvements are made in the other departments will not be of any avail without health. Already the operations which are being conducted in order to bring down the incidence of malaria, plague and cholera are working very satisfactorily. Already there is a general satisfaction expressed by people living in Malnad areas. Therefore, we must pursue these operations. Out of the money which is going to be collected by means of this taxation, a part should be utilised for this purpose. I should sound a note of warning that this amount should not be merged in the general revenues. Out of this we should begin to pay at least Rs. 200 for every medical graduate seeking service. There is no need for me to refer to the discontentment prevailing among the doctors. These doctors spending about 5 or 6 years for acquisition of medical knowledge outside have become disgruntled. We must pay them at least Rs. 200 and also pay them an additional malnad allowance of at least Rs. 50. It is very sad to note that in the budget no amount has been allocated for building quarters for them. One of the reasons which had made these people rather unwilling to go to malnad areas is the want of quarters. Out of this money we will have to buy equipment not only for the major hospitals but also for the minor hospitals. So far as equipment is concerned, many of the people who return from America and other places after higher education, say that there is no equipment available for them and the knowledge acquired in those countries cannot be made use of. If they want to use their knowledge, such equipment is very necessary. Therefore, new equipments should be purchased.

Another thing is about D.D.T. The whole plan for the manufacture of D.D.T. in Mysore is ready and probably it is on the table of the Hon'ble Finance Minister. The whole thing has been worked out and as stated by my Hon'ble friend Sri Mallikarjunappa D. D. T. spraying

has shown excellent results. We have therefore to pursue D. D. T. work. So far as Mysore is concerned, we have got all the ingredients available here. I may draw the attention of the House to the fact that the Government of India also wanted to contribute a half share for the manufacture of D. D. T. if we undertake this plan. There are several people in the Indian Institute of Science to help us in that direction.

I am now going to say a few words, Sir, about the amalgamation of the two departments, the curative and the preventive sides of medical service. Before I do so, with your permission, I should like to touch upon a very delicate and important fact of public life resulting in a sense of frustration in the minds of the minority communities. Unfortunately, they feel that they are not only not tolerated but they are not treated as a part of the people. Whatever may be the conditions outside, whatever happens outside, so far as Mysore is concerned, till now equal treatment was meted out to all whether they belonged to the minority or majority group, thus resulting in friendship, fellow feeling and a comradery of spirit amongst all, enriching the life of the State. After the attainment of Responsible Government, minorities are feeling that the majority community is not conscious of their special needs and requirements. Although the minorities have realised that they have to align themselves with the majority community and work for the common good of the country, yet the majorities are deaf to their interests. Why I am stressing upon this point is this. So far as the Muslim community is concerned, it is seen that since the last one year and a half apart from the fact that several concessions granted to this community have been abolished, in the matter of services too, many of the gazetted officers have been weeded out. During the course of 6 or 7 months about 7 officers have been either made to retire or made to take leave. Why should these 6 or 7 officers be victimized, I do not know. I wish to state one instance. A lecturer Janab Rashid by name, was working in the Education Department; he is a person fully qualified in M.Sc., working as a Lecturer; when the question of his promotion was considered, an order comes from the Public Service Commissioner saying that the Muslim community is over-represented and therefore his application will not be considered and this particular post was given away to a non-Muslim. Some of the Muslim educationists coming from outside and who have qualified themselves in several technical subjects, for example wireless, are sent away to some corner places without keeping them in major institutions. I take this opportunity to appeal to the legislators here to see that the minorities are the subject-matter of trust, to be dealt with justly and squarely.

Coming to the amalgamation of these departments, there must be a united medical service for the whole State. At the Ministers' Conference held in Delhi about 2 years ago, this question was mooted and different Provinces and States were in favour of these two departments being amalgamated in the interest of efficiency and economy. Excepting Calcutta and Madras all others were almost unanimous in their opinion that the Health Department should not merely concern itself purely with the preventive side but should also take into its fold the diagnostic or the curative aspect. On account of the fermentation of ideas arising out of the War, it is being seen that the preventive aspect has got to be given prominence and not merely the diagnostic aspect. Therefore it is high time that both these departments should be placed in charge of a Director of Health Services and under him two officers or two assistants may be appointed so that both the Departments can work in collaboration and co-ordination with each other and also in a spirit of co-operation and the medical services can also be better manned.

There is one more point which is very important. There is a widespread complaint not only in the major hospitals but also in the minor hospitals in respect of want of proper supplies of medicine required for daily use. I have toured round the whole

(JANAB MAHMOOD SHARIFF)

State and I have seen doctors crying hoarse that simple medicines and appliances are not available. For example they say lint, sulphur and other elementary things which are very necessary and essential for ordinary ailments are not available. We have been spending Rs. 15 lakhs for the purchase of these articles. I have also considered this aspect. The Medical Stores which have been causing us a lot of headache during the last 30 years have not been properly organised. The Medical Stores must be in charge of a senior medical officer. In 1918 the Government passed an order in regard to having a central stores like this which could be depended upon to keep adequate stocks of medicine and supply the same to the hospitals all over the State. It is very necessary that this stores should be placed in charge of a doctor of the status of a Senior Surgeon, because it is he who can understand the requirements of the department, who can keep himself abrest of day to day scientific discoveries and indent upon proper quality of medicines. It is he who can discriminate between the various drugs that may be required for hospitals in the State. From this point of view, when I was in charge of the Department, I had posted a doctor by name Narayana Rao to be in charge of the Medical Stores. But I am sorry to note that within six months after I handed over charge, that man was removed from that place and a young man belonging to the Revenue Department has been placed in charge of the Stores. How is it possible for him to know what pennicillin is and what other drugs are? It is impossible. Therefore, once again I bring it to the notice of my former colleagues that this posting of a person from the Revenue Department should be abolished and that a senior medical man might be posted.

Regarding the point about the disparity in age of some officers, the Hon'ble Leader of the House the other day was pleased to state that about 210 reports were before the Government and that the Government were contemplating the dismissal or retirement of these officers. I for one should consider that this kind of treatment is not justifiable. These officers have served you for about 25 or 30 years and the dates of their birth were given long ago by their elders with or without their knowledge. So far as Muslims are concerned, they would have no horoscopes with them and whatever dates of birth their elders give are accepted. And now just because there is some disparity they cannot be shunted out. That is not just. I consider that a sort of contract is established between them and the Government. They have offered their services on the basis of a particular age and you have accepted that age and even the Insurance Department has accepted that age as correct. To remove them therefore now is unjustifiable. It is just possible that some test case might come up before courts in this behalf. The Government may also bear this point in their mind before disposing of the cases finally.

These are some of the suggestions which I wanted to make and I think that the Government will be good enough to bear in mind what I have said and consider the same.

SRI G. A. ACHARYA (Bangalore District—General).—Sir, I am extremely thankful to you, Mr. Speaker. Most of my Hon'ble friends have spoken and pleaded for more and more facilities, but nobody has tried to show the way to get more money. An analysis of the statement of the assets and liabilities for 1950 discloses a cash balance of hardly 41·22 lakhs and 23·39 lakhs, respectively. Perhaps in the history of Mysore this is the smallest balance shown during the course of 30 years. I was told that in 1920 or so there was such a small balance specially under temporary deposits as well as cash balance. Again Sir, I am placing this before you Mr. Speaker to exactly know where we are so that we may take care of our commitments in future. Out of Rs. 5,473 lakhs liabilities last year as mentioned in the Budget Memorandum, we had in all about 51 per cent by way of securities. No doubt it is unnecessary to keep any securities so far as special reserve is concerned. But, sir, out of a revenue of 9½ crores, apart from the public debt which the Centre

is going to share and which we need not consider now—this much I can say at any rate, I am not prepared to say that our finances are well-placed or ill-placed ; it is for the financial experts to say about it but what I am more concerned with is,—making allowance for interest Rs. 82 lakhs and Rs. 20 lakhs for sinking fund, in other words 10 per cent of our actual revenue specially reserved for these two items, I ask Sir, after allowing six crores for Establishment and 10 per cent towards interest, what remains over for other services? I am very thankful to those who have prepared this memorandum because it gives a real picture, the picture under the establishment and dearness allowance, etc., about 6 crores plus one crore for sinking fund and interest, which amounts to 7 crores now. Now Sir, this is our position. As a matter of fact I cannot understand how our Finance Minister was able to manage the affairs of the State with a cash balance at such a small figure as 60 lakhs. It is really very precarious balance and I must pay my compliments to the Finance Minister on his courage in handling the financial affairs at such levels. Others have given the par value or premium or discount. As for me I must say that during this period there must have been very many difficulties for the Finance Minister and for the way by which he has faced them, I should compliment him and I say that it requires courage and conviction to manage the finances of the State. But let me also caution the Finance Minister because he has himself admitted that on the one side people are crying for more and more facilities. I only wish that our Financial Minister had a mint also so that he could mint as much money as he wants and satisfy the entire House especially when they want more and more facilities. It is not that I am against giving more and more money for these nation-building activities; but the question is where is the money to come from? As a matter of fact, take for example our powers for raising a loan. In fact I remember our Finance Minister telling us in August 1950—I will read it.

ಜನ ಸಂಸಾರಗಳಿವೆಯೆಂದು ಹೇಳಬಹುದು. ಇವರಲ್ಲಿ ಸುಮಾರು 2 ಲಕ್ಷದವರೆಗೂ ಈಗಲೂ ಹುಲ್ಲಿನ ಮನೆಗಳಲ್ಲಿ ವಾಸಮಾಡುತ್ತಿದ್ದಾರೆಂದು ಹೇಳಬಹುದು. ಒಂದು ಲಕ್ಷದಷ್ಟು ಹೆಂಚಿನ ಮನೆಗಳಲ್ಲಿ ವಾಸಿಸುತ್ತಿದ್ದಾರೆಂದಿಟ್ಟುಕೊಂಡರೂ, ನೀವೀಗ ಮನೆಗಳನ್ನು ಕಟ್ಟಿಸುತ್ತಿರುವ ವೇಗವನ್ನು ನೋಡಿದರೆ ಬಹುಶಃ ಎಲ್ಲರಿಗೂ ಮನೆಗಳನ್ನು ಕಟ್ಟಿಸಿಕೊಡಬೇಕಾದರೆ ಇನ್ನು 83 ವರ್ಷಗಳು ಬೇಕಾಗುತ್ತವೆಂದು ಕಾಣುತ್ತಿದೆ. ಆಂದಮೇಲೆ ನಮ್ಮ ಪ್ರಗತಿಯನ್ನು ಎಷ್ಟರಮಟ್ಟಿಗೆ ಆಶಿಸಿದ್ದೀರೆಂಬುದನ್ನು ನೀವೇ ತಿಳಿದುಕೊಳ್ಳಬಹುದು. ಇದೇ ರೀತಿಯಲ್ಲಿ ಇತರ ವಿಷಯಗಳಲ್ಲಿಯೂ ನಾವು ಇನ್ನು 10 ವರ್ಷಗಳಲ್ಲಿ ಇತರರ ಮಟ್ಟಕ್ಕೆ ಬರಬೇಕಾಗಿದೆ. ಇದಕ್ಕಾದರೂ ಒಂದು ನಿರ್ದಿಷ್ಟ ಯೋಜನೆ ಯಾವುದಾದರೂ ಇದೆಯೇ ? ನೀವು ಕೊಟ್ಟಿರತಕ್ಕ 19 ಲಕ್ಷ ರೂಪಾಯಿಗಳನ್ನು ಸಂಸ್ಥಾನದಲ್ಲಿರುವ 82 ತಾಲ್ಲೂಕುಗಳಲ್ಲಿ ಒಂದೊಂದು ತಾಲ್ಲೂಕಿನಲ್ಲಿಯೂ ಒಂದೊಂದು ರೀತಿಯಲ್ಲಿ ಕೊಡುತ್ತಿದ್ದೀರಿ. ಕೆಲವು ತಾಲ್ಲೂಕುಗಳಲ್ಲಿ ಕಂಟ್ರ್ಯಾಕ್ಟ್‌ಗಳನ್ನು ಕೊಡುವುದರ ಮೂಲಕ, ಇನ್ನೂ ಕೆಲವು ತಾಲ್ಲೂಕುಗಳಲ್ಲಿ ಸಣ್ಣ ಸಣ್ಣ ಕಂತುಗಳ ಮೂಲಕ, ಇನ್ನು ಕೆಲವು ತಾಲ್ಲೂಕುಗಳಲ್ಲಿ ಸಾಮಾನುಗಳನ್ನು ಒದಗಿಸಿಕೊಡುವುದರ ಮೂಲಕ ಈ ರೀತಿಯಲ್ಲಿ ನಾನಾ ರೂಪದಲ್ಲಿ ಹಂಚಿಕೆಯಾಗುತ್ತಿದೆ. ಆದ್ದರಿಂದಲೇ ಇದಕ್ಕಾಗಿ ಒಂದು ಕೇಂದ್ರ ಸಲಹಾಸಮಿತಿಯನ್ನು ಏರ್ಪಾಡುಮಾಡಿ ಹರಿಜನರಿಗೆ ಯಾವ ರೀತಿ ಈ ಹಣವನ್ನು ಹಂಚಬೇಕೆಂಬುದನ್ನು ನಿರ್ಧರಿಸುವುದನ್ನು ಆ ಸಮಿತಿಗೆ ಬಿಡಬೇಕೆಂದು ಹೋದಸಾರಿಯೇ ನಾನು ಹೇಳಿದ್ದೆ, ಈ ಸಾರಿಯೂ ಹೇಳುತ್ತಿದ್ದೇನೆ; ಈಗ ರಾಜ್ಯಾಂಗ ಶಾಸನದ ಪ್ರಕಾರ ಏನೇನು ಅನುಕೂಲತೆಗಳನ್ನು ನಮಗೆ ಕಲ್ಪಿಸಿಕೊಟ್ಟಿದ್ದಾರೋ ಆ ಅನುಕೂಲತೆಗಳನ್ನೇನೂ ನಾವೀಗ ಹೊಂದುತ್ತಿಲ್ಲ; ನಮಗಿರುವ ಎಲ್ಲಾ ಕಷ್ಟಗಳನ್ನೂ ಪರಿಶೀಲಿಸಿ ನಮ್ಮ ದೃಷ್ಟಿಯೇನಿದೆ, ನಮ್ಮ ಸಲಹೆಯೇನಿದೆಯೆಂಬುದನ್ನು ಒಂದು ರಚನಾತ್ಮಕ ರೀತಿಯಲ್ಲಿ ತಮಗೆ ತಿಳಿಸುವುದಕ್ಕೆ ಇಂಥಾ ಒಂದು ಸಮಿತಿಯು ಅಗತ್ಯವೆಂದು ನಾನು ಹೇಳಬೇಕಾಗಿದೆ.

ಇನ್ನು ರಾಜ್ಯಾಡಳಿತದ ವಿಷಯದಲ್ಲಿ ಕೆಲವು ಅಂಶಗಳನ್ನು ಹೇಳಬೇಕಾಗಿದೆ. ನಮ್ಮ ಜನರಲ್ಲಿ ಮೈಸೂರು ಮಂಡ್ಯ ಡಿಸ್ಟ್ರಿಕ್ಟ್‌ಗಳಲ್ಲಿ ಸ್ವಲ್ಪಮಟ್ಟಿಗೆ ವಿದ್ಯಾಭ್ಯಾಸ ಹೆಚ್ಚಾಗುತ್ತಿರುವ ಅಂಶವನ್ನು ಸರ್ಕಾರದವರೂ ಮನಗಂಡಿರಬಹುದು. ಮಂಡ್ಯ, ಮೈಸೂರು ಡಿಸ್ಟ್ರಿಕ್ಟ್‌ಗಳನ್ನು ಬಿಟ್ಟು ಉಳಿದ ಡಿಸ್ಟ್ರಿಕ್ಟ್‌ಗಳಲ್ಲಿ ಒಟ್ಟು ಎಷ್ಟು ಜನ ನಮ್ಮವರಲ್ಲಿ ವಿದ್ಯಾವಂತರಿದ್ದಾರೋ ಅಷ್ಟು ಜನ ಈ ಎರಡು ಡಿಸ್ಟ್ರಿಕ್ಟ್‌ಗಳಲ್ಲೇ ಇದ್ದಾರೆ. ಇದರ ಫಲವಾಗಿ ಅವರ ಜೀವನ ಮಟ್ಟವೂ ಕ್ರಮೇಣ ಏರುತ್ತಿದೆ. ಯಾವಾಗ ಅವರ ವಿದ್ಯಾಭ್ಯಾಸ, ತಿಳಿವಳಿಕೆ, ಜೀವನ ಮಟ್ಟ ಜಾಸ್ತಿಯಾಯಿತೋ ಆಗ ಅವರು ತಮ್ಮ ಮೂಲಭೂತ ಹಕ್ಕುಗಳನ್ನೂ ಕೂಡ ಸಾಧಿಸಿಕೊಳ್ಳುವುದಕ್ಕೆ ಪ್ರಯತ್ನಪಡುವುದು ಸ್ವಾಭಾವಿಕ. ಈಗ ನೀವು ಸಿವಿಲ್ ಡಿಸ್‌ಏಬಿಲಿಟೀಸ್ ಕಾನೂನನ್ನು ಜಾರಿಗೆ ತಂದಿದ್ದೀರಿ ಮತ್ತು ಇದೇ ರೀತಿ ಇನ್ನೂ ಅನೇಕ ಕಾನೂನುಗಳನ್ನು ತಂದಿದ್ದೀರಿ. ಅಲ್ಲದೆ ರಾಜ್ಯಾಂಗ ಶಾಸನದ ರೀತ್ಯಾ ಸಹ ಕೆಲವು ಮೂಲಭೂತ ಹಕ್ಕುಗಳನ್ನು ಕೊಟ್ಟಿದ್ದೀರಿ. ಆದರೆ ನಮ್ಮಲ್ಲಿ ವಿದ್ಯಾವಂತರಾದವರು ಈ ತಮ್ಮ ಹಕ್ಕುಗಳನ್ನು ಸಾಧಿಸಿಕೊಳ್ಳಲು ಯಾವಾಗ ಪ್ರಯತ್ನಪಡುತ್ತಾರೋ ಆಗ ಇತರೇ ಜನಗಳು ಎಂದಿನಂತೆ ಅಡ್ಡಿಪಡಿಸುತ್ತಲೇ ಇದ್ದಾರೆ. ಹೀಗಾಗಿ ಸಮಾಜದಲ್ಲಿ ಸ್ವಲ್ಪ ತಿಕ್ಕಾಟಕ್ಕೆ ಅವಕಾಶವಾಗಿದೆ. ಮಂಡ್ಯ ಮೈಸೂರು ಜಿಲ್ಲೆಗಳಲ್ಲಿ ಇಂಥಾದ್ದು ಜಾಸ್ತಿ. ಅಂಥ ಸಂದರ್ಭದಲ್ಲಿ ಕಾನೂನು ರೀತ್ಯಾ ರಕ್ಷಣೆಗಳನ್ನು ಕೊಟ್ಟು ಪೋಲೀಸ್ ಮುಂತಾದವರ ಸಹಾಯದಿಂದ ಅವರಿಗಿರುವ ಹಕ್ಕುಗಳನ್ನು ಒದಗಿಸಿಕೊಡಲು ಏರ್ಪಾಡುಮಾಡಬೇಕೆಂದು ನಾನು ಅಭಿಪ್ರಾಯಪಡುತ್ತೇನೆ. ಇದಕ್ಕೆ ಸಾರ್ವಜನಿಕರೂ ಸಹಕರಿಸಬೇಕು. ಇವೆರಡೂ ಇಲ್ಲದಿದ್ದರೆ ಅವರೇನು ಮುಂದುವರಿಯುವುದಕ್ಕೂ ಸಾಧ್ಯವಿಲ್ಲ. ಹೀಗಾದರೆ ಅವರು ತಮ್ಮ ಮೂಲಭೂತ ಹಕ್ಕುಗಳನ್ನು ಹೇಗೆ ಪಡೆದುಕೊಳ್ಳಲು ಸಾಧ್ಯವಾದೀತೆಂಬುದನ್ನು ತಾವೇ ಯೋಚನೆಮಾಡಬೇಕು. ಆದ್ದರಿಂದ ಮುಖ್ಯವಾಗಿ ಮಂಡ್ಯ, ಮೈಸೂರು ಡಿಸ್ಟ್ರಿಕ್ಟ್‌ಗಳಿಗೆ ಸ್ವಲ್ಪಮಟ್ಟಿಗೆ ಉದಾರ ಭಾವನೆಯುಳ್ಳ, ಕೋಮುವಾರು ದೃಷ್ಟಿಯಿಲ್ಲದ ಅಧಿಕಾರಿಗಳನ್ನು ನೇಮಕಮಾಡಿದರೆ ಇಂಥಾ ನ್ಯೂನತೆಗಳು ಬಹುಮಟ್ಟಿಗೆ ಹೋಗುತ್ತವೆಂದು ನನ್ನ ಅಭಿಪ್ರಾಯ.

ಇನ್ನೊಂದು ವಿಷಯವನ್ನು ಈ ಸಭೆಯ ಗಮನಕ್ಕೆ ನಾನು ಪ್ರಾಮುಖ್ಯವಾಗಿ ತರಬೇಕಾಗಿದೆ. ಜೀತದ ಪದ್ಧತಿಯೆಂಬುದು ದೇಶಾದ್ಯಂತ ಎಲ್ಲಾ ಕಡೆಯಲ್ಲೂ ಇದೆ. ಒಂದೊಂದು ಊರಿನಲ್ಲಿ ಒಂದೊಂದು ರೀತಿಯಲ್ಲಿ ಹರಿಜನರು ಜೀತಮಾಡುತ್ತಿದ್ದಾರೆ.

ಮಕ್ಕಳಾದಿಯಾಗಿ ಮನೆಯವರೆಲ್ಲರೂ ಜೀತಮಾಡುತ್ತಿರುವುದನ್ನು ನಾನು ನೋಡಿದ್ದೇನೆ. ಕಾನಕಾನಹಳ್ಳಿ ತಾಲ್ಲೂಕು ವೆಂಕಟರಾಯದೊಡ್ಡಿ ಎಂಬ ಒಂದು ಗ್ರಾಮದಲ್ಲಿರುವ 22 ಮನೆಗಳ ಪೈಕಿ 21 ಮನೆಯವರು ಈ ರೀತಿ ಜೀತಮಾಡುತ್ತಿದ್ದಾರೆ.

ಅಧ್ಯಕ್ಷರು.—'ಜೀತ' ಅಂದರೆ ಏನು ?

ಶ್ರೀ ಎಂ. ಸಿ. ವೆಂಕಟೇಶ್ವರರವರು.—ಅಂದರೆ, ಯಾರಾದರೂ 50 ರೂಪಾಯಿ ಕೊಟ್ಟರೆ ಅದರ ಬಡ್ಡಿಗಾಗಿ ವರ್ಷವೆಲ್ಲಾ ಅವರ ಮನೆಯಲ್ಲಿ ದುಡಿಯುತ್ತಾ ಹೋಗುತ್ತಿರುವುದು ಎಂದು. ಮನೆಮಕ್ಕಳೆಲ್ಲಾ ಕೆಲಸಮಾಡಬೇಕಾಗುತ್ತದೆ.

ಅಧ್ಯಕ್ಷರು.—ಗೈಯದೆ ಹೋದರೆ ಏನು ಮಾಡುತ್ತಾರೆ ?

ಶ್ರೀ ಎಂ. ಸಿ. ವೆಂಕಟೇಶ್ವರರವರು.—ಗೈಯದೆ ಹೋದರೆ ಅವರನ್ನು ಸುಮ್ಮನೆ ಬಿಡುತ್ತಾರೆಯೇ ? Social boycot ಮಾಡಿ ಊರಿನ ಹೊರಗೆ ಓಡಿಸುತ್ತಾರೆ. ಹಾಗೆ ಹೊರಗೆ ಓಡಿಸಿದರೂ ಪರವಾಗಿಲ್ಲವೆನ್ನಬಹುದು. ಹಾಗೂ ಓಡಿಸುವುದಿಲ್ಲ. ಅಲ್ಲೇ ನರಕಯಾತನೆ ಕೊಡುತ್ತಾರೆ. ಫ್ರೆಂಚ್‌ರಾಕ್ಸ್ ತಾಲ್ಲೂಕಿನ ಚಿಕ್ಕಡೆ ಗ್ರಾಮದಲ್ಲಿ ಮತ್ತು ಮದ್ದೂರು ತಾಲ್ಲೂಕಿನ ವರಗಾನಹಳ್ಳಿಯಲ್ಲಿ ಹೀಗಿಯೇ social boycot ಆಗಿ ಎಷ್ಟು ತೊಂದರೆ ಕೊಡುತ್ತಿದ್ದಾರೆಂದು ಹೇಳಬೇಕಾಗಿಲ್ಲ. ಆದ್ದರಿಂದ ಸರ್ಕಾರದವರು ಈ ವಿಷಯವನ್ನು ತಮ್ಮ ಗಮನಕ್ಕೆ ತೆಗೆದುಕೊಂಡು ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಇವೆಲ್ಲವನ್ನೂ ತಮ್ಮ ಗಮನಕ್ಕೆ ತರುವುದಕ್ಕೆ ಸೆಂಟ್ರಲ್ ಬೋರ್ಡ್ ಸಮಿತಿಯೆಂದು ಒಂದು ಸಮಿತಿಯಿರುವುದು ಬಹಳ ಅನುಕೂಲ. ಭೂ ಸುಧಾರಣೆ ಮಾಡುವುದಕ್ಕೆಂದೂ ಸಮಿತಿ ಮಾಡಿದಿರಿ. ಹಾಗೆಯೇ ಹರಿಜನೋದ್ಧಾರವೂ ದೇಶದಲ್ಲಿ ಅಗತ್ಯವಾದುದು. ಮಾನ್ಯ ಸದಸ್ಯರನೇಕರು ಹರಿಜನರ ಪ್ರಗತಿಯಾಗದೆ ದೇಶದ ಪ್ರಗತಿಯಾಗುವುದಿಲ್ಲವೆಂದು ಹೇಳಿದ್ದಾರೆ. ಆದ್ದರಿಂದ ಈ ವಿಚಾರದಲ್ಲಿ ನಿರ್ದಿಷ್ಟ ಸಲಹೆಗಳನ್ನು ತಮ್ಮ ಮುಂದಿಟ್ಟು ಕೆಲಸಮಾಡುವುದಕ್ಕೆ ಒಂದು ಸಮಿತಿಯನ್ನು ಏರ್ಪಾಡುಮಾಡುವುದು ಬಹಳ ಅಗತ್ಯವೆಂದು ಹೇಳುತ್ತೇನೆ.

(ಶ್ರೀ ಎಂ. ಸಿ. ವೆಂಕಟೇಶ್ವರವರು.)

ಇನ್ನು ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ ಕೂಲಿ ಪರ್ಮಿಟ್‌ಗಳನ್ನು ಅಲ್ಲಿ ಕೆಲಸಮಾಡುವ ಕೂಲಿಗಳಿಗೆ ಕೊಡುವುದರಲ್ಲಿ ಎಷ್ಟು ತೊಂದರೆಯಾಗುತ್ತಿದೆಯೆಂಬುದನ್ನು ಹೇಳಬೇಕಾಗಿದೆ. ಇವರು ಇದರ ಬಗ್ಗೆ ಮಾಡಿರುವ ಕಾನೂನನ್ನು ನೋಡಿದರೆ ಪ್ರಾಯಶಃ ನಮ್ಮ ಶ್ರೀರಂಗಪಟ್ಟಣ ಮತ್ತು ಇತರ ತಾಲ್ಲೂಕುಗಳಲ್ಲಿ ಬತ್ತ, ರಾಗಿಗೆ, ಕೂಲಿಗೆ ಬರುವ ಹರಿಜನರಾದಿಯಾಗಿ ಪ್ರತಿಯೊಬ್ಬರೂ ಇನ್ನು ಮೇಲೆ ಬಿ.ಎ. ಪರೀಕ್ಷೆಮಾಡಿಕೊಂಡೇ ಬರಬೇಕೆಂದು ತೋರುತ್ತದೆ. ಏಕೆಂದರೆ ಕೂಲಿ ಮಾಡಿ ತಾನು ಸಂಪಾದಿಸಿದ ಭತ್ತವನ್ನು ಅವನು ತನ್ನ ಊರಿಗೆ ತೆಗೆದುಕೊಂಡು ಹೋಗಬೇಕಾದರೆ ಯಾವ ಹಳ್ಳಿಯಲ್ಲಿ ಬಂದಿದ್ದು, ಯಾವ ಸರ್ವೇ ನಂಬರಿನಿಂದ ಕೊಯ್ದದ್ದು, ಯಾವ ಗೌಡನ ಹೊಲದ್ದು ಎಂದು ತಿಳಿದುಕೊಂಡು ಆಮೇಲೆ ಅರ್ಜಿ ಬರೆಸಿಕೊಂಡು ಪಟೇಲ್ ಶ್ಯಾನುಭೋಗರಿಂದ ಸರ್ಟಿಫೈ ಮಾಡಿಸಿ ತಂದುಕೊಟ್ಟರೇನೇ ಆತನಿಗೆ ಪರ್ಮಿಟ್ ಸಿಕ್ಕುವುದು. ಶ್ಯಾನುಭೋಗರು ಸರ್ಟಿಫೈ ಮಾಡಬೇಕಾದರೆ ಸರ್ವೆ ನಂಬರು, ಖಾತೆ ನಂಬರು ಮುಂತಾಗಿ ಎಲ್ಲಾ ಮಹಜರು ಕ್ರಮ ನಡೆಸಿಕೊಡಬೇಕು. ಈ ಕಾನೂನು ರಚಿಸಿರುವುದನ್ನು ನೋಡಿದರೆ, ಬಹುಶಃ ಈ ಕಾನೂನನ್ನು ಮಾಡಿದವರಿಗೇ ದೇಶದಲ್ಲಿ ಎಷ್ಟು ತರಹ ಕೂಲಿಯಿದೆ ಎಂಬುದಾದರೂ ಗೊತ್ತಿದೆಯೋ ಎಂಬ ಅನುಮಾನ ಉಂಟಾಗುತ್ತದೆ.

ಕೂಲಿಯವರ ಹೆಸರಿನಲ್ಲಿ ಯಾರೋ ಕಳ್ಳಪರ್ಮಿಟ್ ಪಡೆಯುತ್ತಾರೆಂದು ಹೇಳಿ ಆ ಕೂಲಿಯವರಿಗೆ ಅಷ್ಟು ನಿರ್ಬಂಧವಾದ ಕಾನೂನು ಮಾಡಿದರೆ ಅವರಿಗೆ ಎಷ್ಟು ಕಷ್ಟವಾಗುತ್ತದೆಂಬುದನ್ನು ಯೋಚನೆ ಮಾಡಿ. ಜನವರಿ 10ನೆಯ ತಾರೀಖಿನೊಳಗೆ ಅವರಿಗೆ ಪರ್ಮಿಟ್ ಕೊಡಬೇಕಾಗಿತ್ತು. ಆ ಕೂಲಿ ಪರ್ಮಿಟ್ ಕೊಡಬೇಕಾದರೆ ಒಂದು ತಿಂಗಳು ಬೇಕಾಯಿತು. ಇಪ್ಪತ್ತನಾಲ್ಕು ಜನ ಕೂಲಿಯವರು ಮಂಡ್ಯ, ಫ್ರೆಂಚ್‌ರಾಕ್ಸ್ ಮುಂತಾದ ಕಡೆ ತಿರುಗಿ ಈ ಪರ್ಮಿಟ್‌ಗಾಗಿ ಕಷ್ಟಪಡಬೇಕಾಯಿತು. ಸರ್ಕಾರದವರು ಮಾಡತಕ್ಕ ಕಾನೂನು ಜನರಿಗೆ ತೊಂದರೆಯಿಲ್ಲದಂತೆ ಸರಳವಾಗಿರಬೇಕು.

ಇನ್ನು ಆಹಾರದ ಸಂಬಂಧವಾಗಿ ಬಡವರಿಗೆ ಕೆಲವು ರಿಯಾಯಿತಿಗಳನ್ನು ತೋರಿಸಿದ್ದಾರೆ. ಆದರೆ ಇವು ಅವರಿಗೆ ಸಲ್ಲುತ್ತಿಲ್ಲ. ಬಡವರ ಹೆಸರಿನಲ್ಲಿ ಸರ್ಕಾರದವರು ಕಾನೂನು ಮಾಡುತ್ತಾರೆ. ಆದರೆ ಅವುಗಳಿಂದ ಅವರಿಗೆ ಉಪಕಾರವಾಗುವುದಿಲ್ಲ. ಮಾನ್ಯ ಮಂತ್ರಿಗಳಾದ ಶ್ರೀ ಮರಿಯಪ್ಪನವರು ಶ್ರೀ ದಾಸಪ್ಪನವರು ಮಂಡ್ಯಕ್ಕೆ ಬಂದಿದ್ದಾಗ ಹೆಚ್ಚು ಆಹಾರ ಬೆಳೆಯಿರಿ, ಸರ್ಕಾರದಿಂದ ಗೊಬ್ಬರದ ಸಾಲ ಕೊಡುತ್ತೇವೆ ಎಂದು ಹೇಳಿದರು. ನಾನು ಆಗಲೇ ಅವರಿಗೆ ಹೇಳಿದೆ: ಎರಡು ಮೂರು ಎಕರೆ ಜಮೀನಿರುವವರು ಗೊಬ್ಬರ ತೆಗೆದುಕೊಳ್ಳುವುದಿಲ್ಲ, ಏಕೆಂದರೆ, ಗೊಬ್ಬರ ಸಾಲವಾಗಿ ತೆಗೆದುಕೊಂಡರೆ ಬತ್ತವನ್ನು ಕೊಡಬೇಕೆಂದು ಗೊತ್ತು ಮಾಡಿದ್ದಾರೆ, ಆದುದರಿಂದ non-surplus holders ತನ್ನ ಸಂಸಾರಕ್ಕೆ ಇಲ್ಲದಂತೆ ಧಾನ್ಯವನ್ನು ಕೊಟ್ಟುಬಿಟ್ಟರೆ ಅವರು ಕಾಳಸಂತೆಯಲ್ಲಿ ಒಂದಕ್ಕೆ ಎರಡರಷ್ಟು ಬೆಲೆ ಕೊಟ್ಟು ಕೊಂಡುಕೊಳ್ಳಬೇಕಾಗುತ್ತದೆ. ಆದುದರಿಂದ ಹಣಕ್ಕೆ ಗೊಬ್ಬರ ಕೊಡುವಂತೆ ಕಾನೂನನ್ನು ಬದಲಾವಣೆಮಾಡಿ ಎಂದು ಹೇಳಿದೆ. ಅದಕ್ಕೆ ಅವರು ಸೂಕ್ತ ತಿದ್ದುಪಡಿ ಮಾಡುತ್ತೇವೆಂದು ಹೇಳಿದರು, ಆದರೆ ಮಾಡಲಿಲ್ಲ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸಾಲವಾಗಿ ತೆಗೆದುಕೊಂಡರೆ ಬತ್ತ ಕೊಡಬೇಕು, ಹಾಗಿಲ್ಲದೆ ಕೈ ಮೇಲೆ ಹಣಕೊಟ್ಟು ತೆಗೆದುಕೊಳಬಹುದು.

ಶ್ರೀ ಎಂ. ಸಿ. ವೆಂಕಟೇಶ್ವರವರು.—ಅವರಲ್ಲಿ ಹಣವಿಲ್ಲದಿದ್ದರೆ ಏನು ಮಾಡುವುದು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅವರು ತೆಗೆದುಕೊಳ್ಳುವುದು ಎಕರೆಗೆ 25 ರೂಪಾಯಿನ ಗೊಬ್ಬರ. ಅದಕ್ಕೆ ಒಂದುಪಲ್ಲ ಬತ್ತ ಕೊಟ್ಟರೆ ಮುಗಿಯಿತು. ಮಂಡ್ಯ, ಮಳವಳ್ಳಿ, ಶ್ರೀರಂಗಪಟ್ಟಣ ಮುಂತಾದಕಡೆ ಎಕರೆಗೆ ಎರಡುಪಲ್ಲ ಬೆಳೆಯುತ್ತಾರೆಂದು ಹೇಳಿದರೆ ಯಾರು ಒಪ್ಪುತ್ತಾರೆ? ಕನಿಷ್ಠ ಪಕ್ಷ 8 ಪಲ್ಲ ಬೆಳೆಯುತ್ತಾರೆ. ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ 20–25 ಪಲ್ಲ ಬೆಳೆಯುತ್ತಾರೆ.

ಶ್ರೀ ಎಂ. ಸಿ. ವೆಂಕಟೇಶ್ವರವರು.—ಎರಡು ಮೂರು ಎಕರೆ ಜಮೀನಿರುವವನು ಮನೆಯಲ್ಲಿ ದೊಡ್ಡ ಸಂಸಾರವಿದ್ದು ಎರಡುಮೂರು ಪಲ್ಲ ಕೊಟ್ಟುಬಿಟ್ಟರೆ ಅವರು ಎಲ್ಲಿ ಹೋಗಬೇಕು? ಸರ್‌ಪ್ಲಸ್ ಹೋಲ್ಡರಲ್ಲದಿದ್ದವರಿಗೆ ಅನುಕೂಲ ಕಲ್ಪಿಸಬೇಕು.

ಇನ್ನು ಗ್ರಾಮ ಕೈಗಾರಿಕೆಗಳ ವಿಚಾರದಲ್ಲಿ ಎರಡು ಮಾತು ಹೇಳಬೇಕಾಗಿದೆ. ನಮ್ಮ ಮೈಸೂರು ದೇಶದ ರೇಷ್ಮೆ ಸೀರೆಗಳನ್ನು ಪಾಶ್ಚಿಮಾತ್ಯ ದೇಶಗಳ ಅಪ್ಸರಸ್ತ್ರೀಯರು ಕೂಡ ಆಶೆಯಿಂದ ಉಡುತ್ತಾರೆಂದು ತಿಳಿದುಬಂದಿದೆ. ನಮ್ಮ ಕೈಗಾರಿಕೆಗಳು ಮುಂದುವರಿದಿವೆ. ನಮ್ಮ ದೇಶದಲ್ಲಿ ತಯಾರಾಗುವ ವಸ್ತುಗಳನ್ನು ಹೊರದೇಶಗಳವರು ಉಪಯೋಗಿಸುತ್ತಿದ್ದಾರೆ ಎಂದು ಸಂತೋಷಪಡುತ್ತೀರಿ. ಹಾಗೆಯೇ ನಮ್ಮ ಗ್ರಾಮ ಕೈಗಾರಿಕೆಗಳಲ್ಲಿ ತಯಾರಿಸುವುದನ್ನು ಅಮೆರಿಕಾ ಇಂಗ್ಲೆಂಡು ಮುಂತಾದ ದೇಶಗಳವರು ಉಪಯೋಗಿಸುವಂತೆ ಮಾಡಿದರೆ ಚೆನ್ನಾಗಿರುತ್ತದೆ. ಅಷ್ಟು ಉತ್ತಮ ಮಟ್ಟಕ್ಕೆ ಗೃಹಕೈಗಾರಿಕೆಗಳನ್ನು ತರಬೇಕು. ಈಗ ವಿಶ್ವೇಶ್ವರಯ್ಯನವರ ಯೋಜನೆಯೆಂದು ಮಾಡಿದ್ದಾರೆ. ಕೆಲವರಿಗೆ ಶಿಕ್ಷಣ ಕೊಟ್ಟು ಇನ್ಸ್‌ಪೆಕ್ಟರುಗಳಾಗಿ ಒಂದೆರಡು ಡಿಸ್ಟ್ರಿಕ್ಟಿಗೆ ನೇಮಕಮಾಡಿದ್ದೀರಿ. ಯಾವಯಾವ ಕೈಗಾರಿಕೆ ಎಲ್ಲೆಲ್ಲಿ ನಡೆಯುತ್ತದೆಯೋ ಅಲ್ಲಿಗೆ ಅವರನ್ನು ಹಾಕಬೇಕು. ಉದಾಹರಣೆಗೆ ಯಾವಯಾವ ಸ್ಥಳಗಳಲ್ಲಿ ಗೃಹಕೈಗಾರಿಕೆಗಳು ಹೆಚ್ಚಾಗಿವೆಯೋ ಆ ಸ್ಥಳಕ್ಕೆ ಇನ್ಸ್‌ಪೆಕ್ಟರವರನ್ನು ಹಾಕಬೇಕು. ಹಾಗೆಯೇ ಹೆಚ್ಚಿಗೆ ಮಂದಿ ಚರ್ಮದ ಕೆಲಸ, ಚಾಪೆ ಹೆಣೆಯುವ ಕೆಲಸ ಎಲ್ಲಿ ನಡೆಯುತ್ತದೆಯೋ ಆ ಹಳ್ಳಿಗಳಿಗೇ ಇನ್ಸ್‌ಪೆಕ್ಟರುಗಳನ್ನು ಹಾಕಬೇಕು. ಬೆಂಗಳೂರು ಜಿಲ್ಲೆಯ ತಾಲ್ಲೂಕುಗಳಲ್ಲಿ ಇನ್ಸ್‌ಪೆಕ್ಟರುಗಳನ್ನು ನೇಮಕ ಮಾಡಿದ್ದೀರಿ. ಕೆಲವು ತಾಲ್ಲೂಕುಗಳಲ್ಲಿ ಗೃಹ ಕೈಗಾರಿಕೆಗಳು ಇರುವುದಿಲ್ಲ. ಹೀಗಾದರೆ ಏನು ಪ್ರಯೋಜನ? ಸಾಮಾನ್ಯವಾಗಿ ಒಂದೇ ಜಿಲ್ಲೆಯಲ್ಲಿ ಎಲ್ಲ ಕೈಗಾರಿಕೆಗಳೂ ಒಟ್ಟುಗೂಡಬಾರದು. ಪ್ರತಿ ಜಿಲ್ಲೆಯಲ್ಲಿಯೂ ಹರಡಿ ಕೈಗಾರಿಕೆಗಳು ಎಲ್ಲ ಕಡೆಯೂ ಮುಂದುವರಿಯಲು ಅವಕಾಶ ಕಲ್ಪಿಸಬೇಕೆಂದು ಹೇಳಿ ಮುಗಿಸುತ್ತೇನೆ.

ಶ್ರೀ ಕೆ. ಪುಟ್ಟಸ್ವಾಮಿಯವರು (ಮಂಡ್ಯ ಜಿಲ್ಲೆ).—ಸ್ವಾಮಿ, ಆಯವ್ಯಯದ ಪಟ್ಟಿಯ ಮೇಲೆ ಸಾಮಾನ್ಯ ಚರ್ಚೆ ನಡೆಯುವಾಗ ಮುಖ್ಯವಾಗಿ ಸರ್ಕಾರ ಆಯವ್ಯಯದಲ್ಲಿ ಅನುಸರಿಸುವ ನೀತಿಯನ್ನು ಕುರಿತು ವಿಮರ್ಶೆಮಾಡತಕ್ಕದ್ದೆಂದು ನಾನು ತಿಳಿದಿರುತ್ತೇನೆ. ಆದರೆ ಈ ಚರ್ಚೆ ಸಾಗಿದ ಸುಮಾರು ನಾಲ್ಕು ದಿನಗಳಿಂದ ಆಡಳಿತದಲ್ಲಿರುವ ಕುಂದುಕೊರತೆಗಳ ವಿಚಾರವನ್ನು ಮಾನ್ಯ ಸದಸ್ಯರು ಪದೇಪದೇ ಒತ್ತಿ ಹೇಳಿದ್ದಾರೆ. ಅದರಲ್ಲಿಯೂ ಬಹಳ ಅರಿತು ನುರಿತಿರುವ ರಾಜಕಾರಣಿಗಳಾದ ಕೆಲವರು, ಅವರಲ್ಲಿಯೂ ಶ್ರೀ ಗುಂಡಪ್ಪಗೌಡರು

ಕೂಡ ಸರ್ಕಾರದ ವಿಚಾರದಲ್ಲಿ ಬಹಳ ಔದಾರ್ಯ ರಹಿತವಾಗಿ ಟೀಕೆ ಮಾಡಿದ್ದಾರೆ. ಅವರು ಮಾತನಾಡುತ್ತಾ ಈಗಿನ ಸರ್ಕಾರವನ್ನುದ್ದೇಶಿಸಿ 'ನೀವು ಕಾಲಿಟ್ಟಮೇಲೆ ಜನರಿಗೆ ಹೊಟ್ಟೆಗೆ ಅನ್ನವಿಲ್ಲ ಹಿಟ್ಟಿಲ್ಲ, ಮೈಗೆ ಬಟ್ಟೆ ಇಲ್ಲದಂತಾಯಿತು' ಎಂದು ಹೇಳಿದರು.

ಶ್ರೀ ಬಿ. ಚನ್ನಬೈರೇಗೌಡರು.—ಯಾವ ಘಳಿಗೆಯಲ್ಲಿ ಕಾಲಿಟ್ಟರೋ, ಅದ್ದರಿಂದ ಹೀಗಾಯಿತೆಂದು ಹೇಳಿದರು.

ಶ್ರೀ ಕೆ. ಪುಟ್ಟಸ್ವಾಮಿಯವರು.—ಆದರೆ ಹಿಂದೆ ಅವರು ಆಡಳಿತ ನಡೆಸುತ್ತಿದ್ದವರು ಆಡಳಿತಾಧಿಕಾರ ಬಿಟ್ಟುಕೊಟ್ಟು ಕಾಲು ಕಿತ್ತುಹೋಗುವಾಗ ಈ ದೇಶವನ್ನು ಯಾವ ಸ್ಥಿತಿಯಲ್ಲಿ ಬಿಟ್ಟುಹೋದರೆಂಬುದನ್ನು ನೋಡಬೇಕು. ಪರಕೀಯರ ಕೈಕೆಳಗೆ ಸಿಕ್ಕಿ ನೊಂದು ಬೆಂದು ಬೆಂಡಾಗಿದ್ದ ಈ ದೇಶದ ಆಡಳಿತ ನಡೆಸುವ ಜವಾಬ್ದಾರಿಯನ್ನು ಕಾಂಗ್ರೆಸ್ ಪಕ್ಷದ ಸರ್ಕಾರ ಹೊತ್ತುಕೊಂಡು ನಿರ್ವಹಿಸಬೇಕಾಯಿತು. ಮೊದಲೇ ಆಹಾರಾಭಾವದಲ್ಲಿ ಬಳಲುತ್ತಿದ್ದ ದೇಶ ಇನ್ನೂ ಹೆಚ್ಚು ಆಹಾರಾಭಾವಕ್ಕೆ ತುತ್ತಾಯಿತು. ಇದನ್ನು ಆ ಮಾನ್ಯ ಸದಸ್ಯರು ಮರೆತರು. ಈ ದೇಶದ ಬಟ್ಟೆಯನ್ನು ಅಮೇರಿಕ ಇಂಗ್ಲೆಂಡು ಮುಂತಾದ ದೇಶಗಳಿಗೆ ರಫ್ತುಮಾಡಿ ಅಲ್ಲಿಂದ ದ್ರವ್ಯ ಸಂಪಾದನೆಮಾಡಿ ಅದರಿಂದ ಇಲ್ಲಿ ನಮ್ಮ ದೇಶವನ್ನು ಪುನರ್ರಚಿಸುವುದಕ್ಕೆ ಬೇಕಾದ ಸಾಮಾನುಗಳನ್ನು ಕೊಳ್ಳಬೇಕಾಗಿ ಬಂದಿರುವುದರಿಂದ ತಾತ್ಕಾಲಿಕವಾಗಿ ಬಟ್ಟೆ ಅಭಾವ ಇಲ್ಲಿ ಬಂದಿದೆಯೇ ವಿನಾ ಇಲ್ಲಿ ನಮಗೆ ಬೇಕಾಗುವಷ್ಟು ಬಟ್ಟೆ ಸಿಕ್ಕದೇಯಿಲ್ಲ, ಬೇಕಾದಷ್ಟು ಬಟ್ಟೆ ನಮ್ಮಲ್ಲಿ ತಯಾರಾಗುತ್ತದೆ. ನಮ್ಮ ಮೈಮೇಲೆ ಹಾಕಿಕೊಳ್ಳುವ ಬಟ್ಟೆಯನ್ನು ಹೊರದೇಶಗಳಿಗೆ ರಫ್ತುಮಾಡಿ ಅಲ್ಲಿಂದ ನಮಗೆ ಅಗತ್ಯವಾಗಿ ಬೇಕಾದ ಸಾಮಾನುಗಳನ್ನು ಆಮದು ಮಾಡಿಕೊಳ್ಳಬೇಕಾಗಿರುವಾಗ ಅದನ್ನು ತಿಳಿಯದೆ ಆಕ್ಷೇಪಣೆ ಮಾಡಿದರಲ್ಲಾ ಎಂದು ವಿಷಾದಿಸಬೇಕಾಗಿದೆ.

ಇನ್ನು ಜನಾಬ್ ಹನೀಫ್‌ರವರು ಮತ್ತು ಜನಾಬ್ ಮಹಮೂದ್ ಷರೀಫ್‌ರವರು ಮಾತನಾಡುತ್ತಾ ಸರ್ಕಾರ ಮೈನಾರಿಟಿ ಪಂಗಡದ ವಿಚಾರದಲ್ಲಿ ಔದಾರ್ಯದ ನೀತಿಯನ್ನನುಸರಿಸಿಲ್ಲವೆಂಬ ರೀತಿ ಮಾತನಾಡಿದರು. ಈರೀತಿ ಅವರ ಬಾಯಿನಲ್ಲಿ ಬರದಿದ್ದರೂ 'ನಮಗೆ ಧೈರ್ಯ ಬರುವ ರೀತಿಯಲ್ಲಿ ವರ್ತಿಸುತ್ತಿಲ್ಲ, ದಯವಿಟ್ಟು ಇನ್ನೂ ಹೆಚ್ಚು ಔದಾರ್ಯದಿಂದ ವರ್ತಿಸಿ' ಎಂದು ಹೇಳಿದರು. ಯಾವುದೇ ಒಂದು ವಿಷಯವನ್ನು ಪ್ರಸ್ತಾಪಿಸಿ ಅವರು, ಒಬ್ಬರು ವ್ಯಕ್ತಿಯ ವಿಷಯದಲ್ಲಿ ಅನೌದಾರ್ಯದಿಂದ ವರ್ತಿಸಿದ್ದೀರಿ ಎಂದು ಹೇಳಿದರು. ಅವರು ಉದ್ದೇಶಿಸಿ ಹೇಳಿದವರು ನಮ್ಮ ದೇಶದ ವೇತನ ಪಡೆದು, ಪರದೇಶಕ್ಕೆ ಹೋಗಿ ಅಲ್ಲಿ ಪರಿಶ್ರಮಪಡೆದು ಬಂದು ಬೊಂಬಾಯಿನಲ್ಲಿ ಇಳಿಯುವುದಕ್ಕೆ ಬದಲು ಕರಾಚಿಯಲ್ಲಿ ಇಳಿದರೆಂಬುದು ನಮಗೆ ಗೊತ್ತಿದೆ. ಆದರೆ ಒಂದು ವಿಚಾರ. ಇದನ್ನು ಮನಸ್ಸಿನಲ್ಲಿಟ್ಟುಕೊಂಡು ಮೈನಾರಿಟಿಗಳ ವಿಚಾರದಲ್ಲಿ ಎಷ್ಟು ಔದಾರ್ಯದಿಂದ ವರ್ತಿಸಬೇಕೋ ಅದಕ್ಕಿಂತಲೂ ಹೆಚ್ಚಿನ ಔದಾರ್ಯದಿಂದಲೇ ವರ್ತಿಸುತ್ತಿದ್ದೇವೆ. ಭಾರತ ಸರ್ಕಾರದವರೂ ಕೂಡ ಈ ವಿಚಾರದಲ್ಲಿ ಬಹಳ ಪ್ರಗತಿಪರವಾದ ರೀತಿಯಲ್ಲಿ, ಮೈನಾರಿಟಿಗಳಿಗೆ ಧೈರ್ಯ ಬರುವ ರೀತಿಯಲ್ಲಿ ವರ್ತಿಸುತ್ತಿದ್ದಾರೆ.

ಈ ನಮ್ಮ ಸಂಸ್ಥಾನದ 1951–52ನೆಯ ಇಸವಿಯ ಆಯವ್ಯಯದ ಪಟ್ಟಿಯನ್ನು ಸರ್ಕಾರ ನಮ್ಮ ಮುಂದಿಟ್ಟಿದೆ. ಇದನ್ನು ಪರಿಶೀಲಿಸುವಾಗ ಸರ್ಕಾರ ಯಾವ ರೀತಿನೀತಿಗಳನ್ನನುಸರಿಸಿದೆ ಎಂಬುದನ್ನು ಸೂಕ್ಷ್ಮವಾಗಿ ಪರಿಶೀಲಿಸಿ ನೋಡಿದರೆ, ಸರ್ಕಾರದವರು ಬಹಳ ಧೈರ್ಯದಿಂದ, ಸಮಾಜ ಸಮತಾವಾದಿಗಳು ಯಾವ ಮೂಲಭೂತ ತತ್ವಗಳನ್ನು ಬೋಧಿಸುತ್ತಿದ್ದಾರೋ ಆ ತತ್ವಗಳನ್ನು ಆಚರಣೆಗೆ ತರುವುದರಲ್ಲಿ ಆಸಕ್ತರಾಗಿದ್ದಾರೆ, ಈ ಮಾರ್ಗದಲ್ಲಿ ಬಹುದೂರ ಹೋಗಿ ಜಯಶೀಲರಾಗಿದ್ದಾರೆಂಬುದು ವ್ಯಕ್ತಪಡುತ್ತದೆ.

ಹೀಗೆ ತಾವು ಯಾವ ಭಾಗದಲ್ಲಿ ನೋಡಿದರೂ, ಒಂದು ದೇಶವು ಪುನರ್ರಚಿತವಾಗಬೇಕಾಗಿದ್ದರೆ, ಅದಕ್ಕೆ ಯಾವ ರೀತಿನೀತಿಗಳು ಅಗತ್ಯವಾಗಿರುತ್ತವೆಯೋ, ಅಂಥಾ ರೀತಿನೀತಿಗಳನ್ನು ಒಳಗೊಂಡಿರುವುದು, ಈ ಬಡ್ಜೆಟ್ಟಿನಲ್ಲಿ ಸೂಚಿಸಿರತಕ್ಕಂಥಾ ಅಂಕಿಅಂಶಗಳಿಂದಲೇ ಎದ್ದುಕಾಣುತ್ತಿದೆಯೆಂದು ಹೇಳಬಹುದು. ಹೀಗೆ ನಮ್ಮ ಸರ್ಕಾರದವರು ಸದಾ ಶ್ರದ್ಧೆಯಿಂದ ಶ್ರಮವಹಿಸಿ, ದೇಶದ ಪ್ರಗತಿಗಾಗಿ ಹೆಚ್ಚು ದುಡ್ಡನ್ನು ಖರ್ಚು ಮಾಡುತ್ತಿದ್ದಾರೆ.

ದೇಶದಲ್ಲಿ ಅರಣ್ಯ ಸಂಪತ್ತನ್ನು ಹೆಚ್ಚು ಮಾಡಬೇಕು. ಅದರಬಗ್ಗೆ ಬೇಕಾದಷ್ಟು ದುಡ್ಡನ್ನು ಖರ್ಚು ಮಾಡುತ್ತಿದ್ದಾರೆ. ದೇಶದಲ್ಲಿ ಸಸ್ಯಸಮೃದ್ಧಿಯನ್ನಾಗಿ ಮಾಡಲು ಶ್ರಮಪಟ್ಟು ಕೆಲಸ ಮಾಡುತ್ತಿದ್ದಾರೆ.

ಇನ್ನು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿ, ಹೊಳೆಗಳಿಗೆ ಅಣೆಕಟ್ಟುಗಳನ್ನು ಹಾಕಿ ಪೋಲಾಗಿ ಹೋಗುತ್ತಿದ್ದಂಥ ನೀರನ್ನೆಲ್ಲಾ ತಡೆಗಟ್ಟಿ ದೇಶದಲ್ಲಿ ತನ್ಮೂಲಕ ನೀರಾವರಿ ಕಾಮಗಾರಿಗಳನ್ನು ಅಭಿವೃದ್ಧಿಪಡಿಸುತ್ತಿದ್ದಾರೆ. ಈಬಗ್ಗೆ ಅನೇಕ ದೊಡ್ಡ ದೊಡ್ಡ ಯೋಜನೆಗಳನ್ನು ಈಗಾಗಲೇ ಕೈಗೊಂಡು ಈ ಬಾಬಿನಲ್ಲಿ ಬಹಳ ದೂರವಾಗಿ ಹೋಗಿದ್ದಾರೆ.

ಇದೇ ರೀತಿ ಜಲಪಾತಗಳಿಂದ ವಿದ್ಯುಚ್ಛಕ್ತಿ ತಯಾರಿಸಲು ಇದರ ಬಗ್ಗೆ ದುಡ್ಡನ್ನು ಸಂಮೃದ್ಧಿಯಾಗಿ ಹಾಕಿದ್ದಾರೆ. ಈ ಬಾಬಿನಲ್ಲಿ ಈಗಾಗಲೇ ನಮ್ಮ ದೇಶಕ್ಕೆ ಹೆಚ್ಚು ಸಹಾಯವಾಗಿರುವುದೇ ಅಲ್ಲದೆ ನಮ್ಮ ಅಕ್ಕಪಕ್ಕದ ಪ್ರಾಂತ್ಯಗಳಿಗೂ ಸಹಾಯನೀಡಿ ಇದರಿಂದ ನಮಗೆ ಹೆಚ್ಚಿನ ವರಮಾನ ಕೂಡ ಈಗಾಗಲೇ ಬರುತ್ತಿದೆ. ಈ ವಿದ್ಯುಚ್ಛಕ್ತಿಯನ್ನು ಲಿಫ್ಟ್ ಇರಿಗೇಷನ್‌ಗೆ ಯಥೇಷ್ಟವಾಗಿ ಕೊಟ್ಟಿದ್ದಾರೆ. ಹೀಗೆ ನೀರಾವರಿ ಕಾಮಗಾರಿಗಳ ಸಹಾಯದಿಂದಲೂ ಮತ್ತು ಈ ವಿದ್ಯುಚ್ಛಕ್ತಿಯ ಸಹಾಯದಿಂದಲೂ ಸಾವಿರಾರು ಎಕರೆ ವ್ಯವಸಾಯ ನಡೆಯಲು ಅನುಕೂಲವಾಗುವಂತೆ ಮಾಡಿರುತ್ತಾರೆ. ಆದರೆ ಮಾನ್ಯ ಸದಸ್ಯರು ಇಂಥಾ ಅನುಕೂಲಗಳೊಂದರ ಕಡೆಗೂ ತಮ್ಮ ಗಮನವನ್ನೇ ಕೊಡದೇ ಏನೋ ಒಂದು ಉದ್ದೇಶದಿಂದ ಟೀಕೆ ಮಾಡಬೇಕೆಂದು ಹೀಗೆ ಟೀಕೆಗಳಲ್ಲಿ ತೊಡಗಿದ್ದಾರೆಂದು ನನಗೆ ಭಾಸವಾಗುತ್ತದೆ.

(ಸಭೆಯಲ್ಲಿ ಅನೇಕ ಮಾನ್ಯ ಸದಸ್ಯರು, ಮಾತನಾಡುತ್ತಿರುವ ಮಾನ್ಯ ಸದಸ್ಯರು ಸರ್ಕಾರದ ಪರವಾಗಿ ಉತ್ತರ ಕೊಡುತ್ತಿದ್ದಾರೋ ಅಥವಾ ಬಡ್ಜೆಟ್ ಮೇಲೆ ಮಾತನಾಡುತ್ತಿದ್ದಾರೋ ಎಂಬುದಾಗಿ ಪ್ರಶ್ನಿಸಲು ಪ್ರಯತ್ನಿಸುತ್ತಿದ್ದರು.)

Yes. I belong to the party in power. ಹಾಗೆ ಕೇವಲ ವಿನಾಕಾರಣಗಳ ಮೇಲೆ ಬಡ್ಜೆಟ್ ಸರಿಯಾಗಿಲ್ಲವೆಂದು ಟೀಕೆ ಮಾಡತಕ್ಕದ್ದು ಸರಿಯಾದ್ದಲ್ಲ. ಈ ದಿವಸ ಬೆಳಗ್ಗೆ ಮಾನ್ಯ ಚನ್ನಬೈರೇಗೌಡರು ಮಾತನಾಡುತ್ತಾ, ಪೋಲೀಸ್ ಇಲಾಖೆಯ ಬಗ್ಗೆ, ಏನು ಪೋಲೀಸ್ ಸಿಬ್ಬಂದಿ ಇದೆಯೋ ಇಲ್ಲವೋ ಒಂದೂ ಗೊತ್ತಾಗುವುದಿಲ್ಲವೆಂದು ತಿಳಿಸಿದರು. ಆದರೆ ಪೋಲೀಸ್ ಸಿಬ್ಬಂದಿ ಇಲ್ಲದೆ ಎಲ್ಲಿಯೂ ಹೋಗಿಲ್ಲ. ಹಿಂದೆಲ್ಲ ಯಾವ ರೀತಿ ಇತ್ತೋ, ಆ ರೀತಿಯಲ್ಲಿ ಈ ದಿವಸ ಇಲ್ಲ. ಅದು ಬಹಳ ಮಾರ್ಪಾಡಾಗಿದೆ.

(ಶ್ರೀ ಕೆ. ಪುಟ್ಟಸ್ವಾಮಿಯವರು.)

ಸರ್ಕಾರದವರು ಅನೇಕ ರೀತಿಯಲ್ಲಿ ದೇಶಾಭ್ಯುದಯ ಕಾರ್ಯಗಳನ್ನು ಮಾಡಿದ್ದಾರೆ. ಉದಾಹರಣೆಗೆ ಮಲ್ಟಿಪರ್ಪಸಸ್ ಕೋ-ಆಪರೇಟಿವ್ ಸೊಸೈಟಿಗಳನ್ನು ಸ್ಥಾಪನೆಮಾಡಿ, ಜನಸಾಮಾನ್ಯರಿಗೆ ನಿತ್ಯವೂ ಬೇಕಾಗುತ್ತಿದ್ದಂಥ ಅನೇಕ ಸಾಮಾನುಗಳು ಸರಾಗವಾಗಿ ದೊರೆಯದೆ ಬಹಳ ತೊಂದರೆಯಾಗಿತ್ತು, ಅದನ್ನು ಈ ಸೊಸೈಟಿಗಳ ಸ್ಥಾಪನೆಯಿಂದ ನಿವಾರಣೆ ಮಾಡಿದ್ದಾರೆ. ಈಗ ಜನರಿಗೆ ಅಂಥಾ ಯಾವ ತೊಂದರೆಗಳೂ ಇಲ್ಲದೆ ಸಾಮಾನುಗಳು ಸರಾಗವಾಗಿ ದೊರೆಯುತ್ತಿವೆ. ಇಂಥಾ ಒಂದು ಸಾಹಸ ಕಾರ್ಯವನ್ನು ಮಾಡಲು ನಮ್ಮ ಕಾಂಗ್ರೆಸ್ ಸರ್ಕಾರವಲ್ಲದೆ ಮತ್ತೆ ಯಾವ ಸರ್ಕಾರವಿದ್ದರೂ ಇದು ಸಾಧ್ಯವಾಗುತ್ತಿರಲಿಲ್ಲ. ಇಂಥಾ ಒಂದು ಮಹತ್ಕಾರ್ಯವನ್ನು ಈ ಸೊಸೈಟಿಗಳ ಸ್ಥಾಪನೆಯಿಂದ ಏರ್ಪಾಡು ಮಾಡಿದ್ದಾರೆ. ತಮ್ಮಲ್ಲಿ ಯಾರಿಗಾದರೂ ಈಬಗ್ಗೆ ಅನುಮಾನವಿದ್ದ ಪಕ್ಷದಲ್ಲಿ ಮುಳಬಾಗಲಿಗೆ ಹೋಗಿ ನೋಡಿ, ಅಲ್ಲಿ ಶ್ರೀ ಎಂ. ವಿ. ಕೃಷ್ಣಪ್ಪನವರು ಹೇಗೆ ನಡೆಸುತ್ತಿದ್ದಾರೆಂಬುದು ಗೊತ್ತಾಗುತ್ತದೆ, ಶ್ರೀ ಶಂಕರಗೌಡರು ಹೇಗೆ ನಡೆಸುತ್ತಿದ್ದಾರೆಂಬುದನ್ನು ತಾವು ಮಂಡ್ಯಕ್ಕೆ ಹೋಗಿ ನೋಡಿದರೆ ಆಗ ತಮಗೇ ಗೊತ್ತಾಗುತ್ತದೆ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅಷ್ಟೇ ಏಕೆ, ದಾವಣಗೆರೆಯಲ್ಲಿ ಮತ್ತು ಶ್ರೀ ಮುದ್ದುರಾಮಯ್ಯನವರು ಕೊರಟಗೆರೆಯಲ್ಲಿ ಬಹಳ ವಿತರಣೆಯಿಂದ ನಡೆಸುತ್ತಿದ್ದಾರೆ.

ಶ್ರೀ ಟಿ. ಪುಟ್ಟಸ್ವಾಮಿಯವರು.—ಈಗ ಸರ್ಕಾರದವರು ಯಾವ ರೀತಿನೀತಿಗಳನ್ನು ಅನುಸರಿಸುತ್ತಿದ್ದಾರೋ ಅವು ಬಡವರಿಗಿರತಕ್ಕ ಬಡತನವನ್ನು ಕಮ್ಮಿ ಮಾಡಿ ಅವರ ಜೀವನದ ಹೊರೆಯನ್ನು ತಗ್ಗಿಸಿ ಶ್ರೀಮಂತರಲ್ಲಿ ಹಣ ಕೇಂದ್ರೀಕೃತವಾಗದಂತೆ ತಡೆಯಲು ಎಷ್ಟೆಷ್ಟು ಪ್ರಯತ್ನಗಳನ್ನು ಮಾಡಬಹುದೋ ಅಷ್ಟೆಲ್ಲವನ್ನೂ ಮಾಡಿದ್ದಾರೆ.

ಗೃಹ ಕೈಗಾರಿಕೆಗಳ ಬಗ್ಗೆ ಚಾಪೆ, ಮಂದಲಿಕೆ ಚರ್ಮ ಸುಲಿಯುವುದು, ಗುಂಡಿಗಳನ್ನು ಮಾಡುವುದು ಇತ್ಯಾದಿ ಕೈಗಾರಿಕೆಗಳ ಬಗ್ಗೆ ಹೆಚ್ಚು ಹಣವನ್ನೊದಗಿಸಿ, ಎಲ್ಲೆಲ್ಲಿಯೂ ಉತ್ತೇಜನ ಕೊಡುತ್ತಿದ್ದಾರೆ. ಈ ಬಗ್ಗೆ ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ ಸರ್ ಎಂ. ವಿಶ್ವೇಶ್ವರಯ್ಯನವರ ನೇತೃತ್ವದಲ್ಲಿ ಮತ್ತು ಅವರ ಸಲಹೆಗಳ ಮೇರೆಗೆ ಈ ಕೈಗಾರಿಕೆಗಳ ಬಗ್ಗೆ ಯಥೇಷ್ಟವಾಗಿ ಉತ್ತೇಜನ ಕೊಡಲು ಏರ್ಪಾಡು ಮಾಡಿದ್ದಾರೆ.

ಇದೇರೀತಿ ರೇಷ್ಮೆ ಕೈಗಾರಿಕೆಯ ಬಗ್ಗೆ ಸರ್ಕಾರದವರು ಬಹಳ ಉತ್ತೇಜನವೀಯುತ್ತಿದ್ದಾರೆ. ಹಿಂದೆ ಟಿ. ನರಸೀಪುರದಲ್ಲಿರುವ ಫ್ಯಾಕ್ಟರಿ ಮುಚ್ಚಿಹೋಗಿದ್ದಾಗ ಈ ವ್ಯವಸಾಯದಲ್ಲಿ ಅನೇಕ ಸಂಸಾರಗಳು ನಷ್ಟಹೊಂದಿ ತೊಂದರೆಗೀಡಾಗಿದ್ದಾಗ ಆ ಫ್ಯಾಕ್ಟರಿಗೆ ವಿಶೇಷ ಸಹಾಯ ನೀಡಿ ಆ ಸಂಸಾರಗಳನ್ನೆಲ್ಲಾ ಉಳಿಸಿದ್ದಾರೆ. ಹೀಗೆ ಸರ್ಕಾರದವರು ಒಂದು ದ್ರವ್ಯ ಸಹಾಯವನ್ನು ಆ ಫ್ಯಾಕ್ಟರಿಗೆ ನೀಡದಿದ್ದರೆ ರೇಷ್ಮೆ ಕೈಗಾರಿಕೆಯನ್ನು ಅವಲಂಬಿಸಿದ್ದ ಜನರ ಗತಿ ಏನಾಗಬೇಕಾಗಿತ್ತು? ಹೀಗೆ ಇಂದು ಸರ್ಕಾರದವರು ನೀಡುತ್ತಿರುವ ಸಹಾಯದ ಫಲವಾಗಿ, ಪರಿಣಾಮವಾಗಿ ಈ ಕಸುಬಿನಿಂದ ಸಾವಿರಾರು ಸಂಸಾರಗಳು ತಮ್ಮ ಜೀವನ ನಡೆಸಿಕೊಳ್ಳುತ್ತಿವೆ. ಸರ್ಕಾರದವರು ಕೈಗೊಂಡಿರತಕ್ಕ ರೀತಿನೀತಿಗಳ ಫಲವಾಗಿ ದೇಶವು ನಾನಾ ಮುಖಗಳಲ್ಲಿ ಪ್ರಯೋಜನವನ್ನು ಪಡೆಯುತ್ತಿದೆ. ಅವರು ಪ್ರತಿಯೊಂದನ್ನೂ ದೀರ್ಘವಾಗಿ ಆಲೋಚನೆಮಾಡಿ, ಹಿಂದೇನು ತೊಂದರೆಗಳಿದ್ದವು, ಈಗೇನು ತೊಂದರೆಗಳಿವೆ ಎಂಬುದನ್ನೆಲ್ಲಾ ಪರಿಶೀಲಿಸಿ ಮೊದಲು ಯಾವುದಕ್ಕೆ ಕೈಹಾಕಬೇಕೋ ಅದನ್ನೇ ಕೈಗೊಂಡಿದ್ದಾರೆ.

ಇನ್ನು ಅಧಿಕಾರಿಗಳ ವಿಚಾರದಲ್ಲಿ ಕೆಲವು ಮಾನ್ಯಸದಸ್ಯರು ಬಹಳ ಔದಾರ್ಯರಹಿತವಾಗಿ ಟೀಕೆಮಾಡಿದ್ದಾರೆ. ಅಷ್ಟೇ ಏಕೆ, ತಮ್ಮ ಎಲ್ಲೆಯನ್ನು ಸಹ ದಾಟಿ ಹೋಗಿ ಟೀಕೆ ಮಾಡಿದ್ದಾರೆ. ಆದರೆ ಇವರು ಹಾಗೆ ಮಾಡಿರತಕ್ಕ ಟೀಕೆಗಳಲ್ಲಿ ಕೇವಲ ಆಧಾರರಹಿತವಾದವುಗಳೆಂಬುದಕ್ಕೆ ನಾನು ತಮಗೊಂದು ನಿದರ್ಶನ ಕೊಡುತ್ತೇನೆ. ಕೆಲವು ದಿನಗಳ ಹಿಂದೆ ಇದೇ ಮಾನ್ಯ ಸಭೆಯು ಮುಂದೆ ಇಂಡಿಯನ್ ಅಡ್ಮಿನಿಸ್ಟ್ರೇಟಿವ್ ಸರ್ವಿಸ್ ಅಧಿಕಾರಿಗಳ ವಿಚಾರ ಚರ್ಚೆಗೆ ಬಂದಿದ್ದಾಗ ಇದೇ ಸದಸ್ಯರುಗಳು ಇಂದು ಯಾರು ಇಷ್ಟು ಉಗ್ರವಾಗಿ ಟೀಕೆಗಳನ್ನು ಮಾಡಿದ್ದಾರೋ ಅಂಥಹವರೇ ಆ ದಿವಸ ಏನು ಹೇಳಿರುತ್ತಾರೆಂಬುದನ್ನು ನೋಡಿದರೆ ಇವರು ಈ ದಿವಸ ಹೇಳಿದ್ದೆಲ್ಲಾ ನಿಜವಲ್ಲವೆಂದು ಕಾಣುತ್ತದೆ. ಮಾನ್ಯ ವೆಂಕಟೇಶನ್‌ರವರು ಮಂಡ್ಯದಲ್ಲಿರತಕ್ಕ ಕೆಲವು ಅಧಿಕಾರಿಗಳು ಕೋಮುವಾರು ಭಾವನೆ ತೋರಿಸಿ ಕೆಲಸ ಮಾಡುತ್ತಿದ್ದಾರೆ, ಅಂಥಾವರನ್ನು ತೆಗೆದು ಬೇರೆ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿಕೊಡಬೇಕೆಂದು ಕೇಳಿದರು. ಆದರೆ ಅಲ್ಲಿ ಅಂತಹ ಕೋಮುವಾರು ಭಾವನೆ ತೋರಿಸತಕ್ಕ ಅಧಿಕಾರಿಗಳು ಯಾರೂ ಇಲ್ಲ. ಅವರೆಲ್ಲರೂ ನ್ಯಾಯವಾಗಿಯೇ ಕೆಲಸಮಾಡುತ್ತಿದ್ದಾರೆ. ಹೀಗೆ ಯಾವುದೋ . . .

ಶ್ರೀ ಎಂ. ವೆಂಕಟೇಶನ್‌ರವರು.—ಚಿಕ್ಕೋಡಿ ಗ್ರಾಮದಲ್ಲಿ ಹರಿಜನರಿಗೆ ಹೊಡೆದಾಟಗಳು ನಡೆದು ತೊಂದರೆಯಾಗಿರುತ್ತೆಂದು ನಾನು ಬಂದು ಜಿಲ್ಲಾಧಿಕಾರಿಗಳಿಗೆ ತಿಳಿಸಿದಾಗ, ನೀವೂ ಮತ್ತು ಆ ಜಿಲ್ಲಾಧಿಕಾರಿಗಳಿಬ್ಬರೂ ಸೇರಿ ಸರಿಮಾಡಿಕೊಂಡುಬಿಡಿ ಎಂದು ತಾವೇ ಆ ದಿವಸ ಹೇಳಲಿಲ್ಲವೆ?

ಶ್ರೀ ಕೆ. ಪುಟ್ಟಸ್ವಾಮಿಯವರು.—ಚಿಕ್ಕೋಡಿ ಗ್ರಾಮದ ವಿಚಾರ ಮಾನ್ಯ ಶ್ರೀ ವೆಂಕಟೇಶನ್‌ರವರಿಗೆ ಗೊತ್ತಿರುವುದಕ್ಕಿಂತ ನನಗೆ ಇನ್ನೂ ಹೆಚ್ಚಾಗಿ ಗೊತ್ತಿದೆ . . .

(ಸಭೆಯಲ್ಲಿ ಗಲಾಟೆ)

Mr. SPEAKER.—Order, Order, please.

ಶ್ರೀ ಕೆ. ಪುಟ್ಟಸ್ವಾಮಿಯವರು.—ಹೀಗೆ ಸರ್ಕಾರದವರು ಮಂಡಿಸಿರುವ ಬಡ್ಜೆಟ್ಟನ್ನು ಯಾವ ದೃಷ್ಟಿಯಿಂದ ನೋಡಿದರೂ, ಯಾವ ರೀತಿಯಲ್ಲಿ ದೇಶದ ಪುನರುಜ್ಜೀವನಕ್ಕೆ ಅವಕಾಶಗಳನ್ನು ಕಲ್ಪಿಸಬೇಕೊ ಅವುಗಳೆಲ್ಲವನ್ನೂ ಕಲ್ಪಿಸಿದ್ದಾರೆಂಬುದಕ್ಕೆ ಈ ಬಡ್ಜೆಟ್ಟಿನಲ್ಲಿ ಆಧಾರಗಳಿವೆ. ಒಂದು ಕಾಸೂ ಪೋಲುಮಾಡದಂತೆ, ಎಲ್ಲವೂ ಸದ್ವಿನಿಯೋಗವಾಗುವಂತೆ ಮಾಡಿದ್ದಾರೆ. ಆದರೆ ಕಾರ್ಯಾಚರಣೆಯಲ್ಲಿ ಅಲ್ಲಲ್ಲೇ ಅಲ್ಪಸ್ವಲ್ಪ ನ್ಯೂನಾತಿರಿಕ್ತಗಳಿರಬಹುದು. ಆದರೆ ಅಂಥಾ ಲೋಪದೋಷಗಳನ್ನೇ ಸಾರ್ವಜನಿಕರು ಸರ್ಕಾರದವರ ಗಮನಕ್ಕೆ ಸಕಾಲದಲ್ಲೇ ತಂದು ಸಹಕಾರ ನೀಡಿ ನಡೆದರೆ ದೇಶಕ್ಕೆ ಕ್ಷೇಮ ಮತ್ತು ಕಲ್ಯಾಣ ಉಂಟಾಗುತ್ತದೆ. ಈಗ ಸರ್ಕಾರದವರು ಮಂಡಿಸಿರತಕ್ಕ ಬಡ್ಜೆಟ್ ಸರ್ವಸಮ್ಮತವಾಗಿದೆ. ಅವರು ಅನುಸರಿಸಿರತಕ್ಕ ರೀತಿನೀತಿಗಳು ಸರ್ವರೀತಿಯಲ್ಲಿಯೂ ಸಮರ್ಪಕವಾಗಿವೆ. ಅದಕ್ಕಾಗಿ ಮಾನ್ಯ ಅರ್ಥಿಕಸಚಿವರಾದ ಶ್ರೀ ದಾಸಪ್ಪನವರು ಎಲ್ಲರಿಂದಲೂ ವಂದನಾರ್ಹರೆಂದು ಹೇಳಿ ಸರ್ವರೂ ಈ ಆಯವ್ಯಯ ಪಟ್ಟಿಗೆ ಬೆಂಬಲ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಸಿ. ಸೂರ್ಯನಾರಾಯಣಶೆಟ್ಟರು (ಹಾಸನ ಜಿಲ್ಲೆ).—ಮಾನ್ಯ ಅಧ್ಯಕ್ಷರೇ, ಮಾನ್ಯ ಹಣಕಾಸಿನ ಸಚಿವರು ತಂದಿರತಕ್ಕಂಥ ಈ ಬಡ್ಜೆಟ್ಟನ್ನು ನಾನು ಸ್ವಾಗತಿಸುತ್ತಾ ಇದರಲ್ಲಿರತಕ್ಕ ಕೆಲವು ಲೋಪದೋಷಗಳನ್ನು ನನಗೆ ತಿಳಿದಮಟ್ಟಿಗೆ ಹೇಳಬೇಕಾದ್ದು ಕರ್ತವ್ಯವಾದ್ದರಿಂದ ಅದನ್ನು ಪ್ರಸ್ತಾಪಿಸುತ್ತೇನೆ. ಸ್ವಾಮಿ, ಈ ಬಡ್ಜೆಟ್ ನೋಡಿದರೆ ಈ ಸಲ ಕೆಲವು ಹೆಲ್ತ್ ಸೆಂಟರುಗಳನ್ನು ಹೆಚ್ಚು ಮಾಡಿದ್ದೀರೆಂದು ಕಂಡುಬರುತ್ತದೆ. ಹೋದವರ್ಷ 11 ಲಕ್ಷ ರೂಪಾಯಿಗಳಿದ್ದುದನ್ನು ಈ ಸಲ 22 ಲಕ್ಷ ರೂಪಾಯಿಗಳಿಗೇರಿಸಿರುವುದು ಸಂತೋಷಪಡುವ ವಿಚಾರ. ಇರಿಗೇಷನ್ ಯೋಜನೆಗಳಿಗೆ, ನಾಲೆ ದುರಸ್ತಿಗೆ ಹೆಚ್ಚು ಹಣ ಇದೆ. ಕಳೆದ ಸಾಲಿನಲ್ಲೂ ಅನೇಕ ನಾಲೆಗಳ ದುರಸ್ತಿಗಾಗಿ ಹೆಚ್ಚು ಹಣ ಕೊಟ್ಟಿರುವುದು ನನಗೆ ಗೊತ್ತು. ಕೆಲವು ಅಣೆಕಟ್ಟುಗಳಲ್ಲಿ ಹೂಳು ತುಂಬಿಕೊಂಡಿದೆ. ಶ್ರೀರಾಮದೇವರ ಅಣೆಕಟ್ಟಿನ ಉತ್ತರ ಮತ್ತು ದಕ್ಷಿಣ ನಾಲೆಗಳು 40 ಅಡಿ ಇರಬೇಕಾದ್ದು ಹೂಳು ತುಂಬಿ 25 ಅಡಿಗಳಾಗಿವೆ. ಮಾನ್ಯ ಗೃಹಸಚಿವರು ಅಲ್ಲಿಗೆ ಬಂದಾಗ ಹತ್ತಾರು ಮೈಲಿ ಏರಿಯಮೇಲೆ ಹೋಗಿ ಹೂಳನ್ನು ತೆಗೆಸುವುದಕ್ಕೆ ಏರ್ಪಾಡು ಮಾಡಿದರು. ಈಗ ನಾಲೆಯ ಕೊನೆಯವರೆಗೂ ಸಲೀಸಾಗಿ ನೀರು ಬರುತ್ತಿದೆ. ಈ ಕೆಲಸವನ್ನು ಅವರು ಬಹಳ ಶ್ರದ್ಧೆಯಿಂದ ಮಾಡಿದ್ದಾರೆಂದು ಹೇಳಲೇಬೇಕಾಗಿದೆ. ಅದೂ ಅಲ್ಲದೆ ಕೆರೆಗಳಲ್ಲಿ ಹೂಳು ತೆಗೆಯುವುದಕ್ಕೂ ಪ್ರಯತ್ನ ನಡೆದಿದೆ. ಇದಕ್ಕೆ ಇನ್ನೂ ಹೆಚ್ಚು ಹಣ ವ್ಯಯವಾದರೂ ಚಿಂತೆಯಿಲ್ಲ. ಹಳ್ಳಿಗಾಡಿನಲ್ಲಿರುವ ಕೆರೆಗಳ ವಿಚಾರದಲ್ಲಿ ಹೆಚ್ಚು ಮುತುವರ್ಜಿ ವಹಿಸಬೇಕೆಂದು ಪ್ರಾರ್ಥಿಸುತ್ತೇನೆ. ಆದರೆ ಪ್ರಜಾಭಿಪ್ರಾಯಕ್ಕೆ ಹೆಚ್ಚು ಮನ್ನಣೆ ದೊರೆಯಬೇಕಾದ ಈ ಕಾಲದಲ್ಲಿ ಏಕೋ ನಮ್ಮ ಮಾನ್ಯ ಹಣಕಾಸಿನ ಸಚಿವರು ಕೆಲವು ವಿಚಾರಗಳಲ್ಲಿ ಹೆಚ್ಚಾಗಿ ಮನ್ನಣೆ ಕೊಡುತ್ತಿಲ್ಲ. ಇದು ತುಂಬಾ ವಿಷಾದಕರ. ಹೋದಸಲ ಈ ಸಭೆಯಲ್ಲಿ ಪಾನನಿರೋಧದ ವಿಚಾರ ಬಂದಿತ್ತು. ಆಗ ಇದಕ್ಕೆ ಸಂಬಂಧಪಟ್ಟ ನಿರ್ಣಯ ಸಹ ಬಂದಿದ್ದಾಗ ಪಾನನಿರೋಧದ ವಿಚಾರದಲ್ಲಿ ಜವಾಬು ದಯಪಾಲಿಸುತ್ತಾ ಮುಂದಿನ ಬಡ್ಜೆಟ್ಟಿನಲ್ಲಿ ಸಾಧ್ಯವಾದ ಮಟ್ಟಿಗೆ ಹಾಸನ ಜಿಲ್ಲೆಯಲ್ಲಿ ಪಾನನಿರೋಧವನ್ನು ಜಾರಿಗೆ ತರುತ್ತೇವೆಂದು ಭರವಸೆ ನೀಡಿದ್ದರು. ಆದರೆ ಈ ಬಡ್ಜೆಟ್ಟಿನಲ್ಲಿ ಆ ವಿಚಾರದಲ್ಲಿ ಪ್ರಸ್ತಾಪವೇ ಇಲ್ಲ. ಇದು ಕಳವಳವನ್ನುಂಟುಮಾಡಿದೆ.

ಆಮೇಲೆ ಮಾರಾಟ ತೆರಿಗೆಯನ್ನು ಸಿಂಗಲ್ ಪಾಯಿಂಟ್ ಪ್ರಕಾರ ಹಾಕಲು ಹೋದ ಸಲ ಇದರ ವಿಚಾರ ಬಂದಾಗ ಯೋಚನೆ ಮಾಡುವುದಾಗಿ ಭರವಸೆ ಕೊಟ್ಟಿದ್ದರು. ಈಗ ಹಣದ ವಿಚಾರದಲ್ಲಿ ಅನಾನುಕೂಲವಿದ್ದರೆ ಈ ತೆರಿಗೆಯನ್ನು ಮೂರು ಕಾಸಿಗಿಂತ ಹೆಚ್ಚು ಮಾಡುವುದಕ್ಕೆ ತಕರಾರು ಏನೂ ಇಲ್ಲ. ಸಿಂಗಲ್‌ಪಾಯಿಂಟ್ ನಂತೆ ಹಾಕಿ ಮೂರು ಕಾಸಿಗೆ ಬದಲಾಗಿ ಆರು ಕಾಸು ಬೇಕಾದರೂ ಹಾಕಿ ಎಂದು ಹೇಳಿದೆ. ಈಗ ಮಾರಾಟ ತೆರಿಗೆ ಮಲ್ಟಿಪಾಯಿಂಟ್ ಪ್ರಕಾರ ಇರುವುದರಿಂದ ಈ ಸಲ 60 ಲಕ್ಷ ರೂಪಾಯಿಗಳಷ್ಟು ತೆರಿಗೆ ಕಡಿಮೆ ಬಂದಿದೆ. ಇದಕ್ಕೆ ಕಾರಣ ಸಿಂಗಲ್‌ಪಾಯಿಂಟ್‌ನಂತೆ ಹಾಕದಿರುವುದೇ ಆಗಿದೆ. ಸಿಂಗಲ್ ಪಾಯಿಂಟ್‌ನಂತೆ ಮಾಡಿದರೆ ಹೆಚ್ಚು ಉತ್ಪತ್ತಿಯಾಗುತ್ತದೆಂದು ಎಷ್ಟೋ ಸಲ ಹೇಳಿದರೂ ಅದನ್ನು ಗಮನಿಸಿಲ್ಲ. ಈಗಲಾದರೂ ಜಾಗ್ರತೆಯಾಗಿ ಇದಕ್ಕೆ ಗಮನ ಕೊಟ್ಟರೆ ಉತ್ಪತ್ತಿಯೂ ಹೆಚ್ಚುತ್ತದೆ, ಜನರಿಗೆ ಕಿರುಕುಳವೂ ಕಡಿಮೆಯಾಗುತ್ತದೆ.

ಇನ್ನು ರೋಡ್ ಟ್ರಾನ್ಸ್‌ಪೋರ್ಟ್ ವಿಚಾರ. ಪ್ರತಿ ಸಲವೂ ಬಸ್ಸುಗಳು ಬೆಂಗಳೂರಿಗೆ ಒಂದೆರಡು ಮೈಲಿ ದೂರದಲ್ಲಿ ನಿಂತ ಹೋಗುತ್ತದೆಂದು ಹೇಳುತ್ತಿದ್ದಾರೆ. ಇದನ್ನು ಸರಿಪಡಿಸುವುದು ಬಹು ಸುಲಭ. ಪೆಟ್ರೋಲನ್ನು ಹೆಚ್ಚಾಗಿ ಕ್ಯಾನುಗಳಲ್ಲಿ ಸರಬರಾಯಿಮಾಡಿ ಅದನ್ನು ಒಡೆಯದೆ ಇಟ್ಟಿದ್ದು ಸಮಯಬಿದ್ದಾಗ ಮಾತ್ರ ಉಪಯೋಗಿಸಿಕೊಳ್ಳುವಂತೆ ಮಾಡಿದರೆ ಈ ತೊಂದರೆಯು ಪರಿಹಾರವಾಗಿ ಬಸ್ಸುಗಳ ಓಡಾಟ ಸಲೀಸಾಗುತ್ತದೆ. ಇದನ್ನು ಅನೇಕ ಸಲ ಹೇಳಿದರೂ ಏಕೋ ಗಮನಕೊಟ್ಟಿಲ್ಲ. ಸರ್ಕಾರಿ ಬಸ್ಸು ಬಂದಾಗ ಜನರಿಗೆ ಬಹು ಉತ್ಸಾಹವಿತ್ತು. ಅದರಲ್ಲೇ ಪ್ರಯಾಣಮಾಡಲು ಕಾತುರರಾಗಿದ್ದರು. ಈಗ ಸರ್ಕಾರಿ ಬಸ್ಸುಗಳಲ್ಲಿ ಕೂತುಕೊಳ್ಳುವುದಕ್ಕೆ ಜನರು ಹಿಂದೇಟು ಹಾಕುವುದನ್ನು ನೋಡಿದರೆ ಅಲ್ಲಿ ಏನೋ ದೊಡ್ಡ ಲೋಪವಿದೆ. ಮಾನ್ಯ ಸಚಿವರು ಈ ವಿಚಾರಕ್ಕೆ ಹೆಚ್ಚು ನಿಗಾ ಕೊಡುತ್ತಾರೆಂದು ನಂಬಿದ್ದೇನೆ. ಇನ್ನೊಂದು ಸಲಹೆ. ಸರ್ಕಾರಿ ಬಸ್ಸುಗಳು ಹೋಗುವ ಜಾಗಗಳಲ್ಲೆಲ್ಲಾ ಅಲ್ಲಲ್ಲಿ ಕೆಲವು ಏಜೆಂಟರುಗಳನ್ನು ನೇಮಿಸಿದರೆ ಹಣ ಪೋಲಾಗುವುದಕ್ಕೆ ಅವಕಾಶವಿರುವುದಿಲ್ಲ. ಈಗ ಸಾಕಷ್ಟು ಉತ್ಪತ್ತಿಯಿಲ್ಲದೆ ಹಣ ಪೋಲಾಗುತ್ತಿದೆ. ಆದ್ದರಿಂದ ಏಜೆಂಟರುಗಳನ್ನು ನೇಮಕಮಾಡಿದರೆ ಉತ್ಪತ್ತಿ ಹೆಚ್ಚುತ್ತದೆಂದು ಹೇಳುತ್ತೇನೆ.

ಇದಲ್ಲದೆ ಹೆಚ್ಚು ಆಹಾರ ಬೆಳೆಯುವ ಯೋಜನೆಯ ವಿಚಾರವನ್ನು ಹೇಳುತ್ತಾ ಅದು ಜಯಪ್ರದವಾಗಲಿಲ್ಲವೆಂದು ಅನೇಕರು ಹೇಳುತ್ತಿದ್ದಾರೆ. ಆ ಯೋಜನೆಯೇ ಚೆನ್ನಾಗಿದ್ದರೂ ಯಶಸ್ವಿಯಾಗದಿರುವುದಕ್ಕೆ ಕೆಲವು ಮುಖ್ಯ ಕಾರಣಗಳಿವೆ. ಸರ್ಕಾರದ ಕೈಗಾರಿಕಾ ನೀತಿಯೇ ಆಹಾರ ಹೆಚ್ಚಾಗಿ ಬೆಳೆಯುವ ಯೋಜನೆ ಸರಿಯಾಗಿ ಮುಂದುವರಿಯದಿರುವುದಕ್ಕೆ ಕಾರಣ ಎಂದು ಒಂದು ದೃಷ್ಟಿಯಿಂದ ಹೇಳಬೇಕಾಗಿದೆ. ಮಾನ್ಯ ಹಣಕಾಸಿನ ಸಚಿವರು ಕೈಗಾರಿಕಾ ನೀತಿಯನ್ನು ಬಹಳ ಉತ್ಸಾಹದಿಂದ ಮಾಡುತ್ತಿದ್ದಾರೆ. ಇದರಿಂದ ಒಳ್ಳೆಯದಾಗುವುದಕ್ಕೆ ಬದಲಾಗಿ ಕೆಲವು ದುಷ್ಪರಿಣಾಮಗಳಾಗುವುದಕ್ಕೆ ಅವಕಾಶವಾಗಿದೆ. ಸರ್ಕಾರದ ನೀತಿಯು ಕೈಗಾರಿಕೆಗಳನ್ನು ಕೇಂದ್ರೀಕರಣ ಮಾಡುವುದೇ ಆಗಿದೆ. ಹಾಗೆ ಮಾಡುವುದಕ್ಕೆ ಬದಲಾಗಿ ಕೈಗಾರಿಕೆಗಳನ್ನು ವಿಕೇಂದ್ರೀಕರಣಮಾಡಿ ದೊಡ್ಡದೊಡ್ಡ ಎಲ್ಲಾ ಫ್ಯಾಕ್ಟರಿಗಳನ್ನೂ ಎಲ್ಲಿ raw materials ಸಿಕ್ಕುತ್ತವೆಯೋ ಅಲ್ಲಿಗೇ ಹಂಚಿದರೆ ಉತ್ತಮ. ಅದೂ ಅಲ್ಲದೆ ಫ್ಯಾಕ್ಟರಿಗಳು ಹೆಚ್ಚಾಗಿರುವ ಬೆಂಗಳೂರು ಮುಂತಾದ ಕಡೆ ಜನಸಂಖ್ಯೆಯು ವಿಪರೀತವಾಗಿ ಹೆಚ್ಚಿದೆ. ಹಳ್ಳಿಗಾಡಿನ ಜನರು ಕೂಲಿ ಹೆಚ್ಚಾಗಿ ಸಿಕ್ಕುವುದರಿಂದ ವಿಶೇಷವಾಗಿ ಫ್ಯಾಕ್ಟರಿಗಳಿರುವ ಸ್ಥಳಗಳಿಗೇ ಬರುತ್ತಿದ್ದಾರೆ. ಇದರಿಂದ ಹಳ್ಳಿಯಲ್ಲಿ ವ್ಯವಸಾಯಮಾಡುವುದೇ ಕಡಿಮೆಯಾಗಿದೆ. ಇದಲ್ಲದೆ ಅವರಿಗೂ ರೇಷನ್ ಕಾರ್ಡುಗಳನ್ನು ಕೊಟ್ಟು ಆಹಾರವನ್ನೊದಗಿಸುವ ಜವಾಬ್ದಾರಿಯೂ ಸರ್ಕಾರಕ್ಕೆ ಹೆಚ್ಚುತ್ತಿದೆ. ಆದ್ದರಿಂದ ಯಾವ ದೃಷ್ಟಿಯಿಂದ ನೋಡಿದರೂ ಕೈಗಾರಿಕೆಗಳನ್ನು ಕೇಂದ್ರೀಕರಣ ಮಾಡುವ ನೀತಿಯು ಸರಿಯಲ್ಲ, ವಿಕೇಂದ್ರೀಕರಣ ಮಾಡುವುದೇ ಒಳ್ಳೆಯದು. Raw materials ಸಿಕ್ಕುವ ಕಡೆ ಅವುಗಳನ್ನು ಏರ್ಪಾಡುಮಾಡಿದರೆ ತಮ್ಮ ಯೋಜನೆಗಳೂ ಸಫಲವಾಗುತ್ತವೆ.

ಪೋಲೀಸ್ ಇಲಾಖೆಯ ವಿಚಾರದಲ್ಲಿ ಹೇಳುವುದಾದರೆ ಅಲ್ಲಿನವರು ಎಷ್ಟು ದಕ್ಷತೆಯಿಂದ ಇರಬೇಕೋ ಅಷ್ಟುಮಟ್ಟಿಗೆ ಕೆಲಸಮಾಡುತ್ತಿಲ್ಲವೆಂಬುದನ್ನು ಹೇಳಲೇಬೇಕಾಗಿದೆ. ಹೋಂಗಾರ್ಡುಗಳ ಯೋಜನೆ ಪ್ರಾರಂಭ

(ಶ್ರೀ ಎಸ್. ಸಿ. ಸೂರ್ಯನಾರಾಯಣಶೆಟ್ಟರು).

ವಾಗಿ ಎರಡು ಮೂರು ವರ್ಷಗಳು ಆಯಿತು. ಅದು ಬಂದಾಗ ಬಹಳ ಉಪಕಾರವಾಗುತ್ತದೆಂಬ ಒಂದು ಭಾವನೆಯಿತ್ತು. ಏಕ್‌ದಂ ಅದಕ್ಕೆ ಕೊಡುವ ಗ್ರಾಂಟನ್ನು ಪೂರ ಕಡಿಮೆ ಮಾಡಿದ್ದಾರೆ. ಇಲ್ಲಿರುವ ಮಾನ್ಯ ಮಿತ್ರರಾದ ಶ್ರೀ ಸಿದ್ದನಂಜಪ್ಪನವರು ಹೋಂ ಗಾರ್ಡುಗಳ ಪೈಕಿ ಒಬ್ಬರು. ಅವರು ಸೇವಾ ದೃಷ್ಟಿಯಿಂದ ಆ ಗ್ರೂಂಪಿಗೆ ಸೇರಿದವರು. ಆದರೆ ಈಚೆಗೆ ಅದಕ್ಕೆ ಸರಿಯಾದ ಪ್ರೋತ್ಸಾಹವಿಲ್ಲ. ಬಡ್ಜೆಟ್‌ನಲ್ಲಿ ಆ ಬಾಬಿಗೆ ಹೆಚ್ಚು ಹಣ ಒದಗಿಸಿಲ್ಲ. ಹೋಮ್‌ಗಾರ್ಡುಗಳ ಸಹಾಯ ತೆಗೆದುಕೊಂಡು ಕೆಲಸಮಾಡಿದರೆ ಪೋಲೀಸ್ ಇಲಾಖೆಗೆ ಸುಲಭವಾಗುತ್ತದೆ. ಅನೀತಿಯನ್ನು ಮಟ್ಟ ಹಾಕುವುದಕ್ಕೆ ತುಂಬಾ ಸೌಕರ್ಯವಾಗುತ್ತದೆ.

ಇದೂ ಅಲ್ಲದೆ ಮಾನ್ಯ ಹಣಕಾಸಿನ ಸಚಿವರು ಗಾಂಧೀಜೀಯವರ ತತ್ವಕ್ಕೆ ಹೆಚ್ಚು ನಿಗಾ ಕೊಡುತ್ತಿಲ್ಲವೆಂದು ಶ್ರೀ ರಾಮಚಂದ್ರರಾಯರು ಹೇಳಿದರು. ವರ್ಷಗಟ್ಟಲೆ ಅವರು ಗಾಂಧೀಜಿಯವರ ಆಶ್ರಮದಲ್ಲಿದ್ದು ಅವರ ತತ್ವಗಳನ್ನು ಚೆನ್ನಾಗಿ ತಿಳಿದುಕೊಂಡಿದ್ದಾರೆ. ಅಂಥ ಮಹನೀಯರೇ ಮಾನ್ಯ ಹಣಕಾಸಿನ ಸಚಿವರಾಗಿರುವಾಗ ಖಾದಿ, ಸೇವಾದಳ ಮುಂತಾದುವುಗಳಿಗೆ ಹೆಚ್ಚು ಸಹಾಯಮಾಡದಿದ್ದರೆ ಇನ್ಯಾರು ಮಾಡಬೇಕು ! ಆದ್ದರಿಂದ ಮಾನ್ಯ ಸಚಿವರು ಕೊನೆಯ ಪಕ್ಷ ಖಾದಿಗೆ 5 ಲಕ್ಷ ರೂಪಾಯಿಗಳನ್ನಾದರೂ ಕೊಡಬೇಕು, ಸೇವಾದಳಕ್ಕೆ ಒಂದು ಲಕ್ಷ ರೂಪಾಯಿಗಳನ್ನಾದರೂ ಕೊಡಬೇಕು. ಹೋದಸಲ ಕೊಡುವುದಾಗಿ ಒಪ್ಪಿದ್ದರು. ಅದರಂತೆ ಈಗ ನಡೆಸಿಕೊಟ್ಟರೆ ದೇಶದ ಏಳಿಗೆಯಾಗಿ ಪ್ರಗತಿಯಾಗುತ್ತದೆ. ಸೇವಾದಳದವರು ಮಾಡುತ್ತಿರುವ ಸಹಾಯವನ್ನು ಹೆಚ್ಚಾಗಿ ಹೇಳಬೇಕಾಗಿಲ್ಲ. ಅನೇಕ ಕಡೆ ಆ ಸಂಸ್ಥೆಯವರು ಯಶಸ್ವಿಯಾಗಿ ಕೆಲಸ ಮಾಡುತ್ತಿದ್ದಾರೆಂದು ಮಾನ್ಯ ಸಚಿವರೇ ಹೇಳುತ್ತಿದ್ದಾರೆ. ಆದರೆ ಅವರಿಗೆ ಕಾರ್ಯತಃ ಪ್ರೋತ್ಸಾಹವಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ.

ಇನ್ನು ಪ್ರಜಾಭಿಪ್ರಾಯಕ್ಕೆ ಮನ್ನಣೆ ಕೊಡುತ್ತಾ ಹತೋಟಿ ವಿಚಾರದಲ್ಲಿ ಕೆಲವು ಮಾತುಗಳನ್ನು ಹೇಳದೆ ಗತ್ಯಂತರವಿಲ್ಲ. ಈ ಸಭೆಯಲ್ಲಿ ಅನೇಕರು ಹತೋಟಿ ಹೋಗಬೇಕು, ಅದರಿಂದ ಜನರಲ್ಲಿ, ಅಧಿಕಾರಿಗಳಲ್ಲಿ ಮತ್ತು ವರ್ತಕರಲ್ಲಿ ಅನೀತಿ ಹೆಚ್ಚಿದೆ ಎಂದು ಹೇಳುವಾಗ ಅದನ್ನೇಕೆ ಮುಂದುವರಿಸುತ್ತಿದ್ದೀರೆಂಬುದು ಅರ್ಥವಾಗುವುದಿಲ್ಲ. ಹತೋಟಿ ಹೇಗಾದರೂ ಇರಲೇಬೇಕು ಎಂದು ಹೇಳುವುದಾದರೆ ಬೆಂಗಳೂರು, ಮೈಸೂರು, ದಾವಣಗೆರೆ, ಕೋಲಾರ ಇಂಥ ಸಿಟಿಗಳಲ್ಲಿ ಮಾತ್ರ ಜಾರಿಯಲ್ಲಿಟ್ಟು ಇತರ ಕಡೆಗಳಲ್ಲಿ ತೆಗೆದರೆ ಸರ್ಕಾರಕ್ಕೂ ಬಹಳ ಆಕ್ಷೇಪಣೆ ತಪ್ಪುತ್ತದೆ, ದೇಶಕ್ಕೂ ಒಳ್ಳೆಯದಾಗುತ್ತದೆ. ಮಹಾತ್ಮ ಗಾಂಧಿಯವರೂ ಸಹ ಸಾಯುವವರೆಗೂ ಹತೋಟಿ ಹೋಗಬೇಕೆಂದು ಹೇಳುತ್ತಿದ್ದರು. ಆದ್ದರಿಂದ ಹಾಗೆ ಮಾಡಿದರೆ ಅವರ ತತ್ವವನ್ನು ಅನುಸರಿಸಿದ ಹಾಗಾಗುತ್ತದೆ. ಇಷ್ಟು ಹೇಳಿ ನನ್ನ ಭಾಷಣ ಮುಗಿಸುತ್ತೇನೆ.

ಶ್ರೀ ಡಿ. ಗೋವಿಂದದಾಸ್‌ರವರು (ಹಾಸನ ಜಿಲ್ಲೆ—ನಿಮ್ನ ವಂಗಡ).—ಮಾನ್ಯ ಅಧ್ಯಕ್ಷರೇ, ಸಭಾ ಸದಸ್ಯರ ಪೈಕಿ ಮುಕ್ತಾಯ ಭಾಷಣಮಾಡಲು ಕಟ್ಟಕಡೆಯದಾಗಿ ನನಗೆ ಅವಕಾಶ ಸಿಕ್ಕಿದ್ದಕ್ಕಾಗಿ ಸಂತೋಷಪಡುತ್ತೇನೆ. ಬಡ್ಜೆಟ್ಟನ್ನು ನೋಡುತ್ತಾ ನಿಮ್ನ ವರ್ಗದ ಬಾಬಿನಲ್ಲಿ ಏನು ಮಾಡಿದ್ದಾರೆಂದು ಪರಿಶೀಲಿಸಿದರೆ ಅದಕ್ಕೆ ಕೈ ಹಾಕದೆ ಅಷ್ಟಕ್ಕೇ ಬಿಟ್ಟಿದ್ದಾರೆ. ಆದ್ದರಿಂದ ಹೆಚ್ಚು ಮಾಡಿದರೆಂದು ಸಂತೋಷ ಪಡಬೇಕಾದ್ದು ಇಲ್ಲ; ಮತ್ತು ಕಡಿಮೆ ಮಾಡಿದ್ದಾರೆಂದು ವ್ಯಸನಪಡಬೇಕಾದ್ದೂ ಇಲ್ಲ. ಕಳೆದ ಮೂರು ವರ್ಷಗಳಿಂದ ಒಂದೇ ಸಮನಾಗಿ 19 ಲಕ್ಷ ರೂಪಾಯಿಗಳನ್ನೇ ಒದಗಿಸುತ್ತಿದ್ದಾರೆ. ಆದರೆ ನನ್ನ ನಿರೀಕ್ಷೆ ಪ್ರಕಾರ ಕಳೆದ ವರ್ಷ ಬಡ್ಜೆಟ್ ಭಾಷಣದಲ್ಲಿ ಸಹ ಹೇಳಿದ್ದಂತೆ ಈ ವರ್ಷ 5-6 ಲಕ್ಷ ರೂಪಾಯಿಗಳಾದರೂ ಹೆಚ್ಚಿಸಿ ಒಟ್ಟು 25 ಲಕ್ಷ ರೂಪಾಯಿಗಳನ್ನಾದರೂ ಒದಗಿಸುತ್ತಾರೆಂದು ನಂಬಿದ್ದೆನು.

ಆದರೆ ಅರೀತಿ ಆಗದೆ ನನ್ನ ಆಶೆ ನಿರಾಶೆಯಾಗಿದೆ. ಆದರೂ ಏನೇ ಆಗಲೀ ಈ ಹಣದ ಮುಗ್ಗಟ್ಟಿನ ಕಾಲದಲ್ಲಿ ಈ ಬಡವರ ಹಣಕ್ಕೆ ಕೈಹಾಕಿ ಮುಗ್ಗಟ್ಟು ಮಾಡಲಿಲ್ಲವಲ್ಲ ಎಂದು ಸಂತೋಷ ವ್ಯಕ್ತಪಡಿಸುತ್ತೇನೆ. ಮತ್ತು ಸರ್ಕಾರದವರಿಗೆ ವಂದಿಸುತ್ತೇನೆ.

ಅಧ್ಯಕ್ಷರೇ, ಜಮೀನಿನ ವಿಚಾರದಲ್ಲಿ ನನ್ನ ಅನೇಕ ಮಾನ್ಯ ಮಿತ್ರರು ಆಗಲೇ ಮಾತನಾಡಿದ್ದಾರೆ. ಹರಿಜನರಲ್ಲಿ ಎಷ್ಟು ಜನರಿಗೆ ಜಮೀನಿದೆಯೆಂದು ನೋಡಿದ್ದರಲ್ಲಿ ಶೇಕಡ 2 ರಷ್ಟು ಮಂದಿಗೆ ಮಾತ್ರ ಜಮೀನಿದೆ ಎಂದು ಗೊತ್ತಾಗಿದೆ. ಈ ವಿಷಯದಲ್ಲಿ ಸರ್ಕಾರದವರಿಗೆ ಒಂದು ಸಲಹೆಕೊಡುತ್ತೇನೆ. ಹರಿಜನರಿಗೆ ಈಚಲುವನ, ಅಮೃತ ಮಹಲ್ ಕಾವಲು, ಅರಣ್ಯ ಪ್ರದೇಶ ಮುಂತಾದ ಕಡೆಗಳಲ್ಲಿ ಜಮೀನು ಕೊಡಬೇಕೆಂದು ನನ್ನ ಸಲಹೆ. ಈ ಸಮಯ ಬಿಟ್ಟರೆ ಸರ್ಕಾರದವರು ಹರಿಜನರಿಗೆ ಜಮೀನು ಒದಗಿಸಿಕೊಡಲಿಕ್ಕೆ ಸಾಧ್ಯವಾಗುವುದಿಲ್ಲ. ಮತ್ತು ಆ ಬಡವರಿಗೆ ಕೊಂಡುಕೊಳ್ಳಲಿಕ್ಕೆ ಸಾಧ್ಯವಿಲ್ಲ. ಆದ್ದರಿಂದ ಈಚಲು ವನಗಳಿಗೆ ಬೇರೆ ಯಾರೂ ಕೈಹಾಕಬಾರದೆಂದು ಹೇಳುತ್ತೇನೆ. ಈ ಸಂದರ್ಭದಲ್ಲಿ ದಿವಂಗತರಾದ ಮಾನ್ಯ ಚಲುವಯ್ಯನವರು ಸಾಯುವುದಕ್ಕೆ ಮುಂಚೆ ಹೇಳುತ್ತಿದ್ದುದನ್ನು ತಮ್ಮ ಗಮನಕ್ಕೆ ತರುತ್ತೇನೆ. ಈಚಲು ವನಗಳು ನಮಗೆ ಸೇರಿದ್ದು, ಇದರ ಮೇಲೆ ಇತರರ ಹಕ್ಕಿಲ್ಲ ಎಂಬ ಆಶಾದಾಯಕವಾದ ಮಾತನ್ನು ಅವರು ಹೇಳಿದ್ದಾರೆ. ಈ ಜಮೀನಿನಲ್ಲಿ ಹರಿಜನರಿಗೆ ಶೇಕಡ 50 ಭಾಗ ಕೊಟ್ಟರೆ ಬಹಳ ಅನುಕೂಲವಾಗುತ್ತದೆ ಎಂದು ಸರ್ಕಾರದವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಹರಿಜನರು ಯಾವಾಗಲೂ ಬಡತನದಲ್ಲಿ ನರಳಬೇಕಾಗಿದೆ. ಏಕೆಂದರೆ ಅವರಿಗೆ ಸಾಕಷ್ಟು ಜಮೀನಿಲ್ಲ. ಆದ್ದರಿಂದ ಈ ಸಮಯದಲ್ಲಿ ಅವರಿಗೆ ಆ ಜಮೀನು ಕೊಡದಿದ್ದರೆ ಬಹಳ ನಷ್ಟವಾಗುತ್ತದೆ. ಇನ್ನೊಂದು ವಿಷಯ. ಹರಿಜನ ದರಖಾಸ್ತುದಾರರಿಗೆ ಜಮೀನು ಕೊಟ್ಟಿದ್ದರೂ ವಿಶೇಷವಾಗಿ ಸ್ಟೇ ಆರ್ಡರುಗಳು ಬರುತ್ತಿವೆ ಎಂಬುದಾಗಿ ಅನೇಕ ಜನ ಹೇಳಿದ್ದಾರೆ. ಆ ರೀತಿ ಸ್ಟೇ ಆರ್ಡರುಗಳನ್ನು ಕೊಡದಂತೆ ನಿಲ್ಲಿಸಿ, ಉದಾರ ಭಾವದಿಂದ ಜಮೀನು ಒದಗಿಸುವುದಕ್ಕೆ ಸರ್ಕಾರದವರು ಅವಕಾಶ ಮಾಡಿಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಶ್ರೀ ಎ. ಜಿ. ರಾಮಚಂದ್ರರಾಯರು ಆಹಾರ ಹತೋಟಿ ಆಜ್ಞೆಯನ್ನು ತೆಗೆಯಬೇಕೆಂದು ಹೇಳಿದರು. ಅರೀತಿ ಮಾಡಿದರೆ ಹರಿಜನರಿಗೆ ಬಹಳ ಉತ್ತಮವಾಗುತ್ತದೆ. ಇನ್ನೊಂದು ಸಂತೋಷದ ವಿಚಾರವೇನೆಂದರೆ, ಹಿಂದೆ ಡೀ-ಕಂಟ್ರೋಲ್ ಮಾಡಿದಾಗ ಹಾಸನದ ಸಂತೆಯಲ್ಲಿ ನೋಡಬೇಕಾಗಿತ್ತು, ಧಾನ್ಯದ ರಾಶಿಯ ಹತ್ತಿರ ಒಂದು ರಾಶಿಮೇಲೆ ಹೂವಿಟ್ಟು ಮನಸಾರ ಪೂಜೆ ಮಾಡುತ್ತಿದ್ದುದನ್ನು ನಾನು ಕಣ್ಣಾರೆ ನೋಡಿದ್ದೇನೆ. ಆದ್ದರಿಂದ ಹತೋಟಿಯನ್ನು ಕೂಡಲೇ ತೆಗೆದುಹಾಕಿ ಬಡಜನರಿಗೆ ಅನುಕೂಲ ಮಾಡಿ ಕೊಡಬೇಕೆಂದು ಹೇಳುತ್ತೇನೆ.

ಪಾನನಿರೋಧದ ವಿಚಾರದಲ್ಲಿ ಎಲ್ಲಾ ಜಿಲ್ಲೆಯಲ್ಲೂ ಪಾನನಿರೋಧ ಮಾಡಬೇಕೆಂದು ಬಹು ಮಂದಿ ಸದಸ್ಯರು ಒತ್ತಾಯದಿಂದ ಹೇಳಿದ್ದಾರೆ. ಒಟ್ಟಿನಲ್ಲಿ ಡೀ-ಕಂ

ಟ್ರೋಲ್ ಮತ್ತು ಪಾನನಿರೋಧ ಇವೆರಡಕ್ಕೆ ಸಿಕ್ಕಿದಷ್ಟು ಬೆಂಬಲ ಮತ್ಯಾವುದಕ್ಕೂ ದೊರೆಯಲಿಲ್ಲವೆಂದು ಘಂಟಾಘೋಷವಾಗಿ ಹೇಳಬಲ್ಲೆ. ನಮ್ಮ ಸರ್ಕಾರದವರು ಮುಂಚೆ ಪಾನನಿರೋಧವನ್ನು ಐದು ಜಿಲ್ಲೆಗಳಲ್ಲಿ ಜಾರಿಗೆ ತಂದಾಗ ಧೈರ್ಯದಿಂದ ಮುನ್ನುಗ್ಗಿ ಎಷ್ಟು ಉತ್ಸಾಹದಿಂದ ಕಾರ್ಯಕ್ರಮ ಕೈಕೊಂಡರೋ ಈಗ ಅಷ್ಟೂ ಹಿಂಜರಿಯುತ್ತಿದ್ದಾರೆ. ಹೀಗೆ ಮಾಡಬಾರದು. ಎಷ್ಟೇ ಕಷ್ಟವಾಗಲಿ ಒಂದು ಕೆಲಸ ಹಿಡಿದ ಮೇಲೆ ಪೂರ್ತಿ ಮಾಡಬೇಕೆಂದು ಸಲಹೆ ಮಾಡುತ್ತೇನೆ. ಪಾನನಿರೋಧ ಮಾಡಿರುವ ಕಡೆಗಳಲ್ಲಿ ಹಣವನ್ನು ಸಂಪಾದಿಸಿ ಎಷ್ಟೋ ಸಂತೋಷದಿಂದ ಚೆನ್ನಾಗಿ ಊಟಮಾಡಿ, ಚೆನ್ನಾಗಿ ಬಟ್ಟೆ ಹೊದ್ದು ಸುಖವಾಗಿದ್ದಾರೆಂದು ಕೇಳಿದ್ದೇನೆ. ಪಾನನಿರೋಧವನ್ನು ಜಾರಿ ಮಾಡದೇ ಇರುವ ಕಡೆಗಳಲ್ಲಿ ಕುಡಿಯುವವರು ಸರ್ಕಾರದವರನ್ನು ಶಪಿಸುತ್ತಾ ಇದ್ದಾರೆ. ನಾವು ಮಾಡಿದ ಪಾಪವೇನು, ಅವರು ಮಾಡಿದ ಪುಣ್ಯವೇನು ಎಂದು ಸರ್ಕಾರದವರನ್ನು ಬಹಳವಾಗಿ ದೂಷಿಸುತ್ತಾ ಇದ್ದಾರೆ. ಆದ್ದರಿಂದ ಹಾಸನ ಜಿಲ್ಲೆಯಲ್ಲಿ ಪಾನನಿರೋಧ ಮಾಡಿ ಅನುಕೂಲ ಮಾಡಿಕೊಡಬೇಕೆಂದು ಬಹಳ ಒತ್ತಾಯದಿಂದ ಸರ್ಕಾರದವರನ್ನು ಪ್ರಾರ್ಥಿಸುತ್ತೇನೆ. ಈ ವಿಚಾರವಾಗಿ ಇನ್ನು ಹೆಚ್ಚಿಗೆ ಹೇಳುವುದಿಲ್ಲ. ನಮ್ಮ ಸಂಸ್ಥಾನವನ್ನು ಈ ಒಂದು ಕೆಲಸದಲ್ಲೂ ಮಾದರಿಯಾಗಿ ಮಾಡಬೇಕೆಂದು ನಮ್ಮ ಸರ್ಕಾರದವರು ಬಂದು ಬಹಳ ಒಳ್ಳೆಯ ಕೆಲಸದಲ್ಲಿ ಮುನ್ನುಗ್ಗಿ ಒಂದು ಮಹತ್ಕಾರ್ಯವನ್ನು ಕೈಗೊಂಡಿದ್ದಾರೆ. ಆದರೆ ಗೋವಧೆ ನಿರೋಧಮಾಡಿರುವ ಕಡೆಗಳಲ್ಲಿ ಇನ್ನೂ ಕಳ್ಳತನದಿಂದ ನಡೆಯುತ್ತಲೇ ಇದೆ, ಕಡಿಮೆಯಾಗಿಲ್ಲ, ಅದನ್ನು ತಪ್ಪಿಸಬೇಕೆಂದು ಹೇಳುತ್ತೇನೆ. 1949–50ರಲ್ಲಿ 176 ಕೇಸುಗಳಾಗಿ 4 ಸಾವಿರ ರೂಪಾಯಿಗಳಷ್ಟು ಜುಲ್ಮಾನೆ ಹಾಕಲಾಗಿದೆ. 76 ಜನ ಜೈಲಿನಲ್ಲಿದ್ದಾರೆ ಎಂದು ಹೇಳಿದ್ದೀರಿ. ಆದ್ದರಿಂದ ಈ ವಿಷಯದಲ್ಲಿ ತಕ್ಕ ಕಾರ್ಯಕ್ರಮ ಕೈಕೊಳ್ಳಬೇಕು.

ಇನ್ನು ದೇವಸ್ಥಾನಗಳ ಪ್ರವೇಶದ ವಿಚಾರ. ಹೆಚ್ಚು ಹೇಳುವುದಿಲ್ಲ. ಈ ಸಭೆಯ ಮಾನ್ಯ ಸದಸ್ಯರು ಮತ್ತು ಪ್ರಜಾಪ್ರತಿನಿಧಿಯ ಸದಸ್ಯರು ನಮ್ಮ ಹರಿಜನರ ಮೇಲೆ ಬಹಳ ದಯೆಯಿಟ್ಟು ಮಸೂದೆಯನ್ನು ಅಂಗೀಕಾರ ಮಾಡಿದರು. ಆದರೆ ಅದು ಜೈನ ದೇವಸ್ಥಾನಗಳಿಗೆ ಅನ್ವಯವಾಗುತ್ತಿರಲಿಲ್ಲ. ಅದನ್ನು ಸಹ ಈಗ ಅಂಗೀಕರಿಸಿ ಒಂದು ಮಸೂದೆ ಈ ಸಭೆಯಲ್ಲಿ ಅಂಗೀಕೃತವಾಗಿದೆ. ಅದು ಇನ್ನೂ ಶ್ರೀಮನ್ಮಹಾರಾಜರವರ ಅಪ್ಪಣೆಯನ್ನು ಪಡೆದಿಲ್ಲವೆಂದು ತಿಳಿಯ ಬಂದಿದೆ. ಅನೇಕ ದೇಶಗಳಿಂದ ಹರಿಜನರು ಗೊಮ್ಮಟೇಶ್ವರ ವಿಗ್ರಹವನ್ನು ನೋಡಿಕೊಂಡು ಹೋಗಲು ಹೆಂಡತಿ ಮಕ್ಕಳೊಂದಿಗೆ ಕಷ್ಟಪಟ್ಟುಕೊಂಡು ಬಹು ದೂರದಿಂದ ಬರುತ್ತಾರೆ. ಹಾಗಿರುವಾಗ ನಮ್ಮ ಹರಿಜನರಿಗೆ ಆ ಅವಕಾಶ ಸಿಕ್ಕದೆ ಅನೇಕವೇಳೆ ಹಿಂತಿರುಗಿರುವುದನ್ನು ನಾನು ಕಣ್ಣಾರೆ ನೋಡಿ ಬಹಳ ಸಂಕಟಪಟ್ಟೆ. 1940ರಲ್ಲಿ ಮಹಾ ಮಸ್ತಕಾಭಿಷೇಕವಾದಾಗ ಡಿಸ್ಟ್ರಿಕ್ಟ್ ಬೋರ್ಡ್ ಸದಸ್ಯನಾಗಿದ್ದ ನನಗೇ ದೇವರ ದರ್ಶನಕ್ಕೆ ಅವಕಾಶ ಸಿಕ್ಕದೇ ಬಹಳ ವ್ಯಸನವಾಯಿತು. ಆಗ ಸಿಟ್ಟಿನಿಂದ ಒಂದು ಕವನವನ್ನು ಬರೆದೆನು:

(ನಿರ್ಭಾಗ್ಯ ಎಂಬ ಕವನದಿಂದ ಆರಿಸಿದ್ದು)

ಅಟ್ಟಹಾಸದಿ ಬೆಟ್ಟವೇರುವರ, ದಿಟ್ಟಿಸುತೆ ।
ಬೆಟ್ಟದಡಿನಿಂದು, ನಿಟ್ಟುಸಿರು ಸೂಸುತ್ತೆ ।
ಕೆಟ್ಟ ವಿಧಿ, ಏಕೆನ್ನ, ಸೃಷ್ಟಿಸಿದೆ, ಎಂದೆನುತೆ ।
ಸಿಟ್ಟಿನಿಂ, ಹಿಂದುಮತ, ಭ್ರಷ್ಟನಾಂ ಪೋಪೆ ॥

ಇದನ್ನು ನಾನು ಆಗಲೇ ಬರೆದದ್ದು. ಈ ಸಾರಿ ಮಹಾಪೂಜೆಯಾಗುವಾಗ ದೇವರ ದರ್ಶನ ಪಡೆಯುವುದಕ್ಕೆ ಪ್ರಯತ್ನ ಪಡುತ್ತೇನೆ. ಸರ್ಕಾರದವರೂ, ಮಾನ್ಯ ಸದಸ್ಯರೂ ನಮಗೆ ಬೆಂಬಲ ಕೊಡಬೇಕೆಂದು ಹೇಳಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಮಿರಾಸೆ ವಿಚಾರ. ಹೋದ ವರ್ಷದ ಬಡ್ಜೆಟ್ ಮೇಲೆ ಮಾತನಾಡುವಾಗ ಮಿರಾಸ ನಿಜವಾಗಿಯೂ ನಿರಾಶೆಯಾಗಿದೆ ಎಂದು ಹೇಳಿದ್ದೇನೆ. 26 ಸಾವಿರ ಕೋಟಿ, ತಳವಾರರುಗಳ ಯೋಗಕ್ಷೇಮ ನೋಡಬೇಕಾದ್ದು ಸರ್ಕಾರದವರ ಕರ್ತವ್ಯ, ಅದನ್ನು ಮಾಡಿಲ್ಲವೆಂದು ವಿಷಾದಿಸುತ್ತೇನೆ. ಮತ್ತು ಅವರಿಗೆ ತಕ್ಕ ಅನುಕೂಲ ಮಾಡಿಕೊಡಬೇಕೆಂದು ಸಲಹೆ ಮಾಡುತ್ತೇನೆ.

ವಿದ್ಯಾಭ್ಯಾಸದ ವಿಚಾರ. ದಿವಂಗತರಾದ ಮಾನ್ಯ ಸಿ. ಆರ್. ರೆಡ್ಡಿಯವರನ್ನು ಈ ಸಮಯದಲ್ಲಿ ಜ್ಞಾಪಕ ಮಾಡಿಕೊಳ್ಳಬೇಕಾಗಿದೆ. ಅವರು ಬಹಳವಾಗಿ ನಮ್ಮ ವಿದ್ಯಾಭ್ಯಾಸದ ವಿಚಾರದಲ್ಲಿ ಶ್ರಮಪಟ್ಟರು. ಹಿಂದೆ ಇದ್ದ ಸರ್ಕಾರದ ಮತ್ತು ಈಗಿನ ಸರ್ಕಾರದ ಪ್ರಯತ್ನದ ಫಲದಿಂದ ಅನೇಕರು ವಿದ್ಯಾವಂತರಾಗಿದ್ದಾರೆ. ಹಾಗಿದ್ದರೂ ಕೂಡ 2% ಮಾತ್ರ ವಿದ್ಯಾವಂತರ ಸಂಖ್ಯೆ ಹರಿಜನರಲ್ಲಿ ಬಹಳ ಕಮ್ಮಿ ಇದೆ. ಮೈಸೂರಿನಲ್ಲಿ 1911ರಲ್ಲಿ ಒಂದೊಂದು ಬೋರ್ಡಿಂಗ್ ಹೋಂ ಸ್ಥಾಪನೆ ಮಾಡಿದರು. ಆಗ ಎಷ್ಟು ಸಂಖ್ಯೆ ಇತ್ತೋ ಈಗಲೂ ಅಷ್ಟೇ ಇದೆ, ಹೆಚ್ಚು ಮಾಡಿಲ್ಲ. ಅಲ್ಲಿ ಹೆಚ್ಚು ಹುಡುಗರಿಗೆ ಅವಕಾಶ ಮಾಡಿಕೊಡಬೇಕೆಂದು ಸಲಹೆ ಮಾಡುತ್ತೇನೆ. ಪ್ರತಿ ವರ್ಷವೂ ಹೈಸ್ಕೂಲು ವಿದ್ಯಾಭ್ಯಾಸಕ್ಕೆ ಹಾಸ್ಟಲುಗಳಿರುವ ಕಡೆಗೆ ಒಂದು ಹಾಸ್ಟಲಿನಲ್ಲಿ ಸೀಟು ಸಿಕ್ಕದೇ ಅನೇಕ ಜನ ವಿದ್ಯಾರ್ಥಿಗಳು ಹಿಂದಕ್ಕೆ ಹೊರಟು ಹೋಗುತ್ತಿದ್ದಾರೆ. ಈ ವಿಷಯಕ್ಕೆ ಹೆಚ್ಚು ನಿಗಾ ಕೊಡಬೇಕೆಂದು ಹೇಳುತ್ತೇನೆ. ಏಡೆಡ್ ಹಾಸ್ಟಲುಗಳನ್ನು ಪ್ರಾರಂಭಮಾಡುವುದಕ್ಕೆ ಯಾರು ಮುಂದೆ ಬರುತ್ತಾರೋ ಅವರಿಗೆ ಬೇಗ ಉದಾರವಾಗಿ ಸರ್ಕಾರದವರು ಗ್ರಾಂಟು ಕೊಡಬೇಕೆಂದು ಸಲಹೆ ಮಾಡುತ್ತೇನೆ. ಮೈಸೂರು ಜಿಲ್ಲೆಯಲ್ಲಿ ಬೆಟ್ಟಹಳ್ಳಿಯಲ್ಲಿ ಗುರುಗಳು ಒಂದು ಹಾಸ್ಟಲನ್ನು ಏರ್ಪಾಡು ಮಾಡಿ, ಅಲ್ಲಿ 12 ಜನ ಹುಡುಗರಿಗೆ ಅವಕಾಶ ಮಾಡಿಕೊಟ್ಟಿದ್ದಾರೆ. ಗ್ರಾಂಟು ಮೂರು ವರ್ಷದಿಂದ ಮೊನ್ನೆತಾನೇ ಬಂದಿದೆಯೆಂದು ಅವರು ಹೇಳಿದರು. ಇನ್ನೊಂದು ಸಂತೋಷದ ವಿಚಾರ. ಸರ್ಕಾರದವರು ನಾಗರಾಜ್ ಎನ್ನುವವರನ್ನು ಚಿಕಾಗೋಗೆ ಕಳುಹಿಸಿಕೊಟ್ಟಿದ್ದಾರೆ, ಅವರು ಎಂ. ಎಸ್ ಸಿ. ಪರೀಕ್ಷೆಯಲ್ಲಿ ಫಸ್ಟ್ ಕ್ಲಾಸ್‌ನಲ್ಲಿ ತೇರ್ಗಡೆ ಹೊಂದಿದ್ದಾರೆಂದು ನೆನ್ನೆ ತಾನೆ ಕಾಗದ ಬಂತು. ಅವರು ಮುಂದೆ ಪಿ ಎಚ್. ಡಿ. ವಿದ್ಯಾಭ್ಯಾಸಕ್ಕೆ ಹೋಗುತ್ತಾರೆಂದು ಕಾಣುತ್ತದೆ. ಸರ್ಕಾರದವರು ಆದಷ್ಟು ಅವರಿಗೆ ಸಹಾಯ ಕೊಟ್ಟು ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಬರಲು ಹೆಚ್ಚು ಅವಕಾಶ ಮಾಡಿಕೊಡುತ್ತಾರೆಂದು ನಂಬಿದ್ದೇನೆ. ಕಾಲೇಜು ವಿದ್ಯಾರ್ಥಿಗಳಿಗೆ ಹೆಚ್ಚುಹೆಚ್ಚು ವಿದ್ಯಾರ್ಥಿವೇತನಗಳನ್ನು ಒದಗಿಸಬೇಕು. ಅಲ್ಲದೆ ಆ ಷೆಡ್ಯೂಲ್ ಕ್ಯಾಸ್ಟ್‌ನವರಿಗೆ ಕೊಡಬೇಕಾಗಿರುವ ವೇತನವು ಈ 6 ಮತಗಳಲ್ಲದೆ ಅದರಲ್ಲಿ ಕ್ರಿಶ್ಚಿಯನ್ನರಿಗೂ ಹೋಗುತ್ತಾ ಇದೆ ಎಂದು ಕೇಳಿದ್ದೇನೆ. ಸರ್ಕಾರದವರು ಅದನ್ನು ಪರಿಶೀಲಿಸಿ ಈ 6 ನಿಮ್ನವರ್ಗದ ತರಗತಿಗಳವರಿಗೆ ಮಾತ್ರ ಕೊಡಬೇಕೆಂದು ಹೇಳುತ್ತೇನೆ. ಪ್ರತಿ ಡಿಸ್ಟ್ರಿಕ್ಟಿನಲ್ಲೂ ಕಾಲೇಜು ಮತ್ತು ಹೈಸ್ಕೂಲು ತರಗತಿಗಳಲ್ಲಿರತಕ್ಕ ವಿದ್ಯಾರ್ಥಿಗಳಿಗೆ ಹಾಸ್ಟಲುಗಳ ಸೌಕರ್ಯವನ್ನು ಏರ್ಪಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

(ಶ್ರೀ ಡಿ. ಗೋವಿಂದದಾಸ್‌ರವರು.)

ಸರ್ಕಾರಿ ಹುದ್ದೆಗಳ ಹಂಚಿಕೆಯ ವಿಚಾರದಲ್ಲಿ ನಾವೇನೂ ಹೆಚ್ಚಿಗೆ ಪ್ರಸ್ತಾಪ ಮಾಡುವುದಿಲ್ಲ. ಪ್ರಸ್ತಾಪಮಾಡುವುದಾದರೆ ಬಹಳವಿದೆ. ಆದರೆ ಅವಕ್ಕೀಗ ಕಾಲಾವಕಾಶವಿಲ್ಲ. ಆದ್ದರಿಂದ ತಾವೇ ನಮ್ಮ ಹಕ್ಕುಬಾಧ್ಯತೆಗೆ ನಿಗಾ ಇಟ್ಟು ನಮ್ಮ ಜನಕ್ಕೂ ಸಾಕಾದಷ್ಟು ಸರ್ಕಾರಿ ಹುದ್ದೆಗಳನ್ನು ಕೊಡುವಂತೆ ಮಾಡಿ. ಈಗ್ಗೇನೋ ಪಬ್ಲಿಕ್ ಸರ್ವಿಸ್ ಕಮಿಷನ್ ಷುರುವಾಗುವುದರಲ್ಲಿದೆ. ಅವರೇ ಸರಿಯಾಗಿ ಯೋಚನೆಮಾಡಿ ನಮ್ಮ ಜನಸಂಖ್ಯೆಗನುಗುಣವಾಗಿ ನೌಕರಿಗಳನ್ನು ದೊರಕಿಸಿ ಕೊಡುತ್ತಾರೆಂದು ತಿಳಿದಿದ್ದೇನೆ.

ಆ ಮೇಲೆ, ಡಿಪ್ರೆಸ್ಡ್‌ಕ್ಲಾಸ್ ಅಮಿಲಿಯೊರೇಷನ್ ಫಂಡಿನ ವಿಚಾರದಲ್ಲಿ ನಮ್ಮ ಮಾನ್ಯ ಮಿತ್ರರಾದ ಮಾದಯ್ಯನವರು ಹೇಳಿದ ಹಾಗೆ ಪ್ರತಿಯೊಂದು ಜಿಲ್ಲೆಯಲ್ಲೂ ಪ್ರತಿಯೊಂದು ಕೋಮಿನವರಿಗೂ ಸೇರುವಹಾಗೆ ನೋಡಿಕೊಂಡು ಹಂಚಿಕೆ ಮಾಡಿದರೆ ಎಲ್ಲರಿಗೂ ಅನುಕೂಲವಾಗುತ್ತದೆ. ಆ ರೀತಿ ಮಾಡಬೇಕೆಂದು ನಾನು ಸರ್ಕಾರದವರಿಗೆ ಒತ್ತಾಯಪೂರ್ವಕವಾಗಿ ಪ್ರಾರ್ಥಿಸುತ್ತೇನೆ.

ಹರಿಜನರ ಅಭಿವೃದ್ಧಿಯ ದೃಷ್ಟಿಯಿಂದ ಸಿವಿಲ್ ಡಿಸ್‌ಎಬಿಲಿಟೀಸ್ ಆಕ್ಟನ್ನೇನೋ ತಾವು ಜಾರಿಗೆ ತಂದಿದ್ದೀರಿ. ಆದರೆ ಅದು ಸರಿಯಾಗಿ ಜಾರಿಯಲ್ಲಿದೆಯೋ ಇಲ್ಲವೋ ಎಂಬುದನ್ನು ತಾವು ಖಂಡಿತ ಪರಿಶೀಲನೆ ಮಾಡಬೇಕು. ಹೋಟಲುಗಳು, ಕ್ಷೌರದ ಸೆಲೂನ್‌ಗಳು, ಅಗಸರ ಅಂಗಡಿಗಳು ಮುಂತಾಗಿ ಎಲ್ಲಾ ಸ್ಥಳಗಳಲ್ಲಿಯೂ ಇವರುಗಳಿಗೆ ಅವಕಾಶ ಸಿಕ್ಕುತ್ತಿದೆಯೇ ಎಂಬುದನ್ನು ನೋಡಿ ಅದು ಸರಿಯಾಗಿ effective ಆಗಿ ಜಾರಿಗೆ ಬರುವಂತೆ ಏರ್ಪಾಡು ಮಾಡಬೇಕು.

ಜೀತದ ಪದ್ಧತಿಯ ವಿಚಾರವನ್ನು ನಮ್ಮ ಮಿತ್ರರನೇಕರು ಹೇಳಿದ್ದಾರೆ. ಮಲೆನಾಡು ಡಿಸ್ಟ್ರಿಕ್ಟಿನಲ್ಲಿ ಹುಟ್ಟಿದವನಾದ ನನಗೆ ಈ ವಿಚಾರ ಚೆನ್ನಾಗಿ ಗೊತ್ತಿದೆ. ಮಾನ್ಯ ಮಿತ್ರರು ದಯವಿಟ್ಟು ಅತ್ತಕಡೆ ಹೋಗಿ ನೋಡಿದರೆ ಇದೆಷ್ಟು ವಿಷಾದಕರವಾದ ವಿಷಯವೆಂಬುದು ಮನವರಿಕೆಯಾಗುತ್ತದೆ. ಆದ್ದರಿಂದ ಈಗಲಾದರೂ ಸರ್ಕಾರದವರು ಕೈಹಾಕಿ ಇಂಥ ಪದ್ಧತಿಯನ್ನು ನಮ್ಮ ದೇಶದಲ್ಲಿ ಕೊನೆಗಾಣಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಆ ಮೇಲೆ ಬಾವಿಗಳ ವಿಚಾರ. ರೂರಲ್ ಡೆವಲಪ್‌ಮೆಂಟ್ ಕಾರ್ಯಗಳಿಗೆಂದು ಒಟ್ಟಿಗೆ ಹಣಕೊಟ್ಟು ಅದರ ಮೂಲಕ ಬಾವಿಗಳನ್ನು ತೆಗೆಸತಕ್ಕ ಏರ್ಪಾಡು ಮಾಡಿದ್ದೀರಿ. ಇದಕ್ಕೆ ಬದಲು ಹಳ್ಳಿಗಳಕಡೆ ನೀರಿನ ಸರಬರಾಯಿಗೆಂದೇ ಒಂದು ಪ್ರತ್ಯೇಕ ಫಂಡನ್ನು ಏರ್ಪಾಡು ಮಾಡಿ ನಮ್ಮ ಜನಕ್ಕೆ ಅನುಕೂಲವಾಗುವಂತೆ ಹೆಚ್ಚು ಹೆಚ್ಚು ಬಾವಿಗಳನ್ನು ಏರ್ಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಮಾನ್ಯ ಅಧ್ಯಕ್ಷರೇ, ನನಗೆ ಸಂಬಂಧಪಟ್ಟ ಇಲಾಖೆಗಳ ವಿಷಯದಲ್ಲಿ ಒಂದೆರಡು ಅಂಶಗಳನ್ನು ಮಾತ್ರ ಮಾನ್ಯ ಸದಸ್ಯರು ತಿಳಿಸಿದ್ದಾರೆ. ಅವುಗಳಿಗೆ ಉತ್ತರವಾಗಿ ಕೆಲವು ವಿಷಯಗಳನ್ನು ಹೇಳಲಿಚ್ಛಿಸುತ್ತೇನೆ. ಬಹುಭಾಗ ಸದಸ್ಯರು ಮುಖ್ಯವಾಗಿ ಹೋಟಲುಗಳ ವಿಚಾರದಲ್ಲಿ ಬಹಳ ಒತ್ತಾಯ ಮಾಡಿ ಟೀಕೆ ಮಾಡಿದ್ದಾರೆ. ಶ್ರೀ ಕಡಿದಾಳ್ ಮಂಜಪ್ಪನವರು ಮತ್ತು ಹೊನ್ನಪ್ಪನವರು ಮತ್ತು ಇತರರು ಹೋಟಲುಗಳು ನಡೆಯುವ ವಿಧಾನ, ಹೋಟಲುಗಳ ಮೇಲೆ ಹೆಲ್ತ್ ಇಲಾಖೆಯವರು ನಡೆಸುತ್ತಿರತಕ್ಕ ಮೇಲ್ವಿಚಾರಣೆ ಅಷ್ಟಾಗಿ ಸಮರ್ಪಕವಾಗಿಲ್ಲವೆಂದು ತಿಳಿಸುತ್ತಾ, unauthorised ಹೋಟಲುಗಳು ಬೇಕಾದಷ್ಟು ನಡೆಯುತ್ತಿದ್ದರೂ ಸ್ಯಾನಿಟರಿ ಇನ್ಸ್‌ಪೆಕ್ಟರುಗಳು ಅವರ ಮೇಲೆ ಕೇಸು ಹಾಕುವುದಿಲ್ಲ, ಒಂದು ಮಸಾಲೆ ದೋಸೆಯ ಆಸೆಗೆ ತುತ್ತಾಗಿ ಅವರ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳದೆ ಬಿಟ್ಟು ಬಿಡುತ್ತಿದ್ದಾರೆಂದು ಹೇಳಿದರು. ಮುಖ್ಯವಾಗಿ ಹೋಟಲುಗಳ ಸ್ಥಿತಿ ಚೆನ್ನಾಗಬೇಕು ಮತ್ತು ಸರಿಯಾದ ಹೋಟಲುಗಳನ್ನು ಇಟ್ಟುಕೊಳ್ಳಲೆಂಬ ಸದುದ್ದೇಶದಿಂದ ಈ ರೀತಿ ಟೀಕೆ ಮಾಡಿದ್ದಾರೆಂದು ನಾನು ಭಾವಿಸಿದ್ದೇನೆ. ಈ ಸಂಬಂಧದಲ್ಲಿ ಕೆಲವು ಅಂಕಿ ಅಂಶಗಳನ್ನು ಮಾನ್ಯ ಸದಸ್ಯರ ಅವಗಾಹನೆಗೆ ತಂದು ಬೆಂಗಳೂರು ಸಿಟಿ ಕಾರ್ಪೊರೇಷನ್ ಪ್ರದೇಶದಲ್ಲಿ ಮತ್ತು ಮೈಸೂರು ಸಿಟಿ ಮುನಿಸಿಪಾಲಿಟಿಯಲ್ಲಿ ಹೆಲ್ತ್ ಇಲಾಖೆಯವರು ತಕ್ಕಮಟ್ಟಿಗೆ ಹೋಟಲುಗಳ ವಿಷಯದಲ್ಲಿ ಕಾರ್ಯಕ್ರಮಗಳನ್ನು ತೆಗೆದುಕೊಳ್ಳದೆ ಇಲ್ಲವೆಂಬ ಅಂಶವನ್ನು ಮಾನ್ಯ ಸದಸ್ಯರ ಗಮನಕ್ಕೆ ತರುತ್ತೇನೆ.

Bangalore City :—

Total number of licenses issued during 1950-51 under the Hotel bye-laws	...	619
The number of applications pending disposal	...	25
Number of notices issued for sanitary improvement	...	550
Number of prosecutions launched under Hotel bye-laws	...	64 cases
Pending cases	...	4

ಈ ಪ್ರಕಾರ ಸಾಧಾರಣವಾಗಿ ದೊಡ್ಡ ದೊಡ್ಡ ಮುನಿಸಿಪಾಲಿಟಿಗಳಲ್ಲಿ ಸ್ಯಾನಿಟರಿ ಇನ್ಸ್‌ಪೆಕ್ಟರುಗಳು ಎಲ್ಲಾ ಹೋಟೆಲುಗಳನ್ನೂ ಆಗಾಗ್ಗೆ ತನಿಖೆ ಮಾಡಿ ಸೂಕ್ತ ಕಾರ್ಯಕ್ರಮ ಕೈಗೊಳ್ಳುತ್ತಿರುವುದು ವೇದ್ಯವಾಗುತ್ತದೆ. ಲೈಸೆನ್ಸಿಲ್ಲದ ಹೋಟೆಲುಗಳ ಮೇಲೆಯೂ ಅವರು ಕಾರ್ಯಕ್ರಮ ನಡೆಸದೆ ಇಲ್ಲ. ಇಲ್ಲಿ ಸುಮಾರು 43 unauthorised ಹೋಟೆಲುಗಳಿವೆಯೆಂದು ಗೊತ್ತಾಗಿದೆ. ಅವುಗಳ ಮೇಲೆ ಕೇಸುಗಳನ್ನು ಹಾಕಿದ್ದಾರೆಂದು ವರದಿಯಾಗಿದೆ. ಒಂದು ಕೊರತೆಯೇನೆಂದರೆ ಅವುಗಳನ್ನು ಮುಚ್ಚಿಬಿಡುವಂತೆ ಮಾಡುವುದಕ್ಕೆ ಈಗಿರುವ ಕಾನೂನಿನ ಪ್ರಕಾರ ಅವಕಾಶವಿಲ್ಲ. ಹಾಗೆಯೇ ಮೈಸೂರು ಸಿಟಿಯಲ್ಲಿ ನೋಡುವುದಾದರೆ ಅಲ್ಲಿ unauthorised ಹೋಟಲುಗಳು 54 ಇವೆಯೆಂದು ಪತ್ತೆಮಾಡಿ ಕೇಸುಹಾಕಿದ್ದಾರೆ. ಸರಿಯಾದ ಸ್ಯಾನಿಟರಿ ಏರ್ಪಾಡುಗಳಿಲ್ಲವೆಂದು 105 ಕೇಸುಗಳನ್ನು ಹಾಕಿದ್ದಾರೆ. ಆದ್ದರಿಂದ ಹೆಲ್ತ್ ಇಲಾಖೆಯವರು ತಕ್ಕಷ್ಟು ಕಾರ್ಯಕ್ರಮಗಳನ್ನು ಕೈಕೊಂಡಿದ್ದಾರೆಂಬುದಕ್ಕೆ ಅಂಕಿಅಂಶಗಳಿವೆ. ಇದಕ್ಕೂ ಮಿತಿಮೀರಿ ಕೆಲಸಗಳು ಆಗುತ್ತಿರಬಹುದು, ಅದು ನನಗೆ ಗೊತ್ತಿಲ್ಲ. ಆದ್ದರಿಂದ ಮಾನ್ಯ ಸದಸ್ಯರು ಅಭಿಪ್ರಾಯ ಪಟ್ಟಹಾಗೆ ಇನ್ನೂ ಒಂದು circular ಕೊಟ್ಟು ಇನ್ನೂ ಹೆಚ್ಚು ಜಾಗರೂಕತೆಯಿಂದ ನೋಡಿಕೊಳ್ಳಬೇಕೆಂದು ಏರ್ಪಾಡು ಮಾಡುತ್ತೇವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಆಮೇಲೆ ನಿಮ್ನ ತರಗತಿಯವರಿಗೆ ಕೊಡುತ್ತಿರತಕ್ಕ ಈ 19 ಲಕ್ಷ ರೂಪಾಯಿಗಳ ಗ್ರಾಂಟು ಸರಿಯಾಗಿ ವಿನಿಯೋಗವಾಗುತ್ತಿಲ್ಲ, ಇದನ್ನು ಎಲ್ಲಾ ಜಿಲ್ಲೆಗಳಿಗೂ ಅಲ್ಲಿನ ಜನಸಂಖ್ಯೆಯ ಪ್ರಕಾರ ಹಂಚಿಕೆ ಮಾಡುತ್ತಿಲ್ಲವೆಂದು ಶ್ರೀ ಮಾದಯ್ಯನವರು ಬಹಳ ಒತ್ತಾಯ

ವಾಗಿ ಹೇಳಿದರು. ಈ ವಿಷಯದಲ್ಲಿ ಇಲ್ಲಿ ಕೆಲವು ಅಂಕಿ ಅಂಶಗಳನ್ನು ಮಾತ್ರ ಕೊಟ್ಟರೆ ಸಾಕೆಂದು ಕಾಣುತ್ತದೆ. ಈ ಹಣದ ಹಂಚಿಕೆಯ ವಿಚಾರದಲ್ಲಿ ಸರ್ಕಾರದವರು ಇಟ್ಟುಕೊಂಡಿರತಕ್ಕ ಕಾರ್ಯನೀತಿಯೇನೆಂದರೆ, ಪ್ರತಿಯೊಂದು ಡಿಸ್ಟ್ರಿಕ್ಟಿನಲ್ಲಿರುವ ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಸಮಿತಿಗೆ ಈ ಹಣವನ್ನು ಕೊಡುವುದು. ಆ ಕಮಿಟಿಯವರು ಆಯಾ ತಾಲ್ಲೂಕು ಡೆವಲಪ್‌ಮೆಂಟ್ ಕಮಿಟಿಗಳ ಮುಖಾಂತರ ಹೋಬಳಿವಾರಾಗಿ ಎಲ್ಲೆಲ್ಲಿ ಅವಶ್ಯಕತೆಯಿದೆಯೋ ನೋಡಿಕೊಂಡು ಹಂಚಿಕೆ ಮಾಡಿಸುವುದು. ಈ ಕಮಿಟಿಗಳಲ್ಲಿ ಹರಿಜನ ಪಂಗಡದ ಸದಸ್ಯರೂ ಇರುತ್ತಾರೆ. ತಾಲ್ಲೂಕ್ ಕಮಿಟಿಯವರು ಹಂಚಿಕೆ ಮಾಡುವುದರಲ್ಲಿ ಅಲ್ಲಿನ ಅಮಲ್ದಾರರು ತಾಲ್ಲೂಕು ಸ್ಪೆಷಲ್ ರೆವಿನ್ಯೂ ಇನ್ಸ್‌ಪೆಕ್ಟರನ್ನೂ ಮತ್ತು ನಿಮ್ಮ ಪಂಗಡದವರಿಗಾಗಿ ನೇಮಿತರಾಗಿರುವ ಸ್ಪೆಷಲ್ ಆಫೀಸರನ್ನೂ ಕೇಳಿಯೇ ಮಾಡುತ್ತಾರೆ. ಈ ಹಣದಲ್ಲಿ ಒಂದು ಭಾಗವನ್ನು ಎಲ್ಲಾದರೂ ಆಕಸ್ಮಿಕವಾಗಿ ಬೆಂಕಿ ಅನಾಹುತಗಳಾದರೆ ಅಲ್ಲಿಗೆ ಪರಿಹಾರ ಒದಗಿಸುವುದಕ್ಕಾಗಲೀ, ಅಥವಾ ಹರಿಜನ ಕಾಲೋನಿಯೊಂದನ್ನು ಕಟ್ಟಿಸುವುದಕ್ಕಾಗಲೀ, ಇಲ್ಲವೇ ಹರಿಜನರ colonisation ಸ್ಕೀಂ ಪ್ರಕಾರ ಕಾಲೋನಿ ಮಾಡಿ ಮನೆಗಳನ್ನು ಕಟ್ಟುವುದಕ್ಕಾಗಲಿ ಆಗಲೆಂದು ರಿಸರ್ವ್ ಇಟ್ಟುಕೊಳ್ಳುವ ವಾಡಿಕೆಯಿದೆ. ಇದುವರೆಗೂ ಈಗಿರುವ ಪದ್ಧತಿಯ ವಿಷಯದಲ್ಲಿ ಬೇರೆ ಯಾರಿಂದಲೂ ದೂರುಗಳು ಬಂದಿಲ್ಲ. ಅನೇಕರು ಇದೇ ಅಭಿಪ್ರಾಯವನ್ನು ಒಪ್ಪಿದ್ದಾರೆ. ಅವರ ಅಭಿಪ್ರಾಯಕ್ಕನುಸಾರವಾಗಿಯೇ ಇದನ್ನು ಮಾಡಿದ್ದೇವೆಂದು ನಾನು ತಿಳಿಸಬಯಸುತ್ತೇನೆ. ಇನ್ನು ಈ ಹಣವನ್ನು ಎಲ್ಲೆಲ್ಲಿಗೆ ಯಾವ ರೀತಿ ಹಂಚಿಕೆ ಮಾಡಿದ್ದೇವೆಂದು ಡಿಸ್ಟ್ರಿಕ್ಟ್‌ವಾರು ಅಂಕಿ ಅಂಶಗಳನ್ನು ಕೊಡುತ್ತೇನೆ.

		ರೂ.ಗಳು
ಬೆಂಗಳೂರು ಡಿಸ್ಟ್ರಿಕ್ಟ್‌ನಲ್ಲಿ—		
ಇಲ್ಲಿನ ನಿಮ್ಮ ವರ್ಗದವರ ಜನಸಂಖ್ಯೆ		2,83,050
ಅವರಿಗೆ ಕೊಟ್ಟಿರುವುದು	...	3,21,000ರೂ.
ಮೈಸೂರು ಡಿಸ್ಟ್ರಿಕ್ಟ್‌ನಲ್ಲಿ—		
ಅಲ್ಲಿನ ನಿಮ್ಮವರ್ಗದವರ ಜನಸಂಖ್ಯೆ		1,92,342
ಅವರಿಗೆ ಕೊಟ್ಟಿರುವುದು	...	2,81,000ರೂ.

ಕೋಲಾರ ಜಿಲ್ಲೆಯಲ್ಲಿ 2,57,000 ಜನಸಂಖ್ಯೆ ಇದೆ; ಅವರಿಗೆ ಕೊಟ್ಟಿರುವುದು 2,50,480 ರೂಪಾಯಿ. ಚಿತ್ರದುರ್ಗ ಜಿಲ್ಲೆಯಲ್ಲಿ 1,73,948 ಪ್ರಜಾಸಂಖ್ಯೆ ಇದೆ, ಅಲ್ಲಿಗೆ ಕೊಟ್ಟಿರುವುದು 2,25,537 ರೂಪಾಯಿ. ತುಮಕೂರು ಜಿಲ್ಲೆಯಲ್ಲಿ 1,67,000 ಜನಸಂಖ್ಯೆಗೆ 2,33,500 ರೂಪಾಯಿ ಕೊಟ್ಟಿದೆ. ಮಂಡ್ಯ ಜಿಲ್ಲೆಯಲ್ಲಿ 66,800 ಜನಸಂಖ್ಯೆಗೆ 1,05,000 ರೂಪಾಯಿ ಕೊಟ್ಟಿದೆ. ಹಾಸನ ಜಿಲ್ಲೆಯಲ್ಲಿ 1,11,000 ಜನಸಂಖ್ಯೆಗೆ 1,67,000 ರೂಪಾಯಿ ಕೊಟ್ಟಿದೆ. ಚಿಕ್ಕಮಗಳೂರು ಜಿಲ್ಲೆಗೆ 78,500 ಪ್ರಜಾಸಂಖ್ಯೆಗೆ 1,35,000 ರೂಪಾಯಿ ಕೊಟ್ಟಿದೆ. ಶಿವಮೊಗ್ಗ ಜಿಲ್ಲೆಗೆ 94,900 ಪ್ರಜಾಸಂಖ್ಯೆಗೆ 1,58,000 ರೂಪಾಯಿ ಗ್ರ್ಯಾಂಟು ಕೊಟ್ಟಿದೆ. ಈ ರೀತಿಯಲ್ಲಿ ಪ್ರತಿಯೊಂದು ಜಿಲ್ಲೆಯಿಂದಲೂ ಇವರ ಜನಸಂಖ್ಯೆಯನ್ನು ತರಿಸಿಕೊಂಡು ಇವರ ಅವಶ್ಯಕತೆ ಎಷ್ಟೆಷ್ಟಿದೆ ಎಂಬ ಬಗ್ಗೆ ವರದಿಗಳನ್ನು ಆಯಾ ಜಿಲ್ಲಾಧಿಕಾರಿಗಳಿಂದ ತರಿಸಿಕೊಂಡು ಹಂಚಿದ್ದೇವೆಯೇ ಹೊರತು ಯಾವ ರೀತಿಯಲ್ಲಿಯೂ ದುರುಪಯೋಗಪಡಿಸಿಲ್ಲವೆಂದು ಖಂಡಿತವಾಗಿ ಶ್ರೀ ಮಾದಯ್ಯನವರಿಗೆ ಭರವಸೆ ಕೊಡಬಲ್ಲೆ. ಈ ಅಂಕಿ ಅಂಶಗಳಿಂದಲೇ ವ್ಯಕ್ತವಾಗುವಂತೆ ಮೈಸೂರು ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಹೆಚ್ಚು ಜನಸಂಖ್ಯೆ ಇದ್ದರೂ ಕೂಡ ಇತರ ಜಿಲ್ಲೆಗಳು, ಎಂದರೆ, ಕೋಲಾರ, ತುಮಕೂರು ಚಿತ್ರದುರ್ಗ ಮತ್ತು ಮಲೆನಾಡು ಜಿಲ್ಲೆಗಳಿಗೆ ಹೋಲಿಸಿದರೆ ಈ ಜಿಲ್ಲೆಯವರು ಸ್ವಲ್ಪ ಉತ್ತಮ ಸ್ಥಿತಿಯಲ್ಲಿದ್ದಾರೆ, ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಆದಕಾರಣ ಅವಶ್ಯಕತೆ ಕಡಿಮೆಯಿರಬಹುದು. ಯಾರಿಗೆ ಹೆಚ್ಚಿನ ಅವಶ್ಯಕತೆಯಿದೆಯೋ, ಎಲ್ಲಿ ಹೆಚ್ಚು ಜನ ಮನೆಗಳಿಲ್ಲದೆ ಗುಡಿಸಲುಗಳಲ್ಲಿ ವಾಸಮಾಡುತ್ತಿದ್ದಾರೋ ಅದನ್ನು ನೋಡಿ ಅವರಿಗೆ ಸಹಾಯ ಕೊಡಬೇಕು. ಪ್ರತಿ ಜಿಲ್ಲೆಯ ಅಧಿಕಾರಿಗಳು ಮತ್ತು ಪ್ರತಿನಿಧಿಗಳನ್ನು ಕೇಳಿ ವಿಚಾರಿಸಿ ಈ ವಿವರಗಳನ್ನು ತರಿಸಿಕೊಂಡು ಇದರ ಆಧಾರದ ಮೇಲೆ ಗ್ರ್ಯಾಂಟುಗಳನ್ನು ಹಂಚಿದ್ದೇವೆಯೇ ಹೊರತು ದುರುಪಯೋಗ ಮಾಡಿಲ್ಲ.

ಶ್ರೀ ಎಂ. ಮಾದಯ್ಯನವರು.—ದುರುಪಯೋಗ ಪಡಿಸಿದ್ದಾರೆಂದು ನಾನು ಹೇಳಲಿಲ್ಲ; ಹಂಚಿಕೆ ಸಮರ್ಪಕವಾಗಿಲ್ಲವೆಂದು ಹೇಳಿದೆ, ಅಷ್ಟೆ.

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಅದಕ್ಕೇ ಸಮರ್ಪಕವಾಗಿ ಹಂಚಿಕೆಯಾಗಿದೆಯೆಂದು ಸಮಾಧಾನ ಹೇಳುತ್ತಿದ್ದೇನೆ. ನಿಮ್ಮ ಪಂಗಡದವರಿಗೆ ಜನಸಂಖ್ಯೆಗನುಗುಣವಾಗಿ ಅವಶ್ಯಕತೆ ಎಷ್ಟಿದೆಯೆಂಬುದನ್ನು ನೋಡಿ ಕೊಡಲಾಗಿದೆಯೆಂದು ಹೇಳುತ್ತೇನೆ.

ಇನ್ನು Wood Working Factory ಯಿಂದ ಬಹಳ ನಷ್ಟವಾಗುತ್ತಿದೆ, ಸರಿಯಾಗಿ ನಡೆಯುತ್ತಿಲ್ಲ ಇದನ್ನು ಕೈಗಾರಿಕೆ ಇಲಾಖೆಗೆ ವರ್ಗಮಾಡಬೇಕೆಂದು ಹೇಳಿ ಮಾನ್ಯ ಸದಸ್ಯರು ಕೆಲವು ಅಂಕಿ ಅಂಶಗಳನ್ನು ಕೊಟ್ಟರು. ಅರಣ್ಯ ಇಲಾಖೆ ಅಥವ ಕೈಗಾರಿಕೆ ಇಲಾಖೆಗೆ ಸೇರಿಸುವುದು ನೀತಿಗೆ ಸಂಬಂಧಪಟ್ಟ ವಿಚಾರ, ಇದು ಹಾಗಿರಲಿ. ನಷ್ಟವಾಗುತ್ತಿದೆಯೆಂದು ಹೇಳಿದರು, ಇದರ ವಿಚಾರದಲ್ಲಿ ಮಾತ್ರ ಉತ್ತರ ಹೇಳುತ್ತೇನೆ. ಸರಿಯಾಗಿ ಪರಿಶೀಲಿಸಿ ನೋಡಿದರೆ ನಷ್ಟವಾಗುತ್ತಿಲ್ಲವೆಂಬುದು ಗೊತ್ತಾಗುತ್ತದೆ. ಈ ಕಾರ್ಖಾನೆ ಹೊಸದಾಗಿ ಪ್ರಾರಂಭವಾಗಿರುವುದು. ಪರದೇಶಗಳಿಂದ ಬರಬೇಕಾದ ಯಂತ್ರೋಪಕರಣಗಳು ಇನ್ನೂ ಬಂದಿಲ್ಲ. ಅವು ನಮಗೆ ಬಂದಕೂಡಲೇ ಇನ್ನೂ ಕೆಲಸ ಹೆಚ್ಚು ಮಾಡುತ್ತೇವೆ. ವಿದ್ಯಾಇಲಾಖೆಯಿಂದ ಶೀಘ್ರವಾಗಿ ಬೆಂಚುಗಳು ಮತ್ತು ಸ್ಟೂಲುಗಳು ಬೇಕೆಂದು ಇಂಡೆಂಟ್ ಕೊಟ್ಟಿದ್ದರು. ಅವುಗಳನ್ನು ತಕ್ಷಣ ಮಾಡಿಕೊಡಬೇಕೆಂದು ಪ್ರಾರಂಭಮಾಡಿದೆವು. 1937 ಬೆಂಚುಗಳನ್ನೂ 1,704 ಸ್ಟೂಲುಗಳನ್ನೂ 19 ರೂಪಾಯಿನಂತೆ ಬೆಂಚುಗಳನ್ನೂ 6 ರೂಪಾಯಿನಂತೆ ಸ್ಟೂಲುಗಳನ್ನೂ ಮಾಡಿ ಕೊಟ್ಟಿದ್ದಕ್ಕೆ 41,811 ರೂಪಾಯಿ ಬಂದಿದೆ. ಈ ಕಾರ್ಖಾನೆಯ ಸಿಬ್ಬಂದಿ ಖರ್ಚು, ಕೂಲಿ ಖರ್ಚು, ಮರದ ಬೆಲೆ ಎಲ್ಲಾ ಒಟ್ಟು 31,200 ರೂಪಾಯಿ ಆಗಿದೆ, ನಿವ್ವಳ ನಫೆ 10,600 ರೂಪಾಯಿ ಬಂದಿದೆ. ಇನ್ನೂ machanise ಮಾಡಿಲ್ಲ, ಮಾಡಿದ ಮೇಲೆ ಕೆಲಸ ಇನ್ನೂ ಚುರುಕಾಗಿ ನಡೆಯುತ್ತದೆ. ಅದುದರಿಂದ ನಷ್ಟವಾಗಿದೆಯೆಂದು ಯಾರೂ ಭ್ರಾಂತಿಪಡಬೇಕಾಗಿಲ್ಲ.

ಶ್ರೀ ಎಸ್. ರಂಗರಾಯರು (ಚಿತ್ರದುರ್ಗ ಜಿಲ್ಲೆ).—Profit and Loss Statement ಹಾಕಿದ್ದೀರಾ? ಈ ಅಂಕಿಗಳನ್ನು dispute ಮಾಡುತ್ತೇನೆ.

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಅದು ತಮ್ಮ ಅಭಿಪ್ರಾಯವಿರಬಹುದು. ಇಲಾಖೆಯವರು ರೆಕ್ಕಾರ್ಡುಮಾಡಿ ಕಳುಹಿಸಿರುವ ಅಂಕಿ ಅಂಶಗಳ ಆಧಾರದ ಮೇಲೆ ಹೇಳುತ್ತಿದ್ದೇನೆ. ನೆನ್ನೆಯ ದಿವಸ

(ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.)

ನಾನೇ ಅಲ್ಲಿಗೆ ಹೋಗಿ ಅವರ ಅಂಕಿ ಅಂಶಗಳನ್ನೆಲ್ಲಾ ಪರಿಶೀಲನೆ ಮಾಡಿಕೊಂಡು ಬಂದು ಹೇಳುತ್ತಿದ್ದೇನೆ. ನಷ್ಟವಾಗಿಲ್ಲವೆಂದು ಮಾತ್ರ ಧೈರ್ಯವಾಗಿ ಹೇಳಬಲ್ಲೆ.

ಶ್ರೀ ಎಸ್. ರಂಗರಾಮಯ್ಯನವರು.—ಗಂಧದ ಎಣ್ಣೆ ಕಾರ್ಖಾನೆಯಲ್ಲಿ ಹೇಗೆ ಹಿಂದೆ ಮರದ ಬೆಲೆಯನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ ಲೆಕ್ಕಾಚಾರ ಮಾಡುತ್ತಿದ್ದರೋ ಹಾಗೆಯೇ ಮಾಡಿರಬಹುದು.

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಮರದ ಬೆಲೆ, ಕೂಲಿ, working cost, depreciation charges ಎಲ್ಲವನ್ನೂ ಲೆಕ್ಕಾಚಾರ ಹಾಕಿ ಅದರ ಮೇಲೆ 10,600 ರೂಪಾಯಿ ಲಾಭ ಬಂದಿದೆ. ನೀತಿಯ ವಿಚಾರದಲ್ಲಿ ಹೇಳಿದರು ಅದಕ್ಕೆ ನಾನು ಈಗ ಉತ್ತರ ಹೇಳಲು ಹೋಗುವುದಿಲ್ಲ. ಒಟ್ಟಿನಲ್ಲಿ ಇದರಿಂದ ನಷ್ಟವಾಗುತ್ತಿಲ್ಲವೆಂದು ಮಾತ್ರ ಖಚಿತವಾಗಿ ಹೇಳುತ್ತೇನೆ.

ಶ್ರೀಮಾನ್ ಹನುಮಂತಪ್ಪನವರು ಕೆಲವು ವಿಷಯಗಳನ್ನು ತಿಳಿಸಿದ್ದಾರೆ. ಬೆಂಗಳೂರು ನಗರಕ್ಕೆ ಸಾಕಾದಷ್ಟು ಸೌದೆ ಇದ್ದಲು ಒದಗುತ್ತಿಲ್ಲ, ವಿದ್ಯುಚ್ಛಕ್ತಿಯನ್ನು ಸರಬರಾಯಿ ಮಾಡಬೇಕೆಂದು ಹೇಳಿದರು. ಬೆಂಗಳೂರಿನ ನಾಗರಿಕರಿಗೆ ಒಬ್ಬೊಬ್ಬರಿಗೆ ಎಷ್ಟು ಸೌದೆ ಬೇಕಾಗುತ್ತದೆ, ಎಷ್ಟು ಸರಬರಾಯಾಗುತ್ತಿದೆ, ಅರಣ್ಯಗಳು ಯಾವ ರೀತಿ exploit ಆಗುತ್ತಿವೆ ಎಂಬ ಬಗ್ಗೆ ವಿವರಗಳನ್ನು ಮುಂದೆ ಹೇಳುತ್ತೇನೆ.

ಇನ್ನು ನೀರು ಸರಬರಾಯಿ ವಿಚಾರದಲ್ಲಿ ಪಬ್ಲಿಕ್ ವರ್ಕ್ಸ್ ಇಲಾಖೆಯವರು ಸೂಕ್ತ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಒಂದು ಯೋಜನೆ ಸಿದ್ಧವಾಗಿದೆ. ಹಣ ಒದಗಿದ ತಕ್ಷಣ ಅದನ್ನು ಕಾರ್ಯರೂಪಕ್ಕೆ ತರುತ್ತೇವೆಂದು ಸಂಬಂಧಪಟ್ಟ ಮಂತ್ರಿಗಳು ಹೇಳುತ್ತಾರೆ.

ಕೆಲವು ಮಾನ್ಯ ಸದಸ್ಯರು ಸೆಂಟ್ರಲ್ ಡಿಪ್ರೆಸ್ಡ್ ಕ್ಲಾಸ್ ಸಮಿತಿಯನ್ನು ಏರ್ಪಾಡು ಮಾಡಬೇಕೆಂದು ಹೇಳಿದರು. ಈ ವಿಚಾರದಲ್ಲಿ ಸರ್ಕಾರದವರು ತಮ್ಮ ಅಭಿಪ್ರಾಯವನ್ನು ಹಿಂದೆಯೇ ಅನೇಕಸಾರಿ ಹೇಳಿದ್ದಾರೆ. ಆದರೂ ಈ ವಿಷಯದಲ್ಲಿ ಶ್ರೀಮಾನ್ ಟಿ. ಹನುಮಯ್ಯನವರು ಒಂದು ಖೋತಾ ಸೂಚನೆಯನ್ನು ಕಳುಹಿಸಿದ್ದಾರೆ. ಅದು ಚರ್ಚೆಗೆ ಬಂದಾಗ ಉತ್ತರ ಹೇಳುತ್ತೇನೆ.

ಮಂಡ್ಯ ಜಿಲ್ಲೆಯಲ್ಲಿ ಕೋಮುವಾರು ಮನೋಭಾವವಿದೆ, ಇದರಿಂದ ನಿಮ್ಮ ವರ್ಗದವರಿಗೆ ಬಹಳ ತೊಂದರೆಯಾಗುತ್ತಿದೆಯೆಂದು ಹೇಳಿದರು. ಕೆಲವುಕಡೆ ತೊಂದರೆಯಾಗುತ್ತಿದೆ, ನಿಜವಾಗಿರುವ ಅಂಶವನ್ನು ಹೇಳಿದ್ದಾರೆ. ಆದರೆ ಇಂತಹ ತೊಂದರೆಗಳು ಕಾನೂನು ಮೂಲಕ ಪರಿಹಾರವಾಗುತ್ತವೆ, ಸರಿಹೋಗುತ್ತವೆ ಎಂದು ಸರ್ಕಾರದವರಾಗಲೀ ಖಾಸಗಿಯವರಾಗಲೀ ಹೇಳುವುದಕ್ಕಾಗುವುದಿಲ್ಲ. ಬಹು ದಿನಗಳಿಂದ ಜನರಲ್ಲಿ ಜಾತಿ ಮತಗಳ ಭೇದ ಭಾವನೆ ಇದೆ, ಇದು ಕ್ರಮೇಣ ಹೋಗುತ್ತಿದೆ.

ಶ್ರೀ ಟಿ. ಹನುಮಯ್ಯನವರು.—ಈಗಲೂ ಜೀತದ ಪದ್ಧತಿ ಇದೆಯಲ್ಲವೆ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಇದೆ, ಕೆಲವು ಕಡೆ ಇದೆ. ಆದರೆ ಬಹುಮಟ್ಟಿಗೆ ಹೋಗುತ್ತಿದೆ. ಹತ್ತು ಇಪ್ಪತ್ತು ವರ್ಷಗಳ ಹಿಂದೆ ಎಷ್ಟು ಜನರು ಜೀತಕ್ಕಿದ್ದರೋ ಅದರಲ್ಲಿ ಶೇಕಡ 50ರಷ್ಟು ಕಡಿಮೆಯಾಗಿದೆ. ಹಳ್ಳಿಗಳಲ್ಲಿ ಅನೇಕ ಕಡೆ ಜೀತಕ್ಕೆ ಜನರು ಸಿಕ್ಕುವುದಿಲ್ಲವೆಂದು ಹೇಳುತ್ತಿದ್ದಾರೆ. ಜೀತ ಮಾಡಬೇಕೆಂದು ನಿಬಂಧ ಇಲ್ಲ, ಯಾವ ಸಂದರ್ಭದಲ್ಲಿಯೂ ಜೀತಮಾಡಬೇಕೆಂದು ಹೇಳಿ ಕೋರ್ಟಿಗೆ ಹೋಗುವಹಾಗಿಲ್ಲ. ಕೆಲವರು ಸಾಲ ತೆಗೆದುಕೊಳ್ಳುವುದರಿಂದ ಕೆಲವುಕಡೆ ಜೀತದ ಪದ್ಧತಿ ಇನ್ನೂ ಇದೆ, ಇದು ಕೆಟ್ಟ ಪದ್ಧತಿ, ಆದಷ್ಟು ಬೇಗ ಹೋಗುವುದು ಸೂಕ್ತವೆಂಬುದು ಸರ್ಕಾರದವರಿಗೆ ಗೊತ್ತಿದೆ. ಆದರೆ ಇದು ಕಾನೂನು ಮೂಲಕ ಹೋಗುತ್ತದೆಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಂ. ಮಾದಯ್ಯನವರು.—ಜೀತದ ಪದ್ಧತಿಗೆ ಸಂಬಂಧಪಟ್ಟ ಕಾಗದ ಪತ್ರಗಳು ಸಬ್ ರಿಜಿಸ್ಟ್ರಾರ್ ಕಚೇರಿಗೆ ಬಂದಾಗ ಏಕೆ ನಿರೋಧಿಸಿಲ್ಲ ? ಕಾನೂನಿನ ಮೂಲಕ ಇದನ್ನು ತಪ್ಪಿಸಬಹುದು.

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಸಾಮಾನ್ಯವಾಗಿ ದೇಶದಲ್ಲಿ general awakening ಆಗಿದೆ, ವಿದ್ಯಾಭ್ಯಾಸ ಹೆಚ್ಚಿದಂತೆ ಇಂತಹ ಪದ್ಧತಿಗಳು ಕಡಿಮೆಯಾಗುತ್ತವೆ. ಹರಿಜನರು ಕೂಡ ವಿದ್ಯಾಭ್ಯಾಸದಲ್ಲಿಯೂ ರಾಜಕೀಯದಲ್ಲಿಯೂ ಮುಂದುವರಿದು ಬರುತ್ತಿದ್ದಾರೆ. ಅವರ ಆರ್ಥಿಕಾಭಿವೃದ್ಧಿಯೂ ಆಗುತ್ತಿದೆ. ಹೀಗೆಯೇ ಕಾಲ ಕಳೆದಂತೆ ಎಲ್ಲವೂ ವ್ಯತ್ಯಾಸವಾಗುತ್ತದೆ. ಹರಿಜನರೂ ಇತರರಂತೆ ಅಭಿವೃದ್ಧಿಗೆ ಬಂದೇ ಬರುತ್ತಾರೆ, ಇದು ಭಗವಂತನ ಇಚ್ಛೆ. ಆದರೂ ಜನರು ಪರಸ್ಪರ ಸಹಕಾರದಿಂದ ಕೆಲಸಮಾಡಬೇಕು, ಸುಮ್ಮನೆ ಕುಳಿತುಕೊಳ್ಳುವ ಹಾಗಿಲ್ಲ. ಖಾಸಗಿ ಜನರೂ ಕೂಡ ಹತ್ತು ವರ್ಷಗಳ ಹಿಂದೆ ಹರಿಜನರಿಗೆ ಯಾವರೀತಿ ಕಿರುಕುಳ ಕೊಡುತ್ತಿದ್ದರೋ ಹಾಗೆ ಈಗ ಕೊಡುತ್ತಿಲ್ಲ. ಸುಮಾರು ಶೇಕಡ 70ರಷ್ಟು ಕಡಿಮೆಯಾಗಿದೆ. ಅನೇಕ ಖಾಸಗಿ ದೊಡ್ಡ ಮನುಷ್ಯರೂ ಇದಕ್ಕೆ ಸಹಾಯಮಾಡಿ ಇವರ ಕಷ್ಟವನ್ನು ಕಡಿಮೆ ಮಾಡುತ್ತಿದ್ದಾರೆ. ಇಲ್ಲಿರತಕ್ಕ ಹರಿಜನರಲ್ಲದೆ ಬಾಕಿ ಸವರ್ಣ ಸಹೋದರರೆಲ್ಲರೂ ಇದಕ್ಕೆ ಬೆಂಬಲ ಕೊಡುತ್ತಿದ್ದಾರೆ. ಹಳ್ಳಿಗಳಲ್ಲಿ ಹರಿಜನರ ಕಷ್ಟವನ್ನು ನಿವಾರಣೆ ಮಾಡುವುದಕ್ಕೆ ಪ್ರಯತ್ನಪಡುತ್ತಾರೆಂದು ನಂಬಿದ್ದೇನೆ. ಈ ಸುಧಾರಣೆ ಆಗುತ್ತಿದೆ.

ಆದುದರಿಂದ ಇವೆಲ್ಲವೂ ಸಮಾಜಸುಧಾರಣೆಯಿಂದಲೇ ಸುಧಾರಣೆಯಾಗಬೇಕಾಗಿದೆ. ಅವರಿಗೆ ಈ ವಿಚಾರಗಳಲ್ಲಿ ಮೊದಲು ಜ್ಞಾನೋದಯವಾಗಬೇಕು. ಹಾಗೆ ಅವರಿಗೆ ಯಾವಾಗ ಜ್ಞಾನೋದಯವಾಗುತ್ತದೋ ಆಗಲೇ ಅವರಿಗೆ ಈ ರೀತಿಯಲ್ಲಿ ಆಗುತ್ತಿರುವ ಕಷ್ಟಗಳೆಲ್ಲಾ ಅಂದರೆ ಈಗ ಶ್ರೀ ವೆಂಕಟೇಶ್ವರವರು ತಿಳಿಸಿದಂಥ ಕಷ್ಟಗಳೆಲ್ಲವೂ ನಿವಾರಣೆಯಾಗಲು ಸಹಾಯಕವಾಗುತ್ತದೆಂದು ಹೇಳಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

ಮಾನ್ಯ ಶ್ರೀ ಟಿ. ಮರಿಯಪ್ಪನವರು (ಒಳಾಡಳಿತ ಸಚಿವರು).—ಮಾನ್ಯ ಅಧ್ಯಕ್ಷರೇ, ಸಭೆಯ ಮುಂದೆ ಮಂಡಿಸಿರತಕ್ಕ ಈ ಆಯವ್ಯಯ ಪಟ್ಟಿಯ ಮೇಲೆ ಭಾಷಣಮಾಡುತ್ತ ಮಾನ್ಯ ಸದಸ್ಯರನೇಕರು ಕೆಲಕೆಲವು ಅಂಶಗಳಲ್ಲಿರತಕ್ಕ ಲೋಪದೋಷಗಳನ್ನೆತ್ತಿ ಅವುಗಳ ಬಗ್ಗೆ ಹೆಚ್ಚು ಹಣವನ್ನೊದಗಿಸಬೇಕೆಂದೂ, ಈಗ ಒದಗಿಸಿರತಕ್ಕ ಹಣ ಸಾಕಾಗುವುದಿಲ್ಲವೆಂದೂ, ಆ ಬಗ್ಗೆ ಇನ್ನೂ ಹೆಚ್ಚಿನ ಅನುಕೂಲಗಳನ್ನು ಏರ್ಪಡಿಸಿ ಕೊಡಬೇಕೆಂದೂ ತಿಳಿಸಿದ್ದಾರೆ. ಸಾಧಾರಣವಾಗಿ ಈ ನಾಲ್ಕು ದಿನಗಳೂ ಬಡ್ಜೆಟ್ಟಿನ ಮೇಲೆ ಮಾಡಿರತಕ್ಕ ಭಾಷಣಗಳೆಲ್ಲವೂ ಕೇವಲ ರಚನಾತ್ಮಕ ದೃಷ್ಟಿಯಿಂದಲೇ ಮಾಡಲ್ಪಟ್ಟು, ಅಲ್ಲಲ್ಲೇ ಅಲ್ಪಸ್ವಲ್ಪ ವಿರೋಧವಾದ ಟೀಕೆಗಳೂ

ಬಂದಿರುತ್ತವೆ. ಆದರೆ ಹೀಗೆ ಅವರು ಮಾಡಿರತಕ್ಕ ಎಲ್ಲಾ ಟೀಕೆಗಳನ್ನೂ ಸ್ವೀಕರಿಸುವುದು ಸರ್ಕಾರದವರ ಧರ್ಮ ಮತ್ತು ಅದೇ ರೀತಿ ಎಲ್ಲೆಲ್ಲಿ ಎಷ್ಟೆಷ್ಟು ಮಟ್ಟಿನ ಹಣಕಾಸಿನ ಸಾಧ್ಯತೆ ಕಂಡುಬರುತ್ತದೋ ಅಷ್ಟನ್ನು ಬೇಗ ಸರಿಪಡಿಸತಕ್ಕದ್ದು ಸರ್ಕಾರದ ಕರ್ತವ್ಯ ಮತ್ತು ಧರ್ಮ. ಆದರೆ ನಾನೀಗ ಟೀಕೆಗಳು ಬಂದಿರತಕ್ಕ ಬಗ್ಗೆ ಅಂಕಿ ಅಂಶಗಳೊಡನೆ ವಿಚಾರವನ್ನು ಪರಿಶೀಲನೆ ಮಾಡ ಲಿಚ್ಛಿಸುತ್ತೇನೆ.

ಆದರೆ ಬಹಳಮಟ್ಟಿಗೆ ಬಂದಿರತಕ್ಕ ಟೀಕೆಗಳೆಲ್ಲವೂ ಆಹಾರ ಸರಬರಾಯಿನ ವ್ಯವಸ್ಥೆಗೆ ಹೆಚ್ಚಾಗಿ ಸೇರಿದವುಗಳಾಗಿವೆ. ಈ ಆಹಾರ ಸಮಸ್ಯೆಯ ಬಗ್ಗೆ ಎಲ್ಲರನ್ನೂ ಸಮಾಧಾನ ಮಾಡತಕ್ಕ ಕೆಲಸ ಯಾರಿಗೂ ಸಾಧ್ಯವಿಲ್ಲ, ಹರಿ ಹರ ಬ್ರಹ್ಮಾದಿಗಳಿಗೂ ಕೂಡ ಅಸದಳವಾದುದೆಂದು ತಿಳಿಸದೆ ವಿಧಿಯಿಲ್ಲ. ಆದರೆ ಇದು ಮಾನ್ಯ ಸದಸ್ಯರಿಗೂ ಮತ್ತೂ ಸಾರ್ವಜನಿಕರಿಗೂ ಎಷ್ಟು ರುಚಿಕರವಾಗಿದೆಯೋ ಸರ್ಕಾರದವರಿಗೂ ಅಷ್ಟೇ ರುಚಿಕರವಾಗಿದೆ. ಹಾಗಿಲ್ಲದೆ, ಇದು ಕೇವಲ ಸರ್ಕಾರದವರಿಗೊಬ್ಬರಿಗೇ ರುಚಿಕರವಾಗಿರುತ್ತದೆಂದು ಯಾರಾದರೂ ಭಾವಿಸಿದ್ದರೆ ಅದು ತಪ್ಪು ಭಾವನೆ. ಇದು ಪ್ರಜೆಗಳೆಲ್ಲರಿಗೂ ಎಷ್ಟು ಅಪ್ರಿಯವೋ ಸರ್ಕಾರಕ್ಕೂ ಅಷ್ಟೇ ಅಪ್ರಿಯವಾಗಿದೆ. ಆದರೆ ಈ ಆಹಾರ ಯೋಜನೆಯು ಇಡೀ ಭಾರತಕ್ಕೇ ಸಂಬಂಧಪಟ್ಟದ್ದಾಗಿರುವುದರಿಂದ ಮತ್ತು ಅಂಥಾ ಭಾರತದ ಆಡಳಿತದ ಒಂದು ಚೌಕಟ್ಟಿನಲ್ಲಿ ಈ ನಮ್ಮ ಮೈಸೂರೂ ಸೇರಿರುವುದರಿಂದ, ಇದು ದೇಶದ ಯಾವ ಒಂದು ಮೂಲೆಯಲ್ಲಿದ್ದರೂ, ಇದರ ಪೀಡೆ ದೇಶದ ಜನರ ಮೇಲೆಲ್ಲಾ ಬೀಸುತ್ತದೆಂದು ಹೇಳಿ, ಹಾಗೆ ಬೀಸುವ ಪೀಡೆಯನ್ನು ತಪ್ಪಿಸಬೇಕೆಂದು ಕಾಂಗ್ರೆಸ್ ಸರ್ಕಾರದವರು ಈ ಹತೋಟಿ ಆಜ್ಞೆಗಳನ್ನು ಜಾರಿಗೆ ಮತ್ತೆ ತಂದಿರುತ್ತಾರೆ. ಆದರೆ ಇದನ್ನು ಪ್ರಥಮತಃ ಜಾರಿಗೆ ತಂದವರು ಕಾಂಗ್ರೆಸ್ ಸರ್ಕಾರದವರಲ್ಲ. ಇದು ಕೇವಲ ಬಹಳ ವರ್ಷಗಳ ಹಿಂಪೆಯೇ ಅಂದರೆ 1943ರಲ್ಲೇ ಹಿಂದಿದ್ದ ಸರ್ಕಾರದವರ ಕಾಲದಲ್ಲೇ ಪ್ರಾರಂಭವಾಯಿತು. ಆದರೆ ಈ ಬಗ್ಗೆ ಒಂದು ಅಂಶ ಮಾನ್ಯ ಸದಸ್ಯರೆಲ್ಲರ ಗಮನದಲ್ಲೂ ಇರಬಹುದೆಂದು ನಾನು ನಂಬಿದ್ದೇನೆ. ಮೊದಲು ಕಾಂಗ್ರೆಸ್ ಸರ್ಕಾರ ಆಡಳಿತಕ್ಕೆ ಬಂದ ಕೂಡಲೇ ಈ ಹತೋಟಿ ಆಜ್ಞೆಗಳನ್ನೆಲ್ಲಾ ರದ್ದುಮಾಡಿದ್ದಾಗ್ಗೆ ಜನರಿಗೆ ದೇಶದಲ್ಲೆಲ್ಲಾ ಎಷ್ಟರಮಟ್ಟಿನ ತೊಂದರೆಗಳಾಗಿ ಮತ್ತೆ ಪುನಃ ಈ ಹತೋಟಿ ಆಜ್ಞೆಗಳನ್ನು ಜಾರಿಗೆ ತರಲಾಗಿರುತ್ತೆಂಬ ಅಂಶ ಸರ್ವರಿಗೂ ವೇದ್ಯವಿರತಕ್ಕದ್ದೇ ಅಗಿದೆ. ಈಗಾಗಲೇ ಈ ಆಹಾರದ ಬಗ್ಗೆ 666 ಸಹಸ್ರ ರೂಪಾಯಿಗಳು ಅಂದರೆ 6 ಲಕ್ಷ ಚಿಲ್ಲರೆ ಖರ್ಚಾಗಿರತಕ್ಕ ಅಂಶ ಲೆಕ್ಕದಲ್ಲಿ ಕೊಡಲಾಗಿರುವ ಅಂಕಿ ಅಂಶಗಳಿಂದಲೇ ವ್ಯಕ್ತಪಡುತ್ತದೆ. ಈ ಹಿಂದೆ ಬೆಂಗಳೂರಿಗೆ, ಶ್ರೀರಂಗಪಟ್ಟಣ, ಮೈಸೂರು ಈ ಪ್ರಾಂತ್ಯಗಳಿಂದ ಅಕ್ಕಿ ಸರಬರಾಯಿ ಅಗುತ್ತಿರಲಿಲ್ಲವೆಂಬ ಅಂಶ ಮಾನ್ಯ ಸದಸ್ಯರ ಗಮನದಲ್ಲಿರಬಹುದು. ಇದು ಮುಖ್ಯವಾಗಿ ಮಳೆ ಬೆಳೆಗಳನ್ನು ಅವಲಂಬಿಸಿಕೊಂಡಿರತಕ್ಕ ಪ್ರಶ್ನೆಯಾಗಿದೆ. ಇದನ್ನು ಮಾನ್ಯ ಸದಸ್ಯರು ಮುಖ್ಯವಾಗಿ ತಮ್ಮ ಗಮನದಲ್ಲಿಟ್ಟುಕೊಂಡಿರಬೇಕು. ಇದರ ಜೊತೆಗೆ ಜನರ ಅರಿವೇ ಇಲ್ಲದೆ ಬೆಳೆ ಕಮ್ಮಿ ಆದಂತೆಲ್ಲಾ ಮತ್ತೊಂದು ಕಡೆ ಜನಸಂಖ್ಯೆ ಬೇರೆ ವಿಪರೀತವಾಗಿ ಬೆಳೆಯುತ್ತಿದೆಯೆಂದು ಮೊನ್ನೆ ನಡೆದ ಸೆನ್ಸಸ್ ಲೆಕ್ಕಗಳಿಂದ ತಿಳಿದು ಬಂದಿದೆ.

Sri M. N. JOIS.—Question!

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನಾವು ಮಕ್ಕಳು ಹೆಚ್ಚಿದರೆ ಸಂತೋಷದಿಂದ ನಲಿಯುತ್ತಿದ್ದ ಕಾಲ ಹೋಗಿ ಹೀಗೆ ಭವಣೆಪಡತಕ್ಕ ಕಾಲ ಬಂದಿದೆ. ಹೀಗೆ 41-42 ರಿಂದ 1951-52ಕ್ಕೆ ಎಷ್ಟು ಪ್ರಜಾಸಂಖ್ಯೆ ಹೆಚ್ಚಾಗಿದೆಯೋ ಅಷ್ಟು ಬೆಳೆ ಬೆಳೆಯುವುದರಲ್ಲಿ ಕಮ್ಮಿ ಆಗಿರುತ್ತೆಂಬ ಅಂಶವನ್ನು ಮಾನ್ಯ ಸದಸ್ಯರು ಸ್ವಲ್ಪ ಆಲೋಚನೆ ಮಾಡಿ ನೋಡಬೇಕಾಗುತ್ತದೆ. ಮೊದಲೇ ಇದು ಪ್ರಜೆಗಳಿಗೆ ಅಪ್ರಿಯವಾಗಿರುವಾಗ, ಸರ್ಕಾರದವರು ಇದನ್ನು ಕಟ್ಟಿಕೊಂಡು ಒದ್ದಾಡಬೇಕೆಂಬ ಇರಾದೆ ಖಂಡಿತ ಇಲ್ಲ. ಈ ಹತೋಟಿ ಆಜ್ಞೆಗಳು ಎಷ್ಟು ಬೇಗ ಹೋದರೆ ಅಷ್ಟು ಸಂತೋಷಪಡತಕ್ಕ ಜನರ ಪೈಕಿ ನನಗಿಂತಲೂ ಹೆಚ್ಚಿನ ಸಂತೋಷ ಪಡತಕ್ಕವರಾರೂ ಇರುವುದಿಲ್ಲವೆಂದು ನಾನು ತಿಳಿಸಲಿಚ್ಛಿಸುತ್ತೇನೆ. ಈ ಆಹಾರ ಸರಬರಾಯಿನ ಬಗ್ಗೆ ಎಷ್ಟೆಷ್ಟು ಸಡಿಲವಾಗಿ ಖರ್ಚುಮಾಡಿ ಜನರಿಗೆ ಅನುಕೂಲವಾಗಲೆಂಬ ದೃಷ್ಟಿಯಿಂದ ಕೆಲಸ ಮಾಡಿರುತ್ತೇವೆಂಬುದು ಎಲ್ಲರಿಗೂ ಗೊತ್ತಿರತಕ್ಕ ಅಂಶವೇ ಆಗಿದೆ.

ಈಗಾಗಲೇ ಈ ಬಾಬಿಗಾಗಿ ಹೆಚ್ಚು ಹಣ ಖರ್ಚಾಗಿ ಹೋಗಿದೆ. ಮಾನ್ಯ ಸಭೆಯಲ್ಲಿ 1944-45 ರಿಂದಲೂ ಸದಸ್ಯರಾಗಿರುವಂಥ ಮಹನೀಯರು ಇಂದು ಇಲ್ಲಿರುತ್ತಾರೆ. ಹೀಗೆ ಇದು ಆ ಹಿಂದಿನಿಂದಲೂ ಪ್ರಾರಂಭವಾದದ್ದಾಗಿ ತಕ್ಷಣ ನಿಲ್ಲಿಸಲು ಯಾರಿಂದಲೂ ಸಾಧ್ಯವಿಲ್ಲದಾಗಿದೆ. ಆ ವರ್ಷ ಈ ಬಾಬಿಗೆ 176 ಲಕ್ಷ ಖರ್ಚಾಗಿದೆ. ಈ ಹಣದಲ್ಲಿ ಇನ್ನೂ ಶಿಬ್ಬಂದಿ ಸಾದಿಲ್‌ವಾರು ಇತ್ಯಾದಿ ಖರ್ಚುಗಳು ಸೇರದೆ ಕೇವಲ ಸಬ್ಸಿಡಿ ಒಂದಕ್ಕೇ ಅಷ್ಟು ಖರ್ಚಾಗಿದೆ. ಆದರೆ ಆ ಸಾಲಿನಲ್ಲಿ ಕೆಲವು ಕಡೆ ಕ್ಷಾಮ ತಲೆದೋರಿದ್ದುದರಿಂದ ಅಷ್ಟು ಖರ್ಚಾಗಿರಬಹುದೆಂದು ತೋರುತ್ತದೆ. ಹೀಗೆ ವರ್ಷ ವರ್ಷ ವಿಪರೀತವಾಗಿ ಖರ್ಚಾಗುತ್ತಿದ್ದ ಸಬ್‌ಸಿಡಿ ಮೊಬಲಗನ್ನು ಕ್ರಮಕ್ರಮವಾಗಿ ಕಮ್ಮಿ ಮಾಡುತ್ತಾ ಬಂದಿದ್ದೇವೆ. ಈ ಸಬ್‌ಸಿಡಿಗಾಗಿ ಮೊದಲನೆಯ ವರ್ಷ 160 ಲಕ್ಷ ರೂಪಾಯಿ, ಅದರ ಮಾರನೆಯ ವರ್ಷ 125 ಲಕ್ಷ ರೂಪಾಯಿ, ಅದರ ಮಾರನೆಯ ಸಾಲಿನಲ್ಲಿ 120 ಲಕ್ಷ ರೂಪಾಯಿ, ಹೀಗೆ ಕಮ್ಮಿ ಮಾಡುತ್ತಾ ಬಂದು ಈ ಸಾಲಿಗೆ ಇದನ್ನು 16 ಲಕ್ಷಕ್ಕೆ ಇಳಿಸಿದ್ದೇವೆ.

ಶ್ರೀ ಎಚ್. ಎಂ ಚೆನ್ನಬಸಪ್ಪನವರು.—ಕೈಲಿ ಹಣವಿಲ್ಲದ್ದಕ್ಕೆ ತಾನೆ ಹಾಗೆ ಕಮ್ಮಿ ಮಾಡಿರುವುದು!

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹಾಗೆ ಈ ಸಬ್‌ಸಿಡಿಯನ್ನು ಕಮ್ಮಿ ಮಾಡತಕ್ಕ ಬಗ್ಗೆ ಮಾನ್ಯ ಸದಸ್ಯರೆಲ್ಲರೂ ಸಹಕರಿಸಿದ್ದಕ್ಕಾಗಿ ನಾನು ಅವರಿಗೆಲ್ಲ ನನ್ನ ವಂದನೆಗಳನ್ನು ಸಮರ್ಪಿಸುತ್ತೇನೆ. 1-8-49ರಲ್ಲಿ ಒಂದಾವರ್ತಿ ಮತ್ತು 1-8-50 ರಲ್ಲಿ ಒಂದಾವರ್ತಿ ಈ ಆಹಾರ ಧಾನ್ಯಗಳ ಬೆಲೆಯನ್ನು ಕೊಂಚ ಮಟ್ಟಿಗೆ ಏರಿಸಲಾಗಿದೆ. ಆ ಕಾರಣದಿಂದಲೂ ನೀವು ಕೊಡುತ್ತಿದ್ದ ಸಬ್ಸಿಡಿ ಸ್ವಲ್ಪ ಕಮ್ಮಿ ಆಗಲು ಕಾರಣವಾಯಿತು. ಅದಕ್ಕಾಗಿ ಮಾನ್ಯ ಸದಸ್ಯರೆಲ್ಲರಿಗೂ ನನ್ನ ವಂದನೆಗಳು. ಈ ಬಾಬಿನಲ್ಲಿ ಈಗಾಗಲೇ ಒಟ್ಟು $8\frac{1}{2}$ ಕೋಟಿಯಷ್ಟು ನಮ್ಮ ಕೈಬಿಟ್ಟು ಹೋಗಿದ್ದಾಗಿ ಈಗ ವರ್ಷಕ್ಕೆ ಕೇವಲ 16 ಲಕ್ಷಕ್ಕೆ ಇಳಿಸಲಾಗಿದೆ. ಮುಂದಿನ ಸಾಲಿಗೆ ಇನ್ನೂ ಕಮ್ಮಿ ಮಾಡಬೇಕೆಂದಿರುತ್ತೇವೆ. ಈ ಆಹಾರ ಬಾಬಿನಲ್ಲಿ ನಮಗೆ ಬೀಳುತ್ತಿರುವ ಖರ್ಚಿನ ಬಗ್ಗೆ ಸುಮಾರು 48 ಲಕ್ಷ ರೂಪಾಯಿಗಳಷ್ಟು ಹಣಕ್ಕೆ ಕೇಂದ್ರ ಸರ್ಕಾರದವರೂ ಕೂಡ ಭಾಗಿಗಳಾಗಿರುತ್ತಾರೆ. ಪರದೇಶಗಳಿಂದ ನಮಗೆ ಆಮದಾಗುತ್ತಿರುವ ಧಾನ್ಯಗಳ ಬೆಲೆಯನ್ನು ಒಂದು ಸಮತೂಕದಲ್ಲಿರುವಂತೆ ಮಾಡತಕ್ಕದ್ದೇ ಇದರ ಉದ್ದೇಶವಾಗಿದೆ. ಹೀಗೆ ನಾವು 16 ಲಕ್ಷಕ್ಕೆ ಇಳಿಸಿರುವುದರಲ್ಲಿ

(ಮಾನ್ಯ ಶ್ರೀ ಟಿ. ಮರಿಯಪ್ಪನವರು.)

ಯಾವ ಉತ್ಪ್ರೇಕ್ಷೆಯೂ ಇಲ್ಲವೆಂದು ನಾನು ತಿಳಿಸಬೇಕಾಗಿದೆ. ನಮ್ಮ ಮೈಸೂರಿಗೆ ಆಹಾರದ ಅಭಾವ ಹಿಂದಿನಿಂದಲೂ ಇದ್ದೇ ಇದೆ. ಇದನ್ನು ಕೇವಲ ಒಂದೆರಡು ವರ್ಷಗಳಲ್ಲಿ ಬಗೆಹರಿಸಲು ಹರಿಹರ ಬ್ರಹ್ಮರಿಗೂ ಕೂಡ ಸಾಧ್ಯವಿಲ್ಲ. ಅಂದಮೇಲೆ ಮನುಷ್ಯ ಮಾತ್ರದವರಿಗೆ ಎಷ್ಟು ಸಾಧ್ಯವೋ ಅಷ್ಟನ್ನು ನಾವು ನಿರ್ವಂಚನೆಯಿಂದ ಮಾಡುತ್ತಿದ್ದೇವೆ. ಆದರೆ ಕಾರ್ಯಾಚರಣೆಯಲ್ಲಿ ಅಲ್ಲಲ್ಲೇ ಕೆಲವು ಲೋಪದೋಷಗಳುಂಟಾಗಿರಬಹುದು. ಅದಕ್ಕೋಸ್ಕರವಾಗಿಯೇ ತಾವು ಇನ್ನು ಸಾರ್ವತ್ರಿಕವಾಗಿ ಹೀಗೇ ನಡೆಯುತ್ತಿದೆಯೆಂದು generalise ಮಾಡುವುದಕ್ಕೆ ಹೋಗಬಾರದು. ಹಾಗೇನಾದರೂ ಒಬ್ಬರಲ್ಲ, ಇಬ್ಬರಲ್ಲ, ನೂರಾರು ಜನಗಳಿದ್ದರೂ ಚಿಂತೆಯಿಲ್ಲ, ಯಾರ್ಯಾರು non-surplus holders ಗಳಿದ್ದಾರೋ ಅಂಥವರಿಂದ ಏನಾದರೂ ಕಾರಣಾಂತರಗಳಿಂದ ದವಸವನ್ನು ವಸೂಲು ಮಾಡಿರತಕ್ಕ ಸಂದರ್ಭಗಳಿದ್ದಲ್ಲಿ, ಅಂಥಾದ್ದನ್ನು ನನ್ನ ಗಮನಕ್ಕೆ ತಂದರೆ ಕೂಡಲೇ ಆ ದವಸವನ್ನೆಲ್ಲಾ ವಾಪಸು ಕೊಡಿಸುತ್ತೇನೆಂಬ ಭರವಸೆಯನ್ನು ಈ ಮಾನ್ಯ ಸಭೆಯ ಸದಸ್ಯರಿಗೆ ಕೊಡುತ್ತಿದ್ದೇನೆ. ಆದರೆ ಈ ಆಹಾರ ಸಮಸ್ಯೆಯನ್ನು ನಿವಾರಣೆ ಮಾಡತಕ್ಕ ಬಗ್ಗೆ ಒಂದು ದೊಡ್ಡ organization ನ್ನೇ set up ಮಾಡಿ ಅದಕ್ಕೆ ಶ್ರೀ ತಿರುಮಲರಾಯರನ್ನು ಅಧ್ಯಕ್ಷರನ್ನಾಗಿ ಮಾಡಿ, ಆ ಸಮಿತಿಯವರು ಭಾರತಾದ್ಯಂತವೂ ಇರತಕ್ಕ ಸಂಸ್ಥಾನಗಳಲ್ಲಿ ಈ ಬಗ್ಗೆ ವ್ಯವಹಾರಗಳು ಮತ್ತು ಕಾರ್ಯಚಟುವಟಿಕೆಗಳೂ ಹೇಗೆ ನಡೆಯುತ್ತಿರುತ್ತವೆಂಬ ಬಗ್ಗೆ ಕೇಂದ್ರಕ್ಕೆ ವರದಿ ಒಪ್ಪಿಸಬೇಕೆಂದು ತಿಳಿಸಲಾಗಿದೆ. ಅಂಥಾ ಸಮಿತಿಯವರೂ ಸಹ ಈಗಾಗಲೇ ನಮ್ಮ ಮೈಸೂರಿಗೂ ಬಂದು ಇಲ್ಲಿ ಆ ಬಗ್ಗೆ ನಡೆಯುತ್ತಿರುವ procurement, distribution ಮತ್ತು preservation ಯೋಜನೆಗಳ ಬಗ್ಗೆ ಬಹಳ ಚೆನ್ನಾಗಿದೆಯೆಂದು ತಮ್ಮ ಮೆಚ್ಚಿಗೆಯನ್ನು ವ್ಯಕ್ತಪಡಿಸಿದ್ದಾರೆ ಮತ್ತೂ ಅದರಂತೆ ಕೇಂದ್ರ ಸರ್ಕಾರಕ್ಕೂ ವರದಿಮಾಡಿದ್ದಾರೆ. ಆ ಪೈಕಿ ಮೈಸೂರಿನ ವಿಚಾರದಲ್ಲಿ ಹೇಳುತ್ತಾ ಇಲ್ಲಿನ ಏರ್ಪಾಡು ಸಮರ್ಪಕವಾಗಿದೆ, ಬಹಳ ದಕ್ಷತೆಯಿಂದ ಕೆಲಸ ಮಾಡುತ್ತಾರೆ, ಶಿಕ್ಷಣ ಬಹಳ ಚೆನ್ನಾಗಿದೆ ಎಂದು ಅವರು ಉಲ್ಲೇಖಿಸಿರುವುದನ್ನು ಈ ಸಂದರ್ಭದಲ್ಲಿ ಸಭೆಯ ಗಮನಕ್ಕೆ ತರುತ್ತೇನೆ. ಮೈಸೂರಿನವರು ಸಬ್ಸಿಡಿಗಾಗಿ ಖರ್ಚುಮಾಡುವುದನ್ನು ಮುಂದೆ ನಿಲ್ಲಿಸಬೇಕೆಂದೂ ಹೇಳಿದ್ದಾರೆ. ಹಾಗೆ ಅವರು ಸೂಚನೆ ಕೊಡುವಾಗ service at cost ನೀತಿಯನ್ನನುಸರಿಸುವುದು ಬಹಳ ಉತ್ತಮ, ಇನ್ನು ಮುಂದಾದರೂ ಮೈಸೂರಿನವರು ಇದಕ್ಕೆ ತಕ್ಕ ಕಾರ್ಯಕ್ರಮಕೈಕೊಳ್ಳಬೇಕು ಎಂದು ಹೇಳಿದರು. ಸುಮಾರು ಒಂದೂವರೆ ವರ್ಷದ ಕೆಳಗೆ ಮೈಸೂರಿಗೆ ಬಂದು ಇಲ್ಲಿನ ಆಹಾರ ಶೇಖರಣೆಯನ್ನು ಖುದ್ದಾಗಿ ನೋಡಿದ್ದಾರೆ. ಹಂಚುವ ಡಿಪೋಗಳಿಗೆ ಹೋಗಿ ಪರಿಶೀಲಿಸಿದ್ದಾರೆ. ಅಲ್ಲಲ್ಲಿ ಹಂಚಿಕೆ ಮಾಡುವಾಗ ಲೋಪದೋಷಗಳು ಕಂಡುಬಂದರೆ ಅವು ಮನುಷ್ಯನ ಸ್ವಭಾವದಿಂದ ಆಗಿದೆಯೇ ಹೊರತು ಮತ್ತೇನೂ ಅಲ್ಲ ಎಂದು ಹೇಳುತ್ತೇನೆ.

ಇನ್ನೊಂದು ಅಂಶವನ್ನು ಶ್ರೀ ನಾರಾಯಣರಾಯರು ಮತ್ತು ಶ್ರೀ ಹನುಮಂತಪ್ಪನವರು ಸಭೆಯ ಗಮನಕ್ಕೆ ತಂದಿದ್ದಾರೆ. ಅದು ನಿಜ. ತಾತ್ಕಾಲಿಕವಾಗಿ ಕಡಿಮೆ ಮಾಡಬೇಕಾಗಿ ಬಂದಿದೆ. ಕೇಂದ್ರದವರೇ ಆ ರೀತಿಯಾಗಿ ಕಡಿಮೆ ಮಾಡಿದ್ದಾರೆ. ಅವರು 9 ಔನ್ಸಿಗೆ ಇಳಿಸಬೇಕೆಂದು ಹೇಳಿದರೂ ನಾವು ಪ್ರಯತ್ನ ಮಾಡಿ 'ಬಿ' ಕ್ಲಾಸಿನವರಿಗೆ 10 ಔನ್ಸ್ ಕೊಡುವಂತೆ ಮಾಡಿದ್ದೇವೆ. ನಮಗೆ 75 ಸಾವಿರ ಟನ್ ಕೊಡುತ್ತೇವೆಂದು ಹೇಳಿದರೂ ಇನ್ನೂ ಬಹು ಭಾಗ ಕಡಿಮೆಯಾಗಿದೆ. ಕೊಡಗಿನಿಂದ ಕೊಂಚ ಬಂದರೂ ಬಹಳ ಕಷ್ಟವಿದ್ದೆ, ಇನ್ನು ಸಾಲದು ಎಂದು ಕೇಂದ್ರ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇವೆ; ಮದ್ರಾಸಿನಲ್ಲೂ ಸುಮಾರು 12 ಲಕ್ಷ ಟನ್ ಕೋಟಾ ಇದೆಯೆಂದು ಹೇಳುತ್ತಿದ್ದರು. ಅವರಿಗೆ 4 ಲಕ್ಷ ಟನ್ ಕೊಟ್ಟಿದ್ದರು. ಇನ್ನೂ ಒಂದೆರಡು ಲಕ್ಷ ಟನ್ ಕೊಡಬಹುದು. ನಾವು ನಿಖರವಾಗಿ ಇಷ್ಟು ಕೋಟಾ ಇವೆಯೆಂದು ಹೇಳಿದ್ದೆವು. ಅದರಲ್ಲಿ ಅರ್ಧಭಾಗ ಮಾತ್ರ ಕೊಟ್ಟಿದ್ದಾರೆ. ಇನ್ನೂ ಹೆಚ್ಚಾಗಿ ಕೊಡಬೇಕೆಂದು ಒತ್ತಾಯಪಡಿಸಿದ್ದೇವೆ. ಅವರು ಈಗ ಕಡಿಮೆ ಮಾಡಿರುವುದು ಹಂಗಾಮಿಯಾಗಿ ಮಾತ್ರ ಎಂದು ಹೇಳಿದ್ದಾರೆ. ನಾವು ಅದೇ ರೀತಿಯಲ್ಲಿ ಪ್ರಜೆಗಳಿಗೆ ತಿಳಿಸಿದ್ದೇವೆ. ಏಪ್ರಿಲ್, ಮೇ ತಿಂಗಳಲ್ಲಿ ಕಡಿಮೆ ಮಾಡಿರುವುದನ್ನು ಹೆಚ್ಚಿಸಬಹುದೆಂಬ ನಿರೀಕ್ಷೆ ಕೂಡ ಇದೆ.

ಶ್ರೀ ಲಿಂಗಾರೆಡ್ಡಿಯವರು ಮತ್ತು ಇತರರು ಶೇಖರಣೆಯಲ್ಲಿ ತೊಂದರೆಯಿದೆ, ಅದನ್ನು ನಿಗಾ ಇಡಬೇಕು ಎಂದು ಹೇಳಿದರು. ಮೊದಲು ಇಂಥ ವಿಚಾರಗಳು ಗಮನಕ್ಕೆ ಬಂದ ಕೂಡಲೆ ಸರಿಯಾಗಿ ತಿಳುವಳಿಕೆ ಕೊಟ್ಟು ಗಲಾಟೆಗೆ ಅವಕಾಶ ಕೊಡದಂತೆ ನಿಗ ಇಡಬೇಕು ಎಂದು ತಿಳಿಸಿದ್ದೇವೆ.

ಶ್ರೀ ಚನ್ನಬಸಪ್ಪನವರು ಕೃಷ್ಣರಾಜನಗರದ ವಿಚಾರ ಹೇಳಿದರು. ಆ ವಿಚಾರದಲ್ಲಿ ಹೆಚ್ಚಾಗಿ ಹೇಳಬೇಕಾಗಿಲ್ಲ. ಪರಿಶೀಲನೆ ನಡೆಯುತ್ತಿದೆ. ಶ್ರೀ ನಂಜರಾಜ ಅರಸಿನವರ ಅಧ್ಯಕ್ಷತೆಯಲ್ಲಿ ಪರಿಶೀಲನೆ ನಡೆದು ಅವರ ಸಲಹೆಯು ಸರ್ಕಾರಕ್ಕೆ ಬಂದಿದೆ. ಅದನ್ನು ಸರ್ಕಾರದವರು ಯೋಚನೆ ಮಾಡುತ್ತಿದ್ದಾರೆ. ಆ ಸಂದರ್ಭದಲ್ಲಿ ಏನು ಕಾರ್ಯಕ್ರಮ ನಡೆದಿದೆಯೆಂಬುದನ್ನು ಕೂಡ ಶ್ರೀ ಚನ್ನಬಸಪ್ಪನವರು ಪರಿಶೀಲಿಸುವುದು ಉತ್ತಮ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ನಾನೂ ಅಲ್ಲಿದ್ದೆ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ತಾವು ಅಲ್ಲಿದ್ದ ಮೇಲೆ ನನ್ನ ಭಾರ ಕಡಮೆಯಾಯಿತು. ಅಷ್ಟು ಕಠಿಣ ಪರಿಸ್ಥಿತಿಯು ಮುಂದೆ ಮೈಸೂರು ಸೀಮೆಯ ಆಹಾರದ ವಿಚಾರದಲ್ಲಿ ಬರಲಾರದು. ಈ ಕಷ್ಟ ಭಾರತದ ಎಲ್ಲಾ ಪ್ರಾಂತಗಳಲ್ಲೂ ಪೂರ್ಣವಾಗಿದೆ. ಮುಖ್ಯವಾಗಿ ಟೀಕೆ ಬರುವುದು ಆಹಾರ ಮತ್ತು ಬಟ್ಟೆಯ ವಿಚಾರದಲ್ಲಿ ಎಂದು ಹೇಳಿದರೆ ಅತಿಶಯೋಕ್ತಿಯಲ್ಲ. ಹಾಗಿರುವಾಗ ಸಾಮಾನ್ಯವಾಗಿ ಏನು ಹೇಳಿದರೂ ಕೂಡ, ಟೀಕೆ ಮಾಡಿದರೂ ಕೂಡ ಜನತೆ ರೊಚ್ಚಿಗೇಳುವುದು ಸ್ವಾಭಾವಿಕ. ಆದ್ದರಿಂದ ಟೀಕೆ ವಗ್ಗೆರೆಗಳಿಗೆ ಅವಕಾಶ ಕೊಡದೆ ಸುಮ್ಮನಿದ್ದರೆ ಬಹಳ ಉತ್ತಮ ಎಂದು ಅಷ್ಟು ಮಾತ್ರ ಹೇಳಬಯಸುತ್ತೇನೆ.

ಎರಡನೆಯದಾಗಿ ಬಟ್ಟೆಯ ವಿಚಾರ ಪ್ರಸ್ತಾಪ ಮಾಡಿದರು. ಮೈಸೂರಿನಲ್ಲಿ ಬಟ್ಟೆಯ ಅಭಾವವಿರಲಿಲ್ಲ. ಕೆಲವು ಮಾನ್ಯ ಸದಸ್ಯರು ಬಹಳವಾಗಿ ಈ ವಿಚಾರವನ್ನು ವಿಮರ್ಶೆ ಮಾಡಿದರು. ವಿಪರೀತವಾಗಿ ಬಟ್ಟೆ ಅಭಾವವಿದೆಯೆಂದು ಹೇಳಿದರು. ಆದರೆ ಈ ಅಭಾವ ತಲೆದೋರಿರುವುದು ನವೆಂಬರ್ ತಿಂಗಳ ಅಖೈರಿನಿಂದ. ಅದಕ್ಕೆ ಮೊದಲು ಕೇಳುವವರೇ ಇರಲಿಲ್ಲ. ಬಟ್ಟೆ ಕೋಟಾ ಕೊಟ್ಟರೂ ಮೈಸೂರು ದೇಶದಲ್ಲಿ ಅದನ್ನು ಪಡೆಯದೆ ಹಾಗೆಯೇ ಹೋಗುತ್ತಿತ್ತು. ಬೇಕಾದಷ್ಟು ಬಟ್ಟೆ

ನಮ್ಮ ದೇಶಕ್ಕೆ ಬರುತ್ತಿತ್ತು. ಬೇಡ ಎಂದು ಎಷ್ಟೋ ಜನ ಬಟ್ಟೆವ್ಯಾಪಾರಿಗಳು ಮತ್ತು ಚಿಲ್ಲರೆ ವ್ಯಾಪಾರಿಗಳು ಅಲಾಟ್ ಆಗಿರುವ ಬಟ್ಟೆಯನ್ನು ತೆಗೆದುಕೊಂಡು ಹೋಗಲಿಲ್ಲ, ಜನ ಕೊಂಡುಕೊಳ್ಳುವುದಿಲ್ಲವೆಂದು ಹೇಳುತ್ತಿದ್ದರು. ಕೇಂದ್ರ ಸರ್ಕಾರದವರು ಮೊದಲು ಬಟ್ಟೆ ಅಲಾಟ್ ಮಾಡುತ್ತಾರೆ; ಮೈಸೂರು ಸರ್ಕಾರದವರು ಅಲಾಟ್ ಮಾಡುವುದಿಲ್ಲ. ಮೈಸೂರು ಸರ್ಕಾರಕ್ಕೆ ಹಂಚಿಕೆ ಜವಾಬ್ದಾರಿ ಮಾತ್ರ ಇದೆ. ಆದ್ದರಿಂದ ನವೆಂಬರ್ ಅಕ್ಟೋಬರಿನಿಂದ ಕೇಂದ್ರ ಸರ್ಕಾರದವರು ಡಾಲರ್ ಬೆಲೆ ಏರುವಿಕೆಯ ದೆಸೆಯಿಂದ ಅಲಾಟ್‌ಮೆಂಟ್ ಕಡಮೆ ಮಾಡಿದ್ದಾರೆ; ಇದೇ ರೀತಿ ನೂಲಿನ ಕೋಟಾ ಕೂಡ ಕಡಮೆಯಾಗಿದೆ; ಅಲ್ಲಿಂದ ಅಭಾವ ತಲೆದೋರಿ ಫೆಬ್ರವರಿ, ಮಾರ್ಚಿ—ಈ ಎರಡು ತಿಂಗಳಲ್ಲಿ ಉಲ್ಬಣಾವಸ್ಥೆ ಬಂದಿದೆ. ಆದ್ದರಿಂದ ಇಷ್ಟು ಕೊರತೆ ಹೆಚ್ಚಿರುವುದು ನಿಜ, ಬಟ್ಟೆ ಅಭಾವ, ಆಹಾರದ ಅಭಾವ ಎಂದು ಟೀಕೆ ಬರುವುದಕ್ಕೆ ಇದು ಕಾರಣವಾಗಿದೆ; ದಯವಿಟ್ಟು ಮನ್ನಿಸಬೇಕು. ನವೆಂಬರು ಅಕ್ಟೋಬರಿನಿಂದ ಬಟ್ಟೆ ಅಭಾವ ಬಂದಿತು. ಈಗಾಗಲೇ ಅದು ಸ್ವಲ್ಪ ಉತ್ತಮಗೊಂಡಿದೆ. ಏಪ್ರಿಲ್‌ನ ಕೋಟಾ ನೋಡಿದರೆ ಬಟ್ಟೆ ಮತ್ತು ನೂಲಿನ ಅಭಾವ ಬಹಳ ಮಟ್ಟಿಗೆ ಕಡಮೆಯಾಗುತ್ತದೆ. ಮೇ, ಜೂನಲ್ಲಿ ಮುಕ್ಕಾಲು ಭಾಗ ಅಭಾವ ಹೋಗುತ್ತದೆ ಎಂದು ಇಷ್ಟು ಮಾತ್ರ ಭರವಸೆ ಕೊಡಬಲ್ಲೆ.

ಆ ಮೇಲೆ, ಕಾಳಸಂತೆ ಮಾಡುವವರನ್ನು ಶಿಕ್ಷೆಮಾಡಬೇಕೆಂದು ಹೇಳಿದರು. ಅನೇಕರನ್ನು ಆಗಲೇ ಶಿಕ್ಷೆಗೆ ಗುರಿಮಾಡಿದ್ದೇವೆ. ದೊಡ್ಡದೊಡ್ಡ ಮಿಲ್ ಮಾಲೀಕರನ್ನು ಸಹ ತಪ್ಪು ಮಾಡಿದ್ದಕ್ಕೆ ತಕ್ಕ ಶಿಕ್ಷೆಗೆ ಗುರಿಪಡಿಸಿದ್ದೇವೆ. ಆದರೆ ನಿರಪರಾಧಿಗಳನ್ನು ಹಿಡಿದು ಹಾಕುವುದು ದೇವರ ಮುಂದೆ ಅಪರಾಧ ಮಾಡಿದಹಾಗೆ. ಹಾಗೆ ಮಾಡಿದರೆ ತಪ್ಪು ಮಾಡಿದವನು ವೇದನೆಯಿಂದ ಮರುಗುತ್ತಾನೆ. ಆದ್ದರಿಂದ ನಿಷ್ಕಾರಣವಾಗಿ ಯಾರನ್ನೂ ಶಿಕ್ಷೆಗೆ ಗುರಿ ಮಾಡಿಲ್ಲ. ಎಂಥ ದೊಡ್ಡ ಮನುಷ್ಯನಾದರೂ, ಎಷ್ಟು ವರ್ಷ ಸರ್ವಿಸ್ ಮಾಡಿದ್ದರೂ ಅಂಥವರನ್ನು ಅವರು ಸಲ್ಲಿಸಿರುವ ಸೇವೆಗೆ ಮಾತ್ರ ತಲೆ ಬಾಗಿ ತಪ್ಪಿಗೆ ತಕ್ಕಂತೆ ಶಿಕ್ಷೆ ಮಾಡಿರುವುದು ಗೊತ್ತೇ ಇದೆ. ನಿಜವಾಗಿಯೂ ಅಲ್ಲೊಬ್ಬರು, ಇಲ್ಲೊಬ್ಬರು ತಪ್ಪಿಸಿಕೊಂಡಿರಬಹುದು. ಅದಕ್ಕೆ ಕಾರಣವಿದೆ. ನಮ್ಮ ಆಪ್ತ ಮಿತ್ರರಲ್ಲೂ ಕೆಲವರು ತಪ್ಪು ಮಾಡಿರಬಹುದು. ಅಂತಹ ಸನ್ನಿವೇಶಗಳು ಗಮನಕ್ಕೆ ಬಂದಿವೆ. ಅದನ್ನು ಬಿಡಿಸಿಹೇಳಲು ಇಷ್ಟವಿಲ್ಲ. ಈಗ ನಾವೇನು ಮಾಡಬೇಕು ಎಂಬ ಕಷ್ಟ ಬರುತ್ತದೆ.

ಇನ್ನು ಆಹಾರದ ಉತ್ಪತ್ತಿಯ ವಿಚಾರ.

ಶ್ರೀ ಎಚ್. ಸಿದ್ದವೀರಪ್ಪನವರು.—ಉಗಾದಿ ಹಬ್ಬಕ್ಕೆ ವಿಶೇಷ ರೀತಿಯಿಂದ ಬಟ್ಟೆ ತರಿಸುವುದಕ್ಕೆ ಏರ್ಪಾಡು ಮಾಡಿದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದು ತಮಗೆ ಗೊತ್ತಿರಬಹುದು. ಆ ವಿಚಾರದಲ್ಲಿ ಪ್ರೆಸ್ ಸ್ಟೇಟ್‌ಮೆಂಟ್ ಹೊರಡಿಸಿ ಎಲ್ಲರಿಗೂ ಹಂಚಿದೆ. ಕೇಂದ್ರ ಸರ್ಕಾರದೊಂದಿಗೆ ಹೋರಾಡಿ ತರಿಸುವುದಕ್ಕೆ ಏರ್ಪಾಡು ಮಾಡಿ ಮಾನ್ಯ ಸದಸ್ಯರಿಗೆ ಮತ್ತು ಇತರರಿಗೆ ಹಂಚಲು ಏರ್ಪಾಡು ಮಾಡಿರುವಾಗ ಈ ಪ್ರಶ್ನೆ ಹಾಕಿದರೆ ಏನು ಹೇಳುವುದು ? ಮೊದಲು ಮೂರು ಬೇಲುಗಳನ್ನು ಕೊಡುತ್ತಿದ್ದ ಅಂಗಡಿಗಳಿಗೆ ನಾಲ್ಕು ಬೇಲುಗಳನ್ನು ಕೊಟ್ಟಿದ್ದೇವೆ. ಹಂಚಿಕೆಯು ಸರಿಯಾಗಿ ಆಗಬೇಕೆಂದು ತಿಳಿಸಿದ್ದೇವೆ. ಹಂಚಿಕೆಯಲ್ಲಿ ತೊಂದರೆಯಾಗಬಹುದೆಂದು ಅಮಲ್ದಾರರಿಗೆ ತಿಳಿವಳಿಕೆ ಕೊಟ್ಟು ಕ್ರಮವಾಗಿ ಹಂಚಲು ಏರ್ಪಾಟು ಮಾಡಿದೆ. ಬಟ್ಟೆ ಬಡವರಿಗೆ ಮುಖ್ಯವಾಗಿ ಸಿಗಬೇಕೆಂಬ ದೃಷ್ಟಿಯಿಂದ ಬಡವರ ಪ್ರತಿನಿಧಿಗಳಾದ ನಾವು ಅದಕ್ಕೆ ತಕ್ಕ ವ್ಯವಸ್ಥೆ ಮಾಡಿದ್ದೇವೆ. ಅಮಲ್ದಾರರು ನೋಡಿ ಆಯಾ ತಾಲ್ಲೂಕುಗಳ ಜನಸಾಮಾನ್ಯರಿಗೆ ಜಾಗರೂಕತೆಯಿಂದ ಹಂಚಿಕೆ ಮಾಡಬೇಕು ಎಂದು ಚೆನ್ನಾಗಿ ತಿಳಿವಳಿಕೆ ಕೊಟ್ಟಿದ್ದೇವೆ. ಪ್ರಾಯಶಃ ಏಪ್ರಿಲ್, ಮೇ ತಿಂಗಳಲ್ಲಿ ಈ ಕಷ್ಟ ನೀಗಬಹುದು.

ಆ ಮೇಲೆ ಆಹಾರದ ಉತ್ಪತ್ತಿ ವಿಚಾರ. ಈ ವಿಚಾರದಲ್ಲಿ ವಿಮರ್ಶೆ ಮಾಡುವುದು ಹೆಚ್ಚಾಗಿದೆ. ಪ್ರಚಾರವಾಗಿಲ್ಲವೆಂದು ಕೆಲವರೂ, ಪ್ರಚಾರವಾಗಿದ್ದರೂ ಏನೂ ಆಗಿಲ್ಲವೆಂದು ಕೆಲವರೂ ಹೇಳಿದರು. ಇದು ಒಂದಕ್ಕೊಂದಕ್ಕೆ ವ್ಯತಿರಿಕ್ತವಾಗಿದೆ. ಫ್ಯಾಂಪ್ಲೆಟ್ ಹಂಚುವುದು ಹೊರತು ಬೇರೆ ಏನೂ ಪ್ರಚಾರ ಮಾಡಿಲ್ಲ. ರೂರಲ್ ಡೆವಲಪ್‌ಮೆಂಟ್ ಪ್ಲ್ಯಾನ್ ಇರುವ ಕಡೆ ಪ್ರಚಾರ ಮಾಡಿರಬಹುದು. ಆದರೆ ಸರ್ಕಾರದವರು ಮಾತ್ರ ಹೆಚ್ಚು ಆಹಾರ ಬೆಳೆಯಲು ಪ್ರಚಾರ ಮಾಡುವುದಕ್ಕೆ ಏನೂ ಹಣ ಖರ್ಚು ಮಾಡಿಲ್ಲ ಎಂಬುದು ಬಡ್ಜೆಟ್ಟಿನಿಂದ ವ್ಯಕ್ತವಾಗುತ್ತದೆ.

ಈಗ ಮುಖ್ಯವಾಗಿ ಅದನ್ನು ಸ್ವಲ್ಪ ವಿಶದೀಕರಿಸಬೇಕೆಂದು ಇಚ್ಛಿಸುತ್ತೇನೆ ಬಹಳ ತಪ್ಪು ಭಾವನೆ ಇರುವ ಹಾಗೆ ಕಾಣುತ್ತದೆ. ಈ ವಿಷಯ ಸ್ಪಷ್ಟವಾಗದೇ ಇರುವುದರಿಂದ ಆ ತಪ್ಪು ಭಾವನೆ ಬಂದಿದ್ದರೂ ಬಂದಿರಬಹುದು. ಸರ್ಕಾರದವರೇ ಬೆಳೆಯುತ್ತಾರೆ ಎಂಬ ಯಾರ ಭಾವನೆಯಲ್ಲಿದ್ದರೂ ಅದು ಸರಿಯಾದುದಲ್ಲ. ಇದಕ್ಕೆ '' ಹೆಚ್ಚು ಆಹಾರ ಬೆಳೆ ಬೆಳೆಯುವ ಯೋಜನೆ '' ಎಂಬ ಹೆಸರು ಇಲ್ಲದೇ ಇದ್ದಿದ್ದರೆ ಚೆನ್ನಾಗಿತ್ತು 'ನೀರಾವರಿ ಅಭಿವೃದ್ಧಿ' ಅಥವಾ 'ವ್ಯವಸಾಯಾಭಿವೃದ್ಧಿ' ಎಂಬ ಹೆಸರಿಟ್ಟಿದ್ದರೆ ಇಷ್ಟೊಂದು ತಪ್ಪು ಭಾವನೆಗೆ ಅವಕಾಶವಾಗುತ್ತಾ ಇರಲಿಲ್ಲ. ಜನ ನಮ್ಮ ಊರಿಗೆ ಹೆಚ್ಚು ಆಹಾರ ಬೆಳೆಯಲು 50 ಸಾವಿರ ರೂಪಾಯಿ ಸಾಲ ಕೊಡಿಸಿ ಎಂದು ಹೇಳುತ್ತಾರೆ. ಅದು ಸ್ವಾಭಾವಿಕ. ಈ ಸಂಬಂಧವಲ್ಲಿ ಎರಡು ಮೂರು ಅಂಶಗಳನ್ನು ಹೇಳುತ್ತೇನೆ. 1944–45 ರಲ್ಲಿ 3 ಲಕ್ಷ ಎಕರೆಯ ವರೆಗೂ ಜಮೀನು ಕೊಟ್ಟಿದ್ದೇವೆ. ಆಹಾರ ಉತ್ಪತ್ತಿಮಾಡುತ್ತೇವೆಂದು ನೀರಾವರಿ ಸಹಾಯ ತೆಗೆದುಕೊಂಡಿದ್ದಾರೆ. ಪ್ರಾಯಶಃ 2–3% ಮೋಸ ಮಾಡಿದ್ದಾರೆ; ಅದನ್ನು ಬಿಟ್ಟುಬಿಡೋಣ. ಅನೇಕರು ಜಮೀನು ತೆಗೆದುಕೊಂಡು ಬೆಳೆದಿದ್ದಾರೆ, ಬೆಳೆಯುತ್ತಾ ಇದ್ದಾರೆ. ಲಕ್ಷಾಂತರ ಜನರ ಮೇಲೆ ಅವಲಂಬಿಸಿರುವ ಈ ಪ್ರಶ್ನೆಯನ್ನು ಎಲ್ಲರೂ ಉತ್ಸಾಹದಿಂದ, ಕಷ್ಟನಿಷ್ಠೂರದಿಂದ ಪರಿಹಾರ ಮಾಡಬೇಕಾದ್ದು ಅತ್ಯಾವಶ್ಯಕ. ಆದ್ದರಿಂದ ಈ ವಿಷಯವನ್ನು ವಿಮರ್ಶೆ ಮಾಡುವಾಗ ಬಹಳ ಸಹಾನುಭೂತಿಯಿಂದ ವಿಮರ್ಶೆ ಮಾಡಬೇಕು ಮತ್ತು ಯಾವ ಯಾವ ಅನಾನುಕೂಲಗಳಿವೆ ಎಂಬುದನ್ನು ದಯವಿಟ್ಟು ಪರಿಶೀಲಿಸಬೇಕೆಂದು ಮನವಿಮಾಡಿಕೊಳ್ಳುತ್ತೇನೆ. ಮೈಸೂರು ಸರ್ಕಾರದವರು ಹೆಚ್ಚು ಆಹಾರ ಬೆಳೆಯುವ ಯೋಜನೆಗೆ ಬೇಕಾದಷ್ಟು ಹಣ ಖರ್ಚುಮಾಡಿದ್ದಾರೆ ಎನ್ನುವುದರಲ್ಲಿ ಮನನ್ನು ಬಂದಹಾಗೆ ಖರ್ಚುಮಾಡಿದ್ದಾರೆ ಎನ್ನುವುದನ್ನು ಖಂಡಿತವಾಗಿಯೂ ಒಪ್ಪುವುದಿಲ್ಲ. ಈ ಯೋಜನೆ 1943–44 ರಲ್ಲಿ ಇಂಡಿಯಾದೇಶದಲ್ಲಿ ಪ್ರಾರಂಭವಾದರೂ ಕೂಡ, ಆಗ ನಮ್ಮಲ್ಲಿ ಬೀಜ ಹಂಚುವುದು. ಗೊಬ್ಬರ ಹಾಕುವುದು ಮತ್ತು ರೋಗವನ್ನು ತಡೆಗಟ್ಟುವುದು ಮಾತ್ರ ಇತ್ತು. ಅದಕ್ಕೆ ಹಣ ಖರ್ಚು ಮಾಡುತ್ತಾ ಇದ್ದರು. ಕೇಂದ್ರದಿಂದ ಸಹಾಯ ಬಂದಿರುವುದನ್ನು ಹೇಳುತ್ತೇನೆ. 1949–50 ರಿಂದ ಕೇಂದ್ರದ

(ಮಾನ್ಯ ಶ್ರೀ ಟಿ. ಮರಿಯಪ್ಪನವರು).

ಅಧಿಕಾರಿಗಳು ಇಲ್ಲಿಗೆ ಬಂದು ನಮ್ಮ ಜೊತೆಯಲ್ಲಿ ಕುಳಿತುಕೊಂಡು, ಯಾವ ಯಾವ ತರಹ ಯೋಜನೆ ಮಾಡಿದರೆ ಹಣ ಕೊಡುತ್ತಾರೆ ಎಂಬುದನ್ನು ಹೇಳಿದರು. ಊಹಾ ಪೋಹದ ಯೋಜನೆಗಳನ್ನು ಹಾಕಿದರೆ ಹಣ ಕೊಡುವುದಿಲ್ಲ, ಯಾವುದರಲ್ಲಿ ನಿಜವಾಗಿ ಪ್ರಯೋಜನವಾಗುತ್ತದೆಯೋ ಅಂಥಾ ಯೋಜನೆಗಳಿಗೆ ಮಾತ್ರ ಹಣ ಕೊಡುತ್ತೇವೆ ಎಂದು ಹೇಳಿ ಅಂಥವುಗಳಿಗೆ ಗ್ರಾಂಟು, ಮತ್ತು ಸಾಲಗಳನ್ನು ಕೊಟ್ಟಿದ್ದಾರೆ. 1949–50, 1950–51ಕ್ಕೆ ಗ್ರಾಂಟು ಕೊಟ್ಟಿದ್ದಾರೆ; 1951-52 ಕ್ಕೆ ಇನ್ನೂ ಬಂದಿಲ್ಲ. ಮುಖ್ಯವಾಗಿ 1949-50 ರಿಂದಲೇ ಸಂಪೂರ್ಣವಾದ ಪ್ರಯತ್ನ ನಡೆಯಿತು ಎಂಬುದನ್ನು ಮಾನ್ಯ ಸದಸ್ಯರು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಇದರ ಖರ್ಚು ಯಾವ ರೀತಿ ಆಗಿದೆ ಎಂಬುದನ್ನು ಯೋಚನೆ ಮಾಡಿ, ಅದನ್ನು ವಿವರಿಸಲು ಹೋಗುವುದಕ್ಕೆ ಬದಲಾಗಿ ಅಂಕಿ ಅಂಶಗಳನ್ನು ಮಾತ್ರ ತಮ್ಮ ಮುಂದೆ ಇಡುತ್ತೇನೆ. ಇರಿಗೇಷನ್ ಬಾವಿಗಳಿಗೆ ಕೊಟ್ಟ ಹಣ ಸರಿಯಾಗಿ ವಿನಿಯೋಗವಾಗಿಲ್ಲವೆಂದು ಟೀಕೆ ಬಂದಿದೆ. ಕೆಲವು ಭಾಗಗಳಲ್ಲಿ ಅಲ್ಲಿರುವವರೇ ಹೇಳಿದ್ದಾರೆ. ಹಣ ಮೋಸ ಮಾಡಿ ಬೇರೆ ಕೆಲಸಗಳಿಗೆ ಉಪಯೋಗಿಸಿಕೊಂಡಿರಬಹುದು. ಆದರೆ ಬಹು ಭಾಗದವರು ಇದರಿಂದ ಪ್ರಯೋಜನ ಹೊಂದಿದ್ದಾರೆ. 1949–50 ರಲ್ಲಿ 489 ಬಾವಿಗಳಿಗೆ ಸಬ್‌ಸಿಡಿ ತೆಗೆದುಕೊಂಡಿದ್ದಾರೆ; 962 ಎಕರೆಯಷ್ಟು ವಿಸ್ತೀರ್ಣ ವ್ಯವಸಾಯಕ್ಕೆ ಬಂದಿದೆ. 1950–51 ರಲ್ಲಿ 40 ತಾಲ್ಲೂಕುಗಳ ಲೆಕ್ಕ ಬಂದಿದೆ. ಅಲ್ಲಿ 496 ಬಾವಿಗಳಿಗೆ ಸಬ್‌ಸಿಡಿ ತೆಗೆದುಕೊಂಡಿದ್ದಾರೆ; 55 ಹಳೇ ಬಾವಿಗಳು ಪೂರ್ತಿಯಾಗಿ ರಿಪೇರಿ ಆಗಿವೆ. ಒಟ್ಟು 970 ಎಕರೆ ವಿಸ್ತೀರ್ಣ ವ್ಯವಸಾಯಕ್ಕೆ ಬಂದಿದೆ. ಬಾವಿಗಳನ್ನೂ ಬಹಳ ಒಳ್ಳೆಯ ಜಾಗದಲ್ಲಿ ತೆಗೆಸಿದ್ದಾರೆ ಎಂಬುದಾಗಿ ಸಮಾಚಾರ ಬಂದಿದೆ. ನಾವು 500 ರೂಪಾಯಿ ಸಾಲ, 500 ರೂಪಾಯಿ ಸಬ್‌ಸಿಡಿ ಕೊಡುತ್ತೇವೆ. ಸಬ್‌ಸಿಡಿಯಲ್ಲಿ 250 ರೂಪಾಯಿ ಕೇಂದ್ರದವರು, 250 ರೂಪಾಯಿ ನಾವು ಹಾಕಿಕೊಳ್ಳಬೇಕು. ಇವುಗಳೆಲ್ಲಾ ಶಾಶ್ವತವಾಗಿ ಪ್ರಯೋಜನವಾಗತಕ್ಕ ಕೆಲಸಗಳು. ಚಿತ್ರದುರ್ಗ, ತುಮಕೂರು, ಕೋಲಾರ, ಬೆಂಗಳೂರು, ಮೈಸೂರು ಡಿಸ್ಟ್ರಿಕ್ಟ್‌ನ ಕೆಲವು ಭಾಗಗಳು–ಇಷ್ಟು ಪ್ರದೇಶಗಳಲ್ಲಿ ನೀರಾವರಿ ಬಾವಿಯ ಸೌಲಭ್ಯಗಳು ಇವೆ. ಈ ಬಾವಿಯ ನೀರಿನಿಂದ ಎರಡು ಬೆಳೆ ಬೆಳೆಯುವುದಕ್ಕೆ ಸಾಧ್ಯವಾಗುತ್ತದೆ. ವಾಸ್ತವಾಂಶವನ್ನು ಮಾನ್ಯ ಸದಸ್ಯರು ಗಮನಿಸಿದರೆ, ಬಡವರಿಗೆ ಸಹಾಯವಾಗಿದೆ ಎಂಬುದು ನಿರ್ವಿವಾದವಾದ ವಿಚಾರ.

ಎರಡನೆಯದಾಗಿ, ಪಬ್ಲಿಕ್‌ವರ್ಕ್ಸ್ ಇಲಾಖೆಗೆ ಸಂಬಂಧಪಟ್ಟ ವಿಚಾರ. 1949–50 ರಲ್ಲಿ ಕೇಂದ್ರ ಸರ್ಕಾರದವರು ಒಪ್ಪಿಗೆ ಕೊಟ್ಟ ಐಟಂ ಮಾತ್ರ ಹೇಳುತ್ತೇನೆ. 1949–50 ರಲ್ಲಿ ಮೇಜರ್ ಇರಿಗೇಷನ್ ಕಾಮಗಾರಿಗಳು ಅರ್ಧಂಬರ್ಧ ಪೂರ್ತಿಯಾಗಿದ್ದು ಕೇಂದ್ರದೊಡನೆ ಚರ್ಚೆ ಮಾಡಿ ಅರ್ಧ ಖರ್ಚು ನೀವು ಹಾಕಿ ಕೊಳ್ಳಿ ಅರ್ಧ ನಾವು ಕೊಡುತ್ತೇವೆ ಎಂದು ಹೇಳಿದ ಮೇಲೆ 18 ಮೇಜರ್ ಕೆರೆ ಕಾಮಗಾರಿಗಳಿಗೆ ಮಾತ್ರ ಒಪ್ಪಿಕೊಂಡರು. ಬಾಕಿ ಕಾಮಗಾರಿಗಳೆನ್ನೆಲ್ಲಾ ಸಂಸ್ಥಾನದ ಫಂಡಿನಿಂದಲೇ ಮಾಡಿಕೊಳ್ಳಬೇಕು. ಆ 18 ಮೇಜರ್ ಕಾಮಗಾರಿಗಳನ್ನು ಸಹ 1951ನೇ ಜೂನ್ ಆಖೈರಿನ ಹೊತ್ತಿಗೆ ಮುಗಿಸುತ್ತೇವೆ ಎಂಬುದಾಗಿ ಭರವಸೆ ಕೊಟ್ಟರೆ ಹಣ ಕೊಡುತ್ತೇವೆ ಎಂಬ ನಿಯಮ ಹಾಕಿದರು; ಅದನ್ನು ಮೈಸೂರು ಸರ್ಕಾರದವರು ಒಪ್ಪಿಕೊಂಡಿದ್ದಾರೆ. ಅದರಂತೆ ಅವರು ಸಾಲ ಮತ್ತು ಗ್ರಾಂಟನ್ನು ಕೊಟ್ಟಿದ್ದಾರೆ. ಆ 18 ಕಾಮಗಾರಿಗಳ ಪೈಕಿ 1949–50 ರಲ್ಲಿ ಎರಡು ಕಾಮಗಾರಿಗಳು ಪೂರ್ತಿಯಾಗಿ ದುರಸ್ತಾಗಿವೆ; ನೀರು ಕೊಟ್ಟಿದ್ದೇವೆ; ಜನರು ವ್ಯವಸಾಯ ಮಾಡುತ್ತಾ ಇದ್ದಾರೆ. ಒಂದು ಉದಾಹರಣೆ ಕೊಟ್ಟರೆ ಆಹಾರ ಬೆಳೆ ಬೆಳೆಯುವುದಕ್ಕೆ ಎಷ್ಟು ಕಷ್ಟವಿದೆ ಎಂಬುದು ಗೊತ್ತಾಗುತ್ತದೆ. ಶ್ರೀಮಾನ್ ಚನ್ನಬಸಪ್ಪನವರಿಗೆ ಆ ವಿಷಯ ಚೆನ್ನಾಗಿ ಗೊತ್ತಿದೆ; ಅವರು ಹುಟ್ಟು ವ್ಯವಸಾಯಗಾರರು; ಖುದ್ದಾಗಿ ವ್ಯವಸಾಯ ಮಾಡಿದ್ದಾರೆ. ಹೋದ ವರ್ಷ ಒಂದು ಕೆರೆಯ ಅಚ್ಚುಕಟ್ಟಿನಲ್ಲಿ 1,000 ಎಕರೆ ವಿಸ್ತೀರ್ಣ ಸಾಗುವಳಿಗೆ ಬಂದದ್ದು; ಈ ವರ್ಷ 300 ಎಕರೆಯಷ್ಟು ಹಾಳು ಬಿದ್ದಿದೆ, ಹೀಗಿರುವಾಗ ಸಾವಿರ ಎಕರೆಯಲ್ಲೂ ವ್ಯವಸಾಯ ಮಾಡಬೇಕೆಂದರೆ ಸಾಧ್ಯವಾಗುವುದಿಲ್ಲ, ಏನಿದ್ದರೂ ಮಾಯ ಮಂತ್ರವನ್ನು ಮಾಡಬಹುದೋ ಏನೋ. ಹೀಗೆ ನೀರಾವರಿ ಕಾಮಗಾರಿಗಳನ್ನು ದುರಸ್ತುಪಡಿಸಿ, ರೈತರಿಗೆ ಸಾಕಾದಷ್ಟು ನೀರು ಒದಗಿಸಿ, ಅವರು ವ್ಯವಸಾಯ ಮಾಡಬೇಕಾದರೆ ಕಾಲವಿಳಂಬವಾಗುತ್ತದೆ. ಅನೇಕ ಜನರಿಗೆ ತೊಂದರೆಯಾಗಿದೆ. ಒರಿಜಿನಲ್ ಮೇಜರ್ ಮತ್ತು ಒರಿಜಿನಲ್ ಮೈನರ್ ಕೆರೆಗಳಿಗೆ ಸಂಬಂಧಪಟ್ಟಂತೆ, ಮೇಜರ್ ಕೆರೆಗಳಿಗೆ 7 ಲಕ್ಷ 86 ಸಾವಿರ ರೂಪಾಯಿಗಳನ್ನು 1–4–1949 ರಿಂದ 31–3–1950 ರ ವರೆಗೆ ಒದಗಿಸಿದ್ದಾರೆ; ಅಂಕಿ ಅಂಶ ಬೇಕಾದರೆ ಕೊಡುತ್ತೇನೆ. 1949–50ರಲ್ಲಿ ಅರ್ಧಂಬರ್ಧ ಪೂರ್ತಿಯಾದ 18 ಕೆರೆ ಕಾಮಗಾರಿಗಳಿಗೆ 15 ಲಕ್ಷ 84 ಸಾವಿರದ 276 ರೂಪಾಯಿ ಖರ್ಚಾಗಿದೆ. ಎಷ್ಟು ಜಾಗ್ರತೆ ಮಾಡಿದ್ದೇವೆ ಎಂಬುದು ಶ್ರೀಮಾನ್ ಗೋವಿಂದರೆಡ್ಡಿ, ರಂಗರಾಯರು ಮತ್ತು ಭೀಮಪ್ಪನಾಯಕರಿಗೆ ಚೆನ್ನಾಗಿ ಗೊತ್ತಿದೆ. ಸುಂಕೇನಹಳ್ಳಿ, ಪರಶುರಾಮಪುರ, ಗಡಿಮಾಕುಂಟೆ, ತಿಪ್ಪದಹಳ್ಳಿ ಕೆರೆಗಳು ಅವುಗಳಲ್ಲಿ ಪ್ರಾಮುಖ್ಯವಾದ ಕೆರೆಗಳು. ಆ ಮೇಲೆ ಮಾರ್ಕೋನಹಳ್ಳಿ ರೈಟ್ ಬ್ಯಾಂಕ್ ಚಾನಲ್ ಒಂದು ಮುಖ್ಯವಾದುದಾಗಿದೆ. ಈ 18 ಕೆರೆಗಳ ಪೈಕಿ ಎರಡು ಕೆರೆಗಳ ಕಾಮಗಾರಿ ಪೂರ್ತಿಯಾಗಿದೆ. ಉಳಿದ 16 ಕೆರೆಗಳು 1950–51ನೇ ಇಸವಿ ಡಿಸೆಂಬರ್ ಆಖೈರಿನ ಹೊತ್ತಿಗೆ ಆಗಬೇಕು. ಅವಕ್ಕೆ ಈ ವರ್ಷ 10 ಲಕ್ಷ 55 ಸಾವಿರದ 103 ರೂಪಾಯಿ ಖರ್ಚಾಗಿದೆ. ಹೋದ ವರ್ಷ ಖರ್ಚಾದ 15 ಲಕ್ಷ 84 ಸಾವಿರದ 276 ರೂಪಾಯಿಗಳಲ್ಲಿ ಎರಡು ಕೆರೆಗಳ ಕಾಮಗಾರಿ ಪೂರ್ತಿಯಾಗಿದೆ. ಪರಶುರಾಮಪುರದ ಕೆರೆಗೆ ನೀರು ಕೊಟ್ಟಿದ್ದೇವೆ, ಸುಂಕೇನಹಳ್ಳಿ ಕೆರೆಗೆ ನೀರು ಕೊಡಬೇಕು, ಗಡಿಮಾಕುಂಟೆಯಲ್ಲೂ ನೀರು ಕೊಡಬೇಕು. ಮೈನರ್ ಕೆರೆ ಜೀರ್ಣೋದ್ಧಾರಕ್ಕೆ ಸಂಬಂಧಪಟ್ಟಂತೆ 1949–50 ರಲ್ಲಿ ಸುಮಾರು 690 ಮೈನರ್ ಕೆರೆಗಳ ಕಾಮಗಾರಿಯನ್ನು ತೆಗೆದುಕೊಂಡಿದ್ದೇವೆ. ಪ್ರಾಯಶಃ ಆ 690 ಮೈನರ್ ಕೆರೆಗಳ ಹೆಸರಿನ ಪಟ್ಟಿಯನ್ನು ಓದಬೇಕಾದರೇ ಎಷ್ಟೋ ಹೊತ್ತು ತೆಗೆದುಕೊಳ್ಳುತ್ತದೆ. Herculon effort ಎಂದು ಹೇಳಬೇಕಾಗಿದೆ. 1949–50 ರಲ್ಲಿ 791 ಕೆರೆಗಳ ಕಾಮಗಾರಿ ನಾನಾ ರೀತಿಯಲ್ಲಿ ಮುಂದುವರಿಯುತ್ತಿತ್ತು; ಅದರಲ್ಲಿ 1—4—49 ರಿಂದ 31—3—50 ರ ವರೆಗೆ 150 ಕೆರೆಗಳ ಕಾಮಗಾರಿ ಪೂರ್ತಿಯಾಗಿದೆ. ಅದಕ್ಕೆ ಆಗಿರತಕ್ಕ ಖರ್ಚು 8,59,690 ರೂಪಾಯಿ. ಇನ್ನು ಬಾಕಿ ಉಳಿದ ಕೆರೆಗಳನ್ನು ತೆಗೆದುಕೊಂಡರೆ 641 ಕೆರೆಗಳ ಕಾಮಗಾರಿ ನಾನಾ ರೀತಿಯಲ್ಲಿ ಮುಂದುವರಿಯುತ್ತಿತ್ತು. 1–4–50 ರಿಂದ 31-12–1950 ರ ವರಿಗೆ 100 ಕೆರೆಗಳ ಕಾಮಗಾರಿ ಪೂರ್ತಿಯಾಗಿದೆ; ಅದಕ್ಕೆ ಆಗಿರತಕ್ಕ ಖರ್ಚು 5 ಲಕ್ಷದ 12 ಸಾವಿರದ 762 ರೂಪಾಯಿ.

ಅದೇರೀತಿ ಸಣ್ಣಸಣ್ಣ I. C. F. ಕಾಮಗಾರಿಗಳು, ಎಂದರೆ ತೂಬು ರಿಪೇರಿ, ಕೋಡಿ ಉತಾವಣಿ ಮುಂತಾದ ಕೆಲಸಗಳನ್ನು ಹೋದಸಾರಿ 3,000 ದಷ್ಟು ಮಾಡಿಸಿದ್ದೇವೆ. ಹಿಂದೆ ಎಂದೂ ಯಾವ ವರ್ಷದಲ್ಲೂ ಇಷ್ಟೊಂದು ಕೆಲಸಗಳನ್ನು ಮಾಡಿಸಿರಲಿಲ್ಲ. ಅಂಥಾದ್ದರಲ್ಲಿ ಒಂದಲ್ಲ, ಎರಡಲ್ಲ 3,000 ಕಾಮ್ಗಾರಿಗಳನ್ನು ಕೈಕೊಂಡು ಅದರ ಬಗ್ಗೆ 17 ಲಕ್ಷ ಚಿಲ್ಲರೆ ರೂಪಾಯಿಗಳನ್ನು ಖರ್ಚುಮಾಡಿದ್ದೇವೆ.

ಆ ಮೇಲೆ ನದಿ ಕಾಲುವೆಗಳ ದುರಸ್ತಿಯ ವಿಚಾರ. ಶ್ರೀಮಾನ್ ಸೂರ್ಯನಾರಾಯಣ ಶೆಟ್ಟರು ಮತ್ತು ಇತರ ಅನೇಕ ಸದಸ್ಯರೇ ಖುದ್ದಾಗಿ ಈ ಬಗ್ಗೆ ಎಷ್ಟು ಕೆಲಸ ಮಾಡಿದ್ದಾರೆಂದು ತಿಳಿದಿದ್ದಾರೆ. ಕಾವೇರಿ, ಹೇಮಾವತಿ, ಲಕ್ಷ್ಮಣತೀರ್ಥ ಮುಂತಾಗಿ ಅನೇಕ ನದಿಗಳ ಕೆಳಗೆ ಎಷ್ಟು ಕಾಂಗಾರಿ ನಡೆದಿದೆ ಯೆಂಬುದನ್ನು ಆ ಸದಸ್ಯರೇ ನೋಡಿಹೇಳಲಿ. ಹುಣಸೂರು, ಹೆಗ್ಗಡದೇವನ ಕೋಟೆ,ಚಾಮರಾಜನಗರ, ಈ ಕಡೆಗಳಲ್ಲಿ 10-20 ವರ್ಷಗಳಿಂದ ಅನೇಕ ಕೆರೆಗಳು ರಿಪೇರಿ ಕಾಣದೆ ಬಿದ್ದಿದ್ದವು. ಉದ್ದೂರು ನಾಲಾ 10—12 ವರ್ಷದಿಂದ ರಿಪೇರಿಯನ್ನೇ ಕಂಡಿರಲಿಲ್ಲ. ಮರಗಿಡಗಳು ಏರಿಯ ಮೇಲೆ ಬೆಳೆದು ಸಲೀಸಾಗಿ ತಿರುಗಾಡುವುದಕ್ಕೂ ಆಗುತ್ತಿರಲಿಲ್ಲ. ಅಂಥಾದ್ದರಲ್ಲಿ ಒಂದು ಕಾರು ಹೋಗುವಂತಾಗಿದೆ.

ಮಲೆನಾಡಿನ ವಿಷಯದಲ್ಲಿ ಹೆಚ್ಚಾಗಿ ಗಮನಕೊಡಲಿಲ್ಲವೆಂದು ಕೆಲವು ಸದಸ್ಯರು ಹೇಳಿದರು. ಅದು ಸರಿಯಲ್ಲ. ಸೂಳೆಕೆರೆಯ ಹಿಂದೆ ಒಂದು ಮೋಡಿತ್ತು, ಅದನ್ನೆಲ್ಲಾ ಸರಿಮಾಡಿಸಿದ್ದೇವೆ. ಕಾಗೆ ಹಳ್ಳವನ್ನು ಬಿಟ್ಟುಬಿಡಬೇಕೆಂದು ಮಾಡಿದಂಥಾದ್ದನ್ನು ಈಗ ಬೇಕಾದಷ್ಟು ನೀರು ನಿಲ್ಲುವಂತೆ ಮಾಡಿ ಸರಿಮಾಡಿಸಿಕೊಟ್ಟಿದ್ದೇವೆ. ಹಾಗೆಯೇ ಸಾಗರ ಡಿವಿಜನ್, ಶಿವಮೊಗ್ಗ ಡಿವಿಜನ್ ಕಡೆ ಬೇಕಾದಷ್ಟು ಕಾಮ್ಗಾರಿಗಳು ನಡೆದಿವೆ. ಡಿಸ್ಟ್ರಿಕ್ಟ್ ವಾರು ಅಂಕಿ ಅಂಶಗಳನ್ನು ಬೇಕಾದರೂ ತಮಗೆ ಕೊಡಬಲ್ಲೆ. ಹಾಗೆಯೇ lard improvement ಸ್ಕೀಮುಗಳು ಮತ್ತು ಪಿಕ್ ಅಪ್ಸ್ ಹಾಕಿಸಿಕೊಡುವುದರಲ್ಲೂ ಬೇಕಾದಷ್ಟು ಮಾಡಿದೆ. ವಾಣಿವಿಲಾಸ ಸಾಗರದ ಕೆಳಗೆ ಬೇಕಾದಷ್ಟು ನೀರು ಉಪಯೋಗಕ್ಕೆ ಬಾರದ ಹಾಗೆ ಹಿಂದಕ್ಕೆ ಹೋಗುತ್ತಿತ್ತು, ಅಂಥಾದ್ದಕ್ಕೆ ಒಂದು ಲಕ್ಷದ ಮೇಲೆ ಖರ್ಚು ಮಾಡಿ 1,761 ಪಿಕ್ ಅಪ್ಸ್ ಮಾಡಿಸಿಕೊಟ್ಟಿದ್ದೇವೆ.

ಒಬ್ಬ ಸದಸ್ಯರು.—ತುಂಗಭದ್ರಾ ಲಿಫ್ಟ್ ಇರಿಗೇಷನ್ ಸ್ಕೀಂ ವಿಷಯ ಸ್ವಲ್ಪ ಹೇಳಿ.

ಅದನ್ನು ಹೇಳುತ್ತೇನೆ. ಆಮೇಲೆ ಚಿತ್ರದುರ್ಗದ ಕಡೆ ಇರಿಗೇಷನ್ ಪಂಪುಗಳಿಗೆ ಎಲೆಕ್ಟ್ರಿಕ್ ಪವರ್ ಕೊಟ್ಟರೆ ವ್ಯವಸಾಯಕ್ಕೆ ಎಷ್ಟೋ ಅನುಕೂಲವಾಗುತ್ತದೆಂದು ಯೋಚನೆ ಮಾಡಿ, ಚಿತ್ರದುರ್ಗ ಡಿಸ್ಟ್ರಿಕ್ಟಿಗೆ 19ಲಕ್ಷ ರೂಪಾಯಿಗಳನ್ನೂ ತುಮಕೂರು ಡಿಸ್ಟ್ರಿಕ್ಟಿಗೆ 16 ಲಕ್ಷ ರೂಪಾಯಿಗಳನ್ನೂ ಈ ಒಂದು ವಾರದಲ್ಲಿ ಮಂಜೂರು ಮಾಡಿದ್ದೇವೆ. ಈ ಬಗ್ಗೆ ಆಗಲೇ ಸಾಮಾನುಗಳನ್ನು ಶೇಖರಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಇಷ್ಟೊಂದು ಕಡಿಮೆ ಕಾಲದಲ್ಲಿ ಇಷ್ಟೊಂದು ಕೆಲಸ ಕಾರ್ಯಗಳನ್ನು ಕೈಕೊಂಡಿರುವುದು ಪಬ್ಲಿಕ್ ವರ್ಕ್ಸ್ ಇಲಾಖೆಯ ಚರಿತ್ರೆಯಲ್ಲೇ ಇದೇ ಮೊದಲು. In the briefest time possible we have accorded sanction for so much of expenditure. (ಸಂತೋಷ! ಸಂತೋಷ!) ಮಾನ್ಯ ಸದಸ್ಯರು ದಯವಿಟ್ಟು ಎಷ್ಟು ಕಾಲದಲ್ಲಿ ಎಷ್ಟು ಕೆಲಸಗಳಿಗಾಗಿ ಎಷ್ಟು ಹಣ ಖರ್ಚು ಮಾಡಿದ್ದಾರೆಂದು ಪರಿಶೀಲಿಸುವುದಾದರೆ 1949–50 ಕ್ಕೆ ಹಿಂದೆ ಯಾವ ವರ್ಷವೂ ಇಷ್ಟೊಂದು tempo ಇರಲಿಲ್ಲವೆಂದು ಹೇಳಬಹುದು. ಶ್ರೀಮಾನ್ ಡಿ. ಎಂ. ಸಿದ್ದಯ್ಯನವರೇ ಬೇಕಾದರೆ ಅವರ ಕಡೆಯಲ್ಲಿ ಯಳಂದೂರು, ಚಾಮರಾಜನಗರದ ಕಡೆ ನೋಡಲಿ, ಒಂದೇ ಒಂದು ವರ್ಷದಲ್ಲಿ ಒಂದು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ 80 ವರ್ಷದಿಂದ ಕೆಲಸ ಮಾಡದಂಥಾದನ್ನು ಸರ್ಕಾರದವರು ಮಾಡಿದ್ದಾರೆ. ಶ್ರೀಮಾನ್ ರಂಗರಾಮಯ್ಯನವರೇ ಇದಕ್ಕೆ ಸಾಕ್ಷಿ. ಆದರೆ ದುರದೃಷ್ಟವಶಾತ್ ಮಳೆ ಬಾರದೆ ಅದರ ಸಂಪೂರ್ಣ ಪ್ರಯೋಜನ ಲಭಿಸಲಿಲ್ಲ.

ಒಬ್ಬ ಸದಸ್ಯರು.—ರಾಮಸಮುದ್ರದ ಕೆರೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದನ್ನು ನೋಡಿದರೂ ಮೊದಲಿಗಿಂತಲೂ ಅನೇಕ improvement ಗಳಾಗಿವೆ. ರಾಮಚಂದ್ರ ಕೆರೆಯಿಂದ ಅಲ್ಲಿಗೆ ನೀರು ಹೋಗುವಂತೆ ಮಾಡಿದ್ದೇವೆ. ನಾನು ಈಚೆಗೆ ಅಲ್ಲಿಗೆ ಹೋದಾಗ ಆ ಜನರೇ ಎಷ್ಟೋ ಮಟ್ಟಿಗೆ ಸಂತೋಷವನ್ನು ವ್ಯಕ್ತಪಡಿಸಿದ್ದಾರೆ.

Sri H. M. MALLIKARJUNAPPA.—Is the present speed enough to make up the deficit?

The Hon'ble Sri T. MARIAPPA.—I admit that there is a great need to step up food production still more. There is great need to improve the tempo. There is great need to double the speed, to treble the speed. But the difficulty is, the working season of the Public Works Department is only six months. That is the greatest handicap. I promise to do my best, particularly in the field of permanent improvement to irrigation works.

ಇನ್ನು ಬಾಕಿ ಕೆಲವು ಆಹಾರ ಹೆಚ್ಚಿಸಲು ಕೈಕೊಂಡಿರತಕ್ಕ ಕಾರ್ಯಕ್ರಮಗಳ ವಿಷಯದಲ್ಲಿ ಹೆಚ್ಚಿಗೆ ಖರ್ಚಾಯಿತೆಂದು ಯಾರೂ ತಪ್ಪು ತಿಳಿದುಕೊಳ್ಳಕೂಡದು. ಅವು multiplication of paddy seeds, distribution of paddy seeds, green manure and compost manufacture ಇವುಗಳಿಗೆ ಖರ್ಚು ಮಾಡಿದ್ದಾಗಿದೆ. ಇವುಗಳ ವಿಷಯದಲ್ಲಿ ಮಾನ್ಯ ಸದಸ್ಯರೇನೋ ಟೀಕೆ ಮಾಡಬಹುದು. ಆದರೆ ನಾನು ಅವರನ್ನು ಕೇಳಿಕೊಳ್ಳುತ್ತೇನೆ, ಯಾರು ಬೇಕಾದರೂ ಇದಕ್ಕಿಂತ ಉತ್ತಮ ಯೋಜನೆ ಯಾವುದನ್ನಾದರೂ ನಮಗೆ ಕೊಡಲಿ. ನಾನದನ್ನು ಅಂಗೀಕಾರ ಮಾಡಿ ಕಾರ್ಯಗತ ಮಾಡುತ್ತೇನೆ. Wisdom is no man's monopoly. ಅನುಭವಸ್ಥರಾಗಿ ಯಾರು ಏನುಸಲಹೆಯನ್ನು ಕೊಟ್ಟರೂ ನಾವು ಅನುಸರಿಸುವುದಕ್ಕೆ ಸಿದ್ಧರಾಗಿದ್ದೇವೆ. ಈಗೇನೂ ನಾವು ಮಾಡುತ್ತಿರುವ multiplication of paddy seeds ಯೋಜನೆಯಿಂದ ನಮಗೇನೂ ನಷ್ಟವಾಗುತ್ತಿಲ್ಲ. ಬಡ್ಜೆಟ್ ಅಂಕಿ ಅಂಶಗಳಿಂದಲೇ ಅದು ಗೊತ್ತಾಗುತ್ತದೆ. ಆ ಹಣ ನಮಗೆ ವಾಪಸು ಬರುತ್ತದೆ. ಎರಡನೆಯದಾಗಿ ಕಂಪೋಸ್ಟ್ ತಯಾರಿಸುವ ಯೋಜನೆಯನ್ನು ಕೂಡ ತಾವು ನೋಡಿ. ಈಗ ಎಲ್ಲಾ ಮುನಿಸಿಪಾಲಿಟಿಯವರೂ ಇದನ್ನು ತಯಾರು ಮಾಡುತ್ತಿದ್ದಾರೆ. ಕೆಲವರಿಗೆ ನಫೆಕೂಡ ಬರುತ್ತಿದೆ. ನಾವು ಅವರಿಗೆ ತಿಳಿಸಿದ್ದೇವೆ, ನಿಮಗೆ ನಷ್ಟವಾದರೆ ನಾವು ಕೊಡುತ್ತೇವೆ, ಮಾತ್ರ ರೈತರಿಗೆ ಸುಲಭ ರೀತಿಯಲ್ಲಿ ಕೊಡಿ ಎಂದು. ಸಾಮಾನ್ಯವಾಗಿ ಮುನಿಸಿಪಾಲಿಟಿಗಳಲ್ಲಿ ದೇಶಭಕ್ತರೂ

(THE HON'BLE SRI T. MARIAPPA)

ರೈತಾಭಿಮಾನಿಗಳೇ ಇದ್ದಾರೆ. ಅವರೆಲ್ಲರೂ ರೈತರಿಗೇ ಮಾರುತ್ತಿದ್ದಾರೆಂದು ನಾನು ನಂಬಿದ್ದೇನೆ. ಈ ವರ್ಷ ಕಂಪೋಸ್ಟ್ ಮಾಡುವುದರಲ್ಲಿ ಏನೂ ಅನುಭವವಿಲ್ಲದ ಹಾಸನದ ಮುನಿಸಿಪಾಲಟಿಯವರು ಕೂಡ ದುಡ್ಡು ಖರ್ಚು ಮಾಡಿ ಒಳ್ಳೆಯ ಕಂಪೋಸ್ಟ್ ಗೊಬ್ಬರವನ್ನು ತಯಾರು ಮಾಡಿದ್ದಾರೆ. ಹಾಸನಕ್ಕೆ ಹೋಗಿ ಮಾನ್ಯ ಸದಸ್ಯರೇ ನೋಡಿದರೆ ಅವರು ಎಷ್ಟು ಮಟ್ಟಿಗೆ ಮುತುವರ್ಜಿ ವಹಿಸಿದ್ದಾರೆಂಬುದು ವೇದ್ಯವಾಗುತ್ತದೆ. ಅದ್ದರಿಂದ ಮುಖ್ಯವಾಗಿ ಅಂಕಿ ಅಂಶಗಳನ್ನು ಪೂರ್ತಿಯಾಗಿ ತಿಳಿದುಕೊಳ್ಳದೆ ಈ ವಿಚಾರದಲ್ಲಿ ಏನೇನೋ ತುಂಬಿದೆಯೆಂದು ಊಹಿಸುವುದು ಸರಿಯಲ್ಲ. ವಾಸ್ತವಾಂಶಗಳನ್ನು ಪೂರ್ತಿಯಾಗಿ ತಿಳಿದುಕೊಂಡರೆ ಪ್ರಾಯಶಃ ಟೀಕೆಗಳು ಕಡಿಮೆಯಾಗುತ್ತವೆ. ಹಿಂದಿನವರ್ಷ 1949–50ರಲ್ಲಿ 7,700 ಕಂಪೋಸ್ಟ್ ಗೊಬ್ಬರದ ಗುಂಡಿಗಳನ್ನು ತೋಡಿಸಿತ್ತು. ಅದೇ ಈ ವರ್ಷ ಈ ಹತ್ತು ತಿಂಗಳಲ್ಲೇ 7,666 ಗುಂಡಿಗಳಾಗಿವೆಯೆಂದು 42 ತಾಲ್ಲೂಕುಗಳಿಂದ ಬಂದಿರುವ ವರದಿಯಿಂದ ತಿಳಿದು ಬಂದಿದೆ. ಇವೆಲ್ಲಾ ಖಾಸಗಿ ಮಹಾಶಯರು ಆಸಕ್ತಿ ವಹಿಸಿ ಚೆನ್ನಾಗಿ ಪ್ರಯತ್ನ ಮಾಡಿದುದರ ಫಲವಾಗಿ ಆಗಿರುವಂಥಾದ್ದು. ವಿಲೇಜ್‌ಪಂಚಾಯ್ತಿಯವರು ತೋಡಿಸಿದ ಒಂದೊಂದು ಗುಂಡಿಗೆ ನಾವು ಕೊಡುತ್ತಿರುವುದು ಕೇವಲ ಎರಡು ರೂಪಾಯಿ. ಅದರಲ್ಲೂ ಆದಷ್ಟು ಹಣ ದುರುಪಯೋಗವಾಗದಂತೆ ಮಾಡುವುದಕ್ಕಾಗಿ ಅವರೆಷ್ಟು ಗುಂಡಿಗಳನ್ನು ತೆಗೆಸುತ್ತಾರೋ ಅದಕ್ಕೆ ತಕ್ಕಂತೆ ಹಣವನ್ನು ಆಯಾ ಗ್ರಾಮ ಪಂಚಾಯ್ತಿ ಲೆಕ್ಕಕ್ಕೇ ಸೇರಿಸಿಕೊಡುತ್ತಿದ್ದೇವೆ. ಇಷ್ಟು ಮಾಡಿದರೂ ನಾವು ಚಾಪೆ ಕೆಳಗೆ ತೂರಿದರೆ ರಂಗೋಲೆ ಕೆಳಗೆ ತೂರುವವರೂ ಕೆಲವರಿರುತ್ತಾರೆ. ಅದು ನಮ್ಮ ದೌರ್ಭಾಗ್ಯ.

ಆಮೇಲೆ ಡೀಸಲ್ ಆಯಿಲ್ ಪಂಪುಗಳನ್ನೂ ಎಲೆಕ್ಟ್ರಿಕ್ ಪಂಪಿಂಗ್ ಯಂತ್ರಗಳನ್ನೂ ಒದಗಿಸಿರುವುದನ್ನು ಮಾನ್ಯ ಸದಸ್ಯರು ಗಮನಿಸಬೇಕು. ಇವೆಲ್ಲಾ ಆಹಾರೋತ್ಪತ್ತಿ ಯೋಜನೆಗಲ್ಲವೆ? ಇಂಥವುಗಳನ್ನಲ್ಲದೆ ಇನ್ನೇನು ಮಾಡುವುದಕ್ಕಾಗುತ್ತದೆ? ಹೋದ ವರ್ಷ 1949-50ರಲ್ಲಿ 449 ಪಂಪುಗಳನ್ನು ಒಂದು ಸಾರಿಯೂ, ಇನ್ನೊಂದು ಸಾರಿ 183 ಪಂಪುಗಳನ್ನೂ ಕೊಟ್ಟಿದ್ದೆವು. ಒಟ್ಟು 2,000 ಪಂಪುಗಳು ಈಗ ಕೆಲಸ ಮಾಡುತ್ತಿವೆ. ಪಂಪುಗಳನ್ನು ಹೈರ್ ಪರ್ಚೇಸ್ ಸಿಸ್ಟಂ ಮೇರೆಗೂ ಕೊಡಬಹುದೆಂದು ಮಾಡಿದ್ದೇವೆ. 50 ಡೀಸೆಲ್ ಆಯಿಲ್ ಎಂಜಿನ್‌ಗಳನ್ನು ಹೋದವರ್ಷ 1,60,00 ರೂಪಾಯಿಗಳ ಬೆಲೆ ಕೊಟ್ಟು ಒದಗಿಸಿಕೊಟ್ಟಿದ್ದೇವೆ. ಈ ವರ್ಷವೂ ಆಗಲೇ 30 ಸೆಟ್ಟುಗಳನ್ನು ಕೊಟ್ಟಿದ್ದೇವೆ. ಇನ್ನೂ ಹೆಚ್ಚಿಗೆ ಬೇಕೆಂದು ಕೇಳಿದರೂ ಕೊಡಲು ಸಿದ್ಧರಾಗಿದ್ದೇವೆ.

ರೈತರಿಗೆ ಬಹಳ ಮುಖ್ಯವಾದ ಇನ್ನೊಂದು ವಿಷಯವೆಂದರೆ ಅವರಿಗೆ ಬೇಕಾದ ಕಬ್ಬಿಣದ ಸಾಮಾನುಗಳು. ನಿಜ, ಜನರು ಎಷ್ಟು ಕೇಳುತ್ತಿದ್ದಾರೋ ಅಷ್ಟು ಅವರಿಗೆ ಒದಗಿಸುತ್ತಿಲ್ಲವೆಂದು ಹೇಳಬಹುದು. ಆದರೆ ಇದು ನಮ್ಮ ಕೈಯಲ್ಲಿಲ್ಲ. ಕೇಂದ್ರ ಸರ್ಕಾರದವರಿಗೆ ಸೇರಿದ ವಿಷಯ. ಆದರೂ 1949-50 ಕ್ಕೆ ಹಿಂದೆ ಯಾವ ವರ್ಷವನ್ನೇ ತೆಗೆದುಕೊಳ್ಳಿ, ನಮ್ಮ ದೇಶಕ್ಕೆ 600 ಟನ್‌ಗಳಿಗಿಂತ ಹೆಚ್ಚಿಗೆ ಬರುತ್ತಿರಲಿಲ್ಲ. ವಿಪರೀತ ಜನರು ಆಗ ಕಷ್ಟಪಟ್ಟರು. ಆದರೆ, ಅದೇ 1949–50ರಲ್ಲಿ ಎಷ್ಟು ಮಾಡಿದ್ದೇವೆ, 1950-51 ರಲ್ಲಿ ಎಷ್ಟು ಮಾಡಿದ್ದೇವೆಂಬುದನ್ನು ನೋಡುವುದಾದರೆ, ಯಥೇಚ್ಛವಾಗಿ ಸರಬರಾಯಿಮಾಡಿದ್ದೇವೆಂದೇ ಹೇಳಬಹುದು. ಅಂಕಿ ಅಂಶಗಳನ್ನು ಹೇಳುತ್ತೇನೆ.

ಯುರೇಕಾ ನೇಗಿಲುಗಳನ್ನು	
ಹೋದ ವರ್ಷ ಕೊಟ್ಟಿದ್ದು ...	252
ಈ ವರ್ಷ ಕೊಟ್ಟಿದ್ದು ...	351
ಕೆ. ಎಂ. ನೇಗಿಲುಗಳನ್ನು	
ಹೋದ ವರ್ಷ ಕೊಟ್ಟಿದ್ದು ...	1,459
ಈ ವರ್ಷಕೊಟ್ಟಿದ್ದು ...	1,200
ಥಾಕೂರು ನೇಗಿಲುಗಳನ್ನು	
ಹೋದ ವರ್ಷ ಕೊಟ್ಟಿದ್ದು ...	426
ಈ ವರ್ಷ ಕೊಟ್ಟಿದ್ದು ...	150

ಈ ಪ್ರಕಾರ ನಾನಾ ತೆರದ ರೈತರಿಗೂ ನೇಗಿಲುಗಳನ್ನು ಕೊಟ್ಟಿದ್ದೇವೆ. ಈ ಮೂಲಕ ಒಟ್ಟು 3,443 ಟನ್ ಕಬ್ಬಿಣ ನಮ್ಮ ಸಂಸ್ಥಾನಕ್ಕೆ ದೊರೆತಿದೆ. ಇದಕ್ಕೆ 12,91,000 ಚಿಲ್ಲರೆ ರೂಪಾಯಿಗಳ ಬೆಲೆಯಾಗಿದೆ. ಹೀಗೆಯೇ ಗಾಡಿ ಪಟ್ಟಿ, ಗುಳ ಮುಂತಾದುವುಗಳು ಎಷ್ಟು ಹೆಚ್ಚಿನ ಪ್ರಮಾಣದಲ್ಲಿ ಈ ಸಾರಿ ಸರಬರಾಯಿಯಾಗಿದೆಯೆಂಬುದು ಮಾನ್ಯ ಸಿಂಗಾರಿಗೌಡರಿಗೇ ಚೆನ್ನಾಗಿ ತಿಳುವಳಿಕೆಗೆ ಬಂದಿದೆ. ಅವರಿಲ್ಲದಿದ್ದರೆ ಅವರೇ ಬಹುಶಃ ತಮಗೆಲ್ಲಾ ತಿಳಿಸುತ್ತಿದ್ದರು. ಶ್ರೀಮಾನ್ ಶಂಕರೇಗೌಡರು ಈಗ ಸಭೆಯಲ್ಲಿದ್ದರೆ ಚೆನ್ನಾಗಿತ್ತು. ಶ್ರೀಮಾನ್ ಕೃಷ್ಣಪ್ಪನವರೂ ಶ್ರೀಮಾನ್ ಮುದ್ದುರಾಮಯ್ಯನವರೂ, ಇವರು ಮಲ್ಟಿಪರ್‌ಪಸಸ್ ಸೊಸೈಟಿಗೆ ಅಧ್ಯಕ್ಷರು. ಅವರಿಗೆ ಗೊತ್ತಿದೆ. ಗಾಡಿ ಪಟ್ಟಿ, ಗುಳ ಇವುಗಳಿಗಾಗಿ ನಾವು ಎಷ್ಟೋ ಕಷ್ಟಪಟ್ಟು ಕೇಂದ್ರ ಸರ್ಕಾರದಿಂದ 4,375 ಟನ್‌ಗಳಷ್ಟನ್ನು ಪಡೆದಿದ್ದೇವೆ. ಇದರಿಂದ ಪ್ರಾಯಶಃ ಇನ್ನು ಮೇಲೆ ಗುಳ ಮತ್ತು ಗಾಡಿ ಪಟ್ಟಿಯ ಅಭಾವ ಕಡಮೆಯಾಗುತ್ತದೆಂದು ನಂಬಿದ್ದೇನೆ.

ಶ್ರೀ ಎಂ. ಎಲ್ ನಂಜರಾಜ ಅರಸಿನವರು.—ಇದು ಕಾಳ ಸಂತೆಗೆ ಹೋಗುವುದರಿಂದ ರೈತರಿಗೆ ಸಿಕ್ಕುವುದಿಲ್ಲ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹಾಗಾಗದೇಯಿರುವಂತೆ ನಾವು ಆಯಾ ತಾಲ್ಲೂಕಿಗೇ ಸೊಸೈಟಿಗಳಿಗೆ ಕೊಡುತ್ತೇವೆ. ಮೈಸೂರು ದೇಶದಲ್ಲಿ ಸುಮಾರು 80 ಜನರು stockists ಇದ್ದಾರೆ, ಇವರಿಗೆ non-agricultural purposes ಗಾಗಿ ಬೇರೆ ಕೋಟಾ ಹೋಗುತ್ತದೆ. ಬಾಕಿಯದನ್ನು ಇನ್ನಾವ ಖಾಸಗಿ ವರ್ತಕರಿಗೂ ಕೊಟ್ಟಿಲ್ಲ. ನಮಗೆ ಈಗ ಜಿಂಕ್‌ಷೀಟುಗಳು ಮಾತ್ರ ಸಿಕ್ಕುತ್ತಿಲ್ಲ. ಎಲ್ಲವೂ ಕೂಡ ಅಸ್ಸಾಮಿಗೆ ಹೋಗುತ್ತಿದೆ. ಇದರಿಂದ ನಮಗೆ ಬಹಳ ಕಡಿಮೆ ಬರುತ್ತಿದೆ, ಸುಮಾರು 20 ಟನ್‌ನಷ್ಟು ಮಾತ್ರ ಬಂದಿದೆ. ಎಂದರೆ 16,800 ಷೀಟುಗಳು ಬಂದಿವೆ. ಇದರಿಂದ ಮೈಸೂರು ಸಂಸ್ಥಾನಕ್ಕೆಲ್ಲ ತೃಪ್ತಿಯಾಗುವುದಿಲ್ಲ. ಕೇಂದ್ರ ಸರ್ಕಾರದವರು ಕೊಡುತ್ತೇವೆಂದು ವಾಗ್ದಾನ ಮಾಡಿದ್ದರು. ಆದರೆ ಅಸ್ಸಾಮಿನಲ್ಲಿ ನಿರಾಶ್ರಿತರು ಗುಡಿಸಲುಗಳನ್ನಾದರೂ ಹಾಕಿಕೊಳ್ಳಲೆಂದು ಅಲ್ಲಿಗೆ ಒದಗಿಸುತ್ತಿದ್ದಾರೆ.

ಸಹಕಾರ ಇಲಾಖೆಯ ವಿಚಾರದಲ್ಲಿ ಒಬ್ಬಿಬ್ಬರು ಮಾನ್ಯ ಸದಸ್ಯರು ಟೀಕೆ ಮಾಡಿದರು. ಈ ವಿಷಯದಲ್ಲಿ ಇಷ್ಟು ಮಾತ್ರ ಹೇಳುತ್ತೇನೆ. ಸರ್ಕಾರದ ನೀತಿಯನ್ನು ಈ ಕಡೆ ಕುಳಿತಿರುವ ಮಾನ್ಯ ಸದಸ್ಯರೆಲ್ಲರೂ ಒಪ್ಪಿ ಬೆಂಬಲ ಕೊಟ್ಟಿದ್ದಾರೆ. ಸಹಕಾರ ಕ್ಷೇತ್ರದಲ್ಲಿ ಹಿಂದೆ ಯಾವ ಒಂದು confusion ಇತ್ತೋ ಅದು ನಿವಾರಣೆಯಾಗಿ ಸರಿಯಾದ ಮಾರ್ಗದಲ್ಲಿ ಸಹಕಾರ ಸಂಘಗಳು ಮುಂದುವರಿದು ಅಭಿವೃದ್ಧಿಯಾಗಬೇಕೆಂದು ಸರ್ಕಾರದವರು

ಸೂಕ್ತ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೆ. ಅಲ್ಲದೆ ಮೊನ್ನೆ ನಡೆದ ಕೋ-ಆಪರೇಟಿವ್ ಸೆಮಿನಾರ್‌ನಲ್ಲಿ ಕೊಟ್ಟ ಸಲಹೆಗಳನ್ನು ಕಾರ್ಯ ರೂಪಕ್ಕೆ ತರುವವರಾಗಿದ್ದಾರೆ.

ಇನ್ನು ಸಹಕಾರ ತತ್ವದ ಮೇಲೆ ಏರ್ಪಾಡಾದ ಕೋ-ಆಪರೇಟಿವ್ ಫಾರ್ಮಿಂಗ್ 12 ಸಂಘಗಳು 1,718 ಎಕರೆ ವ್ಯವಸಾಯ ಮಾಡಿದ್ದಾರೆಂದು ವರದಿ ಬಂದಿದೆ. ಇದು ಒಂದು ಹೊಸ ಪ್ರಯೋಗ, ಕೇವಲ ಒಂದು ವರ್ಷದ ಕೆಳಗೆ ಪ್ರಾರಂಭವಾದದ್ದು. ಇಷ್ಟು ಅಲ್ಪ ಕಾಲದಲ್ಲಿ ರಷ್ಯಾ ದೇಶದಲ್ಲಿ ಆಗಿರುವಷ್ಟು ಆಗಿಲ್ಲವೆಂದು ಯಾರೂ ಅತೃಪ್ತಿಪಟ್ಟುಕೊಳ್ಳಬಾರದು. ಇಷ್ಟು ಮಾತ್ರ ನಾನು ಹೇಳಬಲ್ಲೆ. ಇದು ಒಳ್ಳೆಯ ಪ್ರಯೋಗ ; ಇದು ನಿಷ್ಕಾಮ ಕರ್ಮದಿಂದ ಸಾಧಿಸಿದರೆ, ಎಲ್ಲರೂ ಸಹಕರಿಸಿ ಕೆಲಸ ಮಾಡಿದರೆ ಇದಕ್ಕಿಂತ ಉತ್ತಮವಾದ ಪ್ರಯೋಗ ಮತ್ತೊಂದಿಲ್ಲವೆಂದು ಹೇಳಬರೆ ಎಲ್ಲರಿಗೂ ಸಂತೋಷವಾಗುತ್ತದೆಂದು ನನ್ನ ನಂಬಿಕೆ.

ಇನ್ನು ಟ್ರಾಕ್ಟರುಗಳ ವಿಚಾರ ಬಂದಿತು. ಸ್ಪೇರ್ ಪಾರ್ಟುಗಳಿಲ್ಲದೆ ತೊಂದರೆಯಾಗಿದೆ. ಸೆಂಟ್ರಲ್ ವರ್ಕ್‌ಷಾಪ್ ಏರ್ಪಾಡು ಮಾಡಿಲ್ಲ, ಆದುದರಿಂದ ತೊಂದರೆಯಾಗಿದೆ. ಇದನ್ನು ಖಾಸಗೀ ಜನರಿಗೆ ಕೊಡುವುದು ಉತ್ತಮವೆಂದು ತೀರ್ಮಾನ ಮಾಡಿದೆವು. ಈಗಾಗಲೇ ಖಾಸಗಿ ಜನರು 11 ಟ್ರಾಕ್ಟರುಗಳನ್ನು ಕೊಂಡುಕೊಂಡಿದ್ದಾರೆ. ಇನ್ನು ಹೆಚ್ಚಾಗಿ ಬೆಳೆಯುವ ವಿಚಾರದಲ್ಲಿ ಇಷ್ಟು ಹೇಳಬಲ್ಲೆ. ಇಷ್ಟೊಂದು ಕೆರೆ ನಾಲೆಗಳನ್ನು ರಿಪೇರಿ ಮಾಡಿದ್ದೇವೆ, ಹೋದ ವರ್ಷ 150 ಕೆರೆಗಳನ್ನು ರಿಪೇರಿ ಮಾಡಿದ್ದೇವೆ, ಈ ವರ್ಷ ನೂರು ಕೆರೆಗಳನ್ನು ರಿಪೇರಿ ಮಾಡಿದ್ದೇವೆ. ಅನೇಕ ಅಣೆಗಳನ್ನು ಕಟ್ಟಿ ರಿಪೇರಿ ಮಾಡಿದ್ದೇವೆ. ಇಷ್ಟಾಗಿಯೂ ಆಹಾರೋತ್ಪತ್ತಿ ಜಾಸ್ತಿಯಾಗಿಲ್ಲವೆಂದು ಹೇಳಿದರೆ ನಂಬುವುದಕ್ಕಾಗುವುದಿಲ್ಲ. ಆಹಾರ ದೇಶದಲ್ಲಿ ಹೆಚ್ಚಾಗಿದೆ, ಆದರೆ ನಿಮಗೆ ಸಿಕ್ಕಿಲ್ಲ, ಯಾರೂ ದೇಶದಲ್ಲಿ ಉಪವಾಸವಿಲ್ಲ ಎಂದು ಶ್ರೀ ಚನ್ನಬಸಪ್ಪನವರು ಹೇಳಿದರು. ಆದರೆ ಅಷ್ಟು ಮಟ್ಟಿಗೆ ಸ್ವಪರಿಪೂರ್ಣತೆ ಬಂದಿದೆಯೆಂದು ನಾನು ನಂಬಿಲ್ಲ. ಹಿಂದೆ ಎಕರೆಗೆ 6·8 ಪಲ್ಲ ಬೆಳೆಯುತ್ತಿದ್ದುದು ಈಗ 8·6 ಪಲ್ಲ ಆಗಬಹುದೆಂದು ಅಂದಾಜು ಮಾಡಿದ್ದೇವೆ. ಎಕರೆಗೆ ಸರಾಸರಿ 11 ಪಲ್ಲ ಬೆಳೆಯುವವರೆಗೂ ಈಗ ಹೆಚ್ಚಿರುವ ಜನ ಸಂಖ್ಯೆಗೆ ಆಹಾರವನ್ನು ಸಾಕಷ್ಟು ಒದಗಿಸಲು ಸಾಧ್ಯವಾಗಲಾರದು. ಅದು ಆಗದೇಯಿದ್ದರೆ ರಾಷ್ಟ್ರಕ್ಕೊದಗಿರುವ ವಿಪತ್ತನ್ನು ಪರಿಹರಿಸುವುದು ಕಷ್ಟ. ಖುಷ್ಕಿ ಬೆಳೆಯಂತೂ ದೇವರು ಹಸನ್ಮುಖಿಯಾಗಿ ಅವನ ವರ ಪ್ರಸಾದ ದೊರೆತರೆ ಸರಿ, ಇಲ್ಲದಿದ್ದರೆ ಇಲ್ಲವೇ ಇಲ್ಲ, ಸರಿಯಾಗಿ ಮಳೆಯಾದರೆ ಸರಿ, ಇಲ್ಲದಿದ್ದರೆ ಹಾಕಿದ ಪೈರೆಷ್ಟೂ ಒಣಗಿ ಹೋಗುತ್ತದೆ. ಆಹಾರದ ವಿಚಾರದಲ್ಲಿ ಇಷ್ಟೇ ಆಗುತ್ತದೆಂದು ಹೇಳುವುದು, ಕಾಗದದ ಮೇಲೆ ಬರೆಯುವುದು ಕಷ್ಟ. ಪ್ರಕೃತಿ ಮತ್ತು ಮನುಷ್ಯ ಇಬ್ಬರೂ ಚಂಚಲ ಸ್ವಭಾವದವರು. ಆದುದರಿಂದ ಈ ಕಷ್ಟ.

ಗ್ರಾಮಾಭಿವೃದ್ಧಿ ಯೋಜನೆ ವಿಚಾರದಲ್ಲಿ ಕೆಲವು ಟೀಕೆ ಬಂದವು. ಬಹುಮಟ್ಟಿಗೆ ರಚನಾತ್ಮಕವಾದ ಟೀಕೆಗಳೆಂದು ಹೇಳಬಹುದು. ಇದನ್ನು ಪಬ್ಲಿಕ್‌ವರ್ಕ್ಸ್ ಇಲಾಖೆಗೆ ವಹಿಸಿದರೆ ಉತ್ತಮವೆಂದು ತೋರಿತು. ಖಾಸಗಿ ಮನುಷ್ಯರ ಅಭಿಪ್ರಾಯವೂ ಹೀಗಿತ್ತು. ಆದರೆ ಇದರಲ್ಲಿ preaudit ನಿರ್ಬಂಧವಿದ್ದುದರಿಂದ ಕೆಲಸ ಕಾರ್ಯಗಳು ಸರಿಯಾಗಿ ಜಾಗ್ರತೆಯಾಗಿ ಆಗಲಿಲ್ಲ. ರೆವಿನ್ಯೂ ಆಡಿಟರು ಚೆಕ್‌ಮಾಡಿದರೆ ಸಾಕೆಂದು ಮಾಡಿದೆವು, ಆ ಮೇಲೆ ರೆವಿನ್ಯೂ ಗೆಜೆಟೆಡ್ ಆಫೀಸರು ಚೆಕ್ ಮಾಡಿ ಸರ್ಟಿಫೈಮಾಡಿದರೆ ಹಣ ಕೊಡಬಹುದೆಂದು ಮಾಡಿದೆವು. ಇದೂ ಸರಿಯಾಗಿ ನಡೆಯದೆ ಸ್ವಲ್ಪ ತೊಂದರೆಯಿರುವುದರಿಂದ ಈ ಕಾರ್ಯವನ್ನು ರೆವಿನ್ಯೂ ಅಧಿಕಾರಿಗಳಿಗೇ ವಹಿಸಬೇಕೆಂಬ ವಿಚಾರ ಸರ್ಕಾರದ ಆಲೋಚನೆಯಲ್ಲಿದೆ.

ಶ್ರೀಮಾನ್ ಹನುಮಯ್ಯನವರು ಮತ್ತು ಇನ್ನು ಕೆಲವರು ಹಳ್ಳಿಗಳಲ್ಲಿ ಕುಡಿಯುವ ನೀರಿನ ಬಾವಿಗಳಿಲ್ಲದೆ ತೊಂದರೆಯಾಗಿದೆಯೆಂದು ಹೇಳಿದರು. ಮೈಸೂರು ದೇಶದಲ್ಲಿರುವ ಸುಮಾರು 19 ಸಾವಿರ ಚಿಲ್ಲರೆ ಹಳ್ಳಿಗಳ ಪೈಕಿ 4,002 ಹಳ್ಳಿಗಳಿಗೆ ವಿನಾ ಬಾಕಿ ಎಲ್ಲ ಹಳ್ಳಿಗಳಲ್ಲಿಯೂ ಕುಡಿಯುವ ನೀರಿನ ಬಾವಿಗಳಿವೆ. ಈ 4,002 ಹಳ್ಳಿಗಳಿಗೆ ಮಾತ್ರ ಬಾವಿಗಳನ್ನು ಕೊಡಬೇಕಾಗಿದೆ. ಎಂದ ಮೇಲೆ ಎಷ್ಟು ಕೆಲಸಮಾಡಿದ್ದೇವೆಂಬುದು ವ್ಯಕ್ತವಾಗುತ್ತದೆ. 19 ಸಾವಿರ ಹಳ್ಳಿಗಳೂ 12,598 ಪಂಚಾಯಿತಿಗಳಿವೆ. ಕೆಲವು ಬೇಚರಾಕ್ ಹಳ್ಳಿಗಳೂ ಇವೆ. ಇವು ಎಷ್ಟೇ ಇರಲಿ, ಕೊನೆಯಪಕ್ಷ 17 ಸಾವಿರ ಹಳ್ಳಿಗಳಿವೆಯೆಂದಿಟ್ಟುಕೊಂಡರೂ ಕೂಡ ಇನ್ನು ಕೇವಲ 4,002 ಹಳ್ಳಿಗಳಲ್ಲಿ ಬಾವಿಗಳು ಬೇಕೆಂದು ವರದಿ ನಮಗೆ ಬಂದಿದೆ.

ಶ್ರೀ ಟಿ. ಹನುಮಯ್ಯನವರು.—ಆ ಹಳ್ಳಿಗಳಲ್ಲಿ ಕುಡಿಯುವ ನೀರಿಗೆ ಏನು ಏರ್ಪಾಡು ಮಾಡಿದಿರಿ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆ ಹಳ್ಳಿಗಳಿಗೂ ಬಾವಿಗಳನ್ನೊದಗಿಸಬೇಕಾದುದು ನಮ್ಮ ಧರ್ಮ. 2,467 ಬಾವಿಗಳನ್ನು ಹರಿಜನರಿಗಾಗಿಯೇ ಒದಗಿಸಲಾಗಿದೆ. ಅಲ್ಲದೆ ಖಾಸಗಿ ಬಾವಿಗಳೂ ಇವೆ.

ಶ್ರೀ ಎಂ. ಎಸ್. ಜೋಯಿಸರು.—ಈ 4,002 ಹಳ್ಳಿಗಳಲ್ಲಿ ಬಾವಿಗಳೇ ಇಲ್ಲವೆಂತಲೋ ಅಥವಾ ಸರ್ಕಾರಿ ಬಾವಿಗಳಿಲ್ಲವೆಂತಲೋ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸರ್ಕಾರಿ ಬಾವಿಗಳಿಲ್ಲ, ಎಂದು ಅರ್ಥ. ಕೆಲವು ಕಡೆ ಖಾಸಗಿ ಬಾವಿಗಳು, ಕುಂಟೆಗಳು ಮುಂತಾದುವುಗಳ ನೀರನ್ನು ಕುಡಿಯುತ್ತಿದ್ದಾರೆ. ಈ 4,002 ಹಳ್ಳಿಗಳಿಗೂ ಬಾವಿಗಳನ್ನೊದಗಿಸಬೇಕೆಂದು ಯೋಚನೆ ಮಾಡಿದ್ದೇವೆ. ಹರಿಜನರಿಗಾಗಿಯೇ 2,424 ಬಾವಿಗಳಿವೆ, ಮೈಸೂರು ದೇಶದಲ್ಲಿ. ಆದರೂ ಸರ್ಕಾರದವರು ಅನುಸರಿಸುತ್ತಿರುವ ನೀತಿ ಏನೆಂದರೆ ಒಂದು ಸರ್ಕಾರಿ ಭಾವಿ ಇದ್ದರೆ ಅದರಲ್ಲಿ ಹರಿಜನರೂ ನೀರು ತೆಗೆದುಕೊಳ್ಳಲು ಅವಕಾಶವಿರಬೇಕು. ಅವರಿಗೆ ಯಾವ ಅನರ್ಹತೆಯೂ ಇರಬಾರದು, ಯಾವ ಅಡಚಣೆಯೂ ಇರಬಾರದೆಂಬುದು ಸರ್ಕಾರದ ಉದ್ದೇಶ.

ಶ್ರೀ ಎಂ. ಮಾದಯ್ಯನವರು.—ಹರಿಜನರೂ ನೀರನ್ನು ತೆಗೆದುಕೊಳ್ಳಲು ಅವಕಾಶವಿರಬೇಕೆಂದು ಹೇಳಿದಿರಿ; ಇತರರು ಅದಕ್ಕೆ ಒಪ್ಪುತ್ತಾರೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸರ್ಕಾರಿ ಬಾವಿಗಳಲ್ಲಿ ಹರಿಜನರು ನೀರು ತೆಗೆದುಕೊಳ್ಳಲು ಅವರಿಗೆ ಸಂಪೂರ್ಣ ಅಧಿಕಾರವಿರಬೇಕು, ಸವರ್ಣ ಹಿಂದುಗಳಂತೆಯೆ.

ಶ್ರೀ ಎಂ. ಮಾದಯ್ಯನವರು.—ಸರ್ಕಾರಿ ಬಾವಿಗಳಲ್ಲಿ ಹರಿಜನರಿಗೂ ಅ ವ ಕಾ ಶ ವಿ ರ ಬೇ ಕೆಂಬುದು. ರಾಜ್ಯಾಂಗದ ಮೂಲ ಭೂತ ಹಕ್ಕುಗಳಲ್ಲೇ ಇದೆ. ಆದರೆ ಇತರರೂ ಆ ಬಾವಿಗಳಲ್ಲಿ ತೆಗೆದುಕೊಳ್ಳಲೊಪ್ಪುತ್ತಾರೆಯೆ ಎಂಬುದು ನನ್ನ ಪ್ರಶ್ನೆ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅನೇಕ ಕಡೆ ಸವರ್ಣ ಹಿಂದುಗಳೂ ಕೂಡ ತೆರೆದ ಹೃದಯದವರಾಗುತ್ತಿದ್ದಾರೆ. ಸರ್ದಾರ್ ಪಟೇಲರು, ಎಷ್ಟೇ ಕಾನೂನುಗಳನ್ನು ಈ ವಿಷಯದಲ್ಲಿ ಮಾಡಿದರೂ ಸವರ್ಣ

(ಮಾನ್ಯ ಶ್ರೀ ಟಿ. ಮರಿಯಪ್ಪನವರು.)
ಹಿಂದುಗಳು ತಮ್ಮ ಹೃದಯವನ್ನು ತೆರೆಯದೇ ಹೋದರೆ ಪ್ರಯೋಜನವಿಲ್ಲವೆಂದು ಹೇಳಿದ್ದಾರೆ. ಅದನ್ನೇ ಈಗ ಹೇಳಬೇಕಾಗಿದೆ. ಈ ದಿವಸ ನಾನು ಪ್ರತಿನಿಧಿಗಳ ಮೂಲಕ ಸವರ್ಣ ಹಿಂದುಗಳನ್ನು ಬೇಡಿಕೊಳ್ಳುತ್ತೇನೆ. ಅಜ್ಞಾನದಿಂದ ಇಂತಹ ಪ್ರತಿಬಂಧಕಗಳು ಹರಿಜನರಿದ್ದರೆ ಅದನ್ನು ತಪ್ಪಿಸಬೇಕು. ಸರ್ಕಾರದವರೂ ಇಂತಹ ಕಷ್ಟಗಳಿದ್ದರೆ ತಪ್ಪಿಸಲು ಎಲ್ಲ ಪ್ರಯತ್ನವನ್ನೂ ಮಾಡುತ್ತಾರೆಂದು ಭರವಸೆ ಕೊಡುತ್ತೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಎಷ್ಟು ಗ್ರಾಮುಗಳಿಗೆ ಬಾವಿಗಳಿಲ್ಲ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—4,002 ಗ್ರಾಮುಗಳಿಗೆ ಇಲ್ಲವೆಂದು ನಮ್ಮ ಲೆಕ್ಕದ ಪ್ರಕಾರ ತಿಳಿದುಬಂದಿವೆ. 17 ಸಾವಿರ ಹಳ್ಳಿಗಳ ಪೈಕಿ ಇಷ್ಟಕ್ಕೆ ಮಾತ್ರ ಕೊಡಬೇಕು. ಅದಷ್ಟು ಜಾಗ್ರತೆ ಕೊಡುತ್ತೇವೆ. ಇದಕ್ಕಾಗಿ 12 ಲಕ್ಷ ರೂಪಾಯಿ ಈ ವರ್ಷ ಇಟ್ಟಿದ್ದೇವೆ. ಹೀಗೆ ಎಲ್ಲವನ್ನೂ ಮಾಡಲಾಗುತ್ತಿದೆ.

ಶ್ರೀ ಟಿ. ಹನುಮಯ್ಯನವರು.—ತಾವು ತಿಳಿಸಿದುದು ಸಾರ್ವಜನಿಕರ ಬಾವಿಗಳೋ ಅಥವ ಹರಿಜನರ ಬಾವಿಗಳೋ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇನ್ನು ಮುಂದಕ್ಕೆ ಸಾರ್ವಜನಿಕರು, ಇವರು ಹರಿಜನರು ಎಂಬ ವ್ಯತ್ಯಾಸಗಳೇ ಇರಲು ಅವಕಾಶವಿಲ್ಲ. ಎಲ್ಲರಿಗೂ ಅನುಕೂಲವಾಗತಕ್ಕ ರೀತಿಯಲ್ಲಿ ಈ ಬಾವಿಗಳನ್ನು ತೆಗೆಸಲಾಗುತ್ತಿದೆ.

ಇನ್ನು ರಸ್ತೆ ವಿಚಾರವಾಗಿ ಶ್ರೀ ಎಚ್. ಎಂ. ಚನ್ನಬಸಪ್ಪನವರು ಇವು ಬಹಳ ನಾದುರುಸ್ತು ಸ್ಥಿತಿಯಲ್ಲಿರುತ್ತವೆಂಬುದಾಗಿ ಹೇಳಿದರು. ಆದರೆ ಹಾಗೆ ರಸ್ತೆಗಳು ಇಡೀ ಸಂಸ್ಥಾನಾದ್ಯಂತವೂ ಸ್ವಲ್ಪ ಹೆಚ್ಚು ಕಡಿಮೆ ಅದೇ ರೀತಿಯಲ್ಲಿರುತ್ತವೆ. ಈ ಬಗ್ಗೆ ವರ್ಕ್ ಕೆಲಸ ಕಾರ್ಯಗಳಿಗೆ ಎಷ್ಟು ದುಡ್ಡು ಖರ್ಚಾಗಬೇಕೋ ಅದಕ್ಕಿಂತಲೂ ಹೆಚ್ಚಾಗಿ ಈ ಕೆಲಸ ಕಾರ್ಯಗಳನ್ನು ನಡೆಸತಕ್ಕ ಇಲಾಖಾ ಸಿಬ್ಬಂದಿಗಾಗಿ ಖರ್ಚಾಗುತ್ತಿದೆಯೆಂದು ತಿಳಿಸಿದ್ದಾರೆ. ಆದರೆ ನಾವು ನಮ್ಮ ಸಂಸ್ಥಾನವಲ್ಲಿ ಈ ಬಗ್ಗೆ ಸಿಬ್ಬಂದಿಗಾಗಿ ಆಗುತ್ತಿರುವ ಖರ್ಚು ವೆಚ್ಚಗಳನ್ನು ಭಾರತದ ಇತರ ಪ್ರದೇಶಗಳೊಡನೆ ಹೋಲಿಸಿ ನೋಡಿದರೆ ನಾವು ಖರ್ಚು ಮಾಡುತ್ತಿರುವುದು ಅಷ್ಟೇನೂ ಜಾಸ್ತಿಯಾಗಿರುವುದಿಲ್ಲ ಎಂಬುದು ಕಂಡು ಬರುತ್ತದೆ. ಇಡೀ ಭಾರತದಲ್ಲಿರತಕ್ಕ ಎಲ್ಲಾ ಸರ್ಕಾರಗಳಲ್ಲೂ ಎಷ್ಟೆಷ್ಟು ಹಣವನ್ನು ಖರ್ಚು ಮಾಡುತ್ತಿದ್ದಾರೋ ಅವುಗಳೆಲ್ಲಕ್ಕಿಂತಲೂ ಕಮ್ಮಿ ಮೊಬಲಗು ನಮ್ಮ ಸಂಸ್ಥಾನದಲ್ಲಿ ಸಿಬ್ಬಂದಿಗಾಗಿ ಖರ್ಚಾಗುತ್ತಿದೆ. ಪಕ್ಕದ ಪ್ರಾಂತ್ಯವಾದ ಮದ್ರಾಸ್ ಸರ್ಕಾರದವರು ಮಾಡುತ್ತಿರುವುದು ಶೇಕಡ 19. ನಮ್ಮದು ಅದಕ್ಕಿಂತಲೂ ಕಮ್ಮಿ ಇದೆ. ಹೀಗೆ ಕೇವಲ ಮಿನಿಮಂ ಖರ್ಚಾಗುತ್ತಿರುವುದು ನಮ್ಮಲ್ಲಿಯೇ. ಈ ಇಲಾಖೆಯಲ್ಲಾಗಲೇ 1949ರಲ್ಲಿ ರಿಟ್ರೆಂಚ್‌ಮೆಂಟ್ ಮಾಡಿರತಕ್ಕ ಅಂಶ ಮಾನ್ಯ ಸದಸ್ಯರ ಗಮನದಲ್ಲಿರಬಹುದು.

Sri H. M. CHANNABASAPPA.—May I know the total outlay in the State of the Public Works Department?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೀಗೆ ಈ ಬಾಬಿನ ಮೇಲೆ ಹಾಕಿರತಕ್ಕ total outlayಯಲ್ಲಿ ಈ ಸಿಬ್ಬಂದಿ ಬಗ್ಗೆ ಆಗತಕ್ಕ ಖರ್ಚು ಶೇಕಡ 10ರಷ್ಟು ಕೂಡ ಆಗುವುದಿಲ್ಲ.

ಇನ್ನೂ ಮಾನ್ಯ ಇಮಾಂರವರು ಮಾತನಾಡುತ್ತ ಬೇಗ ಲಕ್ಕವಳ್ಳಿ ಪ್ರಾಜೆಕ್ಟಿನ ಕೆಲಸ ಮುಗಿಸಿ ಆ ಬಗ್ಗೆ ಹೆಚ್ಚು ಜಮೀನುಗಳಲ್ಲಿ ಬೇಗ ತರೀ ವ್ಯವಸಾಯ ನಡೆಯುವಂತೆ ಮಾಡಬೇಕೆಂದು ತಿಳಿಸಿದ್ದಾರೆ. ಸರ್ಕಾರದವರು ಹೆಚ್ಚು ಹೆಚ್ಚು ಭೂಮಿಯನ್ನು ನೀರು ಸಾಗಿಗೆ ತರಬೇಕೆಂಬ ಘನೋದ್ದೇಶದಿಂದಲೇ ಈಗಾಗಲೇ ವಿಪರೀತ ಹಣವನ್ನು ಖರ್ಚು ಮಾಡಿ ನುಗು ಮತ್ತು ತುಂಗಾ ಪ್ರಾಜೆಕ್ಟುಗಳ ಕೆಲಸ ಬಹಳ ತ್ವರಿತದಿಂದ ನಡೆಯುತ್ತಿದೆ. ಆದರೆ ಈ ಬಗ್ಗೆ ನಮಗೆ ಹೆಚ್ಚು ಹಣ ಸಹಾಯ ಒದಗಿದಂತೆಲ್ಲಾ ಲಕ್ಕವಳ್ಳಿ ಪ್ರಾಜೆಕ್ಟನ್ನು ಕೂಡ ಅದಷ್ಟು ಬೇಗ ಪೂರೈಸಬೇಕೆಂಬ ಇರಾದೆಯುಳ್ಳವರಾಗಿದ್ದೇವೆ. ಲಕ್ಕವಳ್ಳಿ ಪ್ರಾಜೆಕ್ಟಿನ ಕೆಲಸ ಕಾರ್ಯಗಳನ್ನು ಈಗಾಗಲೇ ಮದ್ರಾಸಿನ ಒಬ್ಬ ಪ್ರವೀಣರು ಬಂದು ನೋಡಿಕೊಂಡು ಹೋಗಿದ್ದಾರೆ. ಅವರು ಈ ಬಗ್ಗೆ ತಮ್ಮ ಮೆಚ್ಚಿಗೆಯನ್ನು ಕೂಡ ವ್ಯಕ್ತಪಡಿಸಿದ್ದಾರೆ. ಅಷ್ಟೇಕೆ ನಮ್ಮ ಅನೇಕ ಪತ್ರಿಕಾ ಪ್ರತಿನಿಧಿಗಳೂ ಸಹ ಅಲ್ಲಿಗೆ ಹೋಗಿ ಹೇಗೆ ಕೆಲಸ ಕಾರ್ಯಗಳು ಮುಂದುವರೆಯುತ್ತಿವೆಯೆಂಬುದನ್ನು ನೋಡಿಕೊಂಡು ಬಂದಿದ್ದಾರೆ.

ಈ ರಸ್ತೆಗಳನ್ನು ನಾವು ಯಾವ ಮಟ್ಟದಲ್ಲಿಟ್ಟಿರಬೇಕಾಗಿತ್ತೋ ಆ ಮಟ್ಟದಲ್ಲಿಡಲು ಸಾಧ್ಯವಾಗಿಲ್ಲ. ಆದರೆ ಈ ಬಗ್ಗೆ annual grant ಹೆಚ್ಚಾಗದ ವಿನಃ ಇದನ್ನು ಮಾಡುವುದಕ್ಕೆ ಖಂಡಿತ ಸಾಧ್ಯವಿಲ್ಲ. ಒಂದೊಂದು ರಸ್ತೆಗೆ ಈ annual grant 50 ರೂಪಾಯಿ, 75 ರೂಪಾಯಿ, 100 ರೂಪಾಯಿ ಹೀಗಲ್ಲಾ ಇರುತ್ತದೆ. ಯಾವ ಕಾಲದಲ್ಲೋ ಕೆಲವು ರಸ್ತೆಗಳಿಗೆ ಮಾತ್ರ 150 ರೂಪಾಯಿಗಳನ್ನು ಮಾಡಿದ್ದಾರೆಂದು ಆಗಲೇ ಶ್ರೀ ಎಸ್. ಕರಿಯಪ್ಪನವರು ತಿಳಿಸಿದ್ದಾರೆ. ಹೀಗೆ ಅವರು ತಿಳಿಸಿರತಕ್ಕ ರಸ್ತೆ ಒಂದೇ ಹಾಗೆ peculiar ಆಗಿಲ್ಲ. ಅದರಂತೆ ಇರತಕ್ಕ ರಸ್ತೆಗಳು ಅನೇಕವಾಗಿವೆ. ಹಾಗೆ 1943-44ರ annual grant ನ್ನು ಹೆಚ್ಚಿಸದ ವಿನಃ ಈ ರಸ್ತೆಗಳನ್ನು ಒಳ್ಳೆಯ ಸ್ಥಿತಿಯಲ್ಲಿಡುವುದಕ್ಕಾಗುವುದಿಲ್ಲ. ಈ ಅಂಶವನ್ನು ನಾನೂ ಸಹ ಒಪ್ಪುತ್ತೇನೆ. ನಮ್ಮಲ್ಲಿ 2,269 ಮೈಲಿಗಳಷ್ಟು State Fund Road ಇರುತ್ತೆ. ಈ ಪೈಕಿ 500 ಮೈಲಿಗಳಿಂದ 1,000 ಮೈಲಿಗಳಿಗೇ ಬಹಳ ವ್ಯತ್ಯಾಸವಿರತಕ್ಕಂಥ ಸನ್ನಿವೇಶಗಳೂ ವಿಶೇಷವಾಗಿವೆ. ಸಂಸ್ಥಾನದಲ್ಲಿರತಕ್ಕ ರಸ್ತೆಗಳ ಪೈಕಿ 1,955 ಮೈಲಿಗಳು ಜಿಲ್ಲಾ ಬೋರ್ಡುಗಳವರ ಆಡಳಿತಕ್ಕೊಳಪಟ್ಟಿದೆ. ಪಿ. ಡಬ್ಲ್ಯು. ಇಲಾಖೆಯವರ ಆಡಳಿತದಲ್ಲಿ 1,603 ಮೈಲಿಗಳಷ್ಟು ರಸ್ತೆ ಇರುತ್ತೆ. ಇನ್ನೂ 2,908 ಮೈಲಿಗಳು ಐ.ವಿ.ಸಿ. ರಸ್ತೆಗಳಾಗಿರುತ್ತೆ. ಈ ಇಂಟರ್-ವಿಲೇಜ್ ಕಮ್ಯೂನಿಕೇಷನ್ ರಸ್ತೆಗಳನ್ನು ಮೊದಲು ಯಾವಾಗ ಪ್ರಥಮತಃ ಪ್ರಾರಂಭಿಸಲಾಯಿತೋ ಆಗ ಮಾಡಿದ್ದಂಥ ರಸ್ತೆಗಳಿಗೆ ಈ ತಹರ್‌ವರಿವಿಗೂ ರಿಪೇರಿ ವಗೈರೆಗಳೇನೂ ನಡೆದಿರುವುದಿಲ್ಲ. ಇಷ್ಟೆಲ್ಲಾ ಹಣದ ಅಭಾವದಿಂದ ಹೋದ ವರ್ಷ ಎಲ್ಲೆಲ್ಲಿ ರಸ್ತೆಗಳು ರಿಪೇರಿಯಾಗಬೇಕಾಗಿತ್ತೋ ಅವು ಸಹ ಆಗಿರುವುದಿಲ್ಲ. ಆದರೆ ಈ ಬಗ್ಗೆ ನಮ್ಮ ಹಣಕಾಸಿನ ಸ್ಥಿತಿಗತಿಗಳನ್ನು ನೋಡಿಕೊಂಡು ಎಷ್ಟು ಹಣವನ್ನು ಈ ಬಾಬಿಗೆ ಒದಗಿಸಲು ಸಾಧ್ಯವಿತ್ತೋ ಅಷ್ಟನ್ನೂ ಒದಗಿಸಿ ಈ ಬಡ್ಜೆಟ್ಟನ್ನು ತಯಾರಿಸಿ ಈಗ ಅದನ್ನು ತಮ್ಮ ಮುಂದೆ ಇಡಲಾಗಿದೆ. ಈ ಬಗ್ಗೆ ಸಂಸ್ಥಾನಾದ್ಯಂತವೂ ಇರತಕ್ಕ ಜಿಲ್ಲಾಬೋರ್ಡು ಅಧ್ಯಕ್ಷರುಗಳೂ ಮತ್ತು ಸರ್ಕಾರದವರೂ ಈಗಾಗಲೇ ಮೂರಾವರ್ತಿ ಕಲೆತು ಈ ರಸ್ತೆಗಳನ್ನು ಉತ್ತಮಸ್ಥಿತಿಗೆ ತರತಕ್ಕ ಬಗ್ಗೆ ಚರ್ಚೆಗಳನ್ನು ನಡೆಸಿ ವಿಚಾರ ವಿನಿ

ಮಯ ಮಾಡಿಕೊಂಡು ಈ ಬಗ್ಗೆ ಜಿಲ್ಲಾ ಬೋರ್ಡುಗಳವರು ಕನಿಷ್ಠಪಕ್ಷಮೂರು ಲಕ್ಷ ರೂಪಾಯಿಗಳನ್ನಾದರೂ ಕೊಡಲೇಬೇಕೆಂಬ ಒಂದು ಒಪ್ಪಂದಕ್ಕೆ ಅಂದರೆ tentative ಆಗಿ ಒಂದು ತೀರ್ಮಾನಕ್ಕೆ ಬಂದಿದ್ದೇವೆ. ಈಗಾಗಲೇ ಈ ತೀರ್ಮಾನಕ್ಕೆ ಬೆಂಗಳೂರು ಜಿಲ್ಲಾ ಬೋರ್ಡಿನವರು ಒಪ್ಪಿಗೆ ಕೊಟ್ಟಿದ್ದಾರೆ. ಹೀಗೆ ಉಭಯ ಪಾರ್ಟಿಗಳೂ ಒಂದಾಗಿ ಎಷ್ಟೆಷ್ಟು ರಸ್ತೆ ಇರುತ್ತದೆಯೋ ಆ ಪೈಕಿ ವರ್ಷ ಒಂದಕ್ಕೆ ಮೂರನೇ ಎರಡು ಭಾಗ ಅಥವಾ ಅದರಲ್ಲಿ ಮೂರನೇ ಒಂದು ಭಾಗ ದುರಸ್ತು ಮಾಡಿಸಲೇಬೇಕೆಂಬ ಆಸಕ್ತಿ ಜಿಲ್ಲಾ ಬೋರ್ಡಿನವರಿಗೂ ಮತ್ತು ಸರ್ಕಾರಕ್ಕೂ ಉಂಟಾಗಿರುತ್ತೆ. ಈ ಬಗ್ಗೆ ಒಂದು ratification ಆದೊಡನೆಯೇ ಸರ್ಕಾರದವರು ಕಾರ್ಯಕ್ರಮಗಳನ್ನು ಕೈಗೊಳ್ಳುವರೆಂದು ಸೂಚಿಸುತ್ತೇನೆ.

ಶ್ರೀ ಎಂ. ಎಸ್. ಜೋಯಿಸರು — ಈ ರಸ್ತೆಗಳ ರಿಪೇರಿಯನ್ನೆಲ್ಲಾ ಆ ರಸ್ತೆಯಲ್ಲಿ ಬಸ್ಸುಗಳನ್ನು ನಡೆಸುತ್ತಿರುವ ಬಸ್ ಮಾಲೀಕರಿಗೇ ತಾವೇಕೆ ಕೊಡಬಾರದು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸಲಹೆಯೇನೋ ಬಹಳ ಇಂಪಾಗಿದೆ. Working expenditure ಸಹ ಕಮ್ಮಿ ಆಗುತ್ತೆ. ಆದರೆ ಹಾಗೆ ಎಲ್ಲಾ ಕಡೆಗಳಲ್ಲೂ ಮಾಡುವುದಕ್ಕಾಗುವುದಿಲ್ಲ. ಏನೋ ಕೆಲವು ಮಲೆನಾಡು ರಸ್ತೆಗಳಲ್ಲಿ ಎಲ್ಲಿ ಒಬ್ಬರೇ ಬಸ್ ಮಾಲೀಕರು ಹಾಗೆ ಸರ್ವೀಸು ನಡೆಸುತ್ತಿದ್ದಾರೋ ಅಂಥಾ ಕಡೆಗಳಲ್ಲಿ ಇದು ಸಾಧ್ಯವಾಗಬಹುದು. ಹೀಗೆ ಈ ರಸ್ತೆಗಳಿಗೆ ಹೊಸದಾಗಿ ಟಾರ್ ಮಾಡುವುದಿರಲಿ, ರಸ್ತೆಯಲ್ಲಿ ಬಿದ್ದಿರುವ ಗುಂಡಿ-ಗುದ್ದರಗಳನ್ನು ಕೂಡ ಮುಚ್ಚಿಸಲಿಕ್ಕಾಗಿರುವುದಿಲ್ಲ.

ಇನ್ನು ಶ್ರೀ ಟಿ. ಹನುಮಯ್ಯನವರು ಅನಿಮಲ್ ಹಸ್ಬೆಂಡ್ರಿಯಲ್ಲಿ ಡೂಪ್ಲಿಕೇಟ್ ಆಗಿದೆಯೆಂದು ತಿಳಿಸಿದರು. ಆದರೆ ಅಂಥಾದ್ದನ್ನೆಲ್ಲಾ ಆಗಲೇ ತಪ್ಪಿಸಲಾಗಿದೆ. ಅದೇ ರೀತಿ poultry farm ಗೆ ಇಡಲಾಗಿದ್ದ ಅಧಿಕಾರಿಗಳನ್ನೆಲ್ಲಾ ತಪ್ಪಿಸಿ ಆಯಾಯ ಜಿಲ್ಲೆಯಲ್ಲಿರುವ ಸೂಪರಿಂಟೆಂಡೆಂಟರುಗಳೇ ನೋಡಿಕೊಳ್ಳಬೇಕೆಂದು ಈ ಬಾಬನ್ನು ಸಹ ಅದೇ ಅನಿಮಲ್ ಹಸ್ಬೆಂಡ್ರಿ ಇಲಾಖೆಗೆ ವರ್ಗಾಯಿಸಲಾಗಿದೆ. ಆದರೆ ಹಿಂದೆ ಮಂಡ್ಯ ಜಿಲ್ಲೆಯಲ್ಲಿರತಕ್ಕ ಏಗಚಿಹಳ್ಳಿಯಲ್ಲಿ ಒಂದು ಕುರಿ ಸಾಕತಕ್ಕ ಫಾರಂನ್ನು ಸ್ಥಾಪಿಸಿ ಅಲ್ಲಿ ಒಳ್ಳೆಯ ಟಗರುಗಳನ್ನು ಉತ್ಪತ್ತಿ ಮಾಡಬೇಕೆಂದು ಮಾಡಿದ್ದರು. ಮೊದಲು ಎಂದು ಆ ಫಾರಂನ್ನು ಸ್ಥಾಪಿಸಿದಾಗ ಅಲ್ಲಿ 200 ಕುರಿಗಳನ್ನಿಡಲಾಗಿತ್ತೋ, ಅಂಥಾ ಕಡೆ ನಾನು ಮೊನ್ನೆ ತಾನೆ ಹೋಗಿ ನೋಡಿಕೊಂಡು ಬಂದೆ, ಈ ದಿವಸ ಸಹ ಅಲ್ಲಿ ಅದೇ 200 ಕುರಿಗಳಿರುತ್ತವೆ. ಅದರ ಬಗ್ಗೆ ಸೂಪರ್‌ವಿಷನ್ ಅಷ್ಟು ಚೆನ್ನಾಗಿರಲಿಲ್ಲವೆಂದು ತೋರಿಬಂತು. ಹೀಗೆ ಯಾವ ಯಾವ ಉದ್ಯಮಗಳು ಫಲದಾಯಕವಾಗಿಲ್ಲ ಎಂದು ಸರ್ಕಾರದವರು ಮನಗಂಡ ಕೂಡಲೇ ತಪ್ಪಿಸಿ ಅನೇಕ ವರ್ಷಗಳಿಂದಲೂ ಈ ಬಗ್ಗೆ ಅನಾಯಾಸವಾಗಿ ಆಗುತ್ತಿದ್ದಂಥ ಖರ್ಚುಗಳೆಲ್ಲವನ್ನು ಉಳಿಸಿ ಎಲ್ಲೆಲ್ಲಿ ಫಲದಾಯಕವಾದ ಉದ್ಯಮಗಳಿರುತ್ತವೋ ಅಂಥವುಗಳಿಗೆ ಮಾತ್ರವೇ ಉತ್ತೇಜನವನ್ನು ಕೊಡಲಾಗುತ್ತಿದೆ. ಹೀಗೆ ನಡೆಯುತ್ತಿರುವ ಫಾರಂನ ವಿಚಾರವನ್ನು ಅಂದರೆ ಮಂಡ್ಯದಲ್ಲಿರತಕ್ಕ ಫಲಪುಷ್ಪಗಳ ಮತ್ತು Vegetable Farm ನ ವಿಚಾರದಲ್ಲಿ ಸಹ ನನ್ನ ಅಭಿಪ್ರಾಯವನ್ನು ತಮಗಾಗಲೇ ತಿಳಿಸಿರುತ್ತೇನೆ. ಹೀಗೆ ಏಕಾನಮಿ ದೃಷ್ಟಿಯಿಂದ ಪ್ರತಿಯೊಂದು ಅಂಶವನ್ನು ಸಹ ಕೂಲಂಕಷವಾಗಿ ಪರಿಶೀಲನೆ ಮಾಡುತ್ತಿದ್ದೇವೆ.

ಇನ್ನು ಶ್ರೀಮಾನ್ ಕೆ. ಸುಬ್ಬರಾಯರು ರೇಷ್ಮೆ ವಿಚಾರವಾಗಿ ಬಹಳ ಮಾತನಾಡಿದ್ದಾರೆ. ಈ ಬಗ್ಗೆ ಸರ್ಕಾರದವರು ನೆರವು ನೀಡಿರುವುದರ ಫಲವಾಗಿ ಈ ದಿವಸ 50 ಸಾವಿರ ಸಂಸಾರಗಳು ಈ ಕಸಬಿನಿಂದ ಅಂದರೆ ಗೃಹಕೈಗಾರಿಕೆಯಿಂದ ತಮ್ಮ ಜೀವನವನ್ನು ನಡೆಸಿಕೊಳ್ಳುತ್ತಿದ್ದಾರೆ. ಸುಮಾರು 90 ಸಾವಿರ ಎಕರೆಗಳಲ್ಲಿ ಹಿಪ್ಪಲ ನೇರಿಳೆ ವ್ಯವಸಾಯ ನಡೆಯುತ್ತಿದೆ. ಈ ರೇಷ್ಮೆ ಕೈಗಾರಿಕೆಗಳ ಬಗ್ಗೆ ಸೊಸೈಟಿಗಳನ್ನು ಸ್ಥಾಪಿಸಿ ಅನುಕೂಲಪಡಿಸಲಾಗಿದೆ. ಇನ್ನು ಉತ್ತಮತರಹೆ ರೇಷ್ಮೆ ಗೂಡುಗಳನ್ನು ಒದಗಿಸತಕ್ಕ ಬಗ್ಗೆ ಈಗಾಗಲೇ ಬಿಳಿಗಿರಿರಂಗನಬೆಟ್ಟ ಮತ್ತು ಕೆಮ್ಮಣ್ಣುಗುಂಡಿ, ಇತ್ಯಾದಿ high level area ದಲ್ಲಿ ಈ ಬೆಳೆ ಬಹಳ ಚೆನ್ನಾಗಿ ಬರುತ್ತೆಂದು ಅಲ್ಲಿ ಇದನ್ನು ಬೆಳೆಯಲು ಸರ್ಕಾರದವರು ಹೆಚ್ಚು ಹಣವನ್ನು ಖರ್ಚು ಮಾಡಿ, ಈ ಬಗ್ಗೆ ಬಹಳ ಸಹಾನುಭೂತಿ ತೋರಿಸುತ್ತಿದ್ದಾರೆ.

ಇನ್ನು ಸೈನ್ಯದ ವಿಚಾರದ ಬಗ್ಗೆ ಹೆಚ್ಚಿನ ವಿಷಯಗಳನ್ನೆಲ್ಲ ತಿಳಿಸಲು ಈ ವಿಚಾರವನ್ನು ನಮ್ಮ ಮಾನ್ಯ ಮುಖ್ಯ ಮಂತ್ರಿಗಳಿಗೇ ಬಿಟ್ಟುಬಿಡುತ್ತೇನೆ. ಆದರೆ ಈ ಸೈನಿಕರ ಬಗ್ಗೆ ಮೈಸೂರು ಸರ್ಕಾರದವರು ಏನೇನು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೋ ಅವುಗಳೆಲ್ಲವನ್ನೂ ಕೈಗೊಂಡಿದ್ದೇವೆ. ಇವರ ಬಗ್ಗೆ ತಮ್ಮೆಲ್ಲರಿಗೂ ಇರುವ ಹಾಗೆ ನಮಗೂ ವಿಶೇಷ ಸಹಾನುಭೂತಿಯಿದೆ ಎಂದು ಇಷ್ಟು ಮಾತ್ರ ಹೇಳಿ ಬಾಕಿ ವಿಚಾರಗಳನ್ನೆಲ್ಲಾ ಮಾನ್ಯ ಮುಖ್ಯ ಮಂತ್ರಿಗಳಿಗೇ ಬಿಟ್ಟುಬಿಡುತ್ತೇನೆ. ಈ ಬಗ್ಗೆ ಆಗಲೇ Adviser to state forces ಆದ ಕರ್ನಲ್ ರಾಜ್‌ರವರೂ ಸಹ ಬಂದು ಸವಿಸ್ತಾರವಾಗಿ ಮಾತನಾಡಿಕೊಂಡು ಹೋಗಿದ್ದಾರೆ.

ಅವರ ವಿಚಾರದಲ್ಲಿ ಶ್ರೀ ವಿ. ಪಿ. ಮೆನನ್‌ರವರ ಒಂದ ಸ್ಟೇಟ್‌ಮೆಂಟ್ ಬಂದಿದೆ. ಅವರಿಗೆ ಬೇರೆ ಕೆಲಸವನ್ನು ಕೊಡುವುದಕ್ಕೆ ತಯಾರಾಗಿದ್ದೇವೆ. ಆದರೆ ಯಾವುದಕ್ಕೆ ಯಾರ್ಯಾರು ಅರ್ಹರು ಎಂಬುದನ್ನು ಪರಿಶೀಲಿಸಿ ಸಾಧ್ಯವಾದಷ್ಟು ಬೇಗ ತಿಳಿಸಬೇಕೆಂದು ಹೇಳಿದಸ್ದಾರೆ. ಆ ವಿಚಾರದಲ್ಲಿ ಶ್ರೀ ಗೋವಿಂದರೆಡ್ಡಿಯವರು ಬೇಕಾದಷ್ಟು ಪರಿಶೀಲನೆ ಮಾಡಿದ್ದಾರೆ. ಶ್ರೀ ರಾಮಚಂದ್ರರಾಯರೂ ಸಹ ಒಂದು ಪತ್ರವನ್ನು ನಮಗೆ ಬರೆದಿದ್ದರು. ಅವರೂ ಅವರ ಮಿತ್ರರೂ ನಮಗೆ ಅಂಕಿ ಅಂಶಗಳನ್ನು ಒದಗಿಸಲು ಸಹಾಯ ಮಾಡಿ ಈ ವಿಚಾರದಲ್ಲಿ ನೆರವನ್ನು ನೀಡಿದರೆ ಇದು ಫಲದಾಯಕವಾಗುತ್ತದೆ. ಇಷ್ಟು ಭರವಸೆ ಕೊಡಬಹುದು. ಈ ವಿಚಾರದಲ್ಲಿ ಮೈಸೂರ ಸರ್ಕಾರದವರಿಗೆ ಸಂಪೂರ್ಣ ಸಹಾನುಭೂತಿಯಿದೆ. ಇಷ್ಟು ಸೇವೆ ಸಲ್ಲಿಸಿರುವವರಿಗೆ ತೊಂದರೆ ಮಾಡಬಾರದು, ಅವರಿಗೆ ತಕ್ಕ ಅನುಕೂಲ ಮಾಡಿ ಅವರಿಗೊದಗಿರುವ ತೊಂದರೆಯನ್ನು ನಿವಾರಿಸಬೇಕು ಎಂದು ಅದಷ್ಟು ಪ್ರಯತ್ನ ಮಾಡುತ್ತೇವೆ. ಮಿಕ್ಕ ಅಂಶಗಳನ್ನು ಮಾನ್ಯ ಪ್ರಧಾನ ಸಚಿವರು ಹೇಳುತ್ತಾರೆ.

ಆಮೇಲೆ ಪೋಲೀಸ್ ವಿಚಾರ. ಈಗ ಎಷ್ಟು ಕಷ್ಟಕಾಲದಲ್ಲಿದ್ದೇವೆಂಬುದು ಮಾನ್ಯ ಸದಸ್ಯರಿಗೆ ಗೊತ್ತು. ಭಾರತದ ಇತರ ಭಾಗಗಳಲ್ಲೂ ಎಷ್ಟುಮಟ್ಟಿನ ಪರಿಸ್ಥಿತಿಯಿದೆಯೆಂಬುದು ಎಲ್ಲರಿಗೂ ಗೊತ್ತಿದೆ. ತೆಲಂಗಾಣ, ಪಶ್ಚಿಮ ಗೋದಾವರಿ, ಹೈದರಾಬಾದು, ಕೃಷ್ಣ, ಪಶ್ಚಿಮ ಬಂಗಾಳ, ಬೀಹಾರ, ಯು. ಪಿ. ನಲ್ಲಿ ಏನಾಗುತ್ತಿದೆ ಎಂಬುದು ಮಾನ್ಯ ಮಿತ್ರರಿಗೆಲ್ಲಾ ಗೊತ್ತಿದೆ. ಇಂಥ ಸಂದರ್ಭದಲ್ಲೂ ಮೈಸೂರು ದೇಶದಲ್ಲಿ ಸಾಧ್ಯವಾದಷ್ಟು ಲಾ ಅಂಡ್ ಆರ್ಡರನ್ನು ಪಾಲಿಸಿಕೊಂಡು

(ಶ್ರೀ ಎಂ. ಎಸ್. ಜೋಯಿಸರು.)

ಬಂದಿದ್ದೇವೆ. 1948–49ರಿಂದ ಇಲ್ಲಿಯವರೆಗೆ ತಮಗೆ ತಿಳಿದಮಟ್ಟಿಗೆ ಸಣ್ಣ ಪುಟ್ಟ ಉದ್ರೇಕ ಬರುವ ಪರಿಸ್ಥಿತಿಗಳು ಉದ್ಭವವಾಗಿದ್ದುವು. ವಿಮಾನ ಕಾರ್ಖಾನೆಯಲ್ಲೂ ಮತ್ತು ಸಕ್ಕರೆ ಕಾರ್ಖಾನೆಯಲ್ಲೂ ಗಲಭೆಯಾದಾಗ ಸಹ ಗುಂಡು ಹಾರಿಸಲಿಲ್ಲ. ಕೈಲಾದಮಟ್ಟಿಗೆ ಅದನ್ನು ಹತೋಟಿಗೆ ತಂದು ಲಾ ಅಂಡ್ ಆರ್ಡರನ್ನು ಪಾಲಿಸಿದ್ದೇವೆ. ಆದ್ದರಿಂದ ಇಲ್ಲಿ ಅದನ್ನು ಜನರಲೈಸ್ ಮಾಡಿ ಇತರರಿಗೆ ಮನಸ್ಸು ನೋಯುವಂತೆ ಮಾಡಬಾರದು ಎಂದು ಅರಿಕೆ ಮಾಡುತ್ತೇನೆ. ಏಕೆಂದರೆ ಪೋಲಿಸಿನವರ ಕರ್ತವ್ಯ ಬಹಳ unpleasant, ಯಾವಾಗಲೂ ನಿಷ್ಠೂರ ಬರುವ ಕಾರ್ಯ; ಎಷ್ಟೋ ಸಲ ಕಠಿಣ ಪ್ರಸಂಗ ಬಂದಾಗಲೂ ಕೆಲಸ ಮಾಡಿದ್ದಾರೆ. ಆದ್ದರಿಂದ ಯಾರು ದೇಶಸೇವೆ ಮಾಡುತ್ತಿದ್ದಾರೋ ಅವರನ್ನು ಪ್ರಶಂಸೆ ಮಾಡಿ ತಪ್ಪು ಮಾಡಿದವರಿಗೆ ಬಲ ಹಾಕಬೇಕು ಎಂಬುದೇ ಸರ್ಕಾರದ ಉದ್ದೇಶ. ಇದಕ್ಕೆ ಅನೇಕ ಉದಾಹರಣೆಗಳನ್ನು ಕೊಡಬಹುದು. ಎಷ್ಟೋ ವಿಧದಲ್ಲಿ ಎಷ್ಟೋ ಸರ್ವಿಸ್ ಮಾಡಿದ್ದವರೂ ಕೂಡ ತಪ್ಪು ಮಾಡಿದವರಿಗೆ ಶಿಕ್ಷೆ ಮಾಡುವುದಕ್ಕೆ ತಯಾರಾಗಿದ್ದೇವೆ. ಅದೇ ರೀತಿಯಲ್ಲಿ ಎಷ್ಟೋ ಜನರ ಮೇಲೆ ಛಾರ್ಜುಷೀಟು ಹಾಕಿದ್ದೇವೆ. 1946–47ರಲ್ಲಿ ಶೇಕಡ 34·1 ಮತ್ತು 1949—50ರಲ್ಲಿ ಶೇಕಡ 54·2 ಕನ್ವಿಕ್ಷನ್ ಆಗಿವೆ. 1948–49ರಲ್ಲಿ ಶೇಕಡ 76 ಫಸ್ಟ್ ಕ್ಲಾಸ್ ಕೇಸುಗಳಿಗೂ ಮತ್ತು 1949—50ರಲ್ಲಿ ಒಂಬತ್ತು ತಿಂಗಳಲ್ಲಿ ಶೇಕಡ 99·5 ಕೇಸುಗಳಿಗೂ ಛಾರ್ಜುಷೀಟು ಹಾಕಿದೆ. ಕೆಲವು ಕೇಸುಗಳ ವಿಚಾರವನ್ನು ಶ್ರೀ ಸಿದ್ದವೀರಪ್ಪನವರು ಮತ್ತು ಶ್ರೀ ಗೋವಿಂದರೆಡ್ಡಿಯವರು ಚೆನ್ನಾಗಿ ಹೇಳಿದ್ದಾರೆ. ಸರ್ಕಾರದವರು ಸಮಾಚಾರ ಗೊತ್ತಾದ ಕೂಡಲೆ ಏನೇನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ಆರ್ಡರು ನಿಧಾನವಾಗಿ ಆದರೂ ಪರವಾಗಿಲ್ಲ ಎಂದು ತೆಗೆದುಕೊಂಡು ವಿಶೇಷ ಪೋಲೀಸ್ ಸಿಬ್ಬಂದಿಯನ್ನು ಕಳುಹಿಸಿದ್ದೇವೆ ವ್ಯಾನ್‌ನಲ್ಲಿ ಒಂದು ಸಲಕ್ಕೆ 24 ಜನರಂತೆ ಸಿಬ್ಬಂದಿ ಕಳುಹಿಸಿದೆ ಇದಕ್ಕೆ ಒಬ್ಬರನ್ನು ಸ್ಪೆಷಲ್ ಡಿ. ಐ. ಜಿ. ಆಗಿ ನೇಮಕಮಾಡಿದೆ ಬೇರೆ ಒಬ್ಬರು ಅಸಿಸ್ಟೆಂಟ್ ಸೂಪರಿಂಟೆಂಡೆಂಟರನ್ನು ಅಲ್ಲಿಗೆ ಹಾಕಿದೆ. ಅಲ್ಲಲ್ಲೇ ಕೆಲವು ಬದಲಾವಣೆಗಳನ್ನು ಸಹ ಮಾಡಿದೆ. ಜನರಿಗೆ ರಕ್ಷಣೆಯಿದೆಯೆಂಬ ನಂಬಿಕೆ ಬರಲು ಸಾಧ್ಯವಾದಷ್ಟು ಪ್ರಯತ್ನ ಮಾಡಿದೆ. ಅನೇಕರು ಸಹಕಾರಮಾಡಿದ್ದಾರೆ. ಆದರೆ ಈ ವಿಚಾರದಲ್ಲಿ ತನಿಖೆ ನಡೆಯುತ್ತಿರುವುದರಿಂದ ಹೆಚ್ಚಾಗಿ ಹೇಳುವುದಿಲ್ಲ. ಸರಹದ್ದಿನಲ್ಲಿರುವವರು ಬಂದು ಈ ಕೃತ್ಯಗಳನ್ನು ಮಾಡುತ್ತಾರೆಂಬ ವರ್ತಮಾನವಿದೆ. ಈಚೆಗೆ ನಡೆದ ಡಕಾಯ್ತಿ ಕೃತ್ಯಗಳ ಪತ್ತೆ ತರದೂದಿನಲ್ಲಿದ್ದೇವೆ. ಈ ವಿಚಾರದಲ್ಲಿ ಶ್ರೀ ಮೊರಾರ್ಜಿ ದೇಶಾಯಿಯವರಿಗೆ ಕಾಗದ ಬರೆದ ಮೇಲೆ ಅವರು ಕೂಡಲೆ ಆರ್ಡರು ಮಾಡಿದ್ದಾರೆ. ಮೈಸೂರು ಸರ್ಕಾರದ ಪೋಲೀಸಿನವರಿಗೆ ಸಂಪೂರ್ಣ ಸಹಕಾರ ನೀಡಬೇಕು, ಆದಷ್ಟು ಜಾಗ್ರತೆ ತಪ್ಪುಮಾಡಿರುವವರನ್ನು ಪತ್ತೆಹಚ್ಚಿ ಶಿಕ್ಷೆಮಾಡಬೇಕೆಂದು ಆರ್ಡರು ಮಾಡಿ ಆ ವಿಚಾರದಲ್ಲಿ ನನಗೆ ಕಾಗದ ಸಹ ಬರೆದಿದ್ದಾರೆ. ಡಿ. ಐ. ಜಿ. ಮತ್ತು ನಮ್ಮ ಅಧಿಕಾರಿಗಳು ಸೇರಿ ಮೀಟಿಂಗ್‌ಮಾಡಿ ತಕ್ಕ ಕಾರ್ಯಕ್ರಮ ಕೈಗೊಂಡಿದ್ದಾರೆ. ಇತರ ಭಾಗಗಳಲ್ಲಿ ಲಾ ಅಂಡ್ ಆರ್ಡರು ಪೊಸಿಷನ್ ಚೆನ್ನಾಗಿದೆ. ಕೋಲಾರದ ಬಂಗಾರದ ಗಣಿ ಪ್ರದೇಶದಲ್ಲಿ ಸುಮಾರು 2½ ತಿಂಗಳು ಸ್ಟ್ರೈಕ್ ಆದರೂ ಏನೂ ಗಲಾಟೆಗೆ ಅವಕಾಶವಿಲ್ಲದಂತೆ ನೋಡಿಕೊಂಡಿದೆ. ಡಕಾಯ್ತಿಯು ಎಲ್ಲೋ ಕೆಲವು ಕಡೆ ಆಗಿರಬಹುದು. ಅದು ನಮ್ಮ ದೇಶದವರಿಂದಲೇ ಬಹುತೇಕ ಜರುಗಿಲ್ಲವೆಂದು ನಂಬಿ ಸರ್ಕಾರದವರು ಎಚ್ಚರಿಕೆಯಿಂದ ಸಾಧ್ಯವಾದಷ್ಟು ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆ. ಹಣ ವೆಚ್ಚವಾಗುವುದಕ್ಕೆ ಹೆದರುವುದಿಲ್ಲ. ಜನರಿಗೆ ಸಂಪೂರ್ಣ ಭರವಸೆ ಬರಬೇಕು ಎಂಬುದೇ ಸರ್ಕಾರದ ಉದ್ದೇಶ. ಅದಕ್ಕಾಗಿ ಹೆಚ್ಚು ಬಂದೂಕದ ಲೈಸೆನ್ಸುಗಳನ್ನು ಕೊಡಬೇಕೆಂದು ಸಲಹೆಮಾಡಿದ್ದಾರೆ. ಸಭೆ ಮುಗಿದವೇಳೆ ನಾನು ಹೋಗಿ ವಿಚಾರಮಾಡಿ ತಿಳಿವಳಿಕೆ ಹೇಳಿದನಂತರ ಅವರ ಗ್ರಾಮಗಳನ್ನು ರಕ್ಷಣೆಮಾಡಿಕೊಳ್ಳಬಹುದೆಂಬ ಧೈರ್ಯಬಂದಿದೆ. ಸಾಧ್ಯವಾದಷ್ಟು ಹಳ್ಳಿಯ ಜನರಿಂದಲೇ ರಕ್ಷಣೆಮಾಡಿಕೊಳ್ಳಬೇಕೆಂಬ ಒಂದು ಅಮೋಘವಾದ ಆಸೆಯಿದೆ. ಮಾನ್ಯ ಸದಸ್ಯರು ಮಾಡಿರುವ ರಚನಾತ್ಮಕ ಟೀಕೆಗಳನ್ನು ಸ್ವಾಗತಮಾಡುತ್ತೇನೆ ಎಂದು ಇಷ್ಟು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು (ರೆವೆನ್ಯೂ ಮತ್ತು ಎಕ್ಸೈಜ್ ಸಚಿವರು).—ಅಧ್ಯಕ್ಷಮಹಾಶಯರೆ, ವೇಳೆಯಾಗಿದೆ; ನನಗೆ ಸಂಬಂಧಪಟ್ಟಂಥ ನಿಕಟ ಸಂಬಂಧವಿರುವ ಇಲಾಖೆಗಳಿಗೆ ಸಂಬಂಧಪಟ್ಟ ಆಡಳಿತ ವಿಚಾರದಲ್ಲಿ ಈ ಮಾನ್ಯ ಸಭೆಯ ಮಾನ್ಯ ಸದಸ್ಯರು ಕೆಲವರು ಅವರ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ ಕೆಲವು ಉಪಯುಕ್ತ ಸಲಹೆಗಳನ್ನು ಕೊಟ್ಟಿದ್ದಕ್ಕೆ ನಿಜವಾಗಿಯೂ ಅವರಿಗೆ ವಂದಿಸಬೇಕಾಗಿದೆ. ಅವರು ಕೊಟ್ಟಿರುವ ಪ್ರಯೋಜನಕಾರಿಯಾದ ಸಲಹೆಗಳನ್ನು ಜ್ಞಾಪಕದಲ್ಲಿಟ್ಟು ಈ ಇಲಾಖೆಗಳಲ್ಲಿ ಯಾವ್ಯಾವುದನ್ನು ಅವರು ಹೇಳುವ ರೀತಿಯೊಳಗೆ ಜಾರಿಗೆ ತಂದರೆ ಸಹಾಯವಾಗುತ್ತದೆ ಎಂದು ಕಂಡುಬರುತ್ತದೆಯೋ ಅವನ್ನು ಜಾರಿಯಲ್ಲಿ ತರಲು ಸರ್ಕಾರದವರು ಸಿದ್ಧವಾಗಿದ್ದಾರೆಂಬ ಭರವಸೆಯನ್ನು ಈ ಸಮಯದಲ್ಲಿ ಕೊಡುತ್ತೇನೆ. ಮುಖ್ಯವಾಗಿ ಎರಡು ಮೂರು ವಿಷಯಗಳಲ್ಲಿ ಮಾತ್ರ ನನ್ನ ಮಾನ್ಯ ಮಿತ್ರರು ಕೆಲವರು ಸಲಹೆ ಕೊಟ್ಟಿದ್ದಾರೆ ಮತ್ತು ಮುಖ್ಯವಾಗಿ ರೋಡ್ ಟ್ರಾನ್ಸ್‌ಪೋರ್ಟ್ ಸರ್ವಿಸ್ಸಿಗೆ ಸಂಬಂಧಪಟ್ಟ ವಿಚಾರಗಳಲ್ಲಿ ಕೆಲವು ಟೀಕೆ ಮಾಡಿದ್ದಾರೆ. ಅದೆಲ್ಲವನ್ನೂ ನಿರಾಧಾರವಾದುದೆಂದು ನಾನು ಹೇಳಲು ಸಾಧ್ಯವಿಲ್ಲ. ಏಕೆಂದರೆ ಅದು ವಿದ್ಯಮಾನಕ್ಕೆ ವಿರೋಧವಾಗಿದೆ. ಆದರೆ ಕೆಲವರು ಹೇಳುವ ರೀತಿಯೊಳಗೆ ಅಷ್ಟೊಂದು ಕೆಟ್ಟ ರೀತಿಯಲ್ಲಿ ಕೆಲಸಕಾರ್ಯಗಳು ಜರುಗುತ್ತಿಲ್ಲ ಎಂಬುದನ್ನು ಅಂಕಿಅಂಶಗಳ ಆಧಾರದಿಂದ ಸ್ಪಷ್ಟವಾಗಿ ರುಜುವಾತು ಮಾಡಬಲ್ಲೆ ಎಂಬುದನ್ನು ಈ ಸಮಯದಲ್ಲಿ ಅವರಿಗೆ ತಿಳಿಸಬೇಕಾಗಿದೆ.

ಮುಖ್ಯವಾಗಿ ನಮ್ಮ ರೋಡ್ ಟ್ರಾನ್ಸ್‌ಪೋರ್ಟ್ ಸರ್ವೀಸ್ ವಿಚಾರದಲ್ಲಿರತಕ್ಕ ಒಂದೆರಡು ಸಣ್ಣ ವಿಚಾರಗಳನ್ನು ಆಧಾರವಾಗಿಟ್ಟುಕೊಂಡು ಪ್ರಬಲವಾದ ಟೀಕೆಗಳನ್ನು ಕೆಲವು ಮಾನ್ಯ ಸದಸ್ಯರು ಮಾಡಿದ್ದಾರೆ. ಅದರಲ್ಲಿ ಒಂದಂಶವನ್ನು ಪ್ರಥಮದಲ್ಲೇ ಗಮನಿಸಬೇಕಾಗಿದೆ. ನಿಜವಾಗಿಯೂ ಒಳ್ಳೆಯ ಗಮನಾರ್ಹವಾದ ವಿಚಾರವೆಂದರೆ ಕಳೆದ 2½ ವರ್ಷದೊಳಗೆ ಎಂದರೆ ಕಳೆದ ಡಿಸೆಂಬರ್ ಆಖೈರಿಗೆ ಈ ಇಲಾಖೆಯಲ್ಲಿ ಸರ್ಕಾರದವರು ವಿನಿಯೋಗಿಸಿರುವ ಬಂಡವಾಳ 23 ಲಕ್ಷದ 4 ಸಾವಿರದ 86 ರೂಪಾಯಿ. ಆ ಪೈಕಿ ಇದುವರೆಗೆ ಉತ್ಪನ್ನವಾಗಿರತಕ್ಕದ್ದು gross earnings 59 ಲಕ್ಷದ 95 ಸಾವಿರ ರೂಪಾಯಿ. ಎಂದರೆ ಸುಮಾರು 60 ಲಕ್ಷ ರೂಪಾಯಿ ಆದಾಯವಿರುವಾಗ ಅದರ ಖರ್ಚು 54½ ಲಕ್ಷ ರೂಪಾಯಿ ಆಗಿದೆ. ನಿವ್ವಳ ಉತ್ಪನ್ನ 2½ ವರ್ಷ

(ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.)

ನನ್ನ ಅನುಭವದಲ್ಲಿ ಅಧಿಕವಾಗಿದೆಯೆಂದೇ ನನಗೆ ಕಂಡು ಬಂದಿದೆ. ಬಸ್ ಪರ್ಮಿಟ್‌ಗಳನ್ನು ಹೆಚ್ಚಿಗೆ ಕೊಡಬೇಕೆಂಬ ದೃಷ್ಟಿಯಿಂದಲೇ ನಾನಿದನ್ನು ಹೇಳುತ್ತಿದ್ದೇನೆಂದು ಯಾರೂ ತಿಳಿದುಕೊಳ್ಳಬಾರದು, ಅಥವಾ ಸರಕಾರದವರಿಗೆ ವರಮಾನ ಬರುತ್ತದೆಂಬ ಭಾವನೆಯಿಂದಲೂ ನಾನು ಹೇಳಿರಬಹುದೆಂದು ತಾವು ತಿಳಿಯಕೂಡದು. ಮುಖ್ಯವಾಗಿ ಪ್ರಯಾಣಿಕರು ಸಂಚಾರ ಸೌಕರ್ಯಬೇಕೆಂದು ಹೇಳುತ್ತಾ ಬಸ್ಸುಗಳ ಅಭಾವವನ್ನು ಹೇಳಿ ಹೆಚ್ಚಿಗೆ ಅನುಕೂಲತೆಗಳನ್ನು ಕೊಡಿ, ಕೊಡಿ ಎಂದು ಕೇಳಿ ಕಷ್ಟಪಡುತ್ತಿದ್ದ ಜನರು ಈ ಬಸ್ಸುಗಳು ಬಂದಮೇಲೆ ಎಷ್ಟುಮಟ್ಟಿಗೆ ಸಂತೋಷಪಡುತ್ತಿದ್ದಾರೆಂಬದನ್ನು ತಾವೇ ನೋಡಬಹುದು. ಆದರೂ, ಹೀಗೆ ಬಸ್ಸುಗಳ ರಾಷ್ಟ್ರೀಕರಣ ಯೋಜನೆಯನ್ನಿಟ್ಟುಕೊಂಡು ಹೀಗೆಯೇ ಬಸ್ಸುಗಳನ್ನು ಹೆಚ್ಚಿಸಿಕೊಂಡು ಹೋದರೆ ಅದಕ್ಕೆ (ಗಾಡಿ ಸಂಚಾರಕ್ಕೆ) ಧಕ್ಕೆ ಬರುವುದಿಲ್ಲವೇ ಎಂಬುದನ್ನೂ ನಾವು ಮನಗಂಡು ಅದನ್ನೂ ಕೂಡ ಆ ಸಮಿತಿಯವರು ಶೀಘ್ರದಲ್ಲೇ ಯೋಚನೆ ಮಾಡುವವರಾಗಿದ್ದಾರೆಂದು ಇಲ್ಲಿ ಹೇಳಿದರೆ ಸಾಕೆಂದು ಭಾವಿಸುತ್ತೇನೆ.

ಶ್ರೀ ವಿ. ಎಸ್. ನಾರಾಯಣರಾಯರು.—ಗಾಡಿ ಖಾಲಿ ಹೋಗುತ್ತಿದ್ದರೂ ಜನರನ್ನು ಹತ್ತಿಸಿಕೊಳ್ಳುವುದಿಲ್ಲ !!

Sri H. M. CHANNABASAPPA.—The question of making it a corporation is also a point to be considered.

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಹೌದು. ಇಂಡಿಯಾ ದೇಶದ ಇತರ ಕೆಲವು ಕಡೆಗಳಲ್ಲಿ ಸರ್ಕಾರಿ ಬಸ್ಸುಗಳು ಎಷ್ಟರಮಟ್ಟಿಗೆ ಕೆಲಸ ಮಾಡುತ್ತಿವೆಯೆಂಬುದನ್ನು ವಿವರಿಸುತ್ತಾ, ಮದ್ರಾಸು, ಹೈದರಾಬಾದು, ತಿರುವಾಂಕೂರು ಸರ್ಕಾರಗಳ ಉದಾಹರಣೆಗಳನ್ನು ಕೊಟ್ಟರು. ಮದ್ರಾಸ್ ಸರ್ಕಾರದವರ ವಿಷಯವನ್ನು ಹೇಳುವುದಾದರೆ, ಅಲ್ಲಿ ಸರ್ಕಾರಿ ಬಸ್ ಸರ್ವಿಸ್ ಇರುವುದು ಸಿಟಿಯಲ್ಲಿ ಮಾತ್ರ. ಕಾಂಕ್ರೀಟ್ ರಸ್ತೆಗಳಲ್ಲಿ ಮಾತ್ರ ಓಡಾಡುತ್ತಿದೆ. ಇದೇ ಬಸ್ ಯೋಜನೆಯನ್ನು ಇನ್ನೂ ಎರಡು-ಮೂರು ಜಿಲ್ಲೆಗಳಿಗಾದರೂ ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳಿದ ಅಲ್ಲಿನ ಟ್ರಾನ್ಸ್‌ಪೋರ್ಟ್ ಮಂತ್ರಿಗಳು ಈ ವರ್ಷ ಅಸೆಂಬ್ಲಿ ಮುಂದೆ ಭಾಷಣಮಾಡುತ್ತಾ ಈಸಾರಿಗೆ ಅದು ಸಾಧ್ಯವಿಲ್ಲವೆಂದು ಹೇಳಿದ್ದಾರೆ. ಆಮೇಲೆ ತಿರುವಾಂಕೂರು ಕಡೆ ಸ್ವಲ್ಪ ನೋಡುವುದಾದರೆ—ತಿರುವಾಂಕೂರೆಂಬುದು ಈ ವಿಷಯದಲ್ಲಿ pioneer ಎಂಬುದನ್ನು ಮರೆಯಬಾರದು—ಅಂಥವರ ಗತಿ ಏನಾಗಿದೆಯೆಂಬುದನ್ನು ಇವತ್ತಿನ ಡೆಕ್ಕನ್‌ಹೆರಾಲ್ಡ್ ಪತ್ರಿಕೆಯಲ್ಲಿನ ಸಂಪಾದಕನ ಲೇಖನವನ್ನು ನೋಡಿದರೆ ವೇದ್ಯವಾಗುತ್ತದೆ. ಆದ್ದರಿಂದ ಈ ಕೆಲಸ ಅಷ್ಟು ಸುಲಭಸಾಧ್ಯವಲ್ಲವೆಂಬುದನ್ನು ಮಾನ್ಯ ಸದಸ್ಯರು ತಿಳಿಯಬೇಕು. 5 ವರ್ಷದಲ್ಲಿ ಯಶಸ್ವಿಯಾಗಿ ಈ ಯೋಜನೆಯನ್ನು ದೇಶದಲ್ಲಿ ಜಾರಿಗೆ ತರಬೇಕೆಂದರೆ 1,000 ಬಸ್ಸುಗಳು ಮತ್ತು 4 ಕೋಟಿ ರೂಪಾಯಿಗಳ ಬಂಡವಾಳ ಬೇಕು. ಆದ್ದರಿಂದ ಎಲ್ಲಾ ಅಂಶಗಳನ್ನೂ ಯೋಚನೆಮಾಡಿ ಮಾಡಬೇಕಾದ ವಿಷಯ ಇದು. ಇದಕ್ಕೆಲ್ಲಾ ಅನುಕೂಲಿಸುವಂತೆ ಕಾರ್ಪೊರೇಷನ್ ಬಿಲ್ ಮುಂತಾದುವು ಪಾರ್ಲಿಮೆಂಟಿನಲ್ಲಿ ಬರಲಿವೆ. ಮುಂದಿನ ತಿಂಗಳಲ್ಲಿ ಬಹುಶಃ ದೇಶಕ್ಕೆಲ್ಲಾ ಜಾರಿಗೆ ಬರಬಹುದು. ಆದರಲ್ಲಿ ಎಷ್ಟರಮಟ್ಟಿಗೆ ನಾವೂ ಸೇರಿಕೊಂಡು ಕೆಲಸ ಮಾಡಿದರೆ ನಮಗೂ ಲಾಭದಾಯಕವಾಗಿ ಪರಿಣಮಿಸುತ್ತದೆಯೆಂಬುದರಲ್ಲಿಯೂ ಕೂಡ ಈ ಸಮಿತಿಯವರ ಸಲಹೆಗಳನ್ನು ಪಡೆದು ಮುಂದುವರಿಯಬೇಕೆಂದು ಯೋಚಿಸಿದ್ದೇವೆ.

ಎರಡನೆಯದಾಗಿ ಪಾನನಿರೋಧದ ವಿಚಾರ. ಇದು ಬಹಳ ಕಷ್ಟದ ಕೆಲಸವೆಂದು ಕೆಲವರು ಭಾವಿಸಿಕೊಂಡಿರಬಹುದು. ಅಂಥಾದ್ದೇನೂ ಅಲ್ಲವೆಂದು ನನಗನಿಸುತ್ತದೆ. ಆದರೆ ಸ್ವಲ್ಪ ತಾಳ್ಮೆ, ಸಹನೆಯಿಂದ ಕೆಲಸ ಮಾಡಬೇಕು ಅಷ್ಟೆ. ಇಲ್ಲದಿದ್ದರೆ ಮಾಡಿದ ಕೆಲಸ ಫಲಕಾರಿಯಾಗಿ ಪರಿಣಮಿಸುವುದಿಲ್ಲ. ಈ ಅಂಶವನ್ನು ಮನಸ್ಸಿನಲ್ಲಿಟ್ಟುಕೊಂಡು, ಇದನ್ನು ಆದಷ್ಟು ಜಾಗ್ರತೆ ಇಡೀ ಸಂಸ್ಥಾನದಲ್ಲೆಲ್ಲಾ ಜಾರಿಗೆ ತರಬೇಕೆಂಬ ವಿಚಾರದಲ್ಲಿ ಭಿನ್ನಾಭಿಪ್ರಾಯವಿಲ್ಲವೆಂದು ಹೇಳಿದರೂ ಇದನ್ನು ಈಗಲೇ ಇನ್ನೂ ಮುಂದುವರಿಸುವುದು ಶ್ರೇಯಸ್ಕರವಲ್ಲವೆಂದು ನಿನ್ನೆದಿನ ಮಾನ್ಯ ಸದಸ್ಯರಾದ ಶ್ರೀಮಾನ್ ವೀರಣ್ಣಗೌಡರು ವ್ಯಕ್ತಪಡಿಸಿದ್ದಾರೆ. ಅಲ್ಲದೆ, ಈ ವಿಚಾರದಲ್ಲಿ ಒಂದಂಶವನ್ನು ನಾವು ಯೋಚನೆ ಮಾಡಬೇಕು. ಎಲ್ಲಕ್ಕಿಂತ ಹೆಚ್ಚಾಗಿ ಜನರ ಆರೋಗ್ಯ ರಕ್ಷಣೆಯೆಂಬುದು ಬಹಳ ಮುಖ್ಯ. ಒಂದೇಸಾರಿ ಪಾನನಿರೋಧವನ್ನು ಜಾರಿಗೆ ತಂದರೆ ಕಳ್ಳಬಟ್ಟಿ ಸಾರಾಯಿ ವ್ಯಾಪಾರ ಹೆಚ್ಚಿ ಜನರ ಆರೋಗ್ಯ ಕೆಟ್ಟುಹೋಗುತ್ತಿರುವುದು ಅಲ್ಲಲ್ಲಿ ಮಾಡಿರುವ ಪ್ರಯೋಗ ಪರೀಕ್ಷೆಗಳಿಂದ ಗೊತ್ತಾಗಿದೆ. ಆದಷ್ಟುಮಟ್ಟಿಗೆ ನಾವು ಇದುವರೆಗೆ ಮಾಡಿದ್ದನ್ನು consolidate ಮಾಡಿಕೊಂಡು ಮುಂದುವರಿಸುವುದು ವಿಹಿತವಾದ್ದೆಂದು ಅನೇಕರು ಈಗ ಅಭಿಪ್ರಾಯಪಡುತ್ತಿದ್ದಾರೆ. ಅದಕ್ಕಾಗಿ ಈಗ ಸ್ವಲ್ಪ ನಿಧಾನವಾಗಿದೆಯೆನ್ನಬಹುದು. ಇದೇ ಸಂದರ್ಭದಲ್ಲಿ ಇನ್ನೊಂದು ಅಂಶವನ್ನೂ ಒಪ್ಪಿಕೊಳ್ಳುವುದರಲ್ಲಿ ತಪ್ಪಿಲ್ಲ. ಒಂದು ಪ್ರಶ್ನೆಗೆ ಉತ್ತರ ಕೊಟ್ಟಿರುವುದರಲ್ಲೇ ನಾವದನ್ನು ತಿಳಿಸಿದ್ದೇವೆ. ಈ ಬಗ್ಗೆ ನಮಗುಂಟಾಗುವ ಆದಾಯದ ಖೋತಾವನ್ನು ಕೂಡ ನಾವು ಗಣನೆಗೆ ತೆಗೆದುಕೊಳ್ಳಬೇಕು. ಆದರೂ ಅದರ ಮೇಲೆಯೇ ನಾನು emphasise ಮಾಡುವವನಲ್ಲ. ಮುಖ್ಯವಾಗಿ ನಾವು ಮೊದಲೇ ಒಂದೊಂದು ಡಿಸ್ಟ್ರಿಕ್ಟ್ ಎಂದು ಕ್ರಮೇಣ ಇಡೀ ದೇಶದಲ್ಲಿ ಜಾರಿಗೆ ತರಲು ಹೊರಟಿದ್ದರೆ ಚೆನ್ನಾಗಿರುತ್ತದೆಂದು ತೋರುತ್ತೆ. ಅದು ಬಿಟ್ಟು ಏಕದಂ ಒಂದುಸಾರಿ ಮೂರು ಡಿಸ್ಟ್ರಿಕ್ಟು, ಇನ್ನೊಂದುಸಾರಿ ಎರಡು ಡಿಸ್ಟ್ರಿಕ್ಟ್ ಎಂದು ಎರಡೇ ವರ್ಷದಲ್ಲಿ 5 ಡಿಸ್ಟ್ರಿಕ್ಟ್‌ಗಳಲ್ಲಿ ಜಾರಿಗೆ ತಂದು ಈಗ ಮುಂದುವರಿಯದೆ ಸ್ವಲ್ಪ ನಿಧಾನ ಮಾಡಿದ್ದರಿಂದ ಈ ಕೆಲಸವು ಸದಸ್ಯರಿಗೆ ಸ್ವಲ್ಪ ಅಸಮಾಧಾನಕ್ಕೆ ಕಾರಣವಾಗಿರಬಹುದು. ಈ ಸಂದರ್ಭದಲ್ಲಿ ದೇಶದಲ್ಲಿ ನಾನಾ ಜನರು ಏನು ಅಭಿಪ್ರಾಯವುಳ್ಳವರಾಗಿದ್ದಾರೆಂಬುದನ್ನು ಸ್ವಲ್ಪ ನೋಡುವುದಾದರೆ, "some coffee planters of Chikmagalur District have represented that prohibition of toddy has seriously affected the health and availability of plantation labour" ಎಂದು ಅವರುಗಳು ಒಂದು ಅರಿಕೆ ಕಳುಹಿಸಿಕೊಟ್ಟಿದ್ದಾರೆ. ಅದೇನೂ ಸರಿಯೆಂದು ನಾನು ಹೇಳುವುದಿಲ್ಲ. ಅವರು ಹೇಳಿದ್ದಾರೆ "an appreciable number of labour working in the estates of Chikmagalur District have migrated to other parts." ಎಂದು. ನಾನೇನೂ ಅವರ ಅಭಿಪ್ರಾಯವನ್ನೇ ಪುಷ್ಟೀಕರಿಸುತ್ತಿದ್ದೇನೆಂದು ಯಾರೂ ಭಾವಿಸಬಾರದು. ಆದರೂ ತೀರ್ಮಾನಕ್ಕೆ ಬರುವುದಕ್ಕೆ ಮುಂಚೆ ಎಲ್ಲಾ ಅಂಶಗಳನ್ನೂ ಗಣನೆಗೆ ತೆಗೆದುಕೊಂಡು ಮುಂದುವರಿಯೋಣವೆಂದು ಮಾತ್ರ ನನ್ನ ಸಲಹೆ. ಇನ್ನು ಕೆಲವರು "toddy

